ಸುಮಧುರ ಮಾಸಿಕ

ಭಾವನಾ

ಆಗಸ್ಟ್ 2000 ರೂ. 7



ಕರಕ್ಕೆಲದ ಸೂರ್ಯೋದಯದಲಿ

ಕರಕ್ಕೆಲದ ಸೂರ್ಯೋದಯದಲಿ
ಸ್ವರ್ಗವು ಹೊಮ್ಮಿರೆ ಮಕ್ಕಳ ನಗುನಗುವಲಿ
ಹೇಗೆ ಹಿತವೆನಿಸಿತು ನಾ ನಂಬೆನೆ.
ಹೊಂಗದಿರ್ಗಳ ಮಳೆ ಸುರಿದಿತ್ತು,
ಬಂಗಾರದ ಹೊಳೆ ಹರಿದಾಡಿತ್ತು
ಇದೆ ಸಗ್ಗವದಾಯಿತ್ತೋ ಎನಿಸೆ!

ಹಾಸಿಗೆಯಂದದಿ ಬಯಲನು ತಬ್ಬಿ
ಹಬ್ಬಿರೆ ಹಸುರದು ಹನಿಹನಿ ಹಬ್ಬಿ
ಪಚ್ಚೆಯ ವೇದಿಕೆಯಾಗಿತ್ತು
ಹುಲ್ಲಿನ ಮೇಗಡೆ ಹಿಮಮಣಿಗಳಿಗೆ
ಶಿಶುರವಿ ರುಚಿಯಲಿ ಕೆಂಪಾಗಿ ನಸು
ಉರಿಕಿಡಿ ಕಿಡಿಯಾಗಿ ತೋರಿತ್ತು:

ಹುಟ್ಟನೆ ಪಚ್ಚೆಯ ವೇದಿಕೆಯಲಿ
ಕಾಶಿರಸಗಪ್ಪಲೆ ಮುತ್ತನು ಚೆಲ್ಲಿ,
ರನ್ನದ ಕಿರುದೀಪಿಕೆಗಳಲಿ
ಶ್ಯಾಮಲ ಕೈಲದಿ ಹೊನ್ನಿನ ಬತ್ತಿ —
ಕಾಮನ ಬಿಲ್ಲಿನ ಬೆಂಕಿಯ ಹೊತ್ತಿ
ಸೊಡರುರಿದಂದದೊಳ್ ಅಲ್ಲಲ್ಲಿ!



ಭಾವಾವೇಶದಿ ನೋಡುತ ನಿಂತೆ;
ಹೃದಯೋದ್ವಾಳುಯುಕ್ತ ಕವನಮಯ ಚಿತೆ,
'ಉಲಿಕವಿ'ದೆನು ದಿವಮಸ್ತಿನಿಯಂತೆ!
ಕಲ್ಲಿನ ಯುಗಯುಗದಿರವು ಶೂನ್ಯ;
ಹುಲ್ಲಿನ ಅರೆನಿಮಿಷದ ಹನಿ ಧನ್ಯ!
ತಳ್ಳಕಳ್ಳಿಪುದೆ ಸಾರ್ಥಕ[illegible]ಣ್ಯ!

ಎಂದಾಲೋಚಿಸಾಗಿರೆ ಬಳಿ [illegible]
ಬಳಿಯಿತು ಜ್ಞಾನ ಹದದಿ ಕಣ್:
ನೋಡುವರೆಲ್ಲಿಯು ಚೈತನ್ಯ!
ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ,
ನೀರಿನ ಹನಿಯಲಿ, ಬೆಂಕಿಯ ಕಿಡಿಯಲಿ,
ನನ್ನಲಿ, — ಎಲ್ಲೆಯು ಚೈತನ್ಯ!

~~ದಿವಮಸ್ತಿನಿಯನು ನಾನ~~
ಹನಿಯನು ನಾ ನೋಡ್ಬಲಿಸುವ ಪ್ರೀತಿ
ಆ ಹನಿ ನನ್ನನು ಕಾಣಿಸುವ ರೀತಿ!
ನನ್ನದಿ ಪ್ರೇಂಕಿದ ಈ ಹುಲು
ಇನಿಯನ ತುಟಿ ಹೊಂಗನೆ ಕಾಣುತ್ತಿರೆ!
ಪ್ರೇಮದ ಮುತ್ತಿಗೆ ಬಾಯ್ತೆರೆಯುತ್ತಿದೆ
ಚೇತನಮೂರ್ತಿಯು ಆ ಕಲು! —
ಕೈಗೆ! ಜಡವೆಂಬುದಕ್ಕೆ ಹುಳ್ಳು!

2/11/33.

ಬೆಳಗ್ಗೆ
ಗಂಟೆಯ [illegible] — [illegible] ಗಂಟೆವರೆ

ಕುವೆಂಪು

ಯಾರಿಗೋ, ಚಂದ್ರ, ಬೆಳ್ಳಿ ಕಲ್ಲಂಗಡಿಯ ಹೋಳಿನಂತೆ ತೋರುತ್ತಾನೆ. 'ಲವಂಗ' ಶಬ್ದ ಗೊತ್ತಿಲ್ಲದ ಮಗು, 'ಅದು... ಪಾನ್‌ಬೀಡಾಕ್ಕೆ ಹಾಕುವ ಸ್ಕ್ರೂ' ಎನ್ನುತ್ತದೆ. ಕ್ಯಾನ್ಸರ್ ವಾರ್ಡಿನಲ್ಲಿ ಒರಗಿರುವ ಹೆಂಗಸಿನ ಅರೆ ಎಚ್ಚರದಲ್ಲಿ, ಅವಳು ಬಾಲ್ಯದಲ್ಲಿ ತಿಂದ ಹುರಿದ ಮೀನು ಬರುತ್ತದೆ. ಇಂಥ ಒಂದೆರಡು ಅಪ್ಪಟ ಖಾಸಗಿ ಬದುಕಿನಿಂದ ಬಂದ ಸಾಲುಗಳಿಂದ ಬರವಣಿಗೆ ಆಪ್ತವಾಗುತ್ತದೆ. ಪುಟ್ಟ ಕಿರುನಗುವಿನಿಂದ ಇಡೀ ವ್ಯಕ್ತಿ ಬೆಳಗುವಂತೆ.

[illegible]ಹರೆ, ನಿಲುವು, ಯೋಚನೆ, ಅಭಿರುಚಿ, ದೃಷ್ಟಿಕೋನಗಳಿಂದ ಪ್ರತಿ ವ್ಯಕ್ತಿಯು ಅನನ್ಯ[illegible]ಸುತ್ತಾನೆ. ನಡಿಗೆ, ಹಸ್ತಾಕ್ಷರ, ಹೆಬ್ಬೆರಳ ಗುರುತಿನಂತೆ ಸಾಹಿತಿಯ ಬರವ[illegible]ನದೇ ಛಾಪನ್ನು ಹೊಂದಿರುತ್ತದೆ. ಮತ್ತು ಈ ಛಾಪನ್ನು ಉಳಿಸಿಕೊಂಡಷ್ಟೂ ಅದು ಉಳಿದವರಿಗೆ ಉಪಯುಕ್ತವಾಗುತ್ತದೆ. ಪ್ರತಿ ವ್ಯಕ್ತಿಯೊಳಗೂ ಹುದುಗಿರುವ ಅದ್ಭುತ ಜಗತ್ತಿನಿಂದ ಈ ವಿಶಿಷ್ಟ ಬಿಂಬಗಳು ಬರುತ್ತಿರುತ್ತವೆ. ಸಿಲೇಬಸ್ ಇಟ್ಟುಕೊಂಡು ರಚಿತವಾದಂತಿರುವ ಸಾಹಿತ್ಯ, ಬ್ಯೂಟಿ ಪಾರ್ಲರ್‌ನಿಂದ ಬ್ರೈಡಲ್ ಮೇಕಪ್ ಮಾಡಿಸಿಕೊಂಡು ಹೊರಬಿದ್ದ ಮದುವಣಗಿತ್ತಿಯರಂತೆ, ಒಂದೇ ಥರ ಕಾಣಿಸುತ್ತದೆ; ರೂಕ್ಷವಾಗಿರುತ್ತದೆ.

ತನ್ನ ಸಹಜ ಮೂಲರೂಪದಲ್ಲಿ ಜೀವಂತವಾಗಿರುವ ಬರವಣಿಗೆಯ ತಿದ್ದುಪಡಿಯೇನಿದ್ದರೂ ಅದರ ಒಳಗಿನಿಂದ ಆಗಬೇಕು, ಹೊರಗಿನಿಂದಲ್ಲ. 'ಸಾರ್ವತ್ರಿಕ', 'ಸಾರ್ವಕಾಲಿಕ' ಎಂಬ ಆಮಿಷದಲ್ಲಿ ಲೇಖಕ, ಇಸ್ತ್ರಿ ಹಾಕಿ, ತನ್ನದೇ ಸೂಕ್ಷ್ಮಗಳನ್ನು ಅಳಿಸಲು ಹೋಗಬಾರದು.

ಎಂದಿನಂತೆ, 'ಸಹಜ ಚೆಲುವಿ'ನ ಕತೆ, ಕವಿತೆ, ಅಪರೂಪದ ಆತ್ಮಕಥನಗಳನ್ನೊಳಗೊಂಡು ಈ ಸಂಚಿಕೆ ಮೈದಾಳಿದೆ. ಓದಿ, ಬರೆದು, ಪ್ರೋತ್ಸಾಹಿಸಿ.

ಇದು ಅಚ್ಚಿಗೆ ಹೋಗುತ್ತಿರುವಾಗ ಕನ್ನಡದ ಸೂಕ್ಷ್ಮ ಕತೆಗಾರ, ಪತ್ರಕರ್ತ, ಮೆಲುಜೀವಿ ಸೂ. ರಮಾಕಾಂತರ ನಿಧನದ ಸುದ್ದಿ ಬಂದಿದೆ. ಅವರಿಗೆ ನಮನ ಮತ್ತು ಕುಟುಂಬಕ್ಕೆ ಸಾಂತ್ವನ.

ಸಂಪಾದಕ




ಭಾವ ಲೋಕ


ಕತೆಗಳು

ಶತಮಾನದ ಮೆಲುಕು

ವಿಶ್ವ ಭಾರತಿ



ಭಾವನಾ



ಸಂಪುಟ -1 ಸಂಚಿಕೆ - 5
ಅಗಸ್ಟ್ 2000

ಪ್ರಕಾಶಕರು, ಮುದ್ರಕರು, ಮಾಲಿಕರು
ವಿಜಯ ಸಂಕೇಶ್ವರ
ಆನಂದ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಪ್ರಧಾನ ಸಂಪಾದಕರು
ಸಂತೋಷಕುಮಾರ ಗುಲ್ವಾಡಿ


ಸಂಪಾದಕ
ಜಯಂತ ಕಾಯ್ಕಿಣಿ

ಮುಖಪುಟ ತೈಲವರ್ಣ ಚಿತ್ರ: ಕೆ.ಎಸ್. ರಾಮಚಂದ್ರನ್
ಹಿಂಪುಟ ಛಾಯಾಚಿತ್ರ: ಅ.ನಾ. ರಾವ್ ಜಾದವ್

ಸಂಚಿಕೆಯ ಕಲಾವಿದರು: ಸೃಜನ್, ಇಕ್ಬಾಲ್ ಅಹ್ಮದ್, ರಾಧಾಕೃಷ್ಣ ಬಂದಗದ್ದೆ, ರಾಮಕೃಷ್ಣ ಸಿದ್ರಪಾಲ್, ಶಶಿಧರ್, ಶ್ರೀಪಾದ್, ಕೆ.ಎಸ್. ರಾಮಚಂದ್ರನ್ ಪ್ರದೀಪ್ ರಾವುತ್, ದೇವದಾಸ್ ಶೆಟ್ಟಿ, ರೋಮಿಯೊ, ಕಮಲಾಕ್ಷ ಶೆಣೈ, ಬಿ. ಮಾರುತಿ, ಪ್ರತಿಭಾ, ಸುಮಂತ್

ಸಂಪಾದಕೀಯ ಕಾರ್ಯಾಲಯ
ನಂ. 32, 2ನೆಯ ಮುಖ್ಯರಸ್ತೆ, ವೈಯಾಳಿಕಾವಲ್
ಬೆಂಗಳೂರು - 560 003
ದೂರವಾಣಿ : 3365312, 3365313
ಫ್ಯಾಕ್ಸ್: 080-3340311

ಪ್ರಧಾನ ಕಛೇರಿ
ಗಿರಿರಾಜ ಅನೆಕ್ಸ್
ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ
ದೂರವಾಣಿ: 0836-253656, 253657
ಫ್ಯಾಕ್ಸ್: 0836-253630




ಎಂ.ಎಚ್. ನಾಯಕ ಬಾಡ

ಆವತ್ತೂ ಇಂಥದೇ ಮಳೆಯಿತ್ತು

ಮತ್ತೊಮ್ಮೆ ನಾನವಳನ್ನು ನೋಡುವ ಹೊತ್ತಿಗೆ ಮಧ್ಯೆ ಒಂದು ಯುಗವೇ ಎನ್ನಬಹುದಾದಂತಹ ದೀರ್ಘ ಅವಧಿ ಮುಗಿದುಹೋಗಿತ್ತು. ಏನಿಲ್ಲೆಂದರೂ ಸುಮಾರು ಹದಿನೆಂಟಿಪ್ಪತ್ತು ವರ್ಷಗಳ ದೀರ್ಘ ಅವಧಿ. ನಮ್ಮಿಬ್ಬರ ದಾರಿಗಳು ತೀರಾ ಬೇರೆ ಬೇರೆಯಾಗಿ ಬದುಕಿನ ಪಯಣ ಹೊರಟ ಮೇಲೆ, ಒತ್ತಾಯ ಪೂರ್ವಕವಾಗಿಲ್ಲವಾದರೂ ಅವಳನ್ನು ಸಂಧಿಸುವಂತಹ ಎರಡು ಅವಕಾಶಗಳು ನನಗೆ ಲಭ್ಯವಿದ್ದವು. ಮೊದಲನೆಯದು ಅವಳ ಮದುವೆಯ ಸಂದರ್ಭ. ಎರಡನೆಯದು, ಆಕಸ್ಮಿಕವೊಂದರಲ್ಲಿ ಅವಳು, ತನ್ನ ಗಂಡನನ್ನು ಕಳೆದುಕೊಂಡಾಗ. ಎರಡೂ ಸಂದರ್ಭಗಳಲ್ಲಿ ನಾನೇ ಮನಸ್ಸು ಮಾಡಲಿಲ್ಲವಾದ್ದರಿಂದ ಅವಳನ್ನು ನೋಡುವುದಾಗಲಿಲ್ಲ. ವರ್ಷಗಳ ನಂತರದ ಈ ಭೇಟಿಯೂ ಕೂಡ ತೀರಾ ಆಕಸ್ಮಿಕದ್ದಾಗಿತ್ತು. ವಯಸ್ಸು ಹಾಗೂ ಕಾಯಿಲೆಯ ದೆಸೆಯಿಂದ ದೀರ್ಘಕಾಲ ಹಾಸಿಗೆ ಹಿಡಿದ, ತನ್ನ ಅಂತಿಮ ಕ್ಷಣಗಳನ್ನು ಎದುರು ನೋಡುತ್ತಿದ್ದ ನನ್ನ ಸೋದರತ್ತೆಯನ್ನು ನೋಡಲು, ನಾನು ಬಹಳ ವರ್ಷಗಳ ನಂತರ, ನನ್ನಜ್ಜಿ ಮನೆಯ ಆ ಊರಿಗೆ ಹೋಗಿದ್ದೆ. ಅದು ಜೋರು ಮಳೆಗಾಲದ ದಿನಗಳು. ಹೊರಗೆ ಧೋ ಧೋ ಎಂದು ಮಳೆ ಹಲ್ಲುಕಚ್ಚಿ ಸುರಿಯುತ್ತಿದ್ದರೆ, ಜಗುಲಿಯಲ್ಲಿ ಗೋಡೆಗೆ ಒತ್ತಿಕೊಂಡಂತಿದ್ದ ಮಂಚದ ಮೇಲೆ ಮುದುರಿ ಮಲಗಿದ್ದ ಸೋದರತ್ತೆಯ ತಲೆಯ ಬುಡದಲ್ಲಿ ಕುಳಿತು, ತಣ್ಣಗೆ ಕೊರೆಯುತ್ತಿದ್ದ ಅವಳ ಅಂಗೈಯನ್ನು ನನ್ನ ಅಂಗೈಯಲ್ಲಿ ತೆಗೆದುಕೊಂಡು ಮೃದುವಾಗಿ ನೇವರಿಸುತ್ತ, ನಾನು ಮೆಲುದನಿಯಲ್ಲಿ ಅದೂ ಇದೂ ಮಾತು ಶುರು ಮಾಡಿದ್ದೆ. ನನ್ನ ದಿಢೀರ್ ಆಗಮನದಿಂದಾಗಿ ಅಂಥ ಯಾತನೆಯಲ್ಲೂ ಅತ್ತೆ ಗೆಲುವಾಗತೊಡಗಿದ್ದಳು ಅಥವಾ ಬಲವಂತ ವಾಗಿಯಾದರೂ ಮೋರೆಯಲ್ಲಿ ಅದನ್ನು ತೋರಿಸಿಕೊಳ್ಳಲು ಪ್ರಯಾಸಪಡತೊಡಗಿದ್ದಳು.

ನನ್ನ ಅವ್ವ ಸಾಯುತ್ತಲೇ ಅಪ್ಪ ಬೇರೆ ಮದುವೆ ಮಾಡಿಕೊಂಡು, ಹೊಸ ಹೆಂಡತಿ ಹೊಸ ಸಂಸಾರ ಅಂತ ಉಳಿದುಬಿಟ್ಟಿದ್ದರಿಂದ ನನಗೆ ಅಜ್ಜಿಮನೆಯೇ ಗಟ್ಟಿಯಾಗಿ, ಸೋದರತ್ತೆಯೇ ತಾಯಿ ತಂದೆ ಬಂಧು ಬಳಗ ಎಲ್ಲಾ ಆಗಿಬಿಟ್ಟಳು. ಮಧ್ಯೆ ಒಂದೆರಡು ಬಾರಿ ಅಪ್ಪ ನನ್ನನ್ನು ಕರೆದುಕೊಂಡು ಹೋಗುವ ಇರಾದೆ ವ್ಯಕ್ತಪಡಿಸಿದನಾದರೂ ನನ್ನ ಹಠ ಹಾಗೂ ಅತ್ತೆಯ, ''ನಾಗಪ್ಪಾ, ಆವ್ನಿಗೆ ಇಲ್ಲೇನ ಕಮ್ಮಿಯಾಗದೆ? ಅಥವಾ ಅಲ್ಲೀಗೆ ಕರ್ಕೊಂಡೋಗಿ ನೀಯೇನ್ ಕಿರೀಟ ಇಡೋಂವಿದ್ದೆ ಆವ್ನಿಗೆ. ನ[illegible] ಗಂವ ಮಗ ಇದ್ದಾಂಗೆ. ಅವ್ನಾಗಿ ಅಂವ 'ಅತ್ತೆ ನಾನು ಹೋಗ್ತೆ' ಅನ್ನೂ ಗಂಟ ಇಲ್ಲೇ ಇ[illegible] ಬಿಡು'' ಎಂಬ ಮಾತು, ಬಹಳ ವರ್ಷಗಳ ಕಾ[illegible] ನನ್ನನ್ನು ಅಜ್ಜಿಯ ಮನೆಯಲ್ಲೇ ಉಳಿಯ[illegible] ಗೊಟ್ಟಿತು. ಹಾಗಾಗಿ ಮಾವನ ಮಕ್ಕಳ ಜೊತೆಗೆ ನನ್ನ ಆಟ, ಪಾಠ, ಸ್ಕೂಲು ಎಲ್ಲಾ ಸಾಗುತ್ತ ಅವರ ಜೊತೆ ಜೊತೆಗೇ ಬೆಳೆಯುತ್ತ ಹೋದೆ.


ಶ್ರೀಪಾದ್

ಇದ್ದಕ್ಕಿದ್ದಂತೆ ಶೂನ್ಯದಿಂದೆಂಬಂತೆ ಹದಿನೈದು ಹದಿನಾರರ ಮುದ್ದಾದ ಹುಡುಗಿಯೊಬ್ಬಳು ನನ್ನೆದುರು ಪ್ರತ್ಯಕ್ಷವಾದಳು. ಆ ಮೋರೆ, ಆ ಮೈಕಟ್ಟು, ಆ ನಿಲುವು ತುಂಬಾ ಪರಿಚಿತ ಅನ್ನಿಸಿತು. ಹಾಗೆ ಪ್ರತ್ಯಕ್ಷಳಾದ ಹುಡುಗಿ, ಎರಡು ಹೆಜ್ಜೆ ಮುಂದೆ ಬಂದು, ನನ್ನ ಕೈಯಲ್ಲಿದ್ದ ಅತ್ತೆಯ ಅಂಗೈಯನ್ನು ಮೃದುವಾಗಿ ತಟ್ಟುತ್ತ, ''ಅಜ್ಜೀ, ನಾನು ಹೋಗ್ತೆ ಆಯ್ತಾ?'' ಕೇಳಿದಳು. ಮೆಲು ದನಿಯಲ್ಲಿ ನನ್ನೊಡನೆ ಏನೇನೋ ಮಾತಾಡು ತ್ತಿದ್ದ ಅತ್ತೆ ಒಂದು ಕ್ಷಣ ಮಾತು ನಿಲ್ಲಿಸಿ, ಹುಡುಗಿ ಯತ್ತ ಹೊರಳಿ, ''ಮುಕ್ತಾ, ನಿಮ್ಮವ್ವಿ ಮನೇಲದ್ಯ ಮಗನೇ?'' ಕೇಳಿದಳು. ''ಗದ್ದೆ ನೆಟ್ಟಿಗೆ ಹೋಗ ವಳೆ'' ಎಂದಿತು ಹುಡುಗಿ. ''ಯಾರ ಗದ್ದೆಗೆ?'' ಕೇಳಿದ್ದಕ್ಕೆ, ''ಅನಂತ ನಾಯ್ಕರದು'' ಎಂದಿತು ಹುಡುಗಿ. ''ಹಾಂಗಾದ್ರೆ ಒಂದು ಕೆಲಸ ಮಾಡು ಮಗಾ. ಆ ಬದೀಗೆ ಹೋಗೋವ್ರು ಯಾರಾ ದರೂ ಕಾಣಿಸಿದ್ರೆ, ಯಶವಂತ ಬಂದವನೆ ಅಂತ ಹೇಳಿಕಳ್ಸು ನಿಮ್ಮವ್ವಿಗೆ'' ಎಂದಳು ಅತ್ತೆ. ಹುಡುಗಿ ಅಂಗಳಕ್ಕಿಳಿಯುತ್ತಲೇ ಅತ್ತೆ ನನ್ನತ್ತ ತಿರುಗಿ, ''ಯಾರು ಗೊತ್ತಾಯ್ತ? ನಾಗೂ, ನಿನ್ನ ನಾಗೂ'' ಎಂದವಳು ನನ್ನ ಮೋರೆ ದಿಟ್ಟಿಸುತ್ತ ಸಣ್ಣಗೆ ನಕ್ಕು, ''ಈ ಹುಡುಗಿ ನಾಗೂನ್ನ ದೊಡ್ಡ ಮಗಳು'' ಎಂದಳು.

ಹುಡುಗಿ ಕಣ್ಣಿಗೆ ಬಿದ್ದಾಗಲೇ ಪರಿಚಿತ ಮೋರೆ, ಪರಿಚಿತ ನಿಲುವು ಎಂದೆಲ್ಲಾ ನನಗೆ ನಾನೇ ಹೇಳಿಕೊಂಡವನಿಗೆ, ಅತ್ತೆಯ ಮಾತಿ ನಿಂದ ಕೆನ್ನೆಗೆ ಬಾರಿಸಿ ನೆನಪು ಮಾಡಿ ಕೊಟ್ಟಂತಾಯ್ತು. ನಾಗೂ ಅನ್ನೋ ಆ ಹೆಸರು ಕಿವಿಗೆ ಬೀಳುತ್ತಲೆ, ಎದೆಬಡಿತ ಕೊಂಚ ಏರು ಪೇರಾದಂತೆ ಭಾಸವಾಯ್ತು. ಈ ನಾಗೂ ಹೆಸರಿನ ಹೆಣ್ಣು, ನನ್ನ ಬದುಕಲ್ಲಿ ಮುಂಜಾವಿನ ತಂಗಾಳಿ ಯಂತೆ ಪ್ರವೇಶಿಸಿದವಳು, ಹೋಗುವಾಗ ಮಾತ್ರ ಬಿರುಗಾಳಿಯಾಗಿ, ಸುಂಟರಗಾಳಿಯಾಗಿ, ಎಲ್ಲವನ್ನೂ ಹಾಳುಗೆಡವಿ ಹೊರಟು ಹೋಗಿದ್ದಳು. ಅವಳ ನಿರ್ಗಮನ ನನ್ನಲ್ಲಿ ಎಂಥ ಶೂನ್ಯವನ್ನು ಸೃಷ್ಟಿಸಿಬಿಟ್ಟಿತ್ತು, ಎಂದರೆ ಚೇತರಿಸಿ ಕೊಳ್ಳಲು ನನಗೆ ಹಲವಾರು ವರ್ಷಗಳೇ ಹಿಡಿದಿದ್ದವು.

''ಅತ್ತೇ ನಾಗೂ ಇಲ್ಲೇ ಇರ್ತಾಳಾ? ಅವಳ ಗಂಡನ ಮನೆ ಇದ್ದದ್ದು ಅಲ್ಲೆಲ್ಲೋ ಅರಬೈಲು ಘಟ್ಟದ ಬುಡದಲ್ಲಲ್ಲವ?'' ಕೇಳಿದೆ. ''ಈಗೆಲ್ಲಿಯ ಗಂಡನ ಮನೆ? ಅವಳ ಗಂಡ ಹೋಗಿಬಿಟ್ಟು ಆಗಲೇ ನಾಲ್ಕೈದು ವರ್ಷ ಆಯ್ತಲ್ಲ. ಗಂಡನ ಮನೆ ಅನ್ನೂದು ಹೆಸರಿಗೆ ಮಾತ್ರಾ ಆಗಿತ್ತು. ಅಲ್ಲೇನದೆ ಮಣ್ಣು? ಒಂದು ತುಂಡು ಗದ್ದೇನೇ? ಒಂದು ತುಂಡು ಹಿತ್ಲಾನೇ? ಗಂಡ ಹೊಲಿಗೆ ಕೆಲಸ ಮಾಡ್ತಿದ್ದ. ಅಪ್ಪ, ಅವ್ವಿ, ಅಣ್ಣ, ತಮ್ಮ ಯಾರೂ ಇರ್ಲಿಲ್ಲ ಅವ್ನಿಗೆ. ಇಬ್ರು ತಂಗಿ ಇದ್ದವರು ಮದುವೆಯಾಗಿ ಎಲ್ಲೆಲ್ಲೋ ಅವ್ರೆ. ಗಂಡ ಹೋದ ಮೇಲೆ ಒಂಟಿ ಹೆಂಗಸು, ಅಲ್ಲಿದ್ದ ಕಂಡೇನ ಮಾಡೂದು. ಎರಡು ಮಕ್ಕಳನ್ನ, ಎರಡೂ ಹೆಣ್ಣೇ, ಬಗಲಲ್ಲಿ ಹಾಕ್ಕಂಡು ಇಲ್ಲಿಗೇ ಬಂದವಳೆ. ಒಂದು ಸಣ್ಣ ತಟ್ಟಿಗುಬ್ಬಿಯಂತಾದ್ದು ಮನೆ ಮಾಡಿಕೊಂಡವಳೆ. ಗಂಡನ ಹೊಲಿಗೆ ಮಿಶೀನು ಇತ್ತಲ್ಲ, ಸಣ್ಣಪಟ್ಟ ಹೊಲಿಗೆ ಕೆಲಸ ಬರ್ತದೆ ಅದಕ್ಕೆ. ಹೊಲಿಗೆ ಕೆಲಸ ಹೆಣ್ಣು ಮಕ್ಕಳಿಗೂ ಗೊತ್ತು. ಅದು ಬಿಟ್ರೆ, ಹೀಂಗೇ ಗದ್ದೆ ನೆಟ್ಟಿ, ಗದ್ದೆ ಕೊಯ್ಲು, ಅದೂ ಇದೂ ಕಾಟಾ ಕೋಟಿ ಕೆಲಸ. ಹ್ಯಾಂಗಾದ್ರೂ, ಬದಕಬೇಕಲ್ಲ ಮಗನೇ'', ಅತ್ತೆಯ ಪುರಾಣ ಸಾಗಿಯೇ ಇತ್ತು.

ಇದ್ದಕ್ಕಿದ್ದಂತೆ ನನಗೆ ಆ ದಿನಗಳು ನೆನ ಪಾದವು. ನನ್ನ ಬಾಲ್ಯದ ದಿನಗಳು, ಆಗಿನ ಗೆಳೆಯರು, ಆ ದಿನಗಳಲ್ಲಿ ನಮ್ಮದೇ ಆದ ಒಂದು ಪುಟ್ಟ ಗುಂಪಿತ್ತು. ಮಾವನ ಮಕ್ಕಳು ಹಾಗೂ ಕೇರಿಯ ಕೆಲವು ಹುಡುಗರನ್ನೊಳಗೊಂಡ, ಒಂದೇ ವಯಸ್ಸಿನ, ಒಂದೇ ಓರಗೆಯ, ಏಳೆಂಟು ಹುಡುಗರ ಗುಂಪು. ಆ ಗುಂಪಿನಲ್ಲಿ ನಾಗೂ ಕೂಡ ಇರುತ್ತಿದ್ದಳು. ಅದಕ್ಕೆ ಕಾರಣ ಹುಟ್ಟು

ವಾಗಲೇ ತಾಯಿಯನ್ನು ಆಮೇಲೆ ಕೆಲವೇ ತಿಂಗಳಲ್ಲಿ ತಂದೆಯನ್ನೂ ನುಂಗಿದ ಅಪವಾದ ಕ್ಕೊಳಗಾಗಿ, ತಾಯಿಯ ತಂಗಿಯ ಆಶ್ರಮಕ್ಕೆ ಬಲವಂತವಾಗಿ ತಳ್ಳಲ್ಪಟ್ಟು, ಆ ಚಿಕ್ಕಮ್ಮನಿಂದ ತೀರಾ ಅಸಡ್ಡೆಗೊಳಗಾಗಿ ಮನೆಯಲ್ಲಿರುವು ದಕ್ಕಿಂತ ಆಚೆ ಇರುವುದನ್ನೇ ಹೆಚ್ಚು ಇಷ್ಟಪಡುತ್ತಿದ್ದ ಅವಳಿಗೆ, ನನ್ನ ಸೋದರತ್ತೆಯ ವಾತ್ಸಲ್ಯ ಮೂರೂ ಹೊತ್ತು ಅವಳು ನಮ್ಮ ಮಧ್ಯೆಯೇ ಉಳಿಯುವಂತೆ ಮಾಡಿತ್ತು. ಹೀಗಾಗಿ, ಸ್ಕೂಲಿನ ದಾರಿಯಲ್ಲೇ ಆಗಲಿ, ಸ್ಕೂಲು ಬಿಟ್ಟ ನಂತರ ಆಯಾ ಕಾಲಗಳಲ್ಲಿ ದೊರೆಯುತ್ತಿದ್ದ ಅದೂ ಇದೂ ಕಾಯಿ ಹಣ್ಣುಗಳನ್ನು ಹುಡುಕಿಕೊಂಡು ಹೋಗುವಾಗಲಾಗಲೀ, ಮಳೆಗಾಲದಲ್ಲಿ ಗುನಗರ ಹಳ್ಳದಲ್ಲಿ ಈಜುವಾಗಲಾಗಲೀ, ಗಾಳಕ್ಕೆ ಎರೆಹುಳ ಸಿಕ್ಕಿಸಿ, ಆಚಾರಿ ಹಿಡ್ಲದ ಕೆಳಗಿನ ಗುಂಡಿಯಲ್ಲಿ ಮೀನು ಹಿಡಿಯುವಾಗಲಾಗಲೀ, ಸೌದೆ ತರಲು ಅತ್ತೆಯ ಜೊತೆಗೆ ಬೆಟ್ಟಕ್ಕೆ ಹೋಗು ವಾಗಲಾಗಲೀ ನಮ್ಮ ಗುಂಪಿನಲ್ಲಿ ನಾಗೂ ಕೂಡ ಸಕ್ರಿಯ, ಸದಸ್ಯಳಂತೆ ಇರುತ್ತಿದ್ದುದು, ಸಾಮಾನ್ಯ ಸಂಗತಿಯಾಗಿರುತ್ತಿತ್ತು. ಅವಳದು ಗುಂಪಿನಲ್ಲಿ ಎದ್ದು ಕಾಣುವ ವ್ಯಕ್ತಿತ್ವವಾಗಿತ್ತು. ಅದಕ್ಕೆ ಕಾರಣ, ವಯಸ್ಸಿಗೆ ಮೀರಿದ ಅವಳ ಬೆಳವಣಿಗೆ. ಹತ್ತು ಹನ್ನೊಂದು ವರ್ಷಗಳ ಆ ಪುಟ್ಟ ವಯಸ್ಸಿನಲ್ಲೇ ಅವಳು, ತನ್ನ ತುಂಬಿಕೊಂಡ ಮೈಕೈಗಳಿಂದ, ಅಗಾಧ ಗಾತ್ರದ ಮೊಲೆಗಳಿಂದ ಮದುವೆ ಯೋಗ್ಯ ವಯಸ್ಸಿನ ಕನ್ಯೆಯಂತೆ ಕಾಣುತ್ತಿದ್ದಳು. ಹಾಗಾಗಿ, ನಮ್ಮ ಹುಡುಗರ ಗುಂಪಿನಲ್ಲಿರುವಾಗ ವಿಕೃತ ಮನಸ್ಸಿನ ಪೋಲಿ ಜನರ ಗೇಲಿಗೂ, ಸ್ಕೂಲಿನಲ್ಲಿದ್ದಾಗ ಪ್ರಾಯದ ಮಾಸ್ತರುಗಳ ವಿಶೇಷ ಕಿರಿಕಿರಿಗೂ ಒಳಗಾಗಿ ಮುಜುಗರ ಅನುಭವಿಸ ಬೇಕಾಗಿ ಬಂದ ಸಂದರ್ಭಗಳಿಗೆ ಲೆಕ್ಕವೇ ಇರುತ್ತಿರಲಿಲ್ಲ.

''ಅತ್ತೇ ಅನಂತ ನಾಯ್ಕರ ಗದ್ದೆ ಇದ್ದಿ ರೋದು ಗುನಗರ ಹಳ್ಳದ ದಂಡೆಯಲ್ಲಲ್ಲವಾ?'' ಕೇಳಿದೆ. ''ಹೌದು, ಆದ್ರೆ ಈ ಮಳೇಲ್ಲಿ ಹ್ಯಾಂಗೆ ಹೋಗ್ತೆ ನೀನು? ಹಳ್ಳಕ್ಕೆ ನೆಗಸ ಬಂದಿರ್ತದೆ. ಹ್ಯಾಂಗೂ ನಾನು ಹೇಳಿ ಕಳ್ಸೀವೆನಲ್ಲ. ನೀ ಬಂದ ಸುದ್ದಿ ಸಿಕ್ರೆ, ನಾಗೂ ಜೀಂವ ಅಲ್ಲಿ ಇರೂಕ್ಕೆ ಸಾಧ್ಯನೇ ಇಲ್ಲ'' ಎಂದವಳು, ಕ್ಷಣಬಿಟ್ಟು, ''ಹೋಗೂದಾದ್ರೆ ಹೋಗು, ಆದ್ರೆ ಆಸೆ ಆಯ್ತು ಅಂದ್ಹೇಳಿ, ಹೊಳೇಲಿ ಮೀನಾಡುಕ್ಕೆ ಹೋಗ ಬೇಡ. ಹೊಳೆ ಈಗೆ ಮೊದ್ಲಿದ್ದಂಗಿಲ್ಲ, ತುಂಬಾ ಸೆಳೆತ ಇರ್ತದೆ' ಎಂದಳು. ನಾನು ಮೆಲ್ಲನೆ ಕೊಡೆ ಬಿಡಿಸಿ ಅಂಗಳಕ್ಕಿಳಿದೆ.

ಗೋಳಿಬೀರ ದೇವಸ್ಥಾನ ದಾಟಿ, ಕೆಂಡದ ಮಾಸ್ತಿ ಗುತ್ತು ದಾಟಿ, ಕಲ್‌ಘಟಗಿ ಮರಿಮೇಲೆ ನಿಂತು, ಕೆಳಗೆ ಆಳದಲ್ಲಿ ಸೊಕ್ಕಿನಿಂದ ಹರಿ ಯುತ್ತಿದ್ದ ಗುನಗರ ಹಳ್ಳ, ಅದರ ಏರಿಯ ಮೇಲೆ, ಕಾಡನ್ನು ಬೆನ್ನಿಗೆ ಬಿಟ್ಟಿಕೊಂಡು ಉದ್ದಕ್ಕೆ ಚಾಚಿಕೊಂಡ ಮೈಲುಗಟ್ಟಲೆ ಗದ್ದೆ ಬಯಲು, ಬಯಲನ್ನು ಸೀಳಿಕೊಂಡು ಹೊರಟ ಕೊಂಕಣ ರೈಲು ಮಾರ್ಗ. ಸುರಿಯುವ ಮಳೆಯಲ್ಲಿ, ಎಲ್ಲೆಲ್ಲೂ ಕಂಬಳಿಕುಪ್ಪೆ ಹೊದ್ದು ನೆಟ್ಟಿಯ ಕೆಲಸದಲ್ಲಿ ನಿರತರಾದ ಹೆಂಗಸರು ಕಣ್ಣಿಗೆ ಬಿದ್ದು ಇದರಲ್ಲಿ ಅನಂತನಾಯ್ಕರ ಗದ್ದೆ ಯಾವುದು, ಮತ್ತೆ ಅಷ್ಟೆಲ್ಲಾ ಹೆಂಗಸರುಗಳಲ್ಲಿ ನಾಗೂ ಯಾರು ಎಂಬುದನ್ನು ಪತ್ತೆ ಹಚ್ಚಲಾಗದೆ, ಆ ಯೋಚನೆ ಯನ್ನು ಅಷ್ಟಕ್ಕೇ ಬಿಟ್ಟು, ಮೆಲ್ಲನೆ ಕೆಳಗಿಳಿದು ಬಂದು, ತುಂಬಿ ಹರಿಯುವ ಹಳ್ಳದ ದಂಡೆಯಲ್ಲಿ ನಿಂತೆ. ಅತ್ತೆ ಹೇಳಿದ್ದು ನಿಜ. ಹೊಳೆಗೆ ನೆಗಸ ಬಂದಿದ್ದರಿಂದ ವಿಪರೀತ ಸೆಳೆತವಿತ್ತು. ಈ ಹೊತ್ತಿನಲ್ಲಿ ಈಜುವ ಮಾತು ದೂರ ಉಳೀತು, ದಾಟಲು ಪ್ರಯತ್ನಿಸಿದರೂ ನೀರು ಪಾಲಾಗು ವುದು ಖಾತ್ರಿ ಅನ್ನಿಸಿತು. ಮೊದಲೆಲ್ಲ ಇಂಥದೇ ನೆಗಸ ಬಂದರೂ ಈ ಥರದ ಸೆಳೆತ ಇರುತ್ತಿರಲಿಲ್ಲ. ದಂಡೆಯ ಎರಡೂ ಬದಿಗಿದ್ದ ಗದ್ದೆಗಳ ಒತ್ತುವರಿ ಯಿಂದಾಗಿ, ಈ ಭಾಗದ ಹೊಳೆಯ ಅಗಲ ಕಿರಿದಾಗಿ ಸೆಳೆತ ವಿಪರೀತವಾಗಿರಲು ಸಾಕು. ನೀರು ಮೊದಲು ಹಾಗಿರಲಿಲ್ಲ. ಹೊಳೆ ಅಗಲವಾಗಿತ್ತು.

ಎರಡೂ ದಂಡೆಗಳಲ್ಲಿ ಗಿಡ ಮರಗಳಿದ್ದವು. ಹೊಳೆಯ ಮಧ್ಯದಲ್ಲೇ ಒಂದು ಕೇದಗೆಯ ದಟ್ಟ ಪೊದೆಯಿತ್ತು. ಘಮ್ಮೆಂಬ ಕೇದಗೆಯ ಕಂಪನ್ನು ಹೊಂದಿದ ನಿಗೂಢವನ್ನೇನೋ ತನ್ನಲ್ಲಿ ಬಚ್ಚಿಟ್ಟು ಕೊಂಡ ಭ್ರಮೆ ಉಂಟುಮಾಡುತ್ತಿದ್ದ ಕೇದಗೆಯ ಪೊದೆ. ಕೇದಗೆ ಪೊದೆ ನೆನಪಾಗುತ್ತಲೇ, ವರ್ಷ ಗಳ ಹಿಂದೆ ನನ್ನ ಹಾಗೂ ನಾಗೂ ಮಧ್ಯೆ ನಡೆದುಹೋದ ಮಧುರ ಅನುಭೂತಿಯೊಂದು ನೆನಪಾಗಿ, ಇಡಿಯ ದೇಹ ಸುಖದ ಅಲೆಗಳ ಹೊಡೆತಕ್ಕೆ ಸಿಕ್ಕು ಮೃದುವಾಗಿ ಅದುರಿದ ಅನುಭವವಾಯ್ತು.


ನನಗಾಗ ಹನ್ನೆರಡರ ವಯಸ್ಸು. ಅದೊಂದು ಮಧ್ಯಾಹ್ನ ಸ್ಕೂಲಿನಿಂದ ಹಿಂದಿರುಗಿದವನಿಗೆ, ಮಾವನ ಮಕ್ಕಳೆಲ್ಲ ನಿಂಬೆಹಣ್ಣು ಕೊಯ್ಯಲು ಹೊಳೆ ದಂಡೆಯಲ್ಲಿದ್ದ ಆಚಾರಿ ಹಿತ್ಲಕ್ಕೆ ಹೋದ ಸಮಾಚಾರ ಸಿಕ್ಕು, ಅಲ್ಲಿಗೆ ಹೋದರೆ ಅವರ್‍ಯಾರೂ ಕಾಣಸಲಿಲ್ಲ. ಬಹುಶಃ, ಹೊರ್ಸಾ ನಕ್ಕಿಯ ಬೇಟೆಗೆ ಸಕ್ರೆ ಕಟ್ಟಿನ ಕೆರೆಯತ್ತ ಹೊರಟಿರ ಬೇಕು ಅಂತ ಅಂದುಕೊಂಡು, ಇನ್ನೇನು ಹೊರಳಬೇಕು ಎಂದುಕೊಳ್ಳುತ್ತಿದ್ದಾಗ, ಒಂದು ಅಪೂರ್ವ ದೃಶ್ಯ ಕಾಣಿಸಿ, ರೋಮಾಂಚನ ಗೊಂಡು ಅಲ್ಲೇ ನಿಂತೆ. ಅಷ್ಟು ದೂರ, ಹೊಳೆದಂಡೆಯಲ್ಲಿ, ಕೇದಗೆ ಪೊದೆಯ ಪಕ್ಕ, ನೀರಿನಲ್ಲಿ ಚಾಚಿಕೊಂಡ ಮರದ ಬೊಡ್ಡೆಯ ಮೇಲೆ ಕುಂತು, ನಾಗೂ ಸ್ನಾನ ಮಾಡುತ್ತಿದ್ದಳು. ಪಕ್ಕದಲ್ಲಿದ್ದ ಬುಟ್ಟಿಯಲ್ಲಿ ಆಗಷ್ಟೇ ಒಗೆದು, ಹಿಂಡಿದ ಒಂದು ಹೊರೆ ಬಟ್ಟೆಯಿತ್ತು. ವಿಷಯ ಅದಲ್ಲ. ಸೊಂಟಕ್ಕೆ ಸುತ್ತಿಕೊಂಡ ಒಂದು ತುಂಡು ಬಟ್ಟೆಯ ಹೊರತಾಗಿ ಅವಳ ಇಡಿಯ ದೇಹ ನಗ್ನವಾಗಿತ್ತು. ತುಂಬಿಕೊಂಡ ಅವಳ ಎದೆ, ಆ ಮೈಮಾಟ ಕಣ್ಣಿಗೆ ಬೀಳುತ್ತಲೇ ನನ್ನ ಮೈಯಲ್ಲಿ ಮಿಂಚಿನ ಸಂಚಾರವಾದ ಅನುಭವವಾಯ್ತು. ಇಡಿಯ ದೇಹ ಹೊತ್ತಿಕೊಂಡು, ಭಗಭಗ ಉರಿಯುತ್ತಿದ್ದಂತೆ ಭಾಸವಾಯ್ತು. ಕೈಕಾಲುಗಳಲ್ಲಿ ನವಿರು ನಡುಕ ಕಾಣಿಸಿತು. ದೊಡ್ಡವ್ವ, ಅತ್ತೆ ಯರಲ್ಲಿ ಯಾರೊಬ್ಬರೂ ರವಿಕೆ ತೊಡುತ್ತಿರಲಿಲ್ಲ. ಸ್ನಾನ ಮಾಡುವಾಗ ಯಾವೊಂದು ಸಂಕೋಚವೂ ಇಲ್ಲದೆ ನಮ್ಮೆದುರು ಬರಿಮೈಯಲ್ಲೇ ಕುಳಿತುಕೊಳ್ಳುತ್ತಿದ್ದರಲ್ಲದೆ ಕೆಲವೊಮ್ಮೆ ನಮ್ಮ ಕೈಗಳಿಂದಲೇ ಮೈಕೈ, ಬೆನ್ನು ಉಜ್ಜಿಸಿಕೊಳ್ಳುತ್ತಿದ್ದರು. ಆಗೆಲ್ಲ ಏನೂ ಆಗದಿದ್ದುದು ಈಗೇಕೆ ಹೀಗೆ ಎಂಬ ಪ್ರಶ್ನೆಗೆ ನನ್ನಲ್ಲಿ ಯಾವ ಉತ್ತರವೂ ಇದ್ದಿರಲಿಲ್ಲ. ನಾನೇನು ಮಾಡುತ್ತಿದ್ದೇನೆ ಎಂಬುದು ಅರಿವಿಗೆ ಬರುವ ಮುನ್ನವೇ, ಹಿಂದಿನಿಂದ ಧಾವಿಸಿಹೋದವನೇ, 'ನಾಗೂ' ಅಂತ ಸಣ್ಣಕ್ಕೆ ಕೂಗಿ ಅವಳನ್ನು ಗಟ್ಟಿಯಾಗಿ ತಬ್ಬಿಕೊಂಡುಬಿಟ್ಟೆ. ಅಚಾನಕ ಆದ ಈ ಹಲ್ಲೆಯಂತಹದರಿಂದ ಕೊಂಚ ಗಾಬರಿ ಗೊಂಡಳಾದರೂ, ಅದು ನಾನು ಎಂಬುದು ಗೊತ್ತಾಗುತ್ತಲೇ, ಕೂಗಿಕೊಳ್ಳುವ ಅಥವಾ ನನ್ನನ್ನ ಜೋರಾಗಿ ನೀರಿಗೆ ತಳ್ಳುವ, ಕೊನೆಗೆ ಕೊಸರಿ ಕೊಳ್ಳುವ ಪ್ರಯತ್ನವನ್ನೂ ಮಾಡದೆ, ಅವಳ ಬೆನ್ನ ಹಿಂದಿನಿಂದ ಎರಡೂ ಹೆಗಲುಗಳ ಮುಖಾಂತರ, ಕತ್ರಿಯಾಕಾರದಲ್ಲಿ ಎದೆಯ ಮೇಲೆ ಬಿಗಿಯಾಗಿ ಬಳಸಿಕೊಂಡ ನನ್ನ ಮುಂಗೈಗಳನ್ನು ಒಂದು ಕೈಯಿಂದ ಮೃದುವಾಗಿ ಸವರುತ್ತ, ಅವಳ ಕೆನ್ನೆಗೆ ಒತ್ತಿಕೊಂಡ ನನ್ನ ಕೆನ್ನೆಯನ್ನು ಇನ್ನೊಂದು ಕೈಯಿಂದ ಸವರುತ್ತ, ''ಯಶವಂತ'' ಅಂದಳು, ಸಣ್ಣಗೆ. ಅವಳ ದನಿ ಕಂಪಿಸುತ್ತಿತ್ತು. ಅವಳ ಇಡೀ ದೇಹ ಸಣ್ಣಗೆ ಅದರುತ್ತಿತ್ತು. ಎಷ್ಟು ಹೊತ್ತಿನ ತನಕ ಹಾಗೆಯೇ ಕುಳಿತಿದ್ದೆವೋ ಗೊತ್ತಿಲ್ಲ. ದೂರದಲ್ಲಿ ಯಾರೋ ಹೆಂಗಸರು ಬಟ್ಟೆಯ ಗಂಟಿನೊಂದಿಗೆ ಕೆಳಗಿಳಿದು ಬರುತ್ತಿರುವದು ಕಾಣಿಸಿ ಬೇರೆಯಾದೆವು.

ಮನೆಯ ದಾರಿಯಲ್ಲಿ, ಬಟ್ಟೆ ಗಂಟಿನ ಬುಟ್ಟಿಯನ್ನು ಕೈಯಲ್ಲಿ ಹಿಡಿದ ಅವಳ ಬೆನ್ನ ಹಿಂದೆ ಮೆಲ್ಲನೆ ಸಾಗಿದವನಿಗೆ, ಒಂದು ಅತಿ ಮುಖ್ಯ ವಾದ ಸಂಗತಿಯನ್ನು ಈಗಲೇ ಅವಳಿಗೆ ಹೇಳಿ ಬಿಡಬೇಕು ಅನ್ನಿಸಿ, ಮೆಲ್ಲನೆ ''ನಾಗೂ'' ಎಂದೆ.

ತನ್ನ ಮುಂದೆ ಉದ್ದಕ್ಕೆ ಚಾಚಿಕೊಂಡ ಕಾಲುಹಾದಿಯಲ್ಲೇ ದೃಷ್ಟಿ ನೆಟ್ಟು ನಿಧಾನಕ್ಕೆ ಹೊರಟಿದ್ದ ಅವಳು, ಒಮ್ಮೆಲೇ ಹಿಂತಿರುಗಿ ನಿಂತು, ನನ್ನೆರಡೂ ಅಂಗೈಗಳನ್ನು ತನ್ನ ಬೊಗಸೆಯಲ್ಲಿ ಹಿಡಿದು, ''ಯಶವಂತ, ದೊಡ್ಡವನಾದ ಮೇಲೆ ನೀನು ನನ್ನನ್ನೇ ಮದುವೆ ಮಾಡಿಕೊಳ್ತೆ ಅಲ್ಲವೇನ?'' ಕೇಳಿದಳು. ಕ್ಷಣಬಿಟ್ಟು, ''ಅಪ್ಪ, ಚಿಕ್ಕಿ, ಅತ್ತೆ, ಮಾವ ಯಾರೇನಂದ್ರೂ, ನೀನು ಮನಸ್ಸು ಬದಲಾಯಿಸೋಲ್ಲ ಅಲ್ಲವೇನ?'' ಕೇಳಿದಳು. ಒಂದು ಕ್ಷಣ ತಡೆದಿದ್ದರೆ ಆ ಪ್ರಶ್ನೆಯನ್ನು ನಾನೇ ಅವಳಿಗೆ ಕೇಳುವವನಿದ್ದೆನಾದುದರಿಂದ ಅವಳ ಮಾತಿನಿಂದ ನನಗೆ ಎಂಥ ಖುಷಿಯಾಯ್ತು ಎಂದರೆ, ಕೈಯಲ್ಲಿದ್ದ ಬಟ್ಟೆಯ ಗಂಟನ್ನು ಕೆಳಕ್ಕೆ ಚೆಲ್ಲಿ, ಅವಳನ್ನು ಹಾಗೇ ಅನಾಮತ್ತು ತಬ್ಬಿಕೊಂಡು, ಕಣ್ಣು ಮೂಗು, ಕೆನ್ನೆ, ತುಟಿಗಳನ್ನೆಲ್ಲ ಗಟ್ಟಿಯಾಗಿ ಚುಂಬಿಸಿಬಿಟ್ಟೆ.

ಆ ದಿನಗಳಿಂದ ಅವಳಲ್ಲಿ ಎಂಥ ಬದಲಾವಣೆ ಕಾಣಸಿಕೊಂಡಿತೆಂದರೆ ಕೆಲವೊಮ್ಮೆ ನನಗೇ ನಂಬಲಾಗುತ್ತಿರಲಿಲ್ಲ. ಉಳಿದವರ ಜೊತೆಗಿರುವುದಕ್ಕಿಂತ ನಮ್ಮಿಬ್ಬರ ಏಕಾಂತವನ್ನೇ ಹೆಚ್ಚು ಇಷ್ಟಪಡುತ್ತ, ಹಾಗೊಂದು ವೇಳೆ ಅಕಸ್ಮಾತ್ತಾಗಿ ಎಲ್ಲರ ಜೊತೆಗಿರುವ ಪ್ರಸಂಗ ಬಂದಾಗಲೂ, ಯಾರೊಬ್ಬರ ಜೊತೆಗೂ ಬೆರೆಯಲು ಹೋಗದೆ, ಅವಳ ಮಾತು, ನಗು ತಮಾಶೆಗಳೆಲ್ಲ ನನಗೊಬ್ಬನಿಗೆ ಮಾತ್ರ ಮೀಸಲು ಎಂಬಂತೆ ವರ್ತಿಸತೊಡಗಿದಳು. ಕ್ರಮೇಣ ಇದರ ಪರಿಣಾಮ ಏನಾಯ್ತು ಎಂದರೆ ಸ್ಕೂಲಿನಲ್ಲಿ, ಕೇರಿಯಲ್ಲಿ, ನಮ್ಮಿಬ್ಬರ ಕುರಿತು ಹುಡುಗರು ಆಡಿಕೊಂಡು ನಗಹತ್ತಿದರಲ್ಲದೆ, ನನ್ನ ಕುರಿತ ಅವಳ ಸೆಳೆತ ಹೆಚ್ಚಾದಂತೆ, ಮಾವನ ಮಕ್ಕಳೂ ಕೂಡ ನಮ್ಮಿಬ್ಬರನ್ನು ಗುಮಾನಿಯಿಂದ ನೋಡುತ್ತ, ಸಾಕಷ್ಟು ಅಂತರದಲ್ಲೇ ಇಡತೊಡಗಿದ್ದರು.

ಆದರೆ ಈ ಪರಿಸ್ಥಿತಿ ಬಹಳ ದಿನಗಳ ಕಾಲ ಉಳಿಯಲಿಲ್ಲ. ಮುಲ್ಕೀ ಪರೀಕ್ಷೆ ಮುಗಿಯುತ್ತಿದ್ದಂತೆ,



ನಮಗೆಲ್ಲರಿಗೂ ದಿಕ್ಕಾಪಾಲಾಗಬೇಕಾದ ಸ್ಥಿತಿ ಉಂಟಾಯ್ತು. ಅಜ್ಜಿ ಊರಲ್ಲಿ ಹೈಸ್ಕೂಲು ಇರದ್ದರಿಂದ ಅಪ್ಪ ಬಂದು ಹೊರಡು ಎನ್ನುತ್ತಿದ್ದಂತೆ, ಬಾಯಿ ಮುಚ್ಚಿಕೊಂಡು ಅವನ ಹಿಂದೆ ಹೊರಡಬೇಕಾಯ್ತು. ಕೇರಿಯ ಗೆಳೆಯರ ಗುಂಪಿನಲ್ಲಿ ಅನುಕೂಲವಾಗಿದ್ದ ಒಂದಿಬ್ಬರು, ದೂರದ ಊರಿನ ಸಂಬಂಧಿಕರ ಮನೆಯಲ್ಲಿದ್ದುಕೊಂಡು ಕಲಿಯಲು ಹೋದರೆ, ಸೋದರಮಾವನ ದೊಡ್ಡ ಮಗ, ಮಳೆಗಾಲದಲ್ಲಿ ಘಟ್ಟಕ್ಕೆ ಹೋಗುವ ತಂಡದ ಜೊತೆಗೆ ಸೇರಿಕೊಂಡ. ಉಳಿದವರು ಬೇರೇನೂ ಮಾಡಲಾಗದೆ ಮನೆಯಲ್ಲೇ ಉಳಿ

ದರು. ಇವೆಲ್ಲದರ ನಡುವೆ ತುಂಬಾ ಅಧ್ವಾನವಾದದ್ದು ಮಾತ್ರ ನಾಗೂಳ ಸ್ಥಿತಿಯಾಗಿತ್ತು. ಪ್ರೀತಿಯಿಂದ ಹತ್ತಿರ ಕರೆಯುವವರಿಲ್ಲದೆ, ಎರಡು ಹೊತ್ತಿನ ಅನ್ನಕ್ಕೆ ಇನ್ನೊಬ್ಬರನ್ನು ಆಶ್ರಯಿಸಬೇಕಾದ ಸ್ಥಿತಿಯಲ್ಲಿದ್ದ ಅವಳಿಗೆ, ಇನ್ನು ಮುಂದೆ ಸಾಲೆ ಕಲಿಯುವದು ಕನಸಿನಲ್ಲಿ ಮಾತ್ರ ಸಾಧ್ಯವಿತ್ತು. ಆ ಕುರಿತು, ಸ್ವತಃ ಅವಳನ್ನೊಳಗೊಂಡು, ಯಾರೊಬ್ಬರಿಗೂ ಏನೂ ಅನ್ನಿಸಲಿಲ್ಲ. ಹಾಗಾಗಿ, ಅವಳು ದೈನಂದಿನ ಅದೂ ಇದೂ ಎಂಬ ನೂರಾಎಂಟು ಕೆಲಸಗಳಲ್ಲಿ ಚಿಕ್ಕಿಗೆ ನೆರವಾಗುತ್ತ, ತಾನು ಹುಟ್ಟಿದ್ದೇ ಇದಕ್ಕಾಗಿ ಎಂಬಂತೆ ಉಳಿದುಬಿಟ್ಟಳು.

ಅಜ್ಜಿಮನೆಯನ್ನು ಬಿಟ್ಟು ಹೊರಡುತ್ತಲೇ ನನ್ನದು ನಾಯಿ ಪಾಡಾಯ್ತು. ಮುದ್ದುಮಾಡುವ ಅತ್ತೆ, ಪ್ರೀತಿ ತೋರಿಸುವ ಗೆಳೆಯರು, ಜೊತೆಗೆ ಕಳೆದ ಕೆಲವು ತಿಂಗಳುಗಳಿಂದ ಇದು ಇಂಥದೇ ಎಂದು ಮಾತಿನಲ್ಲಿ ಹೇಳಲಾಗದ ಆದರೆ ಹೃದಯಕ್ಕೆ ಅರ್ಥವಾಗುವ ನಾಗೂ ಜೊತೆಗಿನ ನನ್ನ ಸಂಬಂಧ, ಎಲ್ಲವೂ ಒಮ್ಮೆಲೇ ಕಡಿದು ಹೋದುದರ ಜೊತೆಗೆ ಹೊಸ ಊರು, ಹೊಸ ಶಾಲೆ, ಹೊಸ ಪರಿಸರ, ಅಪ್ಪ, ಚಿಕ್ಕಮ್ಮ, ಅಕ್ಕ ಅವರುಗಳ ನೂರಾಮೂವತ್ತೆಂಟು ರಗಳೆಗಳ ಮಧ್ಯೆ ಸಿಕ್ಕು ಹಾಕಿಕೊಂಡು ನಾನು ಸೋತು ಸುಣ್ಣವಾಗಿಬಿಟ್ಟೆ.

ರಜಾದಿನಗಳಲ್ಲಿ, ಅಜ್ಜಿಮನೆಯ ನೆಪ ಮಾಡಿಕೊಂಡು ಆಗಾಗ ಹೋಗಿ, ನಾಗೂನ್ನ ಭೇಟಿಮಾಡಿ ಬರಬಹುದಲ್ಲ ಎಂದು ನನಗೆ ನಾನೇ ಹೇಳಿಕೊಂಡ ಸಮಾಧಾನವೂ ಕೂಡ ಮೊದಲ ಪ್ರಯತ್ನದಲ್ಲೇ ಇನ್ನಿಲ್ಲದಂತೆ ನಾಶವಾಗಿಬಿಟ್ಟಿತ್ತು. ಅದೊಂದು ಭಾನುವಾರ, ಸುಮಾರು ಹದಿನೈದು ಮೈಲುಗಳಷ್ಟು ದೂರದಲ್ಲಿದ್ದ ಅಜ್ಜಿಮನೆಗೆ ಹೋಗಲು ಬಸ್ ಚಾರ್ಜಿಗೆ ಅಪ್ಪನ ಮುಂದೆ ಕೈ ಚಾಚಿದರೆ, ಹುಲಿಯಂತೆ ಮೈಮೇಲೆ ಏರಿ ಬಂದ. "ಅಲ್ಲಿ ನಿನ್ನಪ್ಪ ಗಂಡ ಅನ್ನಿಸ್ಕಂಡ ಬೋಳಿಮಗ ಯಾರವನೆ?" ಕೇಳಿದ. "ಅಜ್ಜಿಮನೆಗೆ ಹೋಗಿ ನೀನು ಹೊಸದಾಗಿ ಕೆತ್ತೋದೇನೂ ಬ್ಯಾಡ. ಆ ಕೆಲ್ಸಕ್ಕೆ ಅಲ್ಲೇ ಬೇಕಾದಷ್ಟು ಮಂದಿ ಅವ್ರೆ. ಕೆತ್ತುದಾದ್ರೆ ಇಲ್ಲೇ ಕೆತ್ತು" ಅಂದ. ಅವಕಾಶಕ್ಕಾಗಿ ಕಾಯುವುದಲ್ಲದೆ ನನಗೆ ಬೇರೆ ದಾರಿಯೇ ಉಳಿಯಲಿಲ್ಲ. ದೀಪಾವಳಿಯ ರಜೆ ಬಂತು. ಈ ಬಾರಿ, ಅಪ್ಪನ ಗೋಜಿಗೆ ಹೋಗದೆ, ಚಿಕ್ಕಿಗೆ ಪೂಸಿ ಹೊಡೆದು, ಅಜ್ಜಿಮನೆಯಿಂದ ವಾಪಸು ಬರೋವಾಗ ಹೊಸಬೆಲ್ಲ, ಗೇರುಬೀಜ ತರುವ ಆಮಿಷವೊಡ್ಡಿ, ಬಸ್ಸಿಗೆ ಒಂದಷ್ಟು ಪುಡಿಗಾಸು ಇಸಿದುಕೊಂಡು, ನಾಗೂನ್ನ ನೋಡುವ, ಮಾತಾಡುವ, ಅವಳ ಜೊತೆ ಏನೆಲ್ಲಾ ಸುತ್ತುವ ಕನಸು ಕಾಣುತ್ತ, ಸಂಭ್ರಮದಲ್ಲಿ ಹೋದರೆ, ಅವಳ ಜೊತೆಗೆ ಸುತ್ತೋದು ದೂರ ಉಳೀತು, ಅವಳನ್ನು ನೋಡುವುದಕ್ಕೇ ಭಯಂಕರ ಸಾಹಸ ಮಾಡಬೇಕಾಯ್ತು. ಅವಳ ಚಿಕ್ಕಿ, ಚಿಕ್ಕಪ್ಪ, ಅವರ ಒಂದು ಹೊರೆ ಮಕ್ಕಳು, ಅವರಲ್ಲವಾದರೆ ಸೋದರತ್ತೆ, ಅವಳೂ ಅಲ್ಲವಾದರೆ ಮಾವನ ಮಕ್ಕಳು, ಗೆಳೆಯರು-ಹೀಗೆ ಹಲವಾರು ಹದ್ದಿನ ಕಣ್ಣುಗಳಿಂದ ತಪ್ಪಿಸಿಕೊಂಡುಹೋಗಿ ಅವಳೆದುರು ನಿಂತರೆ, ಅವಳು ಭಯಂಕರ ಹತಾಶೆಯಲ್ಲಿ, ಅಸಹಾಯಕತೆಯಲ್ಲಿ ಅಳುವುದೊಂದನ್ನು ಬಿಟ್ಟು ಮತ್ತೇನೂ ಮಾಡದೆ, ನನ್ನ ಎಲ್ಲಾ ಮಾತುಗಳಿಗೂ ಅವಳ ಅಳುವೇ ಉತ್ತರವಾಗಿ, ಸಿಕ್ಕ ಚೂರುಪಾರು ಅವಕಾಶವೂ ಹಾಳಾದುದಲ್ಲದೆ ಭಾರವಾದ ಹೃದಯದೊಂದಿಗೆ ನಾನು ವಾಪಸ್ಸಾಗಬೇಕಾಯ್ತು.

ಅಜ್ಜಿಯ ಮನೆಯಿಂದ ಹಿಂತಿರುಗಿದ ಮೇಲೆ ನನಗವಳ ನೆನಪು ವಿಪರೀತ ಕಾಡಲು ತೊಡಗಿತು. ಇಲ್ಲಿಯವರೆಗೆ ಬರಿಯ ದೈಹಿಕ ಆಕರ್ಷಣೆ ಮಾತ್ರವಾಗಿದ್ದು ಹುಡುಗಾಟದ ಹಂತದಲ್ಲೇ ಇದ್ದುದ್ದು, ಅವಳನ್ನು ನೋಡಿಬಂದ ಮೇಲೆ ಅದಕ್ಕೆ ಪ್ರೀತಿ, ಅಂತಃಕರಣವೂ ಸೇರಿಕೊಂಡು, ಅವಳನ್ನು ಆ ಕೂಪದಿಂದ ಮೇಲೆತ್ತಲು ನನಗೆ ಮಾತ್ರ ಸಾಧ್ಯ ಎಂದೆಲ್ಲಾ ಆ ಚಿಕ್ಕ ವಯಸ್ಸಿನಲ್ಲೇ ನನಗನ್ನಿಸಲುತೊಡಗಿತು.

ಮುಂದಿನ ಇಡಿಯ ಒಂದು ವರ್ಷ ನನಗವಳನ್ನು ಭೇಟಿ ಮಾಡಲು ಸಾಧ್ಯವಾಗದೇ ಹೋಯ್ತು. ಇದಕ್ಕೆ ಮುಖ್ಯ ಕಾರಣ ನನ್ನಪ್ಪನ ಸ್ವಯಂಕೃತ ಏನೇನೋ ತರಲೆಗಳು. ಮುಂದಿನ ಮೇ ತಿಂಗಳ ಸ್ಕೂಲು ರಜೆಯಲ್ಲಿ, ಒಂದಿಡೀ ತಿಂಗಳು, ಅಜ್ಜಿಯ ಮನೆಯಲ್ಲಿ, ಇನ್ನೊಂದರ್ಥದಲ್ಲಿ ನಾಗೂಳ ಸಾನಿಧ್ಯದಲ್ಲಿ ಕಳೆಯಬಹುದು ಎಂದು ಏನೇನೆಲ್ಲಾ ಕನಸುಗಳೊಂದಿಗೆ ಹೋದರೆ, ಅಲ್ಲಿಯ ಇಡೀ ಚಿತ್ರವೇ ಪೂರ್ತಿಯಾಗಿ ಬದಲಾಗಿಹೋಗಿತ್ತು. ಇಡಿಯ ಊರು, ತನಗೆ ಬೇರೇನೂ ಕೆಲಸವಿಲ್ಲವೆಂಬಂತೆ, ಅವಳ ಕುರಿತೇ, ಕೇವಲ ಅವಳೊಬ್ಬಳ ಕುರಿತೇ ಆಡಿಕೊಂಡು ನಗತೊಡಗಿತ್ತು. ಸೌದೆಗಂತ ಅವಳು ಬೆಟ್ಟಕ್ಕೆ ಹೋದರೆ ಅವಳ ಹಿಂದೆಯೇ ಯಾರು ಹೋಗ್ತಾರೆ, ಬಟ್ಟೆ ಒಗೆಯುವದಕ್ಕಂತ ಕೆರೆಗೆ ಹೋದರೆ, ಅಲ್ಲಿ ಇವಳಿಗಿಂತ ಮೊದಲೇ ಹೋಗಿ ಯಾರು ಕಾದಿರ್‍ತಾರೆ, ಕರಡ ಕೊಯ್ಯಲು ಬೇಣಕ್ಕೆ ಹೋದರೆ ಅಲ್ಲಿಗೆ ಯಾರನ್ನ ಕರೆಸಿಕೊಳ್ತಾಳೆ, ಹೀಗೆ ಹೀಗೆ. ಸಾಲದಕ್ಕೆ ಹುಲಿದೇವರ ಗುತ್ತಿನ ಹಿಂದಿನ ಹಿಂಡಿನಲ್ಲಿ ಸಿಕ್ಕುಹಾಕಿಕೊಂಡಾಗ ಅವಳ ಜೊತೆ ಯಾರಿದ್ದರು, ಗುನಗರ ಗೇರುಹಕ್ಕಲದಲ್ಲಿ ಯಾರ ಜೊತೆಗಿದ್ದಳು. ನಾಟ್ಲಕ್ಕನ ಮನೆಯ ಹಿಂದಿನ ನಾಗವಾನಿ ಗಿಡಗಳ ಹಿಂಡಿನಲ್ಲಿ ಹಗಲಲ್ಲೇ ಸಿಕ್ಕುಹಾಕಿಕೊಂಡಳಲ್ಲ, ಇಬ್ಬಿಬ್ಬರು ಹುಡುಗರೊಡನೆ... ಇಂಥವೇ ಮಾತುಗಳು. ಈಗವಳಿಗೆ ಯಾರ ದರಕಾರವೂ ಇಲ್ಲ. ಮೂರೂ ಬಿಟ್ಟವಳಿಗೆ ಯಾತರ ಭಯ? ಯಾರ ದರಕಾರು? ಏನಾದರೂ ಒಳ್ಳೆಯ ಮಾತು ಹೇಳಲು ಹೋದರೆ, 'ಅದ್ನೆಲ್ಲಾ ಕೇಳೋಕ್ಕೆ ನೀನ್ಯಾರು? ನಿಂಗೆ ಮನ್ಸಿದ್ರೆ, ಹೇಳು, ಬರ್‍ತೇನೆ, ಯಾವಾಗ ಬರ್‍ಬೇಕು ಹೇಳು' ಎಂಬಂಥ ಮಾನಗೇಡಿ ಮಾತುಗಳು. ಅವಳು ಇಷ್ಟೆಲ್ಲಾ ಹಾಳಾಗಿ ಹೋಗೋದಕ್ಕೆ ಅವಳ ಚಿಕ್ಕೀನೇ ಕಾರಣ. ತನಗೆ ಯಾರ್‍ಯಾರ ಹತ್ರ ಗೆಳೆತನ ಉಂಟೋ ಅವ್ರೆಲ್ಲರಿಗೂ ಇವಳನ್ನ ತೋರಿಸಿದ್ರೆ, ಇನ್ನೇನಾಗೋದು ಮತ್ತೆ? ಇಲ್ಲಾ ಅಂದ್ರೆ, ಮದುವೆಯಾಗದಿದ್ದ ಆ ಪ್ರಾಯದ ಮಾಸ್ತರನ ಬೀಡಾರಕ್ಕೆ, ಹೆಂಡತಿ ಸತ್ತ ಗ್ರಾಮಸೇವಕರ ಬೀಡಾರಕ್ಕೆ, ಪಾತ್ರೆ ತಿಕ್ಕೊಕ್ಕೆ, ವಸ್ತ್ರ ಸೆಳೊಕ್ಕೆ ಅಂತ ಕುದುರೆಯಂಥ ಪ್ರಾಯದ ಪುಂಡೀನ್ನ ಕಳಿಸಿದ್ರೆ, ಇನ್ನೇನಾಗೂದು ಮತ್ತೆ. ಇಂಥ ದರಿದ್ರದ ಮಾತುಗಳು. ಸಾಲದ್ದಕ್ಕೆ, ಅತ್ತೆ ಬೇರೆ ನನಗೆ, "ಯಶವಂತ, ನೀನು ನಿನ್ನ ಹುಶಾರೀಲ್ಲಿ ಇರಬೇಕು ಮಗನೇ. ಹಿಂದಿನ ಸರ್ತಿ ಬಂದವ, ಅವಳ ಸಂಗ್ತೀನೆ, ಅಲ್ಲಿ ಇಲ್ಲಿ ಓಡಾಡ್ತಿದ್ದನ್ನ ರಾಶಿ ಜನ ನೋಡವ್ರೆ. ನಾವೆಂತಾಕೆ ಹೋಗಿ ಹೋಗಿ ಆಡಿಕೋಳೋವ್ರ, ಬಾಯ್ಗೆ ಬೀಳಬೇಕು" ಎಂದಾಗ, ಆ ಕ್ಷಣದಲ್ಲಿ, ಕಸಿವಿಸಿಯಾಗುತ್ತ ಮನಸ್ಸು ಕ್ಷೋಭೆಗೊಂಡಿತಾದರೂ ನಾಗೂಳ ಸಾನಿಧ್ಯದಲ್ಲಿದ್ದಾಗ, ಅವಳ ಮುಗ್ಧ ಮೋರೆ ಕಣ್ಣಿಗೆ ಬಿದ್ದಾಗ, ಇಲ್ಲ ಇಲ್ಲ, ಇದು ಸಾಧ್ಯವೇ ಇಲ್ಲ. ನಾಗೂ ಅಂಥವಳಲ್ಲ. ಅವಳು ಚಿನ್ನದಂಥ ಹುಡುಗಿ, ಅಪ್ಪಟ ಬಂಗಾರ, ಅವಳ ವಿಷಯದಲ್ಲಿ ಹೀಗೆಲ್ಲಾ ಆಡಿದವರ ಬಾಯಿಗೆ ಖಂಡಿತ ಹುಳು ಬೀಳುತ್ತದೆ ಎಂದೆಲ್ಲಾ ನನಗೆ ಅನಿಸುತ್ತಿತ್ತು.

ಈಗೀಗಂತೂ ಅವಳು ನನ್ನನ್ನು ವಿಪರೀತ ಹಚ್ಚಿಕೊಂಡುಬಿಟ್ಟಿದ್ದಳು. ಬಾಯಿಬಿಟ್ಟು ಏನನ್ನೇ ಹೇಳದಿದ್ದರೂ, ಏನನ್ನೂ ಕೇಳದಿದ್ದರೂ, ನನ್ನ ಕುರಿತ ಅವಳ ತುಡಿತ ನನಗರ್ಥವಾಗುತ್ತಿತ್ತು. ಚಿಕ್ಕಿಯ ಹಳೆಯ ಸೀರೆ, ಹಳೆಯ ಬ್ಲೌಸಿನಲ್ಲೂ ಕೂಡ ಅವಳು ಅಪ್ಪಟ ಸುಂದರಿಯಂತೆಯೇ ಕಂಗೊಳಿಸುತ್ತಿದ್ದಳು.

ಸಕ್ರೆಕಟ್ಟಿನ ಕೆರೆಯಲ್ಲಿ ಅದೊಂದು ಮಧ್ಯಾಹ್ನ ಬಟ್ಟೆ ಒಗೆಯುತ್ತ ಕುಳಿತಿದ್ದವಳನ್ನು, "ನಾಗೂ ಎಂಥ ಚೆಂದದ ಹುಡುಗಿ ನೀನು!" ಎಂದೆ. ಅವಳ ಮೋರೆ ರಂಗಾಯ್ತು. ನಿನ್ನನ್ನ ಪಡೆಯುವವನ ಅದೃಷ್ಟವೇ ಅದೃಷ್ಟ. ಆದರೆ ಆ ಅದೃಷ್ಟವಂತ ಮಾತ್ರ, ಯಾರೋ, ಏನೋ



ಎಂದು ಅವಳ ಮೋರೆ ನೋಡಿದೆ. ಒಗೆಯುತ್ತಿದ್ದ ಬಟ್ಟೆಯನ್ನು ಅಷ್ಟಕ್ಕೇ ಬಿಟ್ಟು, ಧಾವಿಸಿ ಬಂದವಳೇ, ನನ್ನನ್ನು ಗಟ್ಟಿಯಾಗಿ ತಬ್ಬಿಕೊಂಡವಳು, ಕಿವಿಯಲ್ಲಿ, ''ಅಂವ ಯಾರು ಅಂತ ನಾನೇ ಹೇಳಬೇಕಾ? ನಿಂಗೆ ಗೊತ್ತಿಲ್ವ?'' ಉಸುರಿದಳು. ಅವಳ ದನಿ ಕಂಪಿಸುತ್ತಿತ್ತು. ಅವಳ ಇಡಿಯ ದೇಹ ಕಂಪಿಸುತ್ತಿತ್ತು. ಆ ಒಂದು ಮಾತಿನಲ್ಲಿ, ನನ್ನ ಎಲ್ಲಾ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ, ಗೋಳು, ಗೋಜಲುಗಳಿಗೆ ಉತ್ತರ ಸಿಕ್ಕುಬಿಟ್ಟಂತಾಗಿ, ಖುಶಿ ತಡೆದುಕೊಳ್ಳುವುದು ಸಾಧ್ಯವಾಗದೆ, ಮತ್ತೆಲ್ಲಿ ನನ್ನೆದೆ ಒಡೆದೇಹೋಗಿಬಿಡುವದೋ ಎಂಬ ದಿಗಿಲಾಯ್ತು.

''ಆ ದಿವ್ಸಾನೂ ಇಂಥದೇ ಮಳೆ ಇತ್ತು'' ಮಾತಿನ ಮಧ್ಯೆ, ಇದ್ದಕ್ಕಿದ್ದಂತೆ ಅವಳು, ತನಗೆ ತಾನೆ ಎಂಬಂತೆ, ಮೆಲುದನಿಯಲ್ಲಿ ನುಡಿದಳು. ತಲೆಯತ್ತಿದೆ. ನನ್ನಿಂದ ಅಷ್ಟು ದೂರದಲ್ಲಿ, ಗೋಡೆಗಾನಿಸಿಕೊಂಡು, ಹೊರಗೆ ಭಯಂಕರ ಸದ್ದು ಮಾಡುತ್ತ ಸುರಿಯುತ್ತಿದ್ದ ಮಳೆಯಲ್ಲಿ ದೃಷ್ಟಿ ನೆಟ್ಟು ಕುಳಿತಿದ್ದ ಅವಳ ಮೋರೆಯಲ್ಲಿ ನೋವಿತ್ತು. ಅದಕ್ಕಿಂತ ಹೆಚ್ಚಾಗಿ ಅಸಹಾಯಕತೆ ಇತ್ತು. ಕಳೆದ ಅರ್ಧ ಗಂಟೆಯಿಂದಲೂ ನಾವು, ಹೀಗೇ ಎದುರು ಬದುರು ಕುಳಿತು, ಹುಲ್ಲು ಮಾಡಿನಿಂದ ತೊಟ್ಟಿಕ್ಕುತ್ತಿದ್ದ ಮಳೆ ಹನಿಗಳಿಂದ ರಕ್ಷಿಸಿಕೊಳ್ಳಲು ಒಮ್ಮೆ ಈ ಕಡೆ, ಒಮ್ಮೆ ಆ ಕಡೆ ವಾಲುತ್ತ, ಹತ್ತು ಹಲವು ಸಂಗತಿಗಳ ಕುರಿತು ಮಾತಾಡಿದ್ದೆವು. ಅವಳು ಈಗಷ್ಟೇ ಹೇಳಿದ, ವರ್ಷಗಳ ಹಿಂದಿನ ಆ ದಿನ, ಯಾವುದಾಗಿತ್ತು ಎಂಬುದನ್ನು ನನಗೆ ಯಾರೂ ಬಿಡಿಸಿ ಹೇಳಬೇಕಾಗಿರಲಿಲ್ಲ. ಅದು ನಮ್ಮಿಬ್ಬರ ಕೊನೆಯ ಭೇಟಿಯ ದಿನವಾಗಿತ್ತು. ಇನ್ನೊಂದರ್ಥದಲ್ಲಿ, ಕನಸುಗಳನ್ನೆಲ್ಲ ಕೈಯಾರೆ ಹೊಸಕಿಹಾಕಿ, ಬೇರೆ ಬೇರೆ ದಾರಿ ಹಿಡಿದು, ಹಿಂತಿರುಗಿ ನೋಡದೆ ಹೊರಟು ಹೋದ ದಿನವಾಗಿತ್ತು.

ಆ ದಿನವೂ ಇಂಥದೇ ಮಳೆಯಿತ್ತು. ಹಿಂದಿನ ಎರಡು ದಿನಗಳಿಂದ ಎಡೆಬಿಡದೆ ಸುರಿಯುತ್ತಿದ್ದ ಜಡಿಮಳೆಯ ದಿನ, ಆ ದಿನ, ಬೆಳಗ್ಗೆ ಹಾಸಿಗೆಯಿಂದ ಏಳುತ್ತಿದ್ದಂತೆಯೇ ನಿರ್ಧರಿಸಿ ಬಿಟ್ಟಿದ್ದೆ, ಏನಾದರಾಗಲಿ, ಇಂದು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಹೋಗಿ, ನಾಗೂನ್ನ ನೋಡಬೇಕು. ಅವಳಿಗೆ ಧೈರ್ಯ ಹೇಳಬೇಕು. ನೀನಿಲ್ಲಿ ಒಬ್ಬಂಟಿಯಲ್ಲ. ನಿನ್ನ ಜೊತೆಗೆ ನಾನಿದ್ದೇನೆ.

ಅದಕ್ಕೆ ಕಾರಣ, ಕಳೆದ ಕೆಲವು ದಿನಗಳಿಂದ, ಅವ್ಯಾಹತವಾಗಿ ಕಿವಿಗೆ ಬೀಳುತ್ತಿದ್ದ, ಅವಳ ಕುರಿತ ಏನೇನೋ ದರಿದ್ರದ ಮಾತುಗಳಾಗಿದ್ದವು. ಅವಳ ಚಿಕ್ಕಿ, ಅವಳನ್ನ ಪದೇ ಪದೇ ಗುಟ್ಟಾಗಿ ಡಾಕ್ಟರರಲ್ಲಿಗೆ ಕರೆದೊಯ್ಯುತ್ತಿದ್ದಾಳೆಂಬ ಸಂಗತಿ ಈಗೇನೂ ಗುಟ್ಟಾಗಿ ಉಳಿದಿಲ್ಲವಂತೆ. ಈ ಮಧ್ಯೆ, ಅವಳನ್ನು ಗುಟ್ಟಾಗಿ, ಯಾವನೋ ಅಯೋಗ್ಯನ ಕುತ್ತಿಗೆಗೆ ಕಟ್ಟಿ ಸಾಗಹಾಕುವ ಪಿತೂರಿಯೂ ಸಾಗಿದೆಯಂತೆ. ಆ ಮಾತು ಕಿವಿಗೆ ಬೀಳುತ್ತಲೇ ನನ್ನೆದೆ ಒಡೆದೇಹೋಯ್ತು. ಈಗಿತ್ತಲಾಗಿ, ಅವಳ ಕುರಿತ ನನ್ನ ವಾಂಛೆ ಯಾವ ಮಟ್ಟಕ್ಕೆ ಹೋಗಿ ಮುಟ್ಟಿತ್ತು ಎಂದರೆ, ಅವಳು ಎಂಥವಳೇ

ಆಗಿರಲಿ, ಎಂಥ ಸ್ಥಿತಿಯಲ್ಲೇ ಇದ್ದಿರಲಿ, ಅವಳು ನನಗೆ ಬೇಕು. ಯಾವ ಕಾರಣಕ್ಕೂ ನಾನವಳನ್ನು ಕಳೆದುಕೊಳ್ಳುವಂತಾಗಬಾರದು. ಅಕಸ್ಮಾತ್ ಅಂತಹದೊಂದು ಸನ್ನಿವೇಶ ನಿರ್ಮಾಣವಾದುದೆ ಆದಲ್ಲಿ, ಅದನ್ನ ಸಹಿಸಿಕೊಳ್ಳುವದು ನನ್ನಿಂದ ಸಾಧ್ಯವೇ ಇದ್ದಿರಲಿಲ್ಲ. ನನಗೆ ಹುಚ್ಚೇ ಹಿಡಿದೀತು.

ಬೆಳಗಾಗುತ್ತಲೇ, ರೆಡಿಯಾಗುತ್ತಿದ್ದವನನ್ನು ಅಪ್ಪ, ''ಎಲ್ಲಿಗೋ?'' ಕೇಳಿದ. ''ಅಜ್ಜಿ ಮನೆಗೆ'' ಎಂದೆ.

''ಅಜ್ಜೀ ಮನೆಗೋ ಇಲ್ಲ, ಆ ಆರ್ಭಾಟಕಿ ರಂಡೇ ಮನೆಗೋ?'' ಕೇಳಿದ. ನಾನು ಮಾತಾಡಲಿಲ್ಲ. ''ಬೊಗಳೋ, ಯಾಕೆ ನಾಲಗೆ ಬಿದ್ದೋದವರ ಥರ ಮೊಕ ಮಾಡಿಕೊಂಡು ನಿಂತಿದ್ದೀಯಾ? ನಾನೇಳಿದ್ದು ನಿಜ ತಾನೆ? ಆ ಬಿಕನಾಸೀನ ನೋಡೂಕ್ಕೆ ತಾನೇ ನೀನು ಹೋಗ್ತಾ ಇರೂದು?'' ಕೇಳಿದ. ''ನಾನವಳನ್ನು ಮದುವೆ ಮಾಡಿಕೊಳ್ತೇನೆ'' ಎಂದೆ. ಅಷ್ಟು ಕಿವಿಗೆ ಬಿದ್ದುದೇ ತಡ ಅಪ್ಪ, ''ಚೋದೀಮಗನೇ ಏನಂದೇ? ಇನ್ನೊಂದ್ಸರ್ತಿ ಹೇಳು ನೋಡುವಾ'' ಎನ್ನುತ್ತ, ಅಲ್ಲೆಲ್ಲೋ ಬಿದ್ದಿದ್ದ ಮೆಟ್ಟನ್ನು ಎತ್ತಿಕೊಂಡು ಬಂದವನೆ, ರಪ ರಪ ಅಂತ ನನ್ನ ಕೆನ್ನೆಗೆ ಒಂದೇ ಸಮನೆ ಬಾರಿಸತೊಡಗಿದ. ಆ ದಿನ, ಚಿಕ್ಕಿಯೇ ನಾದರೂ ಮಧ್ಯೆ ಬಂದು ನನ್ನನ್ನು ಬಿಡಿಸಿಕೊಳ್ಳದೆ ಇದ್ದಿದ್ದರೆ, ಲಾಲು ಹೊಡೆದ ಜೋಡಿನ ದೆಸೆಯಿಂದಾಗಿ, ನನ್ನ ಎರಡೂ ದವಡೆ ಚೂರಾಗುವುದು ಖಾತ್ರಿಯಾಗಿತ್ತು.

ಆ ಘಟನೆಯಿಂದ ನನ್ನಲ್ಲಿ ರೊಚ್ಚು ಮೂಡಿತು. ಮೊಂಡುತನ ಜಾಸ್ತಿಯಾಯ್ತು. ಆ ಕೋಪದಲ್ಲೇ ಬಸ್ಸು ಹತ್ತಿ, ನೇರ ಅಜ್ಜಿ ಊರಿಗೆ ಬಂದೆ. ಹಾಗೆ ಬಂದವನೇ, ಅಜ್ಜಿಯ ಮನೆಗೂ ಹೋಗದೇ, ನಾಗೂನ್ನ ಹುಡುಕಿಕೊಂಡು ಅವಳ



ಮನೆಗೇ ಹೋದವ, 'ನಾಗೂ ನಾಗೂ' ಎಂದು ಕಿರುಚುತ್ತ ಒಳಗೇ ನುಗ್ಗಿದೆ. ಯಾವ ಕಾರಣಕ್ಕೋ ಏನೋ, ಚಿಕ್ಕಿ, ಚಿಕ್ಕಪ್ಪರ ಕೈಲಿ ಚೆನ್ನಾಗಿ ಮೈನುಗ್ಗಾಗೋ ಹಾಗೆ ಹೊಡೆತವನ್ನು ತಿಂದು, ಮುಲುಕುತ್ತ, ಅಲ್ಲೆಲ್ಲೋ ಮೂಲೆಯಲ್ಲಿ ಬಿದ್ದುಕೊಂಡಿದ್ದ ಅವಳು, ನನ್ನ ನೋಡುತ್ತಲೇ, ಕೆರಳಿದ ಸಿಂಹಿಣಿಯಂತೆ ಎದ್ದುನಿಂತು, ಹಲ್ಲುಕಚ್ಚಿ, ಉಟ್ಟ ಸೀರೆ ಕುಪ್ಪಸಗಳನ್ನೆಲ್ಲ ಕಿತ್ತೆಸೆದು, ''ಬಾಬಾ, ನೀನೊಬ್ಬ ಕಮ್ಮಿ ಇದ್ದೆ. ಎಲ್ಲಾರ್ದೂ ಆಯ್ತು ನಿಂದೂ ಮುಗಿದು ಹೋಗ್ಲಿ. ಆಮೇಲಾದರೂ ನಾನು ಸಾಯ್ತೆ. ಬಾ ಬಾ, ಅಲ್ಲಿಂತಾಕೆ ನಿಂತೆ?'' ಎನ್ನುತ್ತ, ತನ್ನ ತೊಡೆಯಭಾಗವನ್ನು ಕೈಯಿಂದ ನಿರ್ದೇಶಿಸುತ್ತ, ಆಹ್ವಾನಿಸಿದಳು. ಅವಳ ಆ ಭಂಗಿಯಿಂದ ನಾನೆಷ್ಟು ಇಳಿದುಹೋದೆ ಎಂದರೆ, ನನ್ನ ಕುರಿತು ನನಗೇ ಎಂಥ ಅಸಹ್ಯವಾಯ್ತು ಎಂದರೆ, ಮತ್ತೆ ಒಂದೇ ಒಂದು ಕ್ಷಣ ಕೂಡ ನನಗಲ್ಲಿ ನಿಲ್ಲಲು ಸಾಧ್ಯವಾಗದೇ ಹೋಯ್ತು. ಒಂದು ಶಬ್ದವನ್ನೂ ಉಸುರದೆ, ಬೆನ್ನು ತಿರುಗಿಸಿ ಸುರಿಯುತ್ತಿದ್ದ ಮಳೆಯಲ್ಲೇ ನಾನಲ್ಲಿಂದ ಹೊರಟುನಿಂತೆ.


ಮಾಡಿನಿಂದ ತೊಟ್ಟಿಕ್ಕುತ್ತಿದ್ದ ಮಳೆಯ ಜೋರು ಜಾಸ್ತಿಯಾಯ್ತು. ತಲೆ, ಕೆನ್ನೆ, ಭುಜದ ಭಾಗಗಳನ್ನು ಕರವಸ್ತ್ರದಿಂದ ಒರೆಸಿಕೊಳ್ಳುತ್ತ ''ಈ ಬಾರಿ ಮನೆ ಹೊದಿಕೆ ಮಾಡ್ಸಿಲ್ಲ ಅಂತ ಕಾಣ್ತದೆ, ಅಲ್ಲ ನಾಗೂ?'' ಕೇಳಿದೆ. ಎಂಥದೋ ಯೋಚನೆಯಲ್ಲಿ ಕಳೆದೇಹೋದಂತಿದ್ದ ಅವಳು ತಲೆಯೆತ್ತಿ, ''ಹಾಂ ಏನಂದೆ?'' ಕೇಳಿದಳು. ಅವಳ ಕಣ್ಣುಗಳಿಂದಲೂ ನೀರು ತೊಟ್ಟಿಕ್ಕುತ್ತಿತ್ತು.

"ನನ್ನ ಪಾಲಿಗೆ ಕತೆಗಳೆಂದರೆ ಒಂದಿಷ್ಟು ನೆನಪು, ಒಂದಿಷ್ಟು [illegible], ಒಂದಿಷ್ಟು ಚಿಂತನ ಇಷ್ಟೇ."

[illegible]



ಪತ್ನಿ ಗೋದಾವರಿ ಮತ್ತು ಮೊಮ್ಮಕ್ಕಳು ಶೀತಲ್, ರೇವಂತ್‌ರೊಂದಿಗೆ...



ರಾಮಕೃಷ್ಣ ಗುಂದಿ

ಹೊಸ ಬಾವಿಯ ಹೊಸ ಹೆಣ

ಮಟಮಟ ಮಧ್ಯಾಹ್ನದ ಹೊತ್ತಲ್ಲಿಯೂ ವಿಠೋಭ ದ್ಯಾವರ ಕಟ್ಟೆಯ ಮ್ಯಾಲೇ ಕೂತ ಗಂಡು ಇಸ್ಪೀಟು ಆಡುತ್ತಿದ್ದ ಕೇರಿಯ ಹೊಂತಗಾರ ಮಕ್ಕಳ ಬಳಿಗೆ ಬಂದು ನಿಂತ ಗೋಪಣ್ಣ, 'ಹ್ಯಾಳ್ಳೋ ಬ್ಯಾಡ್ವೋ, ಹ್ಯಾಳ್ಳೋ ಬ್ಯಾಡ್ವೋ....' ಎಂದು ಒಂದೆರಡು ಕ್ಷಣ ಅನುಮಾನಿಸಿ, ಅಂತೂ ಬಾಯಿ ಬಿಟ್ಟವನು,

''ಹೌದ್ರೋ.... ಸೂರಣ್ಣ ಕಾಂಬೂದಿಲ ಕಡ.... ಮಜ್ಜಾನಕ ಉಂಬೂಕು ಬರ್ದೇ ನಾಪತ್ತೆ ಆಗೀವ್ನ ಕಂಡಾ....'' ಅಂದ.


ಕೊಟ್ಟೆ ಪಂಥ ಕಟ್ಟೆ, 'ಇನ್ನೇನು ನಮ್ಮ ಪಾಲಿಗೆ ನಾಕು ಕೊಟ್ಟೆ ಬಂದಂಗೇಯ' ಎಂದು ತುದಿಗಾಲಲ್ಲೇ ನಿಂತಂತಿದ್ದ ಪಾರ್ಟಿಯವರಿಗೆ, ಗೋಪಣ್ಣ ತಂದ ಸುದ್ದಿ, ಪರಾಂಬರಿಸುವ ಉಮೇದಿಯನ್ನೇ ನೀಡಲಿಲ್ಲ. ಆದರೆ, ಸೋಲಿನ ಬೌಂಡ್ರಿಗೇ ಬಂದುನಿಂತಿದ್ದ ಪಾರ್ಟಿಯವರಿಗೆ, ಯಣ್ಣೆ ಬರುವಾಗ ಗಾಣ ಮುರದವರಂಗೆ, ಆಟ ಬಿಟ್ಹೋಡುವುದಕ್ಕೆ ಅವುಕಾಶವೇ ಸಿಕ್ಕಂಗಾಯಿತು. ಸೋಲುತ್ತಿದ್ದ ಪಾರ್ಟಿಯ ನಾಗಪ್ಪ, ಗೋಯ್ದ, ನಾರೈಣಾ, ಸುಬ್ರಾಯರು ಗಬಕ್ಕನೇ ಆಟ ಬಿಟ್ಟೆದ್ದು,

''ಅಂ ಯಲ್ಲಿಗ್ ಹ್ವಾದನ ಕಂಡಾ...ಯಲ್ಲಿಗ್ವಾದ್ರೂ ಮಜ್ಜನಕ ಉಂಬೂಕ ಬರ್ದೇ ಇರಾವ್ನೆ ಅಲ್ಲ.... ಯಲ್ಲಿ ಗ್ವಾದಾ ಹಾಂಗಾರ....? ಎನ್ನತ್ತ, ಕುಂಡೆ ಒದರಿಕೊಂಡು, ಕಟ್ಟೆ ಇಳಿದರು.

ಗೆಲುವಿನ ಬೌಂಡ್ರಿಯಲ್ಲಿದ್ದ ಇಠೋಬ, ಸಣತಮ್ಮ, ಮಂಕಾಳು ಇತ್ಯಾದಿಗಳು ''ಏ ನಿಲ್ರೋ.... ಆಟ ಮುಗಿತೇ ಬಂತ್ ಯೆದ್ದೇ ಬಿಟ್ರಲ್ಲ ನೀವsss'' ಎಂದು ಆರೋಪಿಸುತ್ತ, ಅವರನ್ನು ತಡೆದು ನಿಲ್ಲಿಸಲು ಯತ್ನಿಸುತ್ತಿರುವಾಗಲೇ, ಅವರು ಮುಂದಾಗಿ ದಣಪೆ ದಾಟಿ, ಸೂರನ ಮನೆಯ ದಿಕ್ಕಿಗೆ ನಡೆದಾಗಿತ್ತು.

ಅಲ್ಲಿ ತಿಳಿದದ್ದು ಇಷ್ಟು.

ಹೊತ್ರಮುಂಚಿನ ಚಾ ಕುಡಿಯಲಿಕ್ಕೂ ಸೂರ ಬರಲಿಲ್ಲ. ರಾತ್ರಿಯಿಡೀ, ಇಠೋಬ ದ್ಯಾವರ ಬಯಲಲ್ಲಿ ಈಡಿಯೋ ಶೋ ಇತ್ತಾಗಿ, ಸೂರನ ಹೆಂಡತಿ, ಸಿನೇಮಾ ನೋಡುತ್ತಿದ್ದವಳು, ಬೆಳಗೂ ಜಾವಕ್ಕೆ ಮನೆಗೆ ಬಂದು ನೋಡುವಾಗ ಸೂರನು ಹಾಸಿದ್ದ ಹಾಸಿಗೆ, ಹಾಗೆಯೇ ಇತ್ತು. 'ಜೈಲಕಡಿಗ ಹ್ವಾದನ ಮಡಿ', ಎಂದು ಇಸೇಸ ಚಿಂತೆಮಾಡದೇ, ತನ್ನ ಬೆಳಗಿನ ಕೆಲಸಕ್ಕೆ ತೊಡಗಿದಳು. ಆಗ ಬರ್ತ್ವಾ, ಈಗ ಬರ್ತ್ವಾ ಎನ್ನುತ್ತ ಹೊತ್ತೇರಿದಂತಾಗಲು, 'ಯಾರ್ದೋ ಕೆಲಸಕ್ಕೇ ಹ್ವಾದ್ನಮಡಿ' ಎಂದುಕೊಂಡು ಸುಮ್ಮನಿದ್ದವಳು, ಕೂಲಿ ಕೆಲಸದವರು ಬರುವವರೆಗೂ ಕಾದಿದ್ದಳು.



ಸೂರ ಬರಲೇ ಇಲ್ಲ. ಮಜ್ಜನದ ಅಡಿಗೆ ಆರುವ ಹೊತ್ತಾದರೂ ಬರಲಿಲ್ಲವೆಂದಾದ ಮೇಲೆ, ದ್ಯಾಮಕ್ಕನ ಹುಡುಕಾಟ ಜೋರಾಗಿ, ಸೂರಣ್ಣನ ಜತೆಯಲ್ಲೇ ಕೂಲಿಗೆ ಹೋಗುವ ಆಚೀಚೆ ಮನೆಯ ಕಲ್ಲಣ್ಣ, ಗೋಪಣ್ಣ, ಸಣಕೂಸರನ್ನೆಲ್ಲ ಕೇಳಿಕೊಂಡು ಬಂದವಳು, ಇತೀಚೆಗೆ ಸೂರಣ್ಣ ದಿನಾರಾತ್ರಿ ಹೊಸ ಬಾವಿ ಕಟ್ಟೆಯ ಮೇಲೆ ಮಲಿಕ್ಕೊಂಡು, ಒಂದ್ ಬೀಡಿ ದಮ್ಮೆಳೆದು ಬಂದಮೇಲೆಯೇ ಹಾಸಿಗೆಯ ಮೇಲೆ ಅಡ್ಡಾಡುವ ರೂಢಿ ಮಾಡಿಕಂಡದ್ದು ನೆಂಪಾಗಿ, ಹೊಸ ಬಾವಿ ಕಟ್ಟೆಗೆ ಓಡಿದಳು. ಅಲ್ಲಿ ಅವಳಿಗೆ ಅಚ್ಚರಿ ಮೂಡಿಸುವಂತಾದ್ದು ಅಂದರೆ ಸೂರಣ್ಣ ಬಿಟ್ಟು

ಹ್ವಾದ ಬೀಡಿಕಟ್ಟು, ಕಡ್ಡಿಪೆಟ್ಟಿಗೆ, ಒಂದು ಸಣ್ಣ ಪಂಚೆ ಇತ್ಯಾದಿ, ಕಟ್ಟೆಯ ಮೇಲೆಯೇ ಯಾವಾಗಿನಿಂದಲೋ ಇದ್ದುವೆನ್ನುವಂತೆ ಹಾಗೇ ಇದ್ದುವು...

ವಿಷಯ ತಿಳಿದ ಹೊಂತಕಾರಿಗಳ ತಂಡ, ಸೀದಾ ಬಾವಿಕಟ್ಟೆಯ ಬಳಿಗೆ ಹೋಗಿ ನೋಡಲಾಗಿ ದ್ಯಾಮಕ್ಕ ಹೇಳಿದ ವಸ್ತುಗಳು ಇನ್ನೂ ಅಲ್ಲಿಯೇ ಇದ್ದಾಂತೆ ಇದ್ದುವಾಗಿ, ತಲೆಗೊಂದು ಪತ್ತೇದಾರಿ ಮಾತುಗಳು ಆರಂಭವಾದವು. ಯಾರೇ ಯೆಷ್ಟು ಮಾತಾಡಿಕೊಂಡರೂ, 'ಅಪಾರ ಜೀವನಪ್ರೀತಿಯ ಸೂರಣ್ಣ, ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಲ್ಲ. ಈಜಲಿಕ್ಕೆ ಬರುವ ಸೂರಣ್ಣ, ಬಾವಿ ಬಿದ್ದರೂ ಸಾಯುವಾಂಗಿಲ್ಲ' ಎಂಬ ಕೊನೆಯ ಅಭಿಪ್ರಾಯವೇ ಅಂತಿಮವಾಗುಳಿಯಿತು.

ಅನುಮಾನ ಯಾಕೆ, ನೋಡೇ ಬಿಡುವಾ.... ಎಂದು ನಾಕಾರು ಜನ, ಮುಳುಗ ಬಲ್ಲವರು, ಆ ವಿಶಾಲವಾದ ಹೊಸ ಬಾವಿಯ ಆಳಕೆ ಇಳಿದು, ತಳಯೆಲ್ಲಾ ಶೋಧ ಮಾಡಿ ಬಂದು, ''ಯೆಂಥಾ ಮಣ್ಣೂ ಇಲ್ಲಾ.... ಬಾವಿ ತಳದಲ್ಲಿ ಒಂದ ಕಡ್ಡಿ ಬಿದ್ರೂ, ಕಾಂತಿದ್, ಮನಸಾ ಕಾಂಬೂದಿಲ್ಲಂದ್ರೇ....'' ಎನ್ನುತ್ತ ಮೇಲೆದ್ದು ಬಂದವರೇ, ಆಚೀಚೆ ಹುಡುಕಾಟಕ್ಕೆ ಬಿದ್ದರು....

ಸೂರಣ್ಣನ ನಿಜವಾದ ಹೆಸರು ಏನೆಂಬುದೇ ಇತ್ತೀಚಿನವರಿಗೆ ಗೊತ್ತಿಲ್ಲ. ಅವನಪ್ಪ, ಅವ್ವಿ ಯಾವ ಹೆಸರಿಟ್ಟರೋ; ಸೂರಣ್ಣನ ಸಾಹಸ ಕತೆಗಳೇ, ಅವನಿಗೆ ಸಾಸ್ವತವಾದ ಸೂರನೆಂಬ ಬಿರುದು ಕೊಡಿಸಿದ್ದು. ಅದನ್ನೇ ಅವನ ಹೆಸರು ಎಂಬಂತೆ ಬಳಸಿಕೊಂಡಿದ್ದಾರೆ.

ಸೂರ, ಸೂರನೆನಿಸಿಕೊಂಡದ್ದೂ ಒಂದು ಚಮತ್ಕಾರವೇಯ. ಅಸಿತ್ತ ಬುದ್ದಣ್ಣ, ಮಲರೋಗ ಹಿಡಿದು ಕಣ್ಣುಮುಚ್ಚಿಕೊಂಡು ಮಲಗಿದ್ದೇ, ಬುಧವಂತ ಕೋಲುಕಾರರೆಲ್ಲ 'ಕಣ್ ಮುಚ್ಚೇ ಬಿಟ್ಟಾ' ಅಂದ ಗಳಿಗೆಗೆ ಹತ್ತು ಮಂದಿ



ಸೇರಿ, ತೆಂಗಿನ ಹಾಡ ಕಡದು, ಸಬ ಕಟ್ಟೂಕೇ ಸುರೂ ಮಾಡದರ.

ಹತ್ತಾಗೇತೋ ಹನ್ನೊಂದೋ.... ಪಾಪ, ಅಂವ್ನ ಕೋಸಾ ಪೊಕ್ಕಾ ಗಡಗಡ ನೆಡಗತೇ ನಿಂತೇದಾ. ಅಟ್‌ಯೆಳೀ ಕೋಸ್ನಾ ನೆಕ್ಕುಂಡ್

ಬಂದ್ ತಲಕಾಯ ಒಡಸದ್ದೇಯ. ಸೋಮೆಂತೂ, ಕಣ್ಣೂ, ಮೊಕಾಂಬುದ ನೋಡದೇ, ಬಡ ಕೂಂಡ, ಬಡಕೂಂಡ ಹೈರಾಣಾಗ ಹೋಗೇತ. ಸುಬ್ಬಿ-ಸಂಕ್ರಿ-ಬೇರಮ್ಮಾ ಎಲ್ಲಾ ಸೇರ್ಕುಂಡ, ನೆಕ್ಕೂಂಡೆ ಬಂದಾಂಗ ಬಂದ ಸಬಕ್ಕ ಒಂದ ಸುತ್ತ ಸುತ್ತಸ, ಅದರ ಗೇಂಟ್ಕೀ ಮಣಿ ಹರ್ದ, ಹೆಣಮ್ಯಾಲ ಹಾಕದರ. ಸಬದ ಮೇಲೇ ಕುಸದು ಬೀಳವಾಂಗಿದ್ದ ಸೋಮಿಯ, ಅವರೇ ನೆಕ್ಕೂಂಡ್ ಹೋಗಿ ಮಾಡಿನ ಬದೀಗ ಕುಳ್ಳಸದರ. ಇನ್ನೂ ಗೋಳಾಡುತ್ತಿದ್ದವಳಿಗೆ, ಈ ಹಿರಿಯ ಹೆಂಗಸರೇ,

''ಸೋಮಕಾ.... ನೀನೂ ಶೆಣ್ಣ ಮಕ್ಕಳಂಗೇ ಮಾಡ್ತೀಯಲೇ.... ದುಡದದ್ ಶಿಕ್ಕೂದೋ ಪಡದದ್ ಶಿಕ್ಕೂದೋ ಅಂಬೂರ ಕಂಡಾ.... ಯೋಗ ಇರವಟ್ ದಿನಾ ಇದೇದಾ.... ಇಂದ್ ಗೇಂಟ್ಕಿಮಣೀ ಹರ್ದಾಂಗೇ ಅಂವಂದೂ ರುಣ ಹರ್ದಹೋಯ್ತು ಅಂದ್ ತಿಳ್ಕೋ.... ಅ ಕೋಸ್ನ ನೋಡಾರೂ ನಿನ್ನ ದುಃಖ ಮರೀ....''

ಎಂದು ಪೊಕ್ಕ ಕುಳಿತ ಕಡೆಗೆ ಕೈ ತೋರಿ ಸುವುದಕ್ಕೂ,

'ಗೋವಿಂದಾ ಗೋವಿಂದಾ.... ಗೋ.... ವಿಂದಾऽऽऽ' ಎಂದು ಬುದ್ದಣ್ಣನ ಸಬ ಎತ್ತುವು ದಕ್ಕೂ ಸರಿಯಾಯಿತು.

ಅಗ್ನಿ ಹಿಡಿಯಬೇಕಾಗಿದ್ದ ಪೊಕ್ಕ, ದಣಪೆಯ ಬಾಗಿಲವರೆಗೆ ಬಂದಂಗೆ ಚಾಜಾ ಮಾಡಿದ. ದಣಪೆಯಲ್ಲೇ ಯಾರೋ ಪೊಕ್ಕನನ್ನು ತಡೆದು, ''ನೀ ಸಣ್ಣಾಂವ, ಸಿವಕಳಕ್ಕ ಬರೂದ ಬ್ಯಾಡಾ'' ಎಂದು ಅವನ ಕೈಯಿಂದ ಕೆಂಡದ ಮಡಕೆ ಕಸಿದುಕೊಂಡು, ತಾವೇ ಮುಂದಾಗಿ ನಡೆದರು.

ಏನೊಂದೂ ತಿಳಿಯದಂತಿದ್ದ ಪೊಕ್ಕಾ, ಅತ್ತ ಅಪ್ಪನ ಹೆಣ ಹೋಗುತ್ತಿದ್ದ ದಾರಿಯನ್ನೂ, ಇತ್ತ ಅವ್ವಿಯ ಒದರಾಟವನ್ನೂ ನೋಡುತ್ತಾ ನಿಂತಿರು ವಾಗ, ''ನನ್ನ ಗಂಡ ಸಾಯವಾಂಗೆಲ್ವೋ.... ಅಂವ ಸಾಯ್ಲೆಲ್ಲಾ.... ಇಂದ್ ಬೆಳಗಾಗೇ ಹೊಟ್ಟ ತುಂಬ ತೆಳೀ ಕುಡದಾ.... ದಿನಾ ಒಂದ್ ಬಟ್ಲ ತೆಳೀ ಕುಡವಾಂವ, ಇಂದ ನಂಗ್ ಅಸಾರ ದಾವ್ರಾ ಅಂತೇ ಒಂದ್ ಮಡಕೆ ತೆಳೀನೇ ಕುಡದೇನೋ.... ನನ ಗಂಡನ ಬಾಯಿಗಟ್ ತೆಳೀ ಹಾಕ್ರೋ....'' ಎಂದು ನೆಲ ನೆಲ ಬಡಿದು ಅಳುತ್ತಿರುವಾಗ, ಬುದ್ದಣ್ಣನ ಸಬಯಾತ್ರೆ ಸಿವಕಳ ಮುಟ್ಟಿಯಾಗಿತ್ತು.

ಯಡಸೊಡ್ಲೆ ಎಂಬ ಜಾಗೆಯಲ್ಲಿ, ಬುಧ ವಂತ ಕೋಲುಕಾರರ ಅಪ್ಪಣೆಯಂತೆ, ಕೊನೆಯ, ತೆಳಿ ಬಿಡುವ ಸಾಸ್ತ್ರ ಮಾಡಲು ಸಬವನ್ನು ಕೆಳಗಿಡಲಾಯಿತು. ಗರಟೆ ಚಿಪ್ಪಿನಲ್ಲಿ ತಂದ ತೆಳಿಯಲ್ಲಿ ಕೈ ಅದ್ದಿ, ಒಂದೊಂದೇ ಹನಿಯಂತೆ, ಒಬ್ಬೊಬ್ಬರೂ ಬುದ್ದಣ್ಣನ ಬಾಯಿಗೆ ಬಿಡುವಾಗ್ಗೆ, ಬುದ್ದಣ್ಣ ಅಲುಗಾಡಿದಂತೆ ಕಂಡ. ಇದು 'ಬರಮೆ' ಎಂದುಕೊಂಡು ಮುಂದುವರಿಸು ತ್ತಿದ್ದಂತೆ, ಬುದ್ದಣ್ಣ, ಕಣ್ಣು ತೆಗೆದು, ಆಚೀಚೆ ನಿಂತವರನ್ನು ಪಿಳಿ ಪಿಳಿ ನೋಡಲು ಮೊದಲು ಮಾಡಿದ್ದೇ, ಸತ್ತೆವೋ ಕೆಟ್ಟೆವೋ ಅಂದುಕೊಳ್ಳುತ್ತ ದಿಕ್ಕುಪಾಲಾಗಿ ಓಡುವ ಹೊತ್ತಿಗೆ, ಬುದ್ದಣ್ಣ, ತನ್ನ ಕೈಕಾಲುಗಳಿಗೆ ಕಟ್ಟಿದ ಬಳ್ಳಿ ಬಿಚ್ಚಿಕೊಂಡು, ಗೋಳೋ ಎಂದು ಅಳುತ್ತ ಎದ್ದು ಕುಳಿತ.

ಅವ ಅಳುವುದನ್ನು ನೋಡಿದ ಮೇಲೆ, ದೂರ ಹೋದವರೆಲ್ಲಾ, ಒಂದೊಂದೇ ಹೆಜ್ಜೆ ಮುಂದೆ ಬರುತ್ತಾ, ''ಅಂವ ಇನ್ನೂ ದೆವಾಗ್ಲೆಲಾ'' ಎಂದು ಖಾತ್ರಿ ಮಾಡಿಕೊಂಡು ಸಮೀಪ ಬಂದರು.

''ನಂಗೇನೂ ಮಾಡಬ್ಯಾಡ್ರೋ.... ನನ್ನಾ ಬಿಟ್ ಬಿಡೀ.... ನಾ ಊರಿಗೂ ಬರೂದೆಲ್ಲಾ.... ಕಣ್ ಕಾಣದೆದ್ದ ರಾಜ್ಯಕ್ಕೋಗಿ ಬದೀಕುತ್ತೆ'' ಎಂದು ಬುದ್ದಣ್ಣ ಗೋಗರೆದ.

ಬಂದವರಿಗೆಲ್ಲಾ ಪೇಚಾಟವಾಯಿತು. ಸಿವ ಕಳಕ್ಕೆ ಬಂದ ಹೆಣಾ, ತಿರಗಾ ಊರಿಗೆ ಬಂದರೆ, ಊರಿಗೇ ರಾವು ಬಂದಂಗೆ. ಇಂವಾ ನೋಡಿದರ ಬದೀಕುಂಡ್ಯಾ... ತೀಡೂದ ಬ್ಯಾರೇ... ಯೇನ್ ಮಾಡುದೀಗೇ....? ಎಂದು ಯೋಚಿಸಿ, ಯೋಚಿಸಿ ಒಂದು ತೀರ್ಮಾನಕ್ಕೆ ಬಂದರು.

ಬಂದವರೆಲ್ಲಾ, ಇದ್ದಷ್ಟು ಚಿಲ್ಲರೆ ಕಾಸು ಸೇರಿಸಿ, ನಾಕ್ ರೂಪಾಯಿ ಮಾಡದರ. ಸಬಕ್ಕ ತಂದ ಅಕ್ಕೀ, ಕಾಯಿ, ಕವಳಾ ಎಲ್ಲಾ ಸೇರಿಸಿ ಮುದ್ದಿ ಕಟ್ಟಿ, ಬುದ್ದಣ್ಣನ ಕೈಯಲ್ಲಿ ಹಾಕಿ,

''ನೀ ಹೀಂಗೇ ಬೆಟ್ಟಾ ಬಿದ್ದಾರ್ ಹೋಗ. ಮತ್ತಿತ್ಲಾಗ್ ನ್ವಾಡ ಬ್ಯಾಡಾ'' ಎಂದು ಹೇಳಿ ದೂರ ಸರಿದು ನಿಂತರು.

ಮಲರೋಗದಿಂದ ಮೈ ನೀರೆಲ್ಲಾ ಕಳಕೊಂಡು ಹೈರಾಣಾದ ಬುದ್ದಣ್ಣ, ಸಾವಕಾಶ ಎದ್ದು ನಿಂತು, ನಾಕು ಹೆಜ್ಜೆ ನಡದಾ. ಐದನೇ ಹೆಜ್ಜೆ ಎತ್ತಿ ಇಕ್ಕಲೂ ಆಗದೆ, ತೂಳ ಬಂದು ಬಿದ್ದಾ.

ಆಗಲೇ, ಹೊಂತಕಾರಿಯಾಗಿದ್ದ ಸೂರನಿಗೆ, ಅದೇನು ಮೈಮೇಲೆ ಬಂತೋ. ಅದು ಯಾವ ಮಾಯಕದಲ್ಲಿ ಕೊಡಲಿ ಎತ್ತಿಕೊಂಡು ಮುಂದ್ ಹ್ವಾದನೋ, ಹಿಂದಿನಿಂದ ಬುದ್ದಣ್ಣನ ತಲೆ ಬುರುಡೆಗೆ ಬೀಸಿ ಹೊಡೆದದ್ದೇ, ''ಹೊಂಯ್ಂ....'' ಅಂದ ಬುದ್ದಣ್ಣ ಸೆಟೆದು ಬಿದ್ದ.

ಇಷ್ಟು ಹೊತ್ತೂ ಮುಂದೇನು? ಮುಂದೇನು? ಎಂದು ತಲೆಯೊಳಗೆ ಪ್ರಶ್ನೆಯ ಒಗಟೆಯನ್ನಿಟ್ಟು ಕೊಂಡಿದ್ದವರ ತಲೆ ಬುರುಡೆಗಳೆಲ್ಲಾ, ತಲೆಯೊಡೆದು ಬಿದ್ದ ಬುದ್ದುವ ನೋಡಿ ನಿರಾಳವಾದವು.

ಬುದ್ದಣ್ಣನ ಸುಟ್ಟು ಬಂದು, ಕರೀನ ಕೆರೆಯಲ್ಲಿ ಮೀಯುವಾಗ ಜಾತಿ ಬುಧವಂತ,

''ಇಂದ್ ಆದದ್ ಆಗೋಯ್ತು, ಪೋರ ಗನಾದೇ ಮಾಡ್ಡಾ.... ಅದ್ರ ಯಾರೂ ಹೀಂಗನ ಸಂಗ್ರಿ ಹೀಂಗ ಅಂದ್ ಯಲ್ಲೂ ಬಾಯಿ ಬಿಡ ಬ್ಯಾಡಿ. ಮತ್ತ ಒಂದಕ ಒಂದೂವರೆಯಾಗೂದ'' ಎಂದು ಅಪ್ಪಣೆ ಮಾಡಿ, ಪರಮಾಣ ಮಾಡಿಸಿ ಕೊಂಡರೂ, ಕೊಪ್ಪಕ್ಕೆ ಕೊಪ್ಪವೇ ಹೇಗೋ ಅದರ ವಾಸನೆ ಹಿಡಿದು, ಸೂರನ ಕಂಡರೇ ಅಂಜಿಕೆ ಬರುವಂತೆ, ''ಅಂವನ ಸುದ್ದಿಗೊಂದ್ ಹ್ವಾಗಬ್ಯಾಡಿ ಮಕ್ಕಳ್ರಾ....'' ಅಂತ ತಾಯಂದಿರೆಲ್ಲಾ ತಮ್ಮ ಮಕ್ಕಳಿಗೆ ಮೊದಲ ಪಾಠ ಕಲಿಸುವ ಮಟ್ಟಿಗೆ, ಸೂರ, ಊರ ಮಂದಿಯ ತಲೆಯಲ್ಲಿ ಭಯದ ಬೀಜವಾಗಿ ಬೆಳೆದ.

ಆದದ್ದು ಗನಾದಕ್ಕೋ, ಕೆಟ್ಟದಕ್ಕೋ, ಸೂರನಿಗೆ ಮಾತ್ರ ಊರಲ್ಲಿ ಕಿಮ್ಮತ್ತು ಹೆಚ್ಚಿತು. ಅವ ಆಡಿದ್ದೇ ಆಟ, ಹೂಡಿದ್ದೇ ಹೂಟವಾಗಿ ಸೊಕ್ಕು ನೆತ್ತಿಗೇರಿತು. ಬರಬರುತ್ತಾ ಎಂಥದೊಂದು ಹಂತಕ್ಕೆ ಬಂದುಬಿಟ್ಟನೆಂದರೆ, ಯಾರನ್ನೂ ಕ್ಯಾರೇ ಅನ್ನದ ಮಟ್ಟಕ್ಕೆ ಮೇಲೇರಿದ.

ಒಂದೊಂದು ಬಾರಿ, ಕುಡಿದು ಬಂದು, ಕೇರಿಗೆ ಕೇರಿಯೇ ಮೊಳಗುವಂತೆ ಕೂಗಾಡುವ ಸೂರ, ಸಿವಕಳದ ಸುದ್ದಿಯನ್ನು ತನ್ನ ಪೌರುಷದ ಇತಿಹಾಸ ಎಂಬಂತೆ ಉದಾಹರಿಸತೊಡಗಲಾಗಿ, ಬೆಳೆದು ಹೊಂತಕಾರಿಯಾದ ಪೊಕ್ಕನಿಗೆ, ತಮ್ಮಪ್ಪನ ಸಾವು, ಸಾವಲ್ಲ ಕೊಲೆಯೆಂಬ ತಿಳುವಳಿಕೆ ಮೂಡಿಸಿ, ಮೈಬಿಸಿ ಮಾಡುತ್ತಿತ್ತು.

ಊರಿನಲ್ಲಿ ಬಯಲಾಟವಾದರೆ, ಈರಭದ್ರ, ದುಸ್ಯಾಸನ, ವೀರ ಭೀಮನ ಪಾರ್ಟು ತನಗೇ ಬೇಕೆಂದು ಹಟಮಾಡಿ ಪಾರ್ಟು ಕಟ್ಟುತ್ತಿದ್ದ. ಸೂರನ ಪಾರ್ಟು ಎಂದೂ ಚೌಕಿಯಿಂದ ಹೊರಗೆ ಬಂದದ್ದಿಲ್ಲ. ಆಟ ನೋಡಲು ಕುಳಿತ ಮಂದಿಯ ಹಿಂದಿನಿಂದ, ಹಿಲಾಲು ಹಿಡಕೊಂಡೇ ರಂಗಕ್ಕೆ ಬರುವ ಸೂರನ ಯಾಸ ನೋಡಿಯೇ, ಮುಂದೆ ಕುಳಿತ ಸಣ್ಣ ಮಕ್ಕಳು ಉಚ್ಚೆ ಹುಯ್ದುಕೊಳ್ಳುತ್ತಿದ್ದವು. ಎದುರು ಪಾರ್ಟುಧಾರಿಗಳಂತೂ ಯಾವ ವಾದ-ಪ್ರತಿವಾದವನ್ನು ಮಂಡಿಸದೆ ಸೋಲೊಪ್ಪಿಕೊಳ್ಳುವರು.


ಸೂರನ ಧೈರ್ಯಸಾಹಸಕ್ಕೆ ತಕ್ಕಂತೆ ಅವನ ಮೈಬಲವೂ ಬೆಳೆದದ್ದು, ನೋಡುವವರಿಗೆ ಕಣ್ಣು ಕುಕ್ಕುವಂತೆ ಮಾಡಿತ್ತು. 'ಸಿಗದರ ನಾಕು ಮಂಚಕ್ಕ ಸಾಕಾಗ್ವಟ್ಟ ಹಲಗೆಯಾಗ್ವ' ಎಂದು ಹಿಂದುಗಡೆ ಆಡಿಕೊಳ್ಳುವ ಕಳ್ಳನಾಟಿನ ಯವಹಾರದ ಚೌಂಡನಾಯ್ಕ, ಕಳ್ಳಬಟ್ಟಿ ಇಳಿಸುವ ದಿಗಂಬರ, ಸೂರನ ಸಹಾಯ ತಗಂಡೇ ಕಾಸು ಮಾಡಿಕೊಂಡರು. ಆದರೆ ಹೊಟ್ಟೆಗೊಂದಿಷ್ಟು ಸರಾಯಿ ಬಿತ್ತಾದರೆ, ಯಾವ ಗುಟ್ಟನ್ನೂ ಮಡಗಿಕೊಂಬಲಾರದ

ಬೊಂಬಾಯಿ ಬಾಯಿಯ ಸೂರ, ಎಲ್ಲರ ಗುಟ್ಟು ಬಯಲು ಮಾಡಿ ದ್ವೇಸ ಕಟ್ಟಿಕೊಂಡ.

ಊರವರೆಲ್ಲಾ, ಯಾವ ಎಗ್ಗೂ ಇಲ್ಲದೇ ಬೈಲಕಡಿಗೆ ಹೋಗುವ ಜಾಂಬಳೆ ಮರದ ಹಿತ್ತಲ ಒಂದಿತ್ತು. ಮೈ ತುಂಬಾ ಹಸಿರೆಲೆ ಬಿಟ್ಟುಕೊಂಡು ದೆವ್ವದ ಹಾಂಗೆ ನಿಂತಿದ್ದ ಜಾಂಬಳೆ ಮರದ ಎಲೆಮರೆಯಲ್ಲಿ ಕುಳಿತು, ಹಿಂಡಿನ ಮರೆಗೆ ಬಹಿರ್ದೆಸೆಗೆ ಕೂರುವ ಹೆಂಗಸರ ಮಾನ ನೋಡುತ್ತ ಆಟವಾಡಿಕೊಂಡಿದ್ದ. ಕೊಪ್ಪದ ಬಾಲಚಂದ್ರನನ್ನು, ಮರದಿಂದ ಕೆಳಗೆ ಹಾಕಿ ಮರ್ಯಾದೆ ಕಳೆದುಬಿಟ್ಟನೆಂಬುದಕ್ಕಾಗಿ, ಬಾಲಚಂದ್ರನ ಜಾತಿಯ ಜನವೆಲ್ಲ ಒಟ್ಟಾಗಿ ಸೂರನ ಮೇಲೆ ದ್ವೇಸ ಸಾಧಿಸುತ್ತಿದ್ದರೂ, ಯಾರಿಗೂ ಅವನ ರೋಮ ಕೀಳಲು ಆಗಿರಲಿಲ್ಲ.

ಬಾಯಿ ತೆರೆದರೆ ಗಾದೆಮಾತು ಉರುಳಿಸುವ ಸೂರ, ಯಾವ ಮಾಯಕದಲ್ಲಿ ಅಂಥಾ ಮಾತು ಕಲಿತನೋ, ದೊಡ್ಡೋರು ಸಣ್ಣೋರು ಯಂಬ ಯತ್ಯಾಸವಿಲ್ಲದೇ ತಪ್ಪು ಮಾಡಿದವರಿಗೆ ನೇರವಾಗಿ ಚುಚ್ಚಿ ಬಿಡೋನು. ಗಂಗಾವಳಿ ಕಾಸಿಮನ ಮಗ ಅಂಬೀರ, ಹುಡುಗೀಗೆ ಲವ್ ಮಾಡಲು ಹೋಗಿ ಪೆಟ್ಟು ತಿಂದಿದ್ದ. ಗೋಕರ್ಣ ಕಾಲೇಜಿನಲ್ಲಿ ಓದ್ತಾನೆ ಅಂದ್ಕುಂಡು, ಹುಡಿಗೀ ಅಪ್ಪ, ಅವ್ವಿ ನಾಕು ಪೆಟ್ಟು ಕೊಟ್ಟು ಬಿಟ್ಟಿದ್ದರು. ಆದರೆ ಇದಕ್ಕಿಂತ ಬಲವಾದ ಪೆಟ್ಟು ಸೂರನ ಬಾಯಿಂದ ಬಿತ್ತು. ಹನೇಹಳ್ಳಿ ಆಸ್ಪತ್ರೆಯಲ್ಲಿ ಬೆಂಡೇಜು ಮಾಡಿಕೊಂಡು ಬರುತ್ತಿದ್ದ ಕಾಸಿಮನ ಮಗ. ತಿಪ್ಪನಾಯ್ಕನ ಗೂಡಂಗಡಿಯಲ್ಲಿ ಯಳನೀರು ಕುಡಿತಿದ್ದವನನ್ನು, ಬೇಕೆಂದೇ ವಿಚಾರಿಸಿದಂಗೆ ಮಾಡಿದ ಸೂರ, ''ಕಲ್ತದ್ ಹೆಚ್ ಆಯ್ತು ಕಾಲ ಮ್ಯಾನ ಆಯ್ತು'' ಎಂದು ಗಾದೆ ಬಿಟ್ಟ. ಅಂಗಡಿಯಲ್ಲಿದ್ದೋರೆಲ್ಲಾ ಗೊಳ್ಳೆಂದು ನಗಲು, ಕುಂಟುತ್ತಾ ಅಲ್ಲಿಂದ ಓಡಿದ ಕಾಸಿಮನ ಮಗ, ಮತ್ತೆಂದೂ ಸೂರನಿಗೆ ಮುಖ ತೋರಿಸದಿದ್ದರೂ, ಸಾಬರಕೇರಿಯಲ್ಲಿ ಸೂರ ಕಾಲಿಟ್ಟರೆ ತೋರಿಸಬೇಕು ಅಂದುಕೊಂಡಿದ್ದ.

ಸೂರನ ಯವಹಾರವೆಲ್ಲ ಅಧಿಕ ಪರಸಂಗ ಆಗುವುದನ್ನು ನೋಡಿ, ನೋಡಿ ಸೈಸಿಕೊಂಡಿದ್ದವಳು, ಅವನ ಹೆಂಡತಿ ದ್ಯಾಮಕ್ಕ ಒಬ್ಬಳೇಯ. ಗಂಡ ಊರಿಗೇ ಸೂರನಾದರೂ ತನ್ನ ಹಾಸಿಗೆಯಲ್ಲಿ ರಣಹೇಡಿಯಾಗಿದ್ದಾನೆಯೆಂಬ ಸಂಗತಿ ಅವಳಿಗೇನೂ ತಿಳಿಯದ್ದಲ್ಲ. ಕೇರಿಯ ಯಾವುದಾದರೂ ಹೆಂಗಸು, ತನ್ನ ಮಗೂಗೆಂತ ಮೊಲೆ




ಉಣ್ಣಿಸ್ತಾ ಇದ್ರೆ, ಮಗೂನ ರೇಗಿಸುವ ಹುಡುಗಾಟದಲ್ಲಿ, ಅದರ ಬಾಯಿಂದ ಮೊಲೆ ಹಿಡಿದೆನೆಂದು ಖುಸಿಪಡುವ ಅವನ ಕೆಟ್ಟ ಚಾಳಿ ಗೊತ್ತಿದ್ದರೂ, ಅವಳಿಗೆ ಬಾಯಿ ಇರಲಿಲ್ಲ.

ಒಂದೊಂದು ಬಾರಿ, ಕುಡಿದು ಬಂದು, ಜಗುಲಿಯ ಮೇಲೆ ಕುಳಿತು ಭಡಾಯಿ ಕೊಚ್ಚುತ್ತಿರುವ ಸೂರ, ಬೀದಿಯಲ್ಲಿ ಯಾರಾದರೂ ಮಕ್ಕಳು ಹೋಗುತ್ತಿದ್ದುದ ಕಂಡರೆ, ''ಅದೇ ಆ ಕೋಸ ನೋಡ, ನಂಗೇ ಹುಟ್ಟಾಂವ, ನನ್ನಂಗೇ ಕರೀಕ ಈಂವಾ ನೋಡ'' ಅಂದುಬಿಡುತ್ತಿದ್ದ. ಬಣ್ಣದ ಹೋಲಿಕೆಯಿಂದಾಗಿ, 'ಇದ್ರೂ ಇರಬೈದೇನೋ' ಎಂಬ ಅನುಮಾನದಿಂದ ದ್ಯಾಮಕ್ಕ ಹೊಟ್ಟೆ ಉರಿಸಿಕೊಂಡ್ರೂ, ''ನನ್ ಹೊಟ್ಟೀಲ್ ಒಂದ್ ಹುಳಾ ಹುಟ್ಲೂಕಾಗ್ದೇದ್'' ಎಂದುಕೊಂಡು ತನಗೆ ತಾನೇ ಸಂತೈಸಿಕೊಳ್ಳುವಳು.

ಇದೊಂದೇ ಸೂರನ ಈಕ್ವೆಂಟ್ ಎಂಬುದು ಗೊತ್ತಿದ್ದ ಪರಮೇಸ್ರ, ಕುಡಿದ ಅಮಲಿನಲ್ಲಿ ಮಾತ್ರ, ಸೂರನ ಹೆಂಡತಿಯ ಬಂಜೆತನವನ್ನು ಗೆಪ್ತಿಸಿಕೊಟ್ಟು, ಕೆಲವು ಬಾರಿ ಬಾಯಿಮುಚ್ಚಿಸುತ್ತಿದ್ದ. ಕೆಲವು ಬಾರಿ, ಓವರ್ ಡೋಜಾಗಿದ್ದರೆ, ಸೂರ, ಪರಮೇಸ್ರನ ಹೆಂಡತಿಯ ಹೆಸರಿನಲ್ಲಿ ರಂಗಾದುದೊಂದು ಹಾದರದ ಕತೆಕಟ್ಟಿ ಹೇಳಿ, ತಿರುಗೇಟು ಹಾಕುತ್ತಿದ್ದ. ಇಬ್ಬರೂ ಕಚ್ಚೆದೋಸ್ತರೇ ಆದದ್ದರಿಂದಾಗಿ, ಒಬ್ಬರೊಬ್ಬರೂ, ತಂತಮ್ಮ ಗೆಪ್ತಿಗೆ ಬಂದ ಹಳೆಯ ಸಂಗತಿಯನ್ನೆಲ್ಲಾ ಸ್ಮರಿಸಿಕೊಂಡು ಬೈದಾಡುತ್ತಿದ್ದರೆ ಕೇರಿಯ ಜನಕ್ಕೆಲ್ಲಾ ಒಂದೆರಡು ತಾಸು ಧರ್ಮಕ್ಕೇ ಬೈಲಾಟ ಸಿಕ್ಕಾಂಗಾಗುತ್ತಿತ್ತು. ಈಗೀಗ, ಕೇರಿಯಲ್ಲಿ ಕಾಲೇಜು ಮೆಟ್ಟಲು ಹತ್ತಲು ಕಲಿತ ಹೊಂತಕಾರಿಗಳು, 'ಒಳ್ಳೆ 'ಎ' ಮಾರ್ಕಿನ ಸಿನೇಮಾ' ನೋಡಿದಂಗೆ ಖುಸಿಪಡುತ್ತಿದ್ದರು.

ಕುಡದು ಬಂದು ವದರಾಡಿದರೂ, ಸೂರನಿಗೆ ತನ್ನ ಮೇಲೆ ತುಂಬಾ ಪಿರುತಿಯಿದೆ ಎಂಬುದೂ ದ್ಯಾಮಕ್ಕನಿಗೆ ತಿಳಿದಿದೆ. ತನ್ನನ್ನು



ಬಿಟ್ಟು ಯಾವ ಗಂಡಸಿನ ಜೊತೆಗಾದರೂ ದ್ಯಾಮಾ ಸಲಿಗೆ ತೋರಿಸಿ ಮಾತಾಡಿದ್ದು ಕಂಡರೆ, ಜಂಡಕೀ ಹಿಡಿದು, ಕಲ್ಲು ಕಂಬಕ್ಕೆ ಜಪ್ಪಿ ಜಪ್ಪಿ ಹಿಂಸಿಸುತ್ತ, ''ನಕರಾ ಮಾಡ್ತೀಯೇನೆ ನಾಯರಂಡೇಮಗಳೆ'' ಎಂದು ಮನಸಾ ಬಯ್ಯುತ್ತಿದ್ದ. ನಸೆಯೆಲ್ಲಾ ಯಿಳಿದ ಮೇಲೆ ''ಮಾತಾಡ ಮಾತಾಡ ಮಲ್ಲಿಗೆ'' ಎಂದು ಮುದ್ದು ಮಾಡುತ್ತಿದ್ದಂವ.

ಹೋದೊರ್ಸಾ, ತೀರ್ವೆ ವಸೂಲಿ ಮಾಡೂಕಂತೇ ಬಂದ ಉಗ್ರಾಣ ಮಾಸ್ತಿ, ಅದೂ ಇದೂ ಮಾತಾಡಿ, ''ಒಂದ್ ಕವಳಾ ಕೊಡ ದ್ಯಾಮಕ್ಕಾ'' ಅನ್ನುತ್ತ ಬೇಡಿ ತಿಂದು, ಬಾಯಿ ಕೆಂಪ ಮಾಡಿಕಂಡು, ಹಾಂಗೇ ಅದೂ ಇದೂ ಮಾತಾಡತಾ ಕುಂತಂಡಿದ್ದದ್ದಟ್ಟೇಯ. ಎಲ್ಲಿಂದ ಬಂದನೋ ಸೂರ, 'ಊರ ಮ್ಯಾನ ಊರ

ಬಿದ್ರ, ಶಾನಭೋಗನ ಶ್ಯಾಟಕೇನ' ಎಂಬ ಊರ ಗಾದೆಗೆ, 'ನೆತ್ತಿ ಮ್ಯಾನ ಮೆಟ್ಟ ಬಿದ್ರ, ಉಗ್ರಾಣಿ ಬೊಂಡಕೇನ?' ಎಂದು ತನ್ನದನ್ನೂ ಸೇರಿಸಿ, ಕ್ಯಾಕರಿಸಿ ಉಗದದ್ದೇ, ಮ್ಯಾಲಕ್ಕೆದ್ದ ಮಾಸ್ತಿ, ''ನಾ ಬತ್ತಿ ಸೂರಣ್ಣ'' ಎಂದು ಅವಸರದಲ್ಲಿ ದಣಪೆ ದಾಟುತ್ತಿದ್ದೋನು, ದಣಪೆಗೇ ಕಾಲು ಜಪ್ಪಿಸಿ ಕೊಂಡು ಕುಂಟುತ್ತಾ ನಡೆದಿದ್ದ.

ಅಂಥಾ ಸೂರಣ್ಣ ಯಲ್ಲಿ ನಾಪತ್ತೆ ಯಾಗೋದ?......

ಮಜ್ಜಾನದಿಂದ ಅರಸೀ, ಅರಸೀ ಹೊಂತ ಕಾರಿಗಳೂ, ಮುದಕರೂ, ಮಕ್ಕಳೂ ಸೋತು ಸುಣ್ಣವಾಗೋದರು. ಜಾಂಬಳೀ ಮರದ ಹಿತ್ತಲಾ, ಮೇಲನ ಹಿತ್ಲಾ, ಗೇರು ಹಕ್ಲಾ ಯೆಲ್ಲಾ ಅಲದಲದು ಸುಸ್ತಾದರು. ಊರಿನಲ್ಲಿದ್ದ ಹೊಸ ಕೆರೆ, ಕರೀನಕೆರೆ, ಉಂಬೂಕೆರೆ, ಸೀತಜ್ಜಿ ಕೆರೆಯೆಲ್ಲಾ ಜಾಲಾಡಿಸಿ ಬಂದಾಯ್ತು. ಅವನ ಹತ್ತಿರದ ಸಂಬಂಧಿಕರು ಇರುವ ಸುತ್ತಲ ಹಳ್ಳಿ ಗೆಲ್ಲಾ ಸುದ್ದಿ ಮುಟ್ಟಿ, ನಾಕೆಂಟು ಜನ ಸಂಬಂಧಿ ಕರೂ ಬಂದು, ಸೇರಿಕೊಂಡರು. ಎಲ್ಲರಿಗೂ ಎಲ್ಲರ ಮೇಲೂ ಅನುಮಾನದ ಹೊರತು, ಉತ್ತರ ಯಾರಿಗೂ ಸಿಕ್ಕಲಿಲ್ಲ. ಯಾರೇ ಕೇಳಿ ದರೂ, ಸೂರ ಸತ್ತಿದ್ದಾನೆ ಎಂದರೇ ಯಾರಿಗೂ ನಂಬಲಿಕ್ಕೇ ಆಗದ ಸ್ಥಿತಿ.

ಹೊತ್ತು ಕಂತಿತು. ಮುಂದಿನ ಹುಡುಕಾಟ ಏನಿದ್ದರೂ ಮತ್ತೆ ಬೆಳಗಾಗೇ. ರಾತ್ರಿಯಿಡೀ ಈಡಿಯೋ ಶೋನಲ್ಲಿ ಸಿನೇಮಾ ನೋಡಿದ ಯುವಕರು, ಹಗಲಿಡೀ ಅತ್ತಿತ್ತ ಓಡಾಡಿ ದಣಿದಿದ್ದರು. ಸೂರನ ಮನೆಯ ಅಂಗಳದಲ್ಲೇ ಒಂದು 'ಹೊಡತಲ' ಹಾಕಿ, ಜಾಗಸಿಕ್ಕಿದಲ್ಲಿ, ಅಂಗಳದ ಗೋಡೆಗೇ ತಲೆಹಾಕಿ, ಅಲ್ಲಲ್ಲೇ ಅಡ್ಡಾದರು.

ಮುಂಜಾಳಿಂದ ಅತ್ತು ಅತ್ತೂ, ಕಣ್ಣೀರ್ನೆಲ್ಲಾ ಬತ್ತಿಸಿಕೊಂಡು ಕಂಗಾಲಾಗಿ ಬಿದ್ದ ದ್ಯಾಮಕ್ಕ, ಅಂಗಳದಲ್ಲಿ ಬಿದ್ದ ಹೊಂತಕಾರ ಮಕ್ಕಳನ್ನು ಕಂಡದ್ದೇ, ''ನಿಮ್ ಯೂಕ ಸಂಗಕ್ಕ ಬೆಂಕಿ ಬೀಳಾ, ನೀವೆಲ್ಲಾ ಸೇರಿ ತಿಂದ್ ಬಿಟ್ರಲ್ಲೋ, ನನ್ ಗಂಡನಾ......'' ಎಂದು ರೋದಿಸುವಾಗ್ಗೆ, ಯುವಕರ ತಲೆಗಳ ತುಂಬಾ, ಒಂದೊಂದು ಬಗೆಯ ಅನುಮಾನದ ಭೂತಗಳು ಎದ್ದು, ಕೊಳ್ಳಿ ಹಿಡಿದು ಕುಣಿಯಲಿಕ್ಕಾದವು.....

ಇತ್ತೀಚಿನ ದಿನಗಳಲ್ಲಿ, ಕೇರಿಯ ಓದಿದ ಮಕ್ಕಳೆಲ್ಲಾ ಸೇರಿ ಕಟ್ಟಿಕೊಂಡ ಯುವಕ ಸಂಘ ಹುಟ್ಟಿದ ಮೇಲೆ ಸೂರಣ್ಣನಿಗೆ ಕಿಮ್ಮತ್ತು ಕಡಿಮೆ ಯಾಗುತ್ತಾ ಬಂತು. ಎಲ್ಲರೂ ಸೇರಿ, ಸೂರಣ್ಣನ ವಿರೋಧಕ್ಕಾಗಿಯೇ ಯುವಕ ಸಂಘ ಕಟ್ಟಿ ಕೊಂಡರು ಎಂಬ ಅನುಮಾನ ಬರೂಹಾಂಗೆ, ಒಂದ್ ಮಾತೂ ನಿಲ್ಲದಾಂಗೆ ತೆಗೆದು ಹಾಕುತ್ತಾ, ಸೂರನನ್ನು ಬದಿಗೆ ಸರಿಸಿದರು.

'ಯಿಟೋಬ ದೇವರ ಉತ್ಸವಕ್ಕೆ ಬಯ ಲಾಟವೇ ಚಂದ' ಎಂದು ಸೂರ ಹೇಳಿದರೆ, ಯುವಕ ಸಂಗದೋರು 'ಈಡಿಯೋ ಸಿನೇಮಾ ತೋರುಸ್ತೇವೆ' ಎಂದು ಹಟ ಮಾಡುವರು. ಕೇರಿಯ ಹೊರಗೊಂದು ಹೊಸ ಬಾವಿ ಮಂಜೂರಿಯಾದ ಮೇಲೂ ಸೂರ ತಕರಾರು ತಗದ. ''ಅಟ್‌ದೂರ ಬಾವಿಯಂತಾ, ತಗೂ ದಾದ್ರ, ಕೇರಿಯ ಒಳಗೇ ತಗೀರಿ'' ಎಂದು ಪಂಚಾಯತದ ಕಂತ್ರಾಟುದಾರನನ್ನೇ ಹಿಡಿದು ಜೋರು ಮಾಡಿದ ಸೂರನಿಗೆ ಅಂಜಿ, ನಾಕು ದಿನ ಕಂತ್ರಾಟುದಾರನೇ ಕೆಲಸ ನಿಲ್ಲಿಸಿ, ''ಏನಾದ್ರೂ ಮಾಡಿ ನನ್ನ ಕಾಪಾಡಿ'' ಎಂದು ಸಂಘದವರ ಬೆನ್ನಿಗೆ ಬಿದ್ದ.

ಅವರೆಲ್ಲಾ ಬೆನ್ನಿಗೆ ನಿಂತು, ಬಾವಿತೋಡಿಸುವ ಕೆಲಸ ಪೂರ್ಣಗೊಳಿಸುವವರೆಗೂ, ಏನೂ ಮಾಡಲಾಗದೇ, ರಾತ್ರಿ ಕುಡಿದು ಬಂದಾಗ ಮಾತ್ರ ಎಲ್ಲರನ್ನು ಬಯ್ಯುತ್ತ, ತನ್ನ ಪಾಡಿಗೇ ಎಂಬಂತೆ ಸುಮ್ಮನಿದ್ದವನು, ಬಾವಿ ಕೆಲಸ ಮುಗಿದ ಮೇಲೆ, ತಾನೇ ವಿಚಿತ್ರವಾಗಿ ಬಾವಿಯನ್ನು ಹಚ್ಚಿಗೊಂಡ....

ಯೋಚಿಸುತ್ತ ಅಡ್ಡಾದ ಯುವಕ ಸಂಘದ ಯುವಕರೆಲ್ಲ, ದಿಗ್ಗನೆ ಎದ್ದುಕುಳಿತರು. ಕೇರಿಯಾಚೆಯ ಹೊಸ ಬಾವಿಕಟ್ಟೆಯ ಮೇಲೆ ನಿಂತ ಗೋಪಣ್ಣ, 'ಅಯ್ಯಯ್ಯೋ' ಎಂದು ದೊಡ್ಡ ದನಿ ತೆಗೆದು ಬಾಯಿ ಹುಯ್ಯುವುದು ಕೇಳಿತು. ಕೇರಿಗೆ ಕೇರಿಯೇ ರಣರಾವು ದನಿ ಕೇಳಿ ಎಚ್ಚರಾದಂತಿದ್ದು, ಬಾವಿಯ ಬಳಿಗೆ ಓಡಿದರು.

ಬಾವಿಯಲ್ಲಿ ಸೂರನ ಹೆಣ ತೇಲುತ್ತಿತ್ತು.

ಇದ್ಯಾಂಗ್ ಬಂತಿಲ್ಲಿ? ನಾವೆಲ್ಲಾ ಬೆಳಗೇ ಇಳದು ನೋಡೇದ್ವಲ್ಲ? ಎಂಬ ಅಚ್ಚರಿ, ಭಯ ದುಗುಡಗಳಿಂದ ಯುವಕರೆಲ್ಲಾ, ಭಸಭಸಾ ನೀರಿಗೆ ಬಿದ್ದು ಸೂರನ ಹೆಣವನ್ನು ಮೇಲೆ ತಂದಿಟ್ಟರು.

ದ್ಯಾಮಕ್ಕ ಗಂಡನ ಸಬ ನೋಡಿ ದಂಗಾಗಿ ಮಾತು ಕಳೆದು ಕೂತಳು. ಕೇರಿಯ ಜನರೆಲ್ಲ ಸೂರನ ತಲೆಬದಿಗೊಂದು ಚಿಮಣಿಯ ಹಚ್ಚಿಟ್ಟುಕೊಂಡು ಕಾಯುತ್ತ ಕುಳಿತರು. ರಾತ್ರಿ, ಹೆಪ್ಪುಗಟ್ಟಿದಂತೆ ದಟ್ಟವಾಗುತ್ತಲಿತ್ತು. ಊರಿಗೆ ಊರೇ ಬೆಳಗಾಗುವುದಕ್ಕೆ ಕಾಯತೊಡಗಿತು.

ನಿಜ ಜೀವನದಲ್ಲಿ ಮುಖಾಮುಖಿಯಾದ ವ್ಯಕ್ತಿಗಳು - ಘಟನೆಗಳು ನನ್ನಲ್ಲಿ ಉಂಟುಮಾಡಿದ ತಲ್ಲಣ.... ಅದಕ್ಕೊಂದು ಮೂರ್ತ ರೂಪು ನೀಡುವ ತುಡಿತ.

ರಾಮಕೃಷ್ಣ ಗುಂದಿ.
ಅಂಕೋಲಾ.



ಕಾಗದದ ದೋಣಿ



ಅನಾಮಿಕ ಆಪ್ತರೆ,

ಅನೇಕ ದಿನ, ತಿಂಗಳು, ವರ್ಷಗಳಿಂದ ಮನದ ಮೂಲೆಯಲ್ಲಿ ಹುದುಗಿರುವ ಮಾತುಗಳನ್ನು ನಿಮಗೆ ತಿಳಿಸುವ ಸಲುವಾಗಿ ಈ ಬಹಿರಂಗ ಪತ್ರ ಬರೆಯುತ್ತಿರುವೆ. ಈ ಪತ್ರವೇನಾದರೂ ನಿಮ್ಮ ಗಮನಕ್ಕೆ ಬಂದರೆ, ಅದರಿಂದ ನನಗಾಗುವ ಸಂತೃಪ್ತಿ, ಸಮಾಧಾನ ಅಷ್ಟಿಷ್ಟಲ್ಲ.

ಮೆಟ್ರಿಕ್ ತನಕ ಮಾತ್ರ ಓದಲು ಸಾಧ್ಯವಿದ್ದ ಊರು ನಮ್ಮದು. ಒಂದು ಕಾಲಕ್ಕೆ 'ಉಳ್ಳವ'ರಾಗಿದ್ದ ನಮ್ಮ ಮನೆ, ಕಾಲನ ವಶಕ್ಕೆ ಸಿಕ್ಕು ಬಡತನದ ಬೇಗೆಯಲ್ಲಿ ನಲುಗಿತ್ತು. 'ಮಕ್ಕಳು ಉಣ್ಣುವ ಕಾಲಕ್ಕೆ ಬರ ಬಂದಿತ್ತು' ಅನ್ನುವ ಹಾಗೆ. ಮೆಟ್ರಿಕ್‌ನಲ್ಲಿ ಒಳ್ಳೆಯ ಅಂಕಗಳಿಂದ ಪಾಸಾಗಿದ್ದೆ. ತ್ರಿವೇಣಿ, ಎಂ.ಕೆ. ಇಂದಿರಾರವರ ಕಾದಂಬರಿಗಳ ಕಾಲ ಅದು. 'ಕಂಕಣ'ದ ರಮಳ ಧ್ಯೇಯ ನನ್ನ ಕಣ್ಣ ಮುಂದೆ ಇತ್ತು. ಮುಂದೆ ಓದಬೇಕು, ನೌಕರಿ ಹಿಡಿಯಬೇಕು, ತಮ್ಮ, ತಂಗಿಯರನ್ನು ಓದಿಸಬೇಕು, ಅಮ್ಮನ ಹೊರೆ ಕಡಿಮೆ ಮಾಡಬೇಕು, ಹೀಗೆ ಏನೇನೋ ಕನಸುಗಳು. ಆದರೆ ಎಲ್ಲಿ ಓದಬೇಕು? ಬೆಂಗಳೂರು? ಮೈಸೂರು? ಅಮ್ಮನ ಬೆನ್ನು ಹತ್ತಿ ಬೆಂಗಳೂರಿನಲ್ಲಿದ್ದ ಮಾವನಿಗೆ ಪತ್ರ ಬರೆಸಿದೆ. ಆರ್ಥಿಕ ಸಹಾಯ ನಿರೀಕ್ಷಿಸದೇ ನಾನು ಅಲ್ಲಿ ಇದ್ದು ಓದಬಹುದೆಂದು ಮಾವನ ಒಪ್ಪಿಗೆ ಪತ್ರ ಬಂದಿತು.



ಬೆಂಗಳೂರಿನ ಮಹಾರಾಣಿ ಕಾಲೇಜು ಸೇರಿದೆ. ಹಳ್ಳಿಯಿಂದ ಬಂದವಳು ನಾನು. ಗೆಳತಿಯರಿಲ್ಲ, ಕಾಲೇಜಿಗೆ ತಕ್ಕ ಉಡಿಗೆ ತೊಡಿಗೆಗಳಿಲ್ಲ, ಪಠ್ಯಪುಸ್ತಕ ಬಿಟ್ಟು, ಬಾಕಿ ವಿಷಯಗಳಿಗೆ ಕಾಲೇಜಿನ ನೋಟ್ಸೇ ಗತಿ. ಏನೇ ಇದ್ದರೂ ಧ್ಯೇಯ ಒಂದೇ, ಓದಬೇಕು.

ಹೀಗೆ ಎರಡು ವರ್ಷ ಕಳೆಯುತ್ತಾ ಬಂದು, ಎರಡನೇ ವರ್ಷದ ಪರೀಕ್ಷೆಗೆ ಹಣ ತುಂಬುವುದಕ್ಕೆ ನೋಟೀಸ್ ಬೋರ್ಡ್ ಮೇಲೆ

ಕಡೆಯ ತಾರೀಖು ಪ್ರಕಟವಾದಂತೆ, ಅಮ್ಮನಿಗೆ ಹಣಕ್ಕೆ ಪತ್ರ ಬರೆದೆ. ಎಂಟು ದಿನ, ಹದಿನೈದು ದಿನ ಕಳೆದರೂ ಪತ್ರವೂ ಇಲ್ಲ ಹಣವೂ ಇಲ್ಲ. ಫೈನ್ ಕೊಟ್ಟು ಹಣ ತುಂಬಲೂ ಕಾಲ ಮೀರುತ್ತಿದೆ. ನನಗೆ ಇನ್ನಿಲ್ಲದ ಕಳವಳ, ಚಿಂತೆ. ಯಾರಲ್ಲಿ ಕೇಳಲಿ? ಹೇಗೆ ಮಾಡಲಿ?

ಅಂತಹ ಸಮಯದಲ್ಲಿ, ಕಾಲೇಜಿನ 'ಲೆಟರ್ಸ್' ಟೇಬಲ್ ಮೇಲೆ, ಅಮ್ಮನ ಕೈಬರಹದ ಕಾರ್ಡ್, ಅದಕ್ಕೆ ಲಗತ್ತಿಸಿದ್ದ ನಿಮ್ಮ ಪೋಸ್ಟ್‌ಕಾರ್ಡ್! ಅಮ್ಮನ ಪತ್ರದಲ್ಲಿ, ''ಮನೆಬಾಡಿಗೆ ಬಂದಿಲ್ಲ, ಹಣ ಕಳುಹಿಸಲಾಗಲಿಲ್ಲ. ಯಾರಲ್ಲಾದರೂ ಕೇಳಿ ಪರೀಕ್ಷೆಗೆ ಹಣ ತುಂಬಿಸು. ಮನೆಯಲ್ಲಿ ಬಹಳ ತೊಂದರೆ, ಬೇಜಾರು ಮಾಡಿಕೊಳ್ಳಬೇಡ''. ಪತ್ರ ಬರೆದು ಹತ್ತು ದಿನಗಳಾಗಿತ್ತು. ಇನ್ನೊಂದು ಪತ್ರದಲ್ಲಿ (ನಿಮ್ಮ), ''ಬಹಳ ದಿನಗಳಿಂದ ನಮ್ಮ ಕಾಲೇಜಿನ ಲೆಟರ್ ಟೇಬಲ್‌ನಲ್ಲಿ ನಿಮ್ಮ ಪತ್ರ ಹಾಗೇ ಇತ್ತು. ವಿಳಾಸ ನೋಡಿದೆ. ಮಹಾರಾಣಿ ಕಾಲೇಜಿಗೆ ಬದಲು ಇಂಟರ್ ಕಾಲೇಜೆಂದು ಬರೆದಿತ್ತು. ಹಾಗಾಗಿ ಇಲ್ಲಿ ಬಂದಿರಬೇಕು, ಕುತೂಹಲದಿಂದ ಓದಿದೆ, ಕ್ಷಮಿಸಿ. ನಿಮಗೆ ಪರೀಕ್ಷೆಗೆ ಹಣ ತುಂಬಲು ತೊಂದರೆಯಾಗಿರುವುದು ತಿಳಿಯಿತು. ತಪ್ಪು ಭಾವಿಸಬೇಡಿ, ದಯವಿಟ್ಟು ಪರೀಕ್ಷೆಗೆ ಕೂಡದೆ ಇರಬೇಡಿ. ಎರಡು ವರ್ಷದ ವ್ಯಾಸಂಗ ವ್ಯರ್ಥವಾಗಬಾರದು. ಪತ್ರ ಕಂಡಕೂಡಲೆ ಆಫೀಸಿನಲ್ಲಿ ವಿಚಾರಿಸಿ, ಇತಿ ನಿಮ್ಮ ಶ್ರೇಯೋಭಿಲಾಷಿ''

ಪತ್ರವನ್ನು ಓದಿ ನನಗೆ, ನಾಚಿಕೆ, ಅವಮಾನದಿಂದ ಸಾಯುವಂತಾಯ್ತು. ಅಮ್ಮನಿಗೆ ಸರಿಯಾಗಿ ವಿಳಾಸ ಬರೆಯಲು ಏನಾಗಿತ್ತು? ಅದೂ ಕಾರ್ಡಿನಲ್ಲಿ ಬರೆದಿದ್ದಾಳೆ ಎಂದು ವಿಪರೀತ ಸಿಟ್ಟೂ ಬಂತು. ತಕ್ಷಣ ನಿಮ್ಮ ಪತ್ರದ ಕಡೆಯ ಸಾಲನ್ನು ಓದಿ ಆಫೀಸಿಗೆ ಓಡಿದೆ. ನಾನಿನ್ನೂ ಕೇಳುವ ಮೊದಲೇ, ''ಏನಮ್ಮಾ ನೆನ್ನೆ ಕಾಲೇಜಿಗೆ ಬಂದಿರಲಿಲ್ಲ? ನಿನ್ನ ಕಸಿನ್ ಬಂದು ನಿನ್ನ ಪರೀಕ್ಷೆಯ ಹಣ ಕಟ್ಟಿದ್ದಾರೆ. ಫಾರಂ ತುಂಬಿಸಿ ರಸೀದಿ ತೆಗೆದುಕೊ'' ಎಂದರು. ಹಣ ತುಂಬಿದವರು ಯಾರು? ಅವರೇಕೆ ನನಗೆ ಸಹಾಯ ಮಾಡಿದರು? ಯಾವ ದೈವದ ಸಹಾಯ ಇವರ ಮೂಲಕ ಆಗಿದೆಯೋ? ನಡೆದ ಅನಿರೀಕ್ಷಿತ ಘಟನೆಗಳಿಂದ ಸಂಭ್ರಾಂತಳಾಗಿ ನಿಂತಿದ್ದವಳನ್ನು ಕ್ಲರ್ಕ್, ರಸೀದಿ ನೀಡಿ ಎಚ್ಚರಿಸಿದರು. ಪ್ರಶ್ನೆಗಳು ಪ್ರಶ್ನೆಗಳಾಗೇ ಉಳಿದವು.

ಓದಿದೆ, ಊಟ ನಿದ್ರೆಯ ಪರಿವೆಯಿಲ್ಲದೆ ಓದಿದೆ. ಗುರಿ ಮುಟ್ಟುವ ಛಲದಿಂದ ಓದಿದೆ. ಉತ್ತಮ ಅಂಕಗಳಿಂದ, ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದೆ. ನಿಮ್ಮ ಆಶಯದಂತೆ, ಎರಡು ವರ್ಷದ ಶ್ರಮ ವ್ಯರ್ಥವಾಗಲಿಲ್ಲ. ಇದೆಲ್ಲಾ ನಿಮ್ಮ ಉದಾರ ಮನಸ್ಸಿನ ಸಕಾಲಿಕ ಸಹಾಯದಿಂದ. ಇಲ್ಲದಿದ್ದರೆ ನಾನು ಯಾರ ಬಳಿಯೂ ಕೈಚಾಚುತ್ತಿರಲಿಲ್ಲ. ಆಸೆಗಳು, ಕನಸುಗಳು ಹಾಗೇ ಉಳಿಯುತ್ತಿದ್ದವು. ಆದರೆ ಇದನ್ನೆಲ್ಲಾ ನಿಮಗೆ ಹೇಗೆ ತಿಳಿಸಲಿ? ನಿಮ್ಮ ಸಹಾಯಕ್ಕೆ ಹೇಗೆ ಕೃತಜ್ಞತೆ ಅರ್ಪಿಸಲಿ? ನಿಮ್ಮ ಹೆಸರೇನು? ಎಲ್ಲಿರುವಿರಿ? ತಿಳಿಯದು. ನಿಮ್ಮ ಸಹೃದಯತೆಯ ಸಹಾಯ ಸದಾ ನನ್ನ ನೆನಪಿನಲ್ಲಿದೆ. ನಿಮ್ಮಲ್ಲಿ ನನ್ನ ಮನದ ಭಾವನೆಗಳನ್ನು ತೋಡಿಕೊಳ್ಳಲು ಇದೊಂದು ಸದವಕಾಶ.

ಇಂತಿ, ನಿಮ್ಮ ಶ್ರೇಯೋಭಿಲಾಶಿ

ಬೆಂಗಳೂರು

ಜಯಲಕ್ಷ್ಮಿ



ಪ್ರಿಯ ಚಂದ್ರು,

ನಾನು ನಿನಗೆ ಪತ್ರ ಬರೆದು ಅಭ್ಯಾಸವಿಲ್ಲ. ಆದರೆ ಮನಸ್ಸಿನಲ್ಲಿರುವ ತುಮುಲವನ್ನು ಹೇಳಿಕೊಳ್ಳದೇ ಇರಲಾರೆ. ಕಾಲೇಜು ದಿನಗಳಲ್ಲಿ ನಿನ್ನ ಜೊತೆಯಲ್ಲಿನ ಒಡನಾಟ, ಓಡಾಟ ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಮನೆಗೆ ಬಂದಾಗ ನಡೆದ ಆ ಘಟನೆ... ಬಹುಶಃ ನೀನು ಮರೆತಿರಬಹುದು. ಅಥವಾ ಮನದೊಳಗಿನ ನೋವನ್ನು ಅದುಮಿಟ್ಟು ಮರೆತಂತೆ ನಟಿಸುತ್ತಿರಬಹುದು. ಆದರೆ ಬೇರುಬಿಟ್ಟಿರುವ ಕಹಿ ಘಟನೆಗೆ ಕ್ಷಮೆ ಯಾಚಿಸದೆ ನನ್ನ ಹೃದಯ ಹಗುರವಾಗುವುದಿಲ್ಲ.

ಹೌದು ಚಂದ್ರು, ನಿಜ, ನೀನು ನಮ್ಮ ಮನೆಗೆ ಆ ದಿನ ಬಂದಾಗ, ಮಡಿವಂತಿಕೆಯ ನನ್ನ ಅಮ್ಮ ನಿನ್ನನ್ನು ಒಳಗೆ ಕರೆಯದಿರುವಂತೆ ನನಗೆ ಸೂಚಿಸಿದ್ದು, ಅಮ್ಮನ ಮಾತಿಗೆ ಪೂರಕವಾಗಿ ನಾನೂ ಸಹ ನಡೆದುಕೊಂಡಿದ್ದು... ಅಂದು ಮುಖದಲ್ಲಿ ಯಾವ ಭಾವವನ್ನೂ ತೋರಿಸದೆ, ನೀನು ನಡೆದುಬಿಟ್ಟೆ, ಇವೆಲ್ಲಾ ಇತಿಹಾಸದ ಪುಟ ಸೇರಿರಬಹುದು.

ಆದರೆ ಚಂದ್ರು, ಸ್ವಾರ್ಥ ಮನುಷ್ಯನನ್ನು ಎಲ್ಲಿಗೆ ಬೇಕಾದರೂ ಎಳೆದೊಯ್ಯುತ್ತದೆ.

ವಿದ್ಯಾಭ್ಯಾಸದ ನಂತರ ತಕ್ಷಣ ಕೆಲಸ ಸಿಕ್ಕ ಅದೃಷ್ಟವಂತ ನಾನು. ಅರಿತೋ ಅರಿಯದೆಯೋ, ಅವಳ ಪರಿಚಯ, ಪರಿಚಯದಿಂದ ಪ್ರೀತಿ ಉಂಟಾಯಿತು. ಅವಳ ಬಗ್ಗೆ ತಿಳಿಯದೆಯೇ ಅವಳನ್ನು ಬಿಟ್ಟಿರಲಾರದಷ್ಟು ಪ್ರೀತಿಸಿದೆ. ಆದರೆ, ಅಪ್ಪ, ಅವಳ ಜಾತಿ-ಕುಲ, ಎಲ್ಲಾ ವಿಷಯ ಸಂಗ್ರಹಿಸಿದರು. ಮಡಿವಂತಿಕೆಯ ಮನೆಯಲ್ಲಿ ರಾದ್ಧಾಂತವಾಯಿತು. ಅವಳಿಲ್ಲದೆ ನಾನು ಬದುಕುವಂತಿರಲಿಲ್ಲ. ಅದೇ ರೀತಿ ಇರುವ ಒಬ್ಬನೇ ದುಡಿಯುವ ಮಗನನ್ನು ಕಳೆದುಕೊಳ್ಳಲೂ ಅಪ್ಪ - ಅಮ್ಮ ಸಿದ್ಧರಿರಲಿಲ್ಲ. ಅವಳನ್ನು ತಮ್ಮ ಸೊಸೆಯಾಗಿ ಸ್ವೀಕರಿಸಲು ತಯಾರಾದರು.

ಸಮಸ್ಯೆ ಮುಂದಿನದು ಚಂದ್ರು, ನಾವೆಲ್ಲ ಒಪ್ಪಿದರೂ ಈ ಸಂಬಂಧಕ್ಕೆ ಅವಳ ಅಪ್ಪ- ಅಮ್ಮ ಒಪ್ಪುತ್ತಿಲ್ಲ. ನೀನು ಅವಳ ಸಂಬಂಧಿಯೆಂದು ಅವಳಿಂದ ತಿಳಿದೆ. ಈಗ ನೀನೇ ರಾಯಭಾರಿಯಾಗಬೇಕಿದೆ. ದಯವಿಟ್ಟು ಮನೆಗೆ ಬಾ, ನಮ್ಮಿಬ್ಬರನ್ನೂ ಕೂಡಿಸಲು ನೆರವಾಗು. ಅಮ್ಮ ಹೇಳಿದ್ದಾಳೆ, ಪತ್ರ ಬರೆ ಎಂದು. ನಿನ್ನ ಸ್ವಾಗತಕ್ಕೆ ಕಾದಿದ್ದಾಳೆ. ಬರುತ್ತೀಯಾ ತಾನೆ?

ನಿನ್ನ ನಿರೀಕ್ಷೆಯಲ್ಲಿರುವ

ಬಿದರೆ — ಶಶಿ

ಚಿಂತಾಮಣಿ ಕೊಡ್ಲೆಕೆರೆ

ಕುಹೂ ಕುಹೂ ಡಾಟ್‌ಕಾಮ್



ಮನೆ ಎದುರಿನ ಸೇರಳೆ ಗಿಡದ ಮೇಲೆ ಕುಳಿತು ಆ ಕೋಗಿಲೆಯು 'ವಾಯ್ಟುಕೇ, ವಾಯ್ಟುಕೇ' ಎಂದು ಕೂಗಲಾರಂಭಿಸಿದ್ದನ್ನು ಕೇಳಿಸಿಕೊಂಡ ಕೇಶವನ್, ಅವಾಕ್ಕಾಗಿ ಎದ್ದುಕುಳಿತರು. ಅಂದು ರವಿವಾರ, ಜನವರಿ ಎರಡನೇ ತಾರೀಕು. ಕೇಶವನ್‌ರ ಅಪೇಕ್ಷೆಯಂತೆ, ಅವರ ಹೆಂಡತಿ ಆಂಡಾಳಮ್ಮ, ಬಿಸಿಬೇಳೆಭಾತ್ ಮಾಡಿದ್ದಳು. ಊಟ ಮುಗಿಸಿ, ಹಾಸಿಗೆಯ ಮೇಲೆ ಬಿದ್ದು ಅರ್ಧಗಂಟೆ ಆಗಿರಬಹುದು, ಅಷ್ಟೆ. ನಿದ್ದೆ ಮತ್ತು

ಎಚ್ಚರಗಳ ನಡುವೆ 'ವಾಯ್ಟುಕೇ ವಾಯ್ಟುಕೇ' ಎಂಬ ದನಿ ತೂರಿ ಬಂದಿತು. ಕೇಶವನ್‌ರಿಗೆ ಚಿರ ಪರಿಚಿತವಾದ ಕೋಗಿಲೆಯ ಇಂಚರ. ಗಮನ ವಿಟ್ಟು ಕೇಳಿದರು. ಅಚಲ ತಾರಾಪಂಚಮದಲ್ಲಿ 'ಕುಹೂ' ಎಂದು ಉಲಿಯಬೇಕಾದ ಕೋಗಿಲೆ, 'ವಾಯ್ಟುಕೇ' ಎಂದು ರಾಗ ತೆಗೆದಿದೆ. 'ಆಂಡ ವನ್' ಎನ್ನುತ್ತಾ ಬಾಯೆದುರು ಚಿಟಿಕೆ ಹೊಡೆದು ಆಕಳಿಸಿದರು. 'ಇದು ಯಾರದಾದರೂ ಕುಚೋದ್ಯ ಇದ್ದೀತೇ?' ಎಂದು ಯೋಚಿಸಲಾರಂಭಿಸಿದರು.

ರಾಘವನ್ ಕೇಶವನ್‌ರ ಸಹೋದ್ಯೋಗಿ. ಆತನದು ಸ್ವಲ್ಪ ಕಿಡಿಗೇಡಿತನದ ಸ್ವಭಾವ. "ನಿನಗಿನ್ನೂ ಪಕ್ವತೆ ಬಂದಿಲ್ಲ, ಶುದ್ಧ 'ರಾ' ನೀನು" ಎಂದು ಕೇಶವನ್, ಆತನ ಹೆಸರಿನ ಮೊದಲಕ್ಷರವನ್ನು ಇಂಗ್ಲಿಷ್ ಶಬ್ದ 'ರಾ'ದ ಜತೆ ಸಮೀಕರಿಸುವರು. ಇಂಥ ಸಂದರ್ಭದಲ್ಲಿ, 'ರಾ' ಸುಮ್ಮನಿದ್ದರಾದೀತೆ? "ಕೇ,ಕೇ ನಿನಗಿನ್ನೂ ಬುದ್ಧಿ ಬಂದಿಲ್ಲ, ಯಾಕೇ" ಎಂದು ರಾಗವಾಗಿ ಹೇಳಿ ಅಣಕಿಸುವನು. ಕೇಂದ್ರ ಸರಕಾರದ ಇಲಾಖೆಯೊಂದರಲ್ಲಿ, ಭಾರೀ ಕಡತಗಳ ಹಿಂದೆ, ಅಕ್ಕ ಪಕ್ಕದ ಡೆಸ್ಕುಗಳು ಇವರಿಬ್ಬರವು. ಸರಿಸುಮಾರು ಒಂದೇ ಸಮಯದಲ್ಲಿ ಈ ಇಲಾಖೆ ಸೇರಿದವರು. ಐದು ವರ್ಷಗಳ ಹಿಂದೆ ಒಂದೇ ಬಾರಿ ಪ್ರಮೋಷನ್ ಪಡೆದವರು. ಒಟ್ಟಿಗೇ ಮಧ್ಯಾಹ್ನದ ಊಟ ಮಾಡಿ, ಹೊರಬಂದು, ದೂಡುಗಾಡಿಯವನಲ್ಲಿ ಬಾಳೆಹಣ್ಣು ಕೊಂಡುತಿಂದವರು. ಆದರೆ, ಈಗ ಮೂರು ತಿಂಗಳುಗಳ ಹಿಂದೆ, ಒಂದು ವಿಚಿತ್ರ ಸಂದರ್ಭದಲ್ಲಿ ಇವರ ಗೆಳೆತನ ವಿಷಮಿಸಿತ್ತು. ಅದೊಂದು ದೊಡ್ಡ ಕಥೆ. ಕೋಗಿಲೆಯ 'ವಾಯ್ಟುಕೇ', ಆತನ ಚೇಷ್ಟೆಯಿರಬಹುದೇ ಎಂದು ಕೇಶವನ್‌ರಿಗೆ ಅನುಮಾನವಾಯಿತು. ಆದರೆ ಇದು ಅಣಕು ಹಾಡೇನಲ್ಲ. 'ಆ ಗೊರವಂಕನ ದನಿಗೂ, ಈ ಕೋಗಿಲೆಯ ದನಿಗೂ ಎಲ್ಲಿಂದೆಲ್ಲಿಯ ಹೋಲಿಕೆ?' ಎಂದುಕೊಳ್ಳುತ್ತ ಅವರು, ಆ ಸಾಧ್ಯತೆಯನ್ನು ದೂರ ಸರಿಸಿದರು. 'ಇನ್ನಾರಿರಬಹುದು?' ಎಂದು ಯೋಚಿಸತೊಡಗಿದರು.

ಬೆಡ್ ರೂಮಿಂದ ಹೊರಬಂದ ಅವರು, ಮುಖ ತೊಳೆದು, ನ್ಯಾಪ್‌ಕಿನ್ನಿಂದ ಮುಖ ಒರೆಸಿಕೊಂಡು, ಹಾಲ್ ಬಾಗಿಲು ತೆರೆದು ಹೊರಗೆ ಬಂದರೆ, ನೇರಳೆ ಗಿಡದ ಮೇಲಿನಿಂದ ಇನ್ನೂ 'ವಾಯ್ಟುಕೇ' ದನಿ ಕೇಳಿಬರುತ್ತಿತ್ತು. 'ಇದು ಪ್ರಪಂಚದ ವಿಸ್ಮಯಗಳಲ್ಲೊಂದು' ಎಂದುಕೊಳ್ಳುತ್ತ, ಕನ್ನಡಕ ಸರಿಪಡಿಸಿಕೊಂಡು, ಮರದ ತುದಿಯನ್ನು ನಿಟ್ಟಿಸಿದರು. ಕೋಗಿಲೆ ಕಾಣಲಿಲ್ಲ. ಆದರೆ ಎಲೆಗಳು ದಟ್ಟವಾಗಿದ್ದ ಎತ್ತರದ ರೆಂಬೆಯಲ್ಲಿ, ಆಕೃತಿಯೊಂದು, ನುಸುಳುತ್ತ ಸರಸರ ಸದ್ದು ಮಾಡುವುದನ್ನು ಅವರು ಗಮನಿಸಿದರು. ಆದರೆ ಕೋಗಿಲೆ ಕಾಣಲಿಲ್ಲ. ಅದೇಕೋ, ಅಷ್ಟು ಹೊತ್ತು ಕೋಗಿಲೆ ಹಾಡು ನಿಲ್ಲಿಸಿತು. ಮನೆ ಎದುರಿನ ರಸ್ತೆಯ ಮೇಲೆ ಬಿಸಿಲು ಬೆಳ್ಳಗೆ ಹರಡಿಕೊಂಡಿತ್ತು. ಆ ಬೆಳ್ಳನೆಯ ಬಿಸಿಲಲ್ಲಿ, ನೇರಳೆ ಗಿಡದ ನೆರಳು ಮಾರುದ್ದ ಬಿದ್ದಿತ್ತು. ಬಲ ಪಕ್ಕದಲ್ಲಿ, ಅನತಿ ದೂರದಲ್ಲಿ ಹೊಸ ಕಟ್ಟಡವೊಂದು ಏಳತೊಡಗಿತ್ತು. ಕೆಲಸಗಾರರು, ಇಟ್ಟಿಗೆಯನ್ನು ಒಬ್ಬರಿಂದೊಬ್ಬರಿಗೆ ಪಾಸ್ ಮಾಡುತ್ತ, ಮೇಲೆ ನಿಂತವನ ಕೈಗೆ ತಲುಪಿಸುವ ಕುಶಲತೆಯನ್ನು ಕಂಡು ಕೇಶವನ್ ಅಚ್ಚರಿಗೊಂಡರು. ಇದನ್ನು ಎಂದೂ ತಾನು ಗಮನಿಸಿಯೇ ಇರಲಿಲ್ಲವಲ್ಲ ಎಂದು ಮತ್ತಷ್ಟು ಅಚ್ಚರಿಗೊಂಡರು. ಅಷ್ಟರಲ್ಲಿ, ಒಮ್ಮೆ 'ವಾಯ್ಟುಕೇ' ಎಂದು ಕೋಗಿಲೆ ಮೆಲ್ಲಗೆ ಉಲಿದು, ಇವರು ತಲೆಯೆತ್ತುವಷ್ಟರಲ್ಲಿ ಸ್ತಬ್ಧವಾಯಿತು.

ವಾಯ್ಟುಕೇ ಅಥವಾ ವಾಯ್-ಟು-ಕೇ ಎಂದರೆ ಏನೆಂದು ಕೇಶವನ್, ಕೆಲವು ತಿಂಗಳುಗಳ ಹಿಂದೆ ಭಾರೀ ಶೋಧನೆಯನ್ನೇ ನಡೆಸಿದ್ದರು. ಕಂಪ್ಯೂಟರುಗಳಿಗೆ ಸಂಬಂಧಿಸಿದಂತೆ ಜನರು ಈ ಶಬ್ದ ಪ್ರಯೋಗಿಸುವುದನ್ನು ಅವರು ಗಮನಿಸಿದ್ದರು. ಆಗ, ಆ ತಂತ್ರಜ್ಞಾನಿಗಳ ಮುಖದಲ್ಲಿ ಒಂದು ಬಗೆಯ ಮ್ಲಾನತೆ ಕವಿಯುವುದನ್ನು ಅವರು ಗುರುತಿಸಿದ್ದರು. ಆದುದರಿಂದ,


'ವಾಯ್ಬುಕೇ' ಎಂದರೆ ಕಂಪ್ಯೂಟರುಗಳಿಗೆ ಸಂಬಂಧಿಸಿದ ಯಾವುದೋ ರೋಗ, ಗ್ರಹಚಾರ ಎಂದು ಅವರು ಅರ್ಥಮಾಡಿಕೊಂಡಿದ್ದರು. ಈ ಕಂಪ್ಯೂಟರುಗಳಿಂದ, ವಿಜ್ಞಾನ ತಂತ್ರಜ್ಞಾನಗಳಿಂದ ಸಾವಿರಾರು ಮೈಲಿ ದೂರವಿರುವ ತನ್ನಂಥವನನ್ನೂ ಬೆನ್ನಟ್ಟಿದ ಈ ಶಬ್ದದ ಬಗೆಗೆ ಅವರಿಗೆ ವಿಪರೀತ ಕುತೂಹಲವುಂಟಾಗಿ, ಶಬ್ದ ಕೋಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಸ್ಪೆಲ್ಲಿಂಗ್ ಸೃಷ್ಟಿ ಮಾಡಿ ಅರ್ಥ ಹುಡುಕಿದರು. ಆದರೆ ಯಾವ ಬಗೆಯಲ್ಲಿ ಹುಡುಕಿದರೂ ಅಂಥದ್ದೊಂದು ಶಬ್ದ ಸಿಕ್ಕಲಿಲ್ಲ. ಇಂಥ ವಿಷಯಗಳಲ್ಲಿ ಅವರು ಸಾಮಾನ್ಯವಾಗಿ ಚರ್ಚಿಸುವುದು, ರಾಘವನ್ ಜತೆ. ಆದರೆ 'ರಾ' ಯಾಕೋ ಇವರೊಡನೆ ಮಾತು ಕಡಿಮೆ ಮಾಡಿದ್ದ. ಮೊದಲೇ ಸಂಶಯ ಪ್ರಕೃತಿಯವನು, ಬೇರೆ. 'ತನಗೆ ಇಂಗ್ಲಿಷ್ ಚೆನ್ನಾಗಿ ಬಾರದು ಎಂದೇ ಈತ ಈ ಪ್ರಶ್ನೆ ಕೇಳುತ್ತಿದ್ದಾನೆ' ಎಂದು ತಿಳಿದುಕೊಳ್ಳುವ ಷೈಕ. ಆದ್ದರಿಂದ ತಾನೇ ಅರ್ಥ ಶೋಧಿಸಲು ಹೆಣಗಾಡಿದರು. ಅಂಥ ಹೆಣಗಾಟದಲ್ಲಿ ಒಮ್ಮೆ ಅವರು, 'ವಾಯ್‌ದಿಂದ ಕೇ ಎಂಬ ಇಂಗ್ಲಿಷ್ ಅಕ್ಷರಗಳು' ಎಂಬುದನ್ನೇ 'ವಾಯ್ಬುಕೇ' ಶಬ್ದ ಸೂಚಿಸುತ್ತಿರಬಹುದೇ ಎಂದೂ ಯೋಚಿಸಿದ್ದರು. ತನ್ನ ಶೋಧನೆ ವಿಫಲವಾದ ಮೇಲೆ ಅನಿವಾರ್ಯವಾಗಿ ಕೇಶವನ್, ಒಂದು ಮಧ್ಯಾಹ್ನ, 'ರಾ' ಬಳಿ, "ರಾಘವನ್, ವಾಯ್ಬುಕೇ ಎಂದರೆ ಏನೆಂದು ನಿನಗೆ ಗೊತ್ತೆ?" ಎಂದು ಪ್ರಶ್ನಿಸಿದರು. ಆತ, "ನನಗೇನಪ್ಪ ಗೊತ್ತು, ಇಂಜಿನಿಯರಿಂಗ್ ಓದುವ ನಿನ್ನ ಮಗನನ್ನು ಕೇಳಬಾರದೆ?" ಎಂದ. ಕೇಶವನ್ ಪೆಚ್ಚಾದರು. ರಾಘವನ್‌ನ ಮಗ, ಇದೇ ವರ್ಷ, ಹತ್ತನೇ ಕ್ಲಾಸಲ್ಲಿ ಫೇಲಾಗಿದ್ದ. ಕೇಶವನ್ ಮಗ ಪಿ.ಯು.ಸಿ. ಮುಗಿಸಿ ಇಂಜಿನಿಯರಿಂಗ್ ಕಾಲೇಜ್ ಸೇರಿದ್ದ. ಹೆಚ್ಚು-ಕಡಿಮೆ ಇದೇ ಸಮಯದಿಂದ, 'ರಾ' ಕೇಶವನ್ ಜತೆ ಸಲಿಗೆ ಮಾತು ನಿಲ್ಲಿಸಿದ್ದ. ಕೇಶವನ್, ನಿಜವಾದ ಅನುಕಂಪದಿಂದ, 'ರಾ' ಮಗನ ಓದಿನ ಕುರಿತು ಸಲಹೆ ನೀಡಲೆತ್ನಿಸಿದ್ದರು. ಆದರೆ ಅದು 'ರಾ'ನನ್ನು ರೇಗಿಸಿತ್ತು. ಇನ್ನೂ ಇಂಥದ್ದನ್ನೆಲ್ಲ ಮನಸಿನಲ್ಲಿಟ್ಟುಕೊಂಡು ವಕ್ರ ಮಾತುಗಳನ್ನಾಡುತ್ತಿದ್ದಾನಲ್ಲ, ಎಂದು 'ಕೇ' ಬೇಸರಗೊಂಡರು. ತುಂಬ ತಮಾಷೆ ಎಂದರೆ, ಕೇಶವನ್‌ರ ಮಗನೇ, ಮುಂದೆ, 'ವಾಯ್ಬುಕೇ' ಎಂದರೆ ಏನೆಂದು ಅಪ್ಪನಿಗೆ ವಿವರಿಸಿದ್ದು. ಇದೆಲ್ಲ ಘಟನೆಯ ಹಿನ್ನೆಲೆಯಲ್ಲಿಯೇ, ಕೋಗಿಲೆ 'ವಾಯ್ಬುಕೇ' ಎಂದುಲಿದಾಗ ಅವರಿಗೆ 'ರಾ'ನ ನೆನಪಾಗಿ ಕಸಿವಿಸಿಯಾಗಿದ್ದು. ಆದರೆ ಇದು ಆತನ ಕಿತಾಪತಿಯಲ್ಲ ಎಂದು ಅವರಿಗೆ ನಿಚ್ಚಳವಾಯಿತು. ಇಂಥದೊಂದು ಕೋಗಿಲೆಯನ್ನೇ ನಿರ್ಮಿಸಿ, ಹಾರಿಬಿಡುವಷ್ಟು, 'ರಾ' ತಾಂತ್ರಿಕವಾಗಿ ಪರಿಣತನಲ್ಲ. ಅಥವಾ, ಯಾರಿಗೆ ಗೊತ್ತು, ಸಹೋದ್ಯೋಗಿಗಳೆಲ್ಲ ಸೇರಿ ಇಂಥದೊಂದು ಆಟ ಹೂಡಿರಬಹುದೆ?

ಹೊಸ ಶತಮಾನದ ಆರಂಭ ಎರಡು ಸಾವಿರದಿಂದಲೋ ಅಥವಾ ಎರಡು ಸಾವಿರದ ಒಂದನೇ ಇಸವಿಯಿಂದಲೋ ಎಂಬ ಕುರಿತು ನಡೆಯುತ್ತಿದ್ದ ಚರ್ಚೆಯಲ್ಲಿ ಕೇಶವನ್ ಎರಡನೇ ಗುಂಪಿಗೆ ಸೇರಿದವರಾಗಿದ್ದರು. ಅವರ ಪ್ರಕಾರ, ಯಾವುದೇ ಹೊಸ ಮಾಪನವು ಒಂದರಿಂದ ಆರಂಭವಾಗಬೇಕೇ ಹೊರತೂ, ಸೊನ್ನೆಯಿಂದಲಲ್ಲ. ಆದರೆ ಬೇರೆಲ್ಲರೂ ಅದು ಎರಡು ಸಾವಿರದಿಂದಲೇ ಆರಂಭವಾಗುತ್ತದೆ ಎಂದು ವಾದಿಸುತ್ತಿದ್ದುದರಿಂದ ಕೇಶವನ್ ಏಕಾಕಿಯಾಗಿದ್ದರು. ಹಾಗೆ ಏಕಾಕಿಯಾಗಿರುವುದೇ ಅವರಿಗೆ ವಿಚಿತ್ರ ಶಕ್ತಿಯನ್ನು ತಂದುಕೊಟ್ಟಿತ್ತು. ನಿಜಕ್ಕೂ ಇದು ಅವರು ಸೇವೆ ಸಲ್ಲಿಸುತ್ತಿದ್ದ ಇಲಾಖೆಯಲ್ಲಿ, ಯಾವುದೇ ಆಡಳಿತಾತ್ಮಕ ಅಥವಾ ತಾಂತ್ರಿಕ ಸಮಸ್ಯೆಯಾಗಿರಲಿಲ್ಲ. ಒಂದು ಸರಕಾರಿ ಇಲಾಖೆಯಲ್ಲಿ ಟಿ.ಏ., ಡಿ.ಏ. ಕುರಿತು ಗಹನವಾದ ಚರ್ಚೆಗಳೇರ್ಪಡುವುದನ್ನು ನಾವು ಊಹಿಸಲು

ಸಾಧ್ಯವಿದೆ. ಹೊಸ ವೇತನ ಆಯೋಗದ ಕುರಿತೂ, ಬಿಸಿ ಬಿಸಿ ಮಾತುಕತೆಗಳಾಗಬಹುದು. ಆದರೆ, ಒಂದು ವಿಚಿತ್ರ ಸನ್ನಿವೇಶದಲ್ಲಿ, ಇಪ್ಪತ್ತೊಂದನೇ ಶತಮಾನದ ಆರಂಭ ಬಿಂದು ಯಾವುದೆಂಬ ಕುರಿತು, ಕೇಶವನ್‌ರ ಆಫೀಸಲ್ಲಿ ಕ್ಷೋಭೆ ಉಂಟಾಗಿಬಿಟ್ಟಿತು. ಇದೆಲ್ಲ ಇಷ್ಟು ದೊಡ್ಡ ವಿವಾದಕ್ಕೆ ಕಾರಣವಾದೀತೆಂದು ಊಹಿಸಿಯೂ ಇರದ ಕೇಶವನ್, ಒಂದು ಸಂಜೆ ಈ ಇದಕ್ಕೆ ಪೀಠಿಕೆ ಹಾಕಿದರು. ತಮ್ಮ ಸಹೋದ್ಯೋಗಿಯೊಬ್ಬರ ಬಳಿ, ''ಪತ್ರಿಕೆಗಳಲ್ಲಿ ನಡೆಯುತ್ತಿರುವ ಚರ್ಚೆಯನ್ನು ಗಮನಿಸಿದಿರ?'' ಎಂದು ಪ್ರಶ್ನಿಸಿದರು. ಆತ, ''ಯಾವ ಚರ್ಚೆ?'' ಎಂದರು. ''ಅದೇ, ಹೊಸ ಸಹಸ್ರಮಾನದ ಕುರಿತು'', ''ಓ, ಅದಾ, ಅದರಲ್ಲಿ ಚರ್ಚೆ ಮಾಡಲು ಏನಿದೆ?'' ಎನ್ನುತ್ತಾ ಆ ವ್ಯಕ್ತಿ ತನ್ನ ಕಡತದಲ್ಲಿ ಮುಳುಗಿದರು. ಆದರೆ ಕೇಶವನ್‌ರಿಗೆ ಈ ವಿಷಯದ ಕುರಿತು ಮಾತನಾಡಲು ಅತ್ಯುತ್ಸಾಹವಿತ್ತು. ಆತನ ಮುಂದಿನ ಕುರ್ಚಿಯಲ್ಲಿ ಕುಳಿತು ಇವರು, ಹೊಸ ಸಹಸ್ರಮಾನವು ಎರಡು ಸಾವಿರದ ಒಂದನೇ ಇಸವಿಯಿಂದಲೇ ಏಕೆ ಆರಂಭವಾಗಬೇಕು ಎಂಬ ಕುರಿತು, ತಮ್ಮ ವಾದವನ್ನು ಮಂಡಿಸಲಾರಂಭಿಸಿದರು. ಕೇಶವನ್‌ರ ತಲೆಯಲ್ಲಿ ಒಂದು ವಿಷಯ ಹೊಕ್ಕರೆ ಮುಗಿಯಿತು, ಅದೊಂದು ರಾಷ್ಟ್ರೀಯ ಮಹತ್ವದ ವಿಷಯ ಎಂಬಂತೆ ಎಲ್ಲರ ತಲೆ ತಿನ್ನುವರು. ಆಫೀಸಲ್ಲಿ ಎಲ್ಲರೂ ಕೇಶವನ್‌ರ ಪ್ರವೃತ್ತಿ ಬಲ್ಲವರೇ. ಒಂದಲ್ಲ ಒಂದು ಸಂದರ್ಭದಲ್ಲಿ, ಅವರ ವಾಗ್ದಾಳಿ ಎದುರಿಸಿದವರೇ. ಇವರ ಖಚಿತ, ಸ್ಪಷ್ಟ, ಒರಟು ವಾದವೆಂದರೆ ಅವರೆಲ್ಲರಿಗೂ ಹೆದರಿಕೆಯೇ. ಆದರೆ ಅವೆಷ್ಟು ದಿನಗಳಿಂದ ಅವರೆಲ್ಲ ಒಂದು ಸದವಕಾಶಕ್ಕಾಗಿ ಕಾದಿದ್ದರೋ! ತಮ್ಮ ಸೀಟುಗಳನ್ನು ಬಿಟ್ಟು ಅವರೆಲ್ಲ, ಇವರಿಬ್ಬರನ್ನು ಸುತ್ತುವರಿದರು. ಒಕ್ಕೊರಲಿನಿಂದ ಎಂಬಂತೆ, ಮಿತ್ರರೆಲ್ಲರೂ ಸೇರಿ, ''ಎಲ್ಲ ಸರಿ, ಈಗ ತಮ್ಮ ನಿಲುವು ಏನು?'' ಎಂದು ಕೇಶವನ್‌ರನ್ನು ಪ್ರಶ್ನಿಸಿದರು. ಇಷ್ಟೊಂದು ಜನ ಈ ಚರ್ಚೆಯಲ್ಲಿ ಪಾಲ್ಗೊಂಡಿದ್ದರಿಂದ, ಕೇಶವನ್‌ರಿಗೆ ಅಮಿತಾನಂದವಾಗಿತ್ತು. ಅದರಲ್ಲೂ, ಇವರೆಲ್ಲ ತನ್ನ ನಿಲುವನ್ನು ಕುರಿತು ಕೇಳುತ್ತಿದ್ದುದರಿಂದ ಅವರು ಇನ್ನಷ್ಟು ಉದ್ರೇಕಗೊಂಡರು. ''ನನ್ನ ಪ್ರಕಾರ, ಹೊಸ ಸಹಸ್ರಮಾನವು ಎರಡು ಸಾವಿರದ ಒಂದನೇ ಇಸವಿಗೆ ಆರಂಭವಾಗುವುದು'' ಎಂದು ಇವರು ಘೋಷಿಸಿದರು. ''ಈ ನಿಲುವಿನ ಹಿಂದೆ ಅನೇಕ ತಾರ್ಕಿಕ ಅಂಶಗಳು ಇವೆ'' ಎಂದು ಕೇಶವನ್ ಹೇಳಿಮುಗಿಸುವ ಮುನ್ನವೇ, ಸಹೋದ್ಯೋಗಿಗಳೆಲ್ಲರೂ, ''ನಮ್ಮ ಪ್ರಕಾರ ಹೊಸ ಸಹಸ್ರಮಾನವು ಎರಡು ಸಾವಿರ ಇಸವಿಗೇ ಆರಂಭವಾಗುವುದು'' ಎಂದರು. ''ಹಾಗಲ್ಲ'' ಎಂದು ಕೇಶವನ್, ಕುಳಿತಲ್ಲಿಂದ ಮೇಲಕ್ಕೆದ್ದರು. ಗೆಳೆಯರಿಗೆ ರೇಗಿತು. ''ರೀ ಕೇಶವನ್, ಹೊಸ ಸಹಸ್ರಮಾನವು ಆರಂಭವಾಗುವುದು ನಾವು ಹೇಳಿದಾಗಲೇ. ಇದನ್ನು ನೀವು ತಿಳಿದುಕೊಳ್ಳಿ. ಹ್ಞಾಂ'' ಎಂದು ಗುಡುಗಿದರು. ಒಂದು ಕ್ಷಣ ಕೇಶವನ್ ಸುಮ್ಮನೆ ಕೂತರು. ಮೆಲ್ಲಗೆ, ''ನೀವು ನನ್ನ ವಿಚಾರವನ್ನು ಕೇಳಿಸಿಕೊಂಡರೆ ಒಳ್ಳೆಯದಿತ್ತು'' ಎಂದರು. ಆದರೆ ಮಿತ್ರರಿಗೆ, ಇವರ ವಾದದ ಕುರಿತು ಆಸಕ್ತಿ, ಅದನ್ನು ಕೇಳುವ ಸಹನೆ, ಎರಡೂ ಇರಲಿಲ್ಲ. ಆದ್ದರಿಂದ ಅವರು, ''ನಿಮ್ಮ ವಾದ ನಮಗೆ ಬೇಕಾಗಿಯೇ ಇಲ್ಲ, ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ನಾವು ನಿಮ್ಮ ಹೇಳಿಕೆಯನ್ನು ವಿರೋಧಿಸುತ್ತಿರುವಾಗ ನಿಮ್ಮನ್ನು ನೀವು ಸರಿಪಡಿಸಿಕೊಳ್ಳಿ. ಹೊಸ ಸಹಸ್ರಮಾನದ ಆರಂಭ, ಎರಡು ಸಾವಿರಕ್ಕೆ. ಇದನ್ನು ನೀವು ಒಪ್ಪಿಕೊಳ್ಳಿ. ಇಷ್ಟೊಂದು ಜನ ಹೇಳುತ್ತಿರುವುದನ್ನು ಸುಳ್ಳೆಂದು ಹೇಳಲಿಕ್ಕೆ ನಿಮಗೆಷ್ಟು ಧೈರ್ಯ? ನೀವು ಮಾಡುತ್ತಿರುವುದು ಸರಿಯೇ ಎಂದು ತಣ್ಣಗೆ ಕೂತು ಆಲೋಚಿಸಿ'' ಎಂದೆಲ್ಲ ಇವರ ಮೇಲೆ

ಹರಿಹಾಯ್ದರು. ಒಮ್ಮೆಲೇ ಇವರೆಲ್ಲ ತನ್ನ ವಿರುದ್ಧ ಹೀಗೇಕೆ ತಿರುಗಿಬಿದ್ದರು ಎಂಬುದನ್ನು ಕೇಶವನ್ ಅರ್ಥ ಮಾಡಿಕೊಳ್ಳಲಾಗಲಿಲ್ಲ. ಎಲ್ಲ ಸಹೋದ್ಯೋಗಿಗಳ ಜತೆ ಅವರು, ಒಂದಿಲ್ಲೊಂದು ವಿವಾದಾತ್ಮಕ ಸಂಗತಿ ಕುರಿತು, ಈ ಹಿಂದೆ ಚರ್ಚೆ ನಡೆಸಿದವರೇ. ಸಾಮಾನ್ಯವಾಗಿ, ಕೇಶವನ್ ಹೇಳುವ ಸಂಗತಿಗಳಲ್ಲಿ ಹುರುಳಿರುತ್ತಿತ್ತು. ವಾದದಲ್ಲಿ ಗೆಲ್ಲಬೇಕು ಎಂಬುದಕ್ಕಿಂತ ಹೊಸ ಸಂಗತಿಗಳನ್ನು ತಿಳಿಯಬೇಕು ಎಂಬ ಉತ್ಸಾಹ ಕೇಶವನ್‌ರದು. ಆದ್ದರಿಂದ ಅವರು, ಏನಾದರೂ ಹೊಸ ಚರ್ಚೆಯ ಸಾಮಗ್ರಿಗಳನ್ನು ಹುಡುಕುವರು, ವಿಷಯ ಕಲೆಹಾಕುವರು, ವಾದ ಮಂಡಿಸುವರು. ಆದರೆ ಇವೆಲ್ಲ ಅವರ ಸಹೋದ್ಯೋಗಿಗಳಿಗೆ ಕಿರಿಕಿರಿಯ ಸಂಗತಿಗಳು. "ನೀವೆಲ್ಲ ಹೀಗೆ ಹೇಳುತ್ತಿರುವುದಕ್ಕೆ ಕಾರಣ ಕೇಳಬಹುದೆ? ನಿಮ್ಮ ವಾದ ತಿಳಿಯಲು ನನಗೆ ಕುತೂಹಲ" ಎಂದು ಕೇಶವನ್, ಪುನಃ ಚರ್ಚೆ ಮುಂದುವರಿಸಲು ಯತ್ನಿಸಿದರು. ಆದರೆ ಸಹೋದ್ಯೋಗಿಗಳು ಮತ್ತೆ ಧಮಕಿ ಹಾಕಿದರು. "ಅದೆಲ್ಲ ಈಗ ಬೇಡ, ಹೇಳಲು ಹೊರಟರೆ ತುಂಬ ಕಾರಣಗಳಿವೆ. ನಿಮ್ಮ ಪ್ರಕಾರ ಹೊಸ ಸಹಸ್ರಮಾನ ಎರಡು ಸಾವಿರದ ಒಂದನೆ ಇಸವಿಗೆ ತಾನೆ? ಹಾಗೇ ಇಟ್ಟುಕೊಳ್ಳಿ, ತಲೆ ತಿನ್ನುವುದು ನಿಲ್ಲಿಸಿ" ಎಂದರು. ಇನ್ನು ಮೌನವೇ ತನಗೆ ಭೂಷಣವೆಂದು ಕೇಶವನ್ ಸುಮ್ಮನಾದರು. 'ರಾ' ತನ್ನ ಸೀಟಲ್ಲಿ ವ್ಯಂಗ್ಯದ ನಗೆ ಬೀರುತ್ತಾ ಕೂತಿರುವುದನ್ನು ಅವರು ಗಮನಿಸಿದರು. ಕೆಲವೇ ದಿನಗಳಲ್ಲಿ ಇವರಿಗೆ "ಎರಡು ಸಾವಿರದ ಒಂದನೇ ಇಸವಿಯ ಹರಿಕಾರ" ಎಂಬ ಅಡ್ಡ ಹೆಸರು ಪ್ರಾಪ್ತವಾಯಿತು. ಎಂದೂ ಫೋನ್ ಮಾಡದ 'ರಾ', ಅದೊಂದು ದಿನ ಕೇಶವನ್ ಮನೆಗೆ ಫೋನ್ ಮಾಡಿದ. ಫೋನೆತ್ತಿದವಳು ಆಂಡಾಳಮ್ಮ. ಆಕೆಯ ಬಳಿ 'ರಾ', "ವಣಕ್ಕಂ ಅಮ್ಮ. ಹೇಗಿದ್ದೀರಿ? ನಮ್ಮ ಎರಡು ಸಾವಿರದ ಒಂದನೇ ಇಸವಿಯ ಕ್ರಾಂತಿಕಾರಿಗಳು ಇದ್ದಾರೆಯೇ?" ಎಂದು ಕೇಳಿದನಂತೆ. ಆಂಡಾಳಮ್ಮ ಗಾಬರಿಗೊಂಡಳು. "ಯಾರು, ನಮ್ಮ ಮನೆಯವರೇ? ಇದ್ದಾರೆ, ಇದ್ದಾರೆ" ಎಂದು ಫೋನನ್ನು ಕೇಶವನ್‌ರಿಗೆ ಕೊಟ್ಟಳು. ಇವರ ಬಳಿ 'ರಾ', "ನೋಡಿದೆಯೇನಪ್ಪ, ನಿನ್ನ ಮಡದಿ ಕೂಡ ನಿನ್ನನ್ನು ಎರಡು ಸಾವಿರದ ಒಂದರ ವಿ. ಆಯ್.ಪಿ. ಎಂದು ಹೇಳುತ್ತಿದ್ದಾರೆ" ಎಂದು ನಕ್ಕ. ಇವರು "ಏನೋ ಒಂದು, ಅಂತೂ ವಿ.ಐ.ಪಿ. ಎಂದು ಒಪ್ಪಿಕೊಂಡಳಲ್ಲಪ್ಪ, ಅಷ್ಟು ಸಾಕು" ಎಂದು ಮಾತು ಮುಗಿಸಲೆತ್ನಿಸಿದರು. ಆದರೆ ಆತ ಬಿಡಬೇಕಲ್ಲ, "ಹಾಗಲ್ಲ ಕೇಶವನ್, ನಿಮ್ಮನ್ನು ವಿ.ಐ.ಪಿ. ಚಿಂತಕ ಎಂದು ನಾವೆಲ್ಲ ಒಪ್ಪಬೇಕಲ್ಲ" ಎಂದು ಇವರನ್ನು ಇನ್ನಷ್ಟು ಕೆಣಕಿದ. "ಅಂದರೆ, ನಾನೀಗ ವಿ.ಐ.ಪಿ., ಚಿಂತಕ, ಗಿಂತಕ ಅಲ್ಲ ಎಂದು ನಿನ್ನ ಮಾತಿನ ಅರ್ಥ ತಾನೆ?" "ಛೇ, ಛೇ, ಹಾಗಲ್ಲ, ಎರಡು ಸಾವಿರದ ಒಂದನೇ ಇಸವಿಯ ಹೊತ್ತಿಗೆ ನೀನು ವಿ.ಐ.ಪಿ. ಆದರೂ ಆಗಬಹುದು ಎಂದಷ್ಟೇ ನನ್ನ ಮಾತಿನ ಅರ್ಥ" ಎಂದು 'ರಾ' ಫೋನ್ ಕೆಳಗಿಟ್ಟ.

ಯಾಕೋ ಇವೆಲ್ಲ ಅತಿಯಾಗುತ್ತಿದೆ ಎಂದು ಕೇಶವನ್‌ರಿಗೆ ತೋರಿತು. ಆದರೆ ಇವರಿಗೆ ತಕ್ಕುದಲ್ಲದ ಚೇಷ್ಟೆ ಇವರನ್ನು ಆಡಿಸಿತು. ಒಂದು ಚಿಕ್ಕ ಕರಪತ್ರ ತಯಾರಿಸಿದರು. "ಹೊಸ ಸಹಸ್ರಮಾನವು ಎರಡು ಸಾವಿರದ ಒಂದನೇ ಇಸವಿಗೆ ಆರಂಭ ಆಗುತ್ತದೆ. ಆದರೆ ನಮ್ಮ ಮಿತ್ರರ ಆಸೆಯಂತೆ, ಎರಡು ಸಾವಿರದ ಇಸವಿಯ ಜನವರಿ ಒಂದರಂದೇ ಹೊಸ ಸಹಸ್ರಮಾನದ ಉದಯವನ್ನು ಸಾರಲು ತೀರ್ಮಾನಿಸಲಾಗಿದೆ- ಎರಡು ಸಾವಿರದ ಒಂದನೇ ಇಸವಿಯ ಹರಿಕಾರ." ಇಷ್ಟು ಬರೆದ ಆ ಚಿಕ್ಕ ಕಾಗದವನ್ನು, ಗೆಳೆಯರೆಲ್ಲರ ಟೇಬಲ್ ಮೇಲೆ, ಒಂದು ಬೆಳಿಗ್ಗೆ ಇರಿಸಿದರು. ಇದಕ್ಕಾಗಿಯೇ, ಅಂದು ಅವರು ಎಲ್ಲರಿಗಿಂತ ಮುಂಚಿತವಾಗಿ ಆಫೀಸಿಗೆ ಬಂದರು.



ಅವರವರ ಸ್ಥಾನಕ್ಕೆ ಬಂದು ಕುಳಿತ ಸಹೋದ್ಯೋಗಿಗಳ ಮುಖದಲ್ಲಾಗುತ್ತಿದ್ದ ಬದಲಾವಣೆಯನ್ನು ವಾರೆಗಣ್ಣಿಂದ ನೋಡುತ್ತ, ಇನ್ನಿಲ್ಲದ ಗಾಂಭೀರ್ಯದಿಂದ ಕಡತ ಬಿಚ್ಚಿ ಕುಳಿತರು. ಇಲ್ಲಿಂದ ಈ ವಿವಾದ ಹೊಸ ತಿರುವು ಪಡೆಯಿತು.

ಕೋಗಿಲೆ ಮೃದುವಾದ ದನಿಯಲ್ಲಿ 'ಕುಕೂ' ಅಂದಿತು. ಕೇಶವನ್ ತಲೆ ಎತ್ತಿ ನೋಡಿದರು. ಮತ್ತೆ ಮೌನ. ಕೋಗಿಲೆ ಕಾಣಸಲಿಲ್ಲ.

ಈ ಬಾರಿ ಕೋಗಿಲೆ 'ಕುಕೂ' ಅಂದಿತೆ? ಈಗ ಕೆಲವು ನಿಮಿಷಗಳ ಹಿಂದೆ ಕೂಡ ಅದು 'ವಾಯ್ಯುಕೇ' ಎಂದಿತಲ್ಲವೆ? ಇದೇನು, ಎಲ್ಲವೂ ವಿಚಿತ್ರವಾಗಿದೆ.

ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ, ಕೇಶವನ್‌ರ ಆಫೀಸಿನ ಕ್ಲಬ್‌ನಲ್ಲಿ ಒಂದು ಸ್ನೇಹಕೂಟ ಏರ್ಪಡಿಸಿದರು. ನಕ್ಕು, ಹಾಡಿ, ಕುಣಿದು, ಉಂಡು, ಒಂದು ಸಂಜೆ ಎಲ್ಲರೂ ಖುಷಿಯಾಗಿ ಕಾಲ ಕಳೆಯುವುದು ಆ ಸ್ನೇಹ ಕೂಟದ ಆಶಯ. ಕ್ಲಬ್ ಸೆಕ್ರೆಟರಿ ಬೇರೆ, ಸ್ಕೆಷನ್‌ನಲ್ಲಿ ಕೆಲಸಮಾಡುವ ಕೇಶವನ್‌ರ ನೆಚ್ಚಿನ ಮಿತ್ರ. ಬಂದೇಬರಬೇಕೆಂದು ಕೇಶವನ್‌ರಿಗೆ ವಿಶೇಷ ಆಹ್ವಾನವಿತ್ತ. ಸಾಮಾನ್ಯವಾಗಿ ಕೇಶವನ್ ಕ್ಲಬ್ ಚಟುವಟಿಕೆಗಳಲ್ಲಿ ಪಾಲುಗೊಳ್ಳುತ್ತಿರಲಿಲ್ಲ. ಆದ್ದರಿಂದಲೇ ಈ ವಿಶೇಷ ಆಹ್ವಾನ. 'ಸರಿ' ಎಂದು ಕೇಶವನ್, ಆ ಕೂಟದಲ್ಲಿ ಭಾಗವಹಿಸಲು ಒಪ್ಪಿದರು.

ಅಂದು ಸಂಜೆ, ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ, ಕೇಶವನ್‌ರಿಗೆ ಒಂದು ಶಾಕ್ ಕಾದಿತ್ತು. "ಇಂದಿನದು ಹೊಸ ಸಹಸ್ರಮಾನವನ್ನು ಸ್ವಾಗತಿಸುವ ಸಭೆ. ಆಡಿ, ಹಾಡಿ, ಹತ್ತಿರ ಬರುತ್ತಿರುವ ಹೊಸ ಶಕೆಗೆ ಸ್ವಾಗತ ಕೋರೋಣ. ಕವಿಗಳು ಇಂದು ಹೊಸ ಸಹಸ್ರಮಾನ ಕುರಿತ ಕವನಗಳನ್ನು ವಾಚಿಸುವರು, ಗಾಯಕರು ಹೊಸ ಸಹಸ್ರಮಾನವನ್ನು ಹಾಡಿ ಸ್ವಾಗತಿಸುವರು..." ಎಂದು ಮಂಜುಳ ಕಂಠದ ನಿರೂಪಕಿ ಉಲಿದಳು. ಕೇಶವನ್ ವಿಚಲಿತರಾದರು. ಇದೇಕೆ ಹೀಗೆಂದು ತನಗೆ ಮೊದಲೇ ತಿಳಿಸಲಿಲ್ಲ? ಸರಿ, ತನ್ನನ್ನು ಬೇಸ್ತು ಬೀಳಿಸಲೆಂದೇ ಏರ್ಪಡಿಸಿರುವ ಆಟ ಇದು ಎಂದು ಕೇಶವನ್‌ರಿಗೆ ಖಚಿತವಾಯಿತು. "ಇರಲಿ, ನಾನೂ ಒಂದು ಕೈ ನೋಡಿಕೊಳ್ಳುತ್ತೇನೆ" ಎಂದುಕೊಂಡರು. ಸ್ವಲ್ಪ ಹಿಂದೆ ಕುಳಿತಿದ್ದ 'ರಾ' ಮತ್ತು ಇನ್ನಿಬ್ಬರು ಸಹೋದ್ಯೋಗಿಗಳು, ಕರವಸ್ತ್ರದೊಳಗೆ ನಗು ಅದುಮುತ್ತಿದ್ದರು.

ಹೊಸ ಸಹಸ್ರಮಾನವನ್ನು ಹೊಸ ಸಂಭ್ರಮದಿಂದ ಸ್ವಾಗತಿಸುವ ಹೊಸ ಹಾಡುಗಳನ್ನು, ಕವಿಗಳೆಂಬುವರು ಓದಿದರು, ಗಾಯಕರೆಂಬುವರು ಹಾಡಿದರು. ನಡುವೆ ಒಮ್ಮೊಮ್ಮೆ, ನಿರೂಪಕರು ವೇದಿಕೆಗೆ ಬಂದು, 'ಹೊಸ ಸಹಸ್ರಮಾನಕ್ಕೇ' ಎನ್ನುವರು, ಸಭಿಕರು 'ಸುಸ್ವಾಗತ, ಸುಸ್ವಾಗತ' ಎಂದು ಕೂಗುವರು. 'ನವಯುಗಕೆ, ನವಜಗಕೆ ಸಾಗೋಣ ಬಾ' ಎಂಬ ಹಾಡಿನ ಕಡೆಗಂತೂ, ಸಭೆಗೆ ಸಭೆಯೇ ಪ್ರತಿ ಸಾಲಿಗೂ ಚಪ್ಪಾಳೆ ಹೊಡೆದು ಸ್ಪಂದಿಸಿತು. ಕಡೆಗಂತೂ, ಸಭಿಕರೇ ಒಮ್ಮೆ, "ವೆಲ್‌ಕಂ ನ್ಯೂ ಮಿಲೆನಿಯಮ್" ಎನ್ನುತ್ತ ನರ್ತಿಸಲಾರಂಭಿಸಿದರು. ಇವೆಲ್ಲ ಜರುಗುತ್ತಿರುವಂತೆ ಕೇಶವನ್, ಕಾರ್ಯಕ್ರಮ ನಿರ್ವಾಹಕರ ಬಳಿ ಸಾರಿ, ತಾನು ಒಂದೆರಡು ಮಾತುಗಳನ್ನಾಡಲು ಅವಕಾಶ ನೀಡಬೇಕೆಂದು ಕೋರಿದರು. ಆತ, ಕುಣಿತದ ಶೈಲಿಯಲ್ಲಿಯೇ,

''ಪರ್ಮಿಶನ್ ಗ್ರ್ಯಾಂಟೆಡ್'' ಎಂದು ಹೇಳುತ್ತ ಇವರನ್ನು ವೇದಿಕೆಗೆ ಹತ್ತಿಸಿದ.

''ಪ್ರಿಯರೆ, ಹೊಸ ಸಹಸ್ರಮಾನದ ಉದಯಕ್ಕೆ ತಾವೆಲ್ಲರೂ ಶುಭ ಕೋರುತ್ತಿದ್ದೀರಿ. ಇಷ್ಟೊಂದು ಜನ, ಹೀಗೆ, ಹಾಡಿ, ಕುಣಿದು ಕರೆದ ಮೇಲೆ ಹೊಸ ಸಹಸ್ರಮಾನವು ಬರದೇ ಉಳಿಯುವುದಿಲ್ಲ ಎಂದು ನನಗೆ ಖಾತ್ರಿಯಾಗಿದೆ. (ಸಭೆಯ ಚಪ್ಪಾಳೆ). ನಾನು ಹಾಡುಗಾರನಲ್ಲ, ಕವಿಯೂ ಅಲ್ಲ, ಆದರೂ ನಾನೊಂದು ಕವಿತೆ ಬರೆಯುವವನಿದ್ದೇನೆ, ಹಾಡುವವನೂ ಇದ್ದೇನೆ. (ಸಭೆ, ಹೊಸ ಕವಿ ಹುಟ್ಟಲಿರುವುದನ್ನು ಭಾರೀ ಚಪ್ಪಾಳೆ ಹೊಡೆದು ಸ್ವಾಗತಿಸಿತು). ಆದರೆ ನನಗೆ ಅವಸರವಿಲ್ಲ. ಏಕೆಂದರೆ... (ಸಭೆಯಲ್ಲಿ ಕೆಲವು ಹುಬ್ಬುಗಳಾದರೂ ಕುತೂಹಲದಿಂದ ಮೇಲಕ್ಕೇರಿದವು).... ನನ್ನ ಪ್ರಕಾರ, ಹೊಸ ಸಹಸ್ರಮಾನ ಆರಂಭವಾಗಲು ಇನ್ನೂ ಹನ್ನೆರಡು ತಿಂಗಳುಗಳಿವೆ. ನಾನು ಹಾಗೆ ಹೇಳುತ್ತಿರುವುದಕ್ಕೆ ಅನೇಕ ತಾರ್ಕಿಕ ಕಾರಣಗಳಿವೆ. (ಸಭೆಯಲ್ಲಿ ಗದ್ದಲ ಆರಂಭವಾಯಿತು). ದಯಮಾಡಿ ಸಹನೆಯಿಂದ ನನ್ನ ಮಾತುಗಳನ್ನು ಕೇಳಿಸಿಕೊಳ್ಳಬೇಕು. ('ಭಾಷಣ ಸಾಕು' ಎಂದು ಸಭೆಯ ಹಿಂದುಗಡೆಯ ಸಾಲುಗಳಿಂದ ಕೂಗೆದ್ದಿತು). ನಿರೂಪಕ ರಾಜು, ಓಡೋಡಿ ವೇದಿಕೆಗೆ ಬಂದು, ಕೇಶವನ್‌ರ ಕೈಯಲ್ಲಿದ್ದ ಪುಟ್ಟ ಮೈಕನ್ನು ಕಿತ್ತುಕೊಂಡ. ಕೇಶವನ್‌ರ ಹೆಗಲ ಮೇಲೆ ಕೈ ಹಾಕಿ ನಿಂತು, ''ಚಿಂತನಶೀಲ ಕೇಶವನ್ ತಮ್ಮದೇ ಆದ ರೀತಿಯಲ್ಲಿ ಹೊಸ ಸಹಸ್ರಮಾನವನ್ನು ಸ್ವಾಗತಿಸಿದ್ದಾರೆ. ಅವರಿಗೆ ವಂದನೆಗಳು. ಈಗ ಬೇಂದ್ರೆ ಗೀತೆ'' ಎಂದು ಘೋಷಿಸಿಬಿಟ್ಟ. ಕೇಶವನ್ ಬೇಸರಗೊಂಡು ತಮ್ಮ ಜಾಗಕ್ಕೆ ಮರಳಿದರು. ಅತ್ತ ಅವರ ಕಿಡಿಗೇಡಿ ಸಹೋದ್ಯೋಗಿಗಳೂ ಗರಬಡಿದಂತಾಗಿದ್ದರು. ಅವರಿಗೆ, ಕೇಶವನ್ ಇಷ್ಟು ಮುಂದುವರಿದಾರೆಂಬ ಕಲ್ಪನೆ ಇರಲಿಲ್ಲ. ಇದಾವುದರ ಪರಿಚಯವೂ ಇರದ ಗಾಯಕಿ, ''ಕುಣಿಯೋಣು ಬಾರಾ, ಕುಣಿಯೋಣು ಬಾ'' ಎಂದು ಮೈ ಮರೆತು ಹಾಡುತ್ತಿದ್ದಳು. ಸಭೆ ಕುಣಿಯತೊಡಗಿತ್ತು.

ನೇರಳೆ ಗಿಡದ ಎಲೆಗಳ ಹಿಂದಲ್ಲಿ ರೆಕ್ಕೆ ಬಡಿದ ಸಪ್ಪಳ. ಲಗುಬಗೆಯಿಂದ ಕೇಶವನ್ ತಲೆ ಎತ್ತಿ ನೋಡಿದರು. ಏನೂ ಕಾಣಸದು.


ಸ್ನೇಹಕೂಟದ ಬಳಿಕ, ಪುನಃ ಸ್ನೇಹಿತರ ಕಲಹ ಆರಂಭವಾಯಿತು. ಕರಪತ್ರ, ಹಂಚಿ ತಮ್ಮನ್ನು ಕೇಶವನ್ ಗೇಲಿ ಮಾಡಿದರೆಂದು ಸಹೋದ್ಯೋಗಿಗಳ ಆಕ್ಷೇಪ. ಇಂಥ ಗೋಷ್ಠಿಯ ಔಚಿತ್ಯ ಏನೆಂದು ಕೇಶವನ್‌ರ ಹಾರಾಟ. ಸಂಘಟಕರು ಸಮಾಧಾನಪಡಿಸಲು ಬಂದಾಗ, ಕೇಶವನ್ ಅವರನ್ನು ತರಾಟೆಗೆ ತೆಗೆದುಕೊಂಡರು. ''ನೀವೂ ಇವರ ಜೊತೆ ಸೇರಿ ಕೀಟಲೆ ಮಾಡಲೆಂದೇ ತಾನೆ ಈ ಕಾರ್ಯಕ್ರಮ ಏರ್ಪಡಿಸಿದ್ದು? ಎಂದೂ ಇಲ್ಲದ ಕಾರ್ಯಕ್ರಮ ಈ ಸಲ ಎಂದಾಗಲೇ ತಿಳಿದುಕೊಂಡೆ, ಏನೋ ಕಿತಾಪತಿ ಇದೆ ಎಂದು. ನನಗೆಲ್ಲಾ ಗೊತ್ತು ಕಣ್ರೀ, ನೀವೆಲ್ಲಾ ಎಷ್ಟೇ ಆಟ ಆಡಿದರೂ, ಹೂಟ ಹೂಡಿದರೂ, ಹೊಸ ಶಕೆಯ ಆರಂಭ ಆಗುವುದು ಎರಡು ಸಾವಿರದ ಒಂದನೇ ಇಸವಿಯ ಜನವರಿ ಒಂದರಂದೇ. ಅದಕ್ಕಿಂತ ಒಂದು ಸೆಕೆಂಡ್ ಮುಂಚಿತವಾಗಿಯೂ ಆಗುವುದಿಲ್ಲ, ಬರೆದಿಟ್ಟುಕೊಳ್ಳಿ'' ಎಂದು ಸಿಟ್ಟಿನಿಂದ ಹೊರಬಿದ್ದರು. 'ಊಟ ಮಾಡಿ ಹೋಗಿ' ಎಂದು ಎಲ್ಲರೂ ಬಿನ್ನೈಸುತ್ತಿದ್ದರೂ ತಾನು ಹಾಗೆ ಹೊರಬಂದುದು, ಚಿಕ್ಕ ಮಕ್ಕಳ ವರ್ತನೆಯಂತಾಯಿತೆಂದು ಈಗ ತೋರುತ್ತಿದೆ. ಅಣಕಿಸುವಂತೆ, ಮೇಲಿನಿಂದ ಕೋಗಿಲೆ 'ಕುಹೂ' ಅಂದಿತು. ಮರುಕ್ಷಣದಲ್ಲಿ 'ವಾಯ್ಸುಕೇ, ವಾಯ್ಸುಕೇ.' ಕಣ್ಣೆತ್ತಿದರೆ ಮಾತ್ರ ಏನೂ ಕಾಣದು.

ನಿಂತು ಸಾಕಾಗಿ ಕೇಶವನ್, ಮನೆಯೊಳಕ್ಕೆ ಬಂದರು. ಏನೂ ತೋಚದೆ, ಕುರ್ಚಿಯಲ್ಲಿ

ಕೂತು, ಪೇಪರನ್ನು ಹಿಂದೆ ಮುಂದೆ ತಿರುವಿದರು. ಅಷ್ಟರಲ್ಲಿ ಕೇಶವನ್‌ರ ಮಡದಿ ಎದ್ದುಬಂದರು. ''ಏನು ಅಪ್ಪಾಜಿ, ಅಷ್ಟೊಂದು ಹೊತ್ತು ಹೊರಗೆ ನಿಂತಿದ್ದಿರಿ?'' ಎನ್ನುತ್ತಾ ಮಗನೂ ಸ್ಟಡಿ ರೂಮಿಂದ ಹೊರಬಂದ. ''ವಾಯ್ಬುಕೇ ಎಂದು ಒಂದು ಕೋಗಿಲೆ ಕೂಗುತ್ತಿತ್ತಲ್ಲಪ್ಪ, ಅದೇನೆಂದು ನೋಡಲು ಹೊರಹೋದೆ'' ಎಂದರು. ಈ ಹೊತ್ತಿಗೆ, ''ಏನೆಂದಿರಿ ಅಪ್ಪಾಜಿ?'' ಎನ್ನುತ್ತಾ ಮಗಳೂ ಹಾಲ್‌ಗೆ ಅವಸರದಿಂದ ಧಾವಿಸಿದಳು. ಇವರು ಪುನಃ ಹೇಳಿದರು. ''ಏನಪ್ಪಾಜಿ, ಈ ಥರ ಮಾತಾಡುತ್ತಿದ್ದೀರಿ, ಕೋಗಿಲೆ 'ವಾಯ್ಬುಕೇ' ಎನ್ನುವುದೆ! ನಿಮಗೆಲ್ಲೋ ಭ್ರಮೆ, ಅಷ್ಟೆ'' ಎಂದು ಮಕ್ಕಳಿಬ್ಬರೂ ದೃಢದನಿಯಲ್ಲಿ ಹೇಳತೊಡಗಿದರು. ''ಪರವಾಗಿಲ್ಲ, ಮತ್ತೆ ಕೋಗಿಲೆ ಕೂಗಿದಾಗ ಆಲಿಸಿ'' ಎಂದಷ್ಟೇ ಹೇಳಿ ಕೇಶವನ್, ಬೇರೇನನ್ನೋ ಓದಲಾರಂಭಿಸಿದರು. ಮಡದಿ ಕೊಟ್ಟ ಟೀ ಕುಡಿದು ಕಪ್ ಕೆಳಗಿಡುವಷ್ಟರಲ್ಲಿ ಮತ್ತೆ 'ವಾಯ್ಬುಕೇ' ದನಿ ಮೊಳಗಿತು. ''ಕೇಳಿದಿರೇನಪ್ಪ?'' ಎಂದು ಇವರು, ಮಡದಿ, ಮಕ್ಕಳಿಗೆ ಕೂಗಿ ಕೇಳಿದರು. ''ನಮಗೇನೂ ಕೇಳಿಸಲಿಲ್ಲವಲ್ಲ'' ಎಂದು ಅವರು ಅಚ್ಚರಿಗೊಂಡರು. 'ಅರೆರೆ' ಎನ್ನುತ್ತ ಕೇಶವನ್, ಹೊರಬಾಗಿಲು ತೆರೆದು ಹೋಗುವಷ್ಟರಲ್ಲೇ ಇನ್ನೆರಡು ಸಲ 'ವಾಯ್ಬುಕೇ' ಉಲಿ ಕೇಶವನ್‌ರಿಗೆ ಕೇಳಿಸಿತು. ಆದರೆ ಮಡದಿ, ಮಕ್ಕಳಿಗೆ ಮಾತ್ರ ಅದು ಕೇಳಿಸಲಿಲ್ಲ. ಈಗ ಆ ಕೋಗಿಲೆ ಕಂಡೇ ಕಾಣುವುದೆಂಬ ಭರವಸೆಯಿಂದ ನೇರಳೆ ಗಿಡದುದ್ದಕ್ಕೂ ನಿಟ್ಟಿಸಿದರು. ಏನೂ ಕಾಣಿಸದು, ಈಗ ದನಿಯೂ ಕೇಳಿಸದು.

ಕೋಗಿಲೆಯೇ ಹಾಗೆ. ಸಣ್ಣಾಸಾಮಾನ್ಯಕ್ಕೆ ಅದನ್ನು ಕಾಣಲಾಗುವುದಿಲ್ಲ. ಕಂಡಾಗ ಅದು ಉಲಿಯುತ್ತಿರುವುದಿಲ್ಲ. ಆದರೆ ಇಂದು, ಇಷ್ಟು ಹೊತ್ತಾದರೂ ಅದನ್ನು ಕಾಣಲಾಗಿರಲಿಲ್ಲ. ಇದೊಂದು ಮಾಯೆಯೇ ಇರಬಹುದೆ? ಕೋಗಿಲೆ 'ವಾಯ್ಬುಕೇ' ಎಂದುಲಿಯುವುದು ಸಾಧ್ಯವೆ? ಸಾಧ್ಯವಲ್ಲ ಎಂದಾದರೆ ಇದೀಗ ನಾನು ಕೇಳಿದ್ದು? ಆದರೆ ನನಗೆ ಕೇಳಿಸಿದುದು ವಾಸ್ತವ ದನಿಯಾದರೆ ಹೆಂಡತಿಗೇಕೆ ಕೇಳಿಸಲಿಲ್ಲ? ಮಕ್ಕಳಿಗೇಕೆ ಕೇಳಿಸಲಿಲ್ಲ? ಕೇಶವನ್‌ರಲ್ಲಿ ಉದ್ಭವಿಸುತ್ತಿದ್ದ ಪ್ರಶ್ನೆಗಳಿಗೆ ಕೊನೆಯೇ ಇರಲಿಲ್ಲ. ಇದು ಕಾಲದ ಕರೆಯೆ? ಪ್ರಕೃತಿಯ ಮೊರೆಯೆ? ಭ್ರಮೆಯ ತೆರೆಮರೆಯೆ? 'ಕುಹೂ'ದ ಅಲೌಕಿಕತೆ ಎಲ್ಲಿ, 'ವಾಯ್ಬುಕೇ'ಯ ಲೌಕಿಕತೆ ಎಲ್ಲಿ-ಎಲ್ಲಿಂದೆಲ್ಲಿಯ ಸಂಬಂಧ? ಸರಸರ, ಏನೋ ನಿರ್ಧಾರ ಮಾಡಿಕೊಂಡವರಂತೆ, ಕೇಶವನ್ ಮನೆಯ ಟೆರೇಸ್ ಹತ್ತಿ ಕುಳಿತರು. ನೇರಳೆ ಗಿಡದ ಮೇಲು ತುದಿಗಳು ಟೆರೇಸ್‌ನ ಎತ್ತರಕ್ಕೇ ಇವೆ. ಟೆರೇಸ್‌ನಲ್ಲಿ ಒಂದು ಕಡೆ ಮರೆಯಾಗಿ ನಿಂತು ಕೋಗಿಲೆಯನ್ನು ಅರಸಿದರು. ಗಿಡ, ಗಾಳಿಗೆ ತೂಗಾಡುತ್ತಿದ್ದ ಪರಿ ನೋಡುತ್ತ, ಎಲೆಗಳ ಹಿಂಡಲ್ಲೆಲ್ಲೋ ಕೋಗಿಲೆ ಇದ್ದಿರಬೇಕೆಂದು ಹುಡುಕಿಯೇ ಹುಡುಕಿದರು. ಒಮ್ಮೆಲೇ 'ವಾಯ್ಬುಕೇ, ವಾಯ್ಬುಕೇ' ದನಿ ಕೇಳಿಸಿತು. 'ಹ್ಲಾಂ, ಇಲ್ಲೇ ಇದೆ' ಎಂದು ಮರದ ಎಲೆ ಹಿಂಡಲ್ಲಿ ಕಣ್ಣಿಟ್ಟರು. ಸರಸರ ಓಡಿಯಾಡುತ್ತಿರುವ ಪುಟ್ಟ ಕೋಗಿಲೆಯ ಮರಿ. ಅದನ್ನು ನೋಡುತ್ತ ಕೇಶವನ್‌ರ ಎದೆ ತುಂಬಿ





ಬಂತು. ಆ ಮರಿಯನ್ನು ಮುಟ್ಟಬೇಕು, ಮೈ ದಡವಬೇಕು ಎಂಬ ಆಸೆಯಾಯಿತು. ಮೆಲ್ಲಗೆ, ಈ ಟೊಂಗೆ ಹಿಡಿದು, ಆ ಎಲೆಗಳ ಗುಂಪತ್ತ ಹೋದರೆ? ಈ ಯೋಚನೆ ಬಂದ ತಕ್ಷಣ ಇವರು ಕಾರ್ಯಪ್ರವೃತ್ತರಾದರು. ಟೆರೇಸಿನ ಅಡ್ಡಗೋಡೆಯನ್ನು ಆಧಾರ ವಾಗಿ ಹಿಡಿದು, ಭದ್ರವಾದ ಟೊಂಗೆಯನ್ನು ಆಧಾರವಾಗಿ ಹಿಡಿದುಕೊಂಡು, ಇನ್ನೊಂದು ಗಟ್ಟಿ ಟೊಂಗೆಯನ್ನೇರಿ ಎಲೆಗಳು ಹಿಂಡುಗಟ್ಟಿದ್ದ ಜಾಗೆಗೆ ಬಂದರು. ಅದೆಷ್ಟು ಸಾವಕಾಶವಾಗಿ ಸದ್ದಿಲ್ಲದೆ ಬಂದರೆಂದರೆ, ಆ ಹೆದರುಪುಕ್ಕ ಕೋಗಿಲೆ ಮರಿ ಕೂಡ ಇವರನ್ನು ಗಮನಿಸಲಿಲ್ಲ. ಆ ಎಲೆ ಹಿಂಡಲ್ಲಿ, ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ ಕೋಗಿಲೆ ಮರಿ ಓಡಿಯಾಡುವುದು. ಇವರು ಅಲ್ಲೇ, ತುರುಕಾಲಲ್ಲಿ ಕುಳಿತು, ಅದೇನು ಮಾಡುವುದೆಂದು ಗಮನಿಸಿದರು. ಕೋಗಿಲೆ ಆಕಾಶದತ್ತ ನೋಡಿತು. ಇವರೂ ನೋಡಿದರು. ಟೆರೇಸ್ ಮೇಲಿಂದ ಇವರು ಆಕಾಶವನ್ನು ಅನೇಕ ಸಾರಿ ನೋಡಿದ್ದರು. ಆದರೆ ನೇರಳೆ ಮರದ ಮೇಲಿನಿಂದ ಆಕಾಶ ಬೇರೆಯದೇ ಆಗಿ ತೋರಿತು. ಎಲೆಗಳ ನಡುವೆ ಕಣ್ಣುಗಳನ್ನಿಟ್ಟು ಅವರು ಕಾಣುತ್ತಿದ್ದ ಆಕಾಶ, ಕೋಗಿಲೆ ಕಂಡಂತೆ ಕಾಣಲೆತ್ನಿಸಿದ ಆಕಾಶ, ಎಂದಿನದಲ್ಲ ಅನಿಸಿತು. ಆಕಾಶವನ್ನು ತನ್ನೊಳಗೆ ತುಂಬಿಕೊಳ್ಳುತ್ತ, ಕೋಗಿಲೆ ನಕ್ಕಂತೆ ತೋರಿತು. ಆ ಕ್ಷಣವನ್ನು ವರ್ಣಿಸುವುದು ಬಲುಕಷ್ಟ. ಒಂದು ಕೋಗಿಲೆಯ ನಗು ಹೇಗಿರುವುದೆಂದು ಹೇಳುವುದು? ಅದು ಕೇಶವನ್‌ರನ್ನು ಅರಿಯದ ಲೋಕಗಳಿಗೆ ಕೊಂಡೊಯ್ಯಿತು. ಆ ಆಕಾಶದ ಅಮೂರ್ತ ಅನುಭವವನ್ನೆಲ್ಲ ತುಂಬಿಕೊಂಡ ಹಾಗೆ, ಒಳಗೊಂಡ ಹಾಗೆ, ಆಗಸದ ಕಡೆಗೇ ದನಿ ಎತ್ತಿ ಕೋಗಿಲೆ, 'ಕುಹೂ ಕುಹೂ' ಎಂದು ಉಲಿಯಲಾರಂಭಿಸಿತು. ಅದೆಂಥ ಮಂಜುಳ ನಾದ! ಕೇಶವನ್ ಆ ಅಪೂರ್ವ ಕ್ಷಣ ಎಲ್ಲವನ್ನೂ ಮರೆತರು. ಕೆಳಗಿನಿಂದ ಟೆರೇಸ್ ಮೇಲೇರಿ ಬರುವವರೆಗೂ ಅವರಿಗೆ, 'ವಾಯ್ಸುಕೇ' ಎಂದು ಹಾಡುತ್ತಿರುವ ಕೋಗಿಲೆಯನ್ನು ಕಂಡುಹಿಡಿಯುವ ತವಕವಿತ್ತು, ಹೆಂಡತಿ, ಮಕ್ಕಳಿಗೆ ತನ್ನದು ಭ್ರಮಾಧೀನತೆಯಲ್ಲ ಎಂದು ಸಿದ್ಧಮಾಡಿ ತೋರಿಸುವ ಛಲವಿತ್ತು. ಆದರೆ ಈಗ ಅವರಿಗೆ ಅದಾವುದೂ ಬೇಕಾಗಿಯೇ ಇರಲಿಲ್ಲ. ಯಾವತ್ತೂ ಅವರು ಒಂದು ಕೋಗಿಲೆಯ ಹಾಡನ್ನು ಇಷ್ಟು ಹತ್ತಿರದಿಂದ ಕೇಳಿಸಿಕೊಂಡಿರಲಿಲ್ಲ. 'ವಾಯ್ಸುಕೇ'ಯ ಗದ್ದಲ ತನ್ನೊಳಗಿನದೇ ಇರಬೇಕು, ಕೋಗಿಲೆಯ ಈ ಪುಟ್ಟ ಮೈಯೊಳಗೆ ಇರುವುದು 'ಕುಹೂ' ದನಿ ಮಾತ್ರ, ನಿಜಕ್ಕೂ ನಾನು ಹುಚ್ಚನಂತೆ ವರ್ತಿಸಿ ಬಿಟ್ಟೆ ಎಂದು ಕೇಶವನ್ ವಿಷಾದಿಸಿದರು.

ಹೀಗೆ ಹೇಳಿಕೊಳ್ಳುವಾಗ, ಸಹೋದ್ಯೋಗಿಗಳೊಡನೆ ನಡೆಸಿದ ಹುಚ್ಚು ಜಗಳಗಳೂ ಅವರ ನೆನಪಲ್ಲಿ ತೇಲಿಹೋದವು. ಎಲ್ಲವೂ ಹುಡುಗಾಟಿಕೆ, ಹುಂಬತನ ಎನ್ನಿಸಿ ನಾಚಿಕೆಯಾಯಿತು. ಆ ಪುಟ್ಟ ಗಂಧರ್ವನ 'ಕುಹೂ' ನಾದದಲ್ಲಿ ಕ್ಷಮೆಯ ಹಣತೆಗಳನ್ನಿಟ್ಟು, ಅವನ್ನು ತೇಲಿಬಿಟ್ಟರು. ದನಿ ಎತ್ತಿ, 'ಕುಹೂ ಕುಹೂ' ಎಂದು ಆಕಾಶವನ್ನೆಲ್ಲ ಕೋಗಿಲೆ, ನಾದದಿಂದ ತುಂಬಿತು. ಭೂಮಿಗೆ 'ಕುಹು ಕುಹೂ' ಎಂಬ ಹಾಡಿನ ನವಿರು ಬಟ್ಟೆ ಹೊದೆಸಿ ಮಲಗಿಸಿತು. ಭೂಮಿ, ಆ ಮರಿಯ ಕೈಯ ಕೂಸಾಗಿತ್ತು. ಕೋಗಿಲೆ ಅದನ್ನು ತಟ್ಟಿ ಮಲಗಿಸುತ್ತಿತ್ತು. ಅರೆಕ್ಷಣ ಮೌನ. ಕೆಳಗೆ ನೋಡುತ್ತ ಕೋಗಿಲೆ 'ವಾಯ್ಸುಕೇ' ಎಂದು ಉಲಿಯಿತು. ಅಥವಾ ಕೋಗಿಲೆ ಮರಿ ಕತ್ತು ಬಗ್ಗಿಸಿದಾಗ ಹಾಗೆ ಕೇಳಿಸುವುದೆ? ಈಗ ಮಾತ್ರ ಕೇಶವನ್‌ರಿಗೆ ದಿಗ್ಭ್ರಮೆಯಾಗಿ ಹೋಯಿತು.

ಇದೇನು ಆಟ! ಇಷ್ಟು ಹೊತ್ತೂ ಅನುಭವಿಸಿದ ಆ ಶಾಂತಿ, ಆ ಪ್ರಸನ್ನತೆ, ಎಲ್ಲವನ್ನೂ ಮೀರಿದ, ಶಬ್ದದ ಮೂಲಕವೇ ಶಬ್ದಾತೀತಕ್ಕೆ ಕರೆದೊಯ್ವ ಕೋಗಿಲೆಯ ಹಾಡೆಲ್ಲಿ! ಈ 'ವಾಯ್ಚುಕೇ'ಯ ಕೀಟಲೆ ಎಲ್ಲಿ! ಕೋಗಿಲೆ ಮರಿ ಇವರತ್ತ ನೋಡಿ ನಕ್ಕಂತೆ ಭಾಸವಾಯಿತು. ಇಲ್ಲ, ಅದು ನನ್ನನ್ನು ನೋಡಿರಲಾರದು. ನೋಡಿದರೆ, ಆ ಕ್ಷಣ ಅದು ಇಲ್ಲಿರಲಾರದು. ಆದರೆ ಅದರ ನೋಟದಲ್ಲೊಂದು ನೋವಿತ್ತು, ತಾನು ಹೀಗೂ ಹಾಡಬೇಕಾಗಿ ಬಂದ ಬಗ್ಗೆ ಬೇಸರವಿತ್ತು. ಅಷ್ಟರಲ್ಲೇ ಅದು, ಮತ್ತೆ, ಆಕಾಶದತ್ತ ನೋಡುತ್ತ ಮೈಮರೆಯಿತು. ಜೀವಕ್ಕೆ ಜೀವವೇ ಸ್ಪಂದಿಸುವಂತೆ, ಆ ಪುಟ್ಟ ಶರೀರವೇ ಕೊರಳಾದಂತೆ, ಕೋಗಿಲೆ ಮರಿ 'ಕುಹೂ ಕುಹೂ' ಎಂದು ದನಿಯೆತ್ತಿ ಹಾಡಹೊಳೆ ಹರಿಸಲಾರಂಭಿಸಿತು. ಆ ಹಾಡಿನ ಹೊಳೆಯಲ್ಲಿ ಎಲ್ಲವೂ ತೇಲುತ್ತಿದೆ, ಇಡಿಯ ಜಗತ್ತು ಪುಟ್ಟ ದೋಣಿಯಂತಾಗಿ, ಜಗದೊಳಗಿನ ಜನರೆಲ್ಲ ಅದರಲ್ಲಿ ಕೂತ ಪಯಣಿಗರಾಗಿ, ಈ ಕೋಗಿಲೆ, ಆ ದೋಣಿಯ ಅಂಚಲ್ಲಿ ಕುಳಿತ ಪಥದರ್ಶಿಯಾಗಿ, ಎಲ್ಲವೂ ಕರಗುತ್ತಿರುವುದನ್ನು ಕೇಶವನ್ ಕಣ್ಣಾರೆ ಕಂಡರು. ಮುಚ್ಚಿದ ಕಣ್ಣುಗಳೊಳಗೆ, ಒಳಗಣ್ಣುಗಳ ಎದುರು. ಹೀಗೇ ಕೆಲಕ್ಷಣಗಳು ಕಳೆದುಹೋಗಿರಬಹುದು. ಒಮ್ಮೆಲೇ 'ಕುಹೂ' ದನಿ ನಿಂತಿತು. ಕೋಗಿಲೆ ಮರಿ, ಅವಸರದಿಂದ ಎಂಬಂತೆ, ರೆಕ್ಕೆಗಳನ್ನು ಕೊಡವಿ, ಹಾರಲಾರಂಭಿಸಿತು. ಇವರು, ಆಕಾಶದಲ್ಲಿ ಅದೊಂದು ಪುಟ್ಟ ಬಿಂದುವಂತೆ ಕಾಣುವವರೆಗೂ ಅದನ್ನೇ ನೋಡುತ್ತ 'ಕುಹೂ' ಎಂದು ಉಲಿದರು.

ಕವಿತೆಯು ಹಾಗೇ. ಪರಿಚಿತವಾದುದರ ಬೆನ್ನು ಹತ್ತಿ ಅಪರಿಚಿತ ಎಡೆಗಳಿಗೆ ಪ್ರಯಾಣ. ರಕ್ತ, ಮಾಂಸ, ಚಿಂತನೆಯ ಚಿಗುರುಗಳ ವ್ಯಕ್ತಿ-ಪ್ರಪಂಚದ ನಿರ್ಮಾಣ. ನೋವು-ನಲಿವುಗಳ, ಹಿಗ್ಗು-ಹೆದರಿಕೆಗಳ, ಭಾವ-ಭಾವನೆಗಳ ಜೊತೆಗೆ ಹದವರಿದ ಆಟ. ಓದುವವರ ಏಕಾಂತಕ್ಕೆ ಅವು ತಂಪೆರೆಯಲೆಂಬ ಆಸೆ. ಅದು ಹಿಡಿಸಿದಾಗ ಬೆರಗು. ಮತ್ತೆ ಸಂಚಾರ - ಮತ್ತೆ ಹುಡುಕಾಟ.



(ಚಿಂತಾಮಣಿ ಕೊಡ್ಲೆಕೆರೆ).

ವರ್ತಮಾನದ ಮೆಲುಕು - 7



ಎಂ. ವ್ಯಾಸ


ಗೋರಿ



ಕಳೆದ ನಾಲ್ಕು ದಶಕಗಳಿಂದ, ಅತ್ಯಂತ ಸೂಕ್ಷ್ಮ ಸಂವೇದನೆಯ ತಲ್ಲಣ, ಆಘಾತಗಳನ್ನು ಶಬ್ದಗಳಿಂದ ಸ್ಪರ್ಶಿಸುತ್ತ ಬಂದಿರುವ ಅಪರೂಪದ ಕತೆಗಾರ, ಎಂ.ವ್ಯಾಸ. ಅವರ ಮುನ್ನೂರಕ್ಕೂ ಹೆಚ್ಚು ಕತೆಗಳು ನಾಡಿನ ಎಲ್ಲ ಪತ್ರಿಕೆಗಳಲ್ಲಿ ಅಚ್ಚಾಗಿವೆ. ದುರ್ಗಾಪುರ, ಶಂಕರೀನದಿ, ಬೆಳದಿಂಗಳಿನ ಕಿಡಿಗೆ ಪ್ರಜ್ವಲಿಸುವ ಮನಸ್ಸಿನ ಕಾಡು, ವಿಹ್ವಲ ಏಕಾಂಗಿ ಹೆಂಗಸರು, ಆತ್ಮ ಲೋಲುಪತೆಯ ಕುರೂಪದಲ್ಲಿ ತೆವಳುವ ಗಂಡಸರು,..... ಇದು ವ್ಯಾಸ ಪ್ರಪಂಚ. ವೈಭವವನ್ನು ಕಂಡು ಕಂಗೆಡುವ ದುರ್ಬಲನ ನೋವು, ಶಬ್ದಕ್ಕೆ ಹಿಂಜರಿವ ಉಮ್ಮಳ-ವ್ಯಾಸರ ಕಥೆಗಳಿಂದ ಹೊಮ್ಮುವ ಸ್ವರಗಳು. ಅಸಂಖ್ಯ ಪತ್ರಿಕೆಗಳಲ್ಲಿ ಬಿಡಿ ಬಿಡಿಯಾಗಿ ಪ್ರಕಟವಾದ ಅವರ ಮುನ್ನೂರಕ್ಕೂ ಹೆಚ್ಚು ಕತೆಗಳಿಂದ ಆಯ್ದ ಹತ್ತಾರು ಕತೆಗಳನ್ನು ಸಂಗ್ರಹ ರೂಪದಲ್ಲಿ, ಅವರ ಮೊಮ್ಮಕ್ಕಳು, ಈಚೆಗೆ ಹೊರತಂದಿದ್ದಾರೆ. ಇದ್ದಾಗಲೇ ನಾಡಿನ ಮರವೆಗೆ ತುತ್ತಾಗಿರುವ ಈ ಸ್ವೋಪಜ್ಞ ಸಾಹಿತಿಯ ಕತೆಯೊಂದನ್ನು ಕೊಡುತ್ತಿದ್ದೇವೆ.

ಬದುಕು ಅಂದರೆ ಕಲ್ಪನೆಯ ತೆಳು ನೆರಳು... ಇರಲಿ, ನಿಮಗೊಂದು ಕತೆ ಹೇಳುತ್ತೇನೆ: ನಾನು ವಾಸುದೇವ ಪಾಳ್ಯತ್ತಾಯ. ನನಗೆ ನನ್ನ ಯೌವನದಲ್ಲಿ ಹುಚ್ಚು ಹಿಡಿದಿತ್ತು ಎಂದರೆ ಸರಿಯಲ್ಲ. ನನ್ನ ಮೂವತ್ತೈದನೇ ವಯಸ್ಸಿನಲ್ಲಿ ಒಮ್ಮೆ ರಕ್ತದ ಒತ್ತಡ ಹೆಚ್ಚಾಗಿ, ಯದ್ವಾತದ್ವಾ ವರ್ತಿಸಿದೆ ಎಂದರೆ ಸರಿ. ದುರ್ಗಾಪುರದ ಪೇಟೆಯಲ್ಲಿ ನನಗೊಂದು ಮೆಡಿಕಲ್ ಶಾಪ್ ಇದೆ. ನಾನು ಕಳ್ಳ ಸಾಗಾಣಿಕೆದಾರರೊಂದಿಗೆ ಕೂಡಿ, ಹಣ ಮಾಡಿ, ಈ ಶಾಪ್ ತೆರೆದೆ ಎಂದರೆ ಸರಿಯಲ್ಲ. ಯಾರದೋ ಹಣ ಹಾರಿಸಿ ಶಾಪ್ ತೆರೆದೆ ಎಂದರೆ ಅದೂ ಸರಿಯಲ್ಲ. ಶಾಂತ ಎಂಬ ಹುಡುಗಿಯನ್ನು-ಕಪ್ಪಗಿನ ಹುಡುಗಿಯನ್ನು-ಮದುವೆಯಾಗಿ, ವರದಕ್ಷಿಣೆಯ ಹಣದಿಂದ ಶಾಪ್ ತೆರೆದೆ ಎಂದರೆ ಸರಿ.

ನನ್ನ ಶಾಪಿನ ಎದುರುಗಡೆ ಗಣೇಶ ಮಯ್ಯ ಎಂಬುವನ 'ಗಣೇಶ್ ಕಾಫಿ ಕ್ಲಬ್' ಇದೆ. ಅದು ನಾನು ಶಾಪ್ ತೆರೆದಾಗಲೂ ಇತ್ತು. ಅವನ ಪರಿಚಯವಾಗಿ ಬಹಳ ವರುಷಗಳಾಗಿವೆ. ಎಷ್ಟು ವರ್ಷ ಎಂದರೆ ನೆನಪಿಲ್ಲ; ಪ್ರೀತಿ ಇದೆ ಎಂದಲ್ಲ; ಸ್ನೇಹವಿದೆ ಎಂದೂ ಅಲ್ಲ. ನಾನು ಮದುವೆಯಾಗಿ ವ್ಯಾಪಾರ ಆರಂಭಿಸಿದವನು. ಅವನು ವ್ಯಾಪಾರ ಆರಂಭಿಸಿ ಮದುವೆಯಾದವನು. ಹಾಗಾಗಿ ಅವನ ಹೆಂಡತಿಗೂ, ನನ್ನ ಹೆಂಡತಿಗೂ ರೂಪದಲ್ಲಿ ಬಹಳ ವ್ಯತ್ಯಾಸವಿದೆ. ಅವನು ಮನೆ ಮಾಡಿದ್ದು ಮದುವೆಯಾದ ಮೇಲೆ ಮತ್ತು ನಮ್ಮ ಕಂಪೌಂಡಿನಲ್ಲೇ. ನಮ್ಮ ಕಂಪೌಂಡಿಗೆ ನಾರಾಯಣರಾವ್ ಕಂಪೌಂಡ್ ಎಂದು ಹೆಸರು. ನಮ್ಮ ಮನೆಯ ಎದುರಿನ ಮನೆಯೇ ಕಾಕತಾಳೀಯವಾಗಿ ಅವನದಾಯಿತು. ಅವನ




ಹೆಂಡತಿಯನ್ನು ನಾನು ಮೊದಲು ನೋಡಿದ್ದು, ಆತ ಮನೆ ಒಕ್ಕಲಾದ ದಿನವೇ. ನನಗೆ ಆಮಂತ್ರಣವಿತ್ತು. ನಾನವಳನ್ನು ಮೊದಲು ನೋಡಿದಾಗ ನನಗೆ ಕಾಣಿಸಿದುದು ಅವಳ ವಿಶಾಲವಾದ ನೀಲಿ ಕಣ್ಣುಗಳು. ಹೆಂಗಸರಿಗೆ ನೀಲಿ ಕಣ್ಣುಗಳಿರುತ್ತವೆಂದು ನನಗೆ ತಿಳಿದಿರಲಿಲ್ಲ. ಶಾಂತಳಿಗೂ ತಿಳಿದಿರಲಿಲ್ಲವೇನೋ. ನಾವಿಬ್ಬರೂ, ಬೇರೆ ಬೇರೆ ಕಾರಣಗಳಿಗಾಗಿ ಅವಳನ್ನು ದುರುಗುಟ್ಟಿನೋಡಿದೆವು. ಆ ದಿನ, ಅವರ ಮನೆಯಲ್ಲಿ ಗಣಪತಿ ಹೋಮವಿತ್ತು. ಹೊಗೆ ಕೋಣೆಯೊಳಗೆ ತುಂಬುತ್ತಿತ್ತು. ನನ್ನ ಕಣ್ಣುಗಳಲ್ಲಿ ನೀರು ತುಂಬುತ್ತಿತ್ತು. ಸುಂದರಿ ಹೆಂಡತಿಯನ್ನು ಪಡೆಯಲಾಗಲಿಲ್ಲವಲ್ಲ ಎಂಬ ದುಃಖ ನನ್ನ ಕಣ್ಣೀರಿಗೆ ಬೇರೆ ಅರ್ಥದಲ್ಲೂ ಒತ್ತಡ ಕೊಟ್ಟಿತು. ನಾನು, ಬಹುಶಃ, ಎಲ್ಲರಿಗಿಂತಲೂ ಹೆಚ್ಚು ಕಣ್ಣೀರು ಸುರಿಸಿದೆ. ತೀರ್ಥ, ಪ್ರಸಾದ ಸ್ವೀಕರಿಸುವಾಗ ಅವಳ ತೀರಾ ಸಮೀಪಕ್ಕೆ ಹೋದೆ. ಅವಳ ಮೈಬಣ್ಣ ಕೆಂಪಗಿತ್ತು. ಅವಳ ತುಟಿಗಳಲ್ಲಿ ಮೌನಗಾನವಿತ್ತು; ಅವಳ ಕೂದಲ ರಾಶಿಯಲ್ಲಿ ಅಂಧಕಾರದ ಗೌಪ್ಯವಿತ್ತು; ಸ್ವರ್ಗದಷ್ಟು ಏಕಾಂತತೆಯಿತ್ತು. ಬಹುಶಃ ಪರಿಮಳವೂ ಇತ್ತೇನೋ. ಗಣೇಶ ಮಯ್ಯ ಕಪ್ಪು ಮುಖದವನಾಗಿದ್ದ ಮತ್ತು ಕೆಂಪು ಕಣ್ಣುಗಳನ್ನು ಹೊಂದಿದ್ದ. ಮೊದಲೇ ಹೇಳಿದಂತೆ, ಪರಿಚಯ ವಿತ್ತು ಅಂದರೆ ದ್ವೇಷವಿದ್ದರೂ ಪರಿಚಯವಿತ್ತು ಅನ್ನಬಹುದಲ್ಲ! ಬಹುಶಃ ನಾನು ಅವನನ್ನು ಮೊದಲ ಬಾರಿಗೆ ದ್ವೇಷಿಸಿದ್ದು ಆ ದಿನವಾಗಿರಬಹುದು.

ಶಾಂತಳೂ, ಆ ದಿನದಿಂದ, ಮಯ್ಯನ ಹೆಂಡತಿಯನ್ನು ದ್ವೇಷದಿಂದಲೇ ಪರಿಚಯ ಮಾಡಿಕೊಂಡಿರಬೇಕು. ಅವಳ ಹೆಸರು ರತ್ನ ಎಂದಾಗಿತ್ತು. ನಾನು ಶಾಂತಳನ್ನೂ ಆ ದಿನ ದಿಂದಲೇ ದ್ವೇಷಿಸಿದೆ ಎಂದರೆ ಸರಿಯಲ್ಲ. ಅವಳ ಹಣದಿಂದ ನಾನು ಶಾಪ್ ತೆರೆದೆ, ಇಲ್ಲವಾದರೆ, ಯಾರಾದರೊಬ್ಬ ಡಾಕ್ಟರ ಬಳಿಯಲ್ಲಿ ಊಳಿಗ ದವನ ಹಾಗೆ, ಗುಲಾಮನ ಹಾಗೆ ನಾನು ಇರ ಬೇಕಾಗಿತ್ತು ಎಂದು ಅವಳು ಭಾವಿಸಿದ್ದುದು ನನಗೆ ತಿಳಿದಿದ್ದುದು ಕಾರಣ, ಎಂದರೆ ಸರಿ. ನನ್ನ, ಅವಳ ಮೊದಲ ರಾತ್ರಿಯೇ ನನಗೂ ಅವಳಿಗೂ ಸರೀ ಹೊಂದಾಣಿಕೆಯಾಗಲಿಲ್ಲ. ಅವಳ ತಾಯಿ, "ಬಿಳಿ ಆದರೆ ಏನು ಚಂದ, ಸುಣ್ಣ ಬಿಳಿ, ಕಣ್ಣಿಗೆ ಹಾಕಿದರೆ ಉರಿ ಉರಿ" ಅನ್ನುತ್ತಿದ್ದಳು. ಅವಳೂ ಕಪ್ಪಗಿದ್ದಳು. ನಾನು ಬೆಳ್ಳಗಿದ್ದೆ. ಸುಂದರನಾಗಿದ್ದೆ. ನನ್ನ ಸೌಂದರ್ಯದ ಅಹಂಕಾರವನ್ನು ಪ್ರದರ್ಶಿಸಲು ಶಾಂತ ನನಗೆ ಅವಕಾಶ ಕೊಡಲಿಲ್ಲ ಎಂದರೆ ಸರಿಯಲ್ಲ. ನನಗೆ ಅವಳೊಡನೆ ಮಾತುಕತೆಯಲ್ಲಾಗಲೀ, ಶಯ್ಯಾಗೃಹದಲ್ಲಾಗಲೀ, ಹಾಸುಗೆಯಲ್ಲಾಗಲೀ ಗಂಡಿನ ಹಾಗೆ ವರ್ತಿಸಲು ಸಾಧ್ಯವಾಗಲಿಲ್ಲ ಎಂದರೆ ಸರಿ. ಅವಳು ಬಟ್ಟೆ ಬಿಚ್ಚಿದಾಗ ನಾನು ಶವದ ಹಾಗೆ ಬಿಳಿಚಿಕೊಳ್ಳುತಿದ್ದೆ ಅಂದರೆ ಅದೂ ಸರಿ.

ನಾನು ಇನ್ನೊಮ್ಮೆ ಹೇಳುತ್ತೇನೆ: ಅವಳು ಬೆತ್ತಲಾದಾಗ ನಾನು ಅರ್ಧ ಶವವಾಗುತ್ತಿದ್ದೆ, ಅರ್ಧ ಮನುಷ್ಯನಾಗುತ್ತಿದ್ದೆ. ಕೀಳರಿಮೆ ಹೇಗೆ ವ್ಯಕ್ತಿತ್ವವನ್ನು ನಾಶಮಾಡುತ್ತದೋ ಹಾಗೆಯೇ, ಮೇಲರಿಮೆ ಕೂಡ ವ್ಯಕ್ತಿತ್ವವನ್ನು ನಾಶ ಮಾಡುತ್ತದೆ. ನನ್ನ ರಂಗದಲ್ಲಿ ನನ್ನ ಹೆಜ್ಜೆಗಳು ಅಮಲು ಕೋರನ ಬಲಹೀನ ಹೆಜ್ಜೆಗಳಾಗಿದ್ದುವು. ಹೀಗೆ ಹೇಳಿದರೆ, ನಿಮಗೆ ಕೆಲವರಿಗೆ, ಈ ಮಾತಿನ ಪೂರ್ಣ ಪಾಠ ತಿಳಿಯಲಾರದು. ತಿಳಿಯದೇ ಇದ್ದರೆ ಇನ್ನಷ್ಟು ಸ್ಪಷ್ಟವಾಗಿ. ನಾನೇನನ್ನೂ ಹೇಳಲಾರೆ. "ನೋಡಲು ರಂಗ ತಿಳಿಯಲು ಮಂಗ" ಅನ್ನುತ್ತಿದ್ದ ಶಾಂತಳ ಮಾತು ನನ್ನನ್ನು ಮತ್ತಷ್ಟು ಆಳವಾದ ಪ್ರಪಾತಕ್ಕೆ ತಳ್ಳುತ್ತಿತ್ತು. ಸೌಂದರ್ಯ ಕುರೂಪವನ್ನು ದ್ವೇಷಿಸುವಂತೆ ಕುರೂಪವೂ ಸೌಂದರ್ಯವನ್ನು ದ್ವೇಷಿಸುತ್ತದೆ ಎಂದು ನನ್ನ ತಿಳಿವಿಗೆ ಬಂತು.

ಮಯ್ಯ, ನಾರಾಯಣರಾವ್ ಕಂಪೌಂಡಿನಲ್ಲಿ ಮನೆ ಮಾಡಿದ ದಿನ ರತ್ನಳನ್ನು ನೋಡಿದೆ

ಎಂದೆನಲ್ಲ, ಆ ದಿನದಿಂದಲೇ ನಾನವಳನ್ನು ಪ್ರೀತಿಸಲಾರಂಭಿಸಿದೆ. ನನ್ನ ಬದುಕಿಗೆ ಪ್ರೀತಿ ಶಬ್ದದ ಮೊದಲ ಪ್ರವೇಶವಾದುದು ನನ್ನ ನಲುವತ್ತೈದನೇ ವಯಸ್ಸಿಗೆ ಎಂದರೆ ನೀವು ನಂಬಲಾರಿರಿ. ಆದರೆ ಅದು ನಿಜ. ನನಗೆ ರಕ್ತದ ಒತ್ತಡ ಆರಂಭವಾದುದು ನನ್ನ ಮೂವತ್ತೈದನೇ ವರ್ಷದಲ್ಲಿ ಎಂದೆನಲ್ಲ...? ಆ ವರುಷವೇ ನನಗೆ ಮದುವೆಯಾದುದು. ಹೆಂಡತಿಯನ್ನು ಯಾವ ವಿಧದಲ್ಲೂ ಪ್ರೀತಿಸುವುದು; ಕೊನೆಯ ಪಕ್ಷ ಕನಿಕರದಿಂದಲಾದರೂ ಪ್ರೀತಿಸುವುದು ಸಾಧ್ಯವಾಗದ ಮೇಲೆ ಹಣವನ್ನು ಪ್ರೀತಿಸಲಾರಂಭಿಸಿದೆ. ಒಂದು ಪೈಸೆಯನ್ನೂ ಬಿಡದೆ, ದಾನ ಕೊಡದೆ, ಜಿಪುಣನಾದೆ.




ಮಯ್ಯನಿಗೆ ಮೊದಲಿನಿಂದಲೂ ಒಂದು ಬಗೆಯ ಚರ್ಮರೋಗವಿತ್ತು. ಅವನ ಕಪ್ಪು ಮೈಯಲ್ಲಿ, ಬಿಳಿ ಕಲೆಗಳು ಯಾವಾಗಲೂ ಕಂಡುಬರುತ್ತಿದ್ದುವು. ಆತ ಹೋಟೆಲಿನಲ್ಲಿ ಕುಳಿತು ಸದಾ ತುರಿಸುತ್ತಿರುತ್ತಿದ್ದ. ನಾನು, ನನ್ನ ಶಾಪಿಗೆ ಬಂದವರಿಗೆಲ್ಲಾ, ಅವನಿಗೆ ವಿ.ಡಿ. ಎಂದು ಪ್ರಚಾರ ಮಾಡಿ ಅವನ ವ್ಯಾಪಾರವನ್ನು ಅರ್ಧಕ್ಕರ್ಧ ತಗ್ಗಿಸಿದೆ. ಪ್ರತಿಯಾಗಿ, ನಾನು ಕುಡುಕನೆಂದೂ, ಹೆಣ್ಣುಮರುಳನೆಂದೂ ಅವನೂ ಪ್ರಚಾರ ಮಾಡಿದ. ನಮ್ಮ, ನಮ್ಮ ಗಿರಾಕಿಗಳ ಮುಂದೆ ನಾವು, ಮರುಳರ ಹಾಗೆ ಭರಪೂರ ಅಪಪ್ರಚಾರದಲ್ಲಿ ನಿರತರಾದೆವು. ಆದರೂ ನಾವು ಪರಸ್ಪರ ದ್ವೇಷಿಗಳ ಹಾಗೆ ವರ್ತಿಸುತ್ತಿರಲಿಲ್ಲ. ನಾನು ಕಾಫಿ, ತಿಂಡಿಗೆ ಅವನ ಬಳಿ-ಅವನು ಔಷಧಿಗಳಿಗಾಗಿ ನನ್ನ ಬಳಿ- ಹೋಗುತಿದ್ದೆ ಮತ್ತು ಬರುತ್ತಿದ್ದ. ಹೀಗೆ ನಮ್ಮ ಹೋಕು-ಬರಕುಗಳನ್ನು ನೋಡಿದವರು ನಮ್ಮ ಅಪಪ್ರಚಾರಗಳನ್ನು ಖಡಾಖಂಡಿತವಾಗಿ ನಂಬುವಂತಾಯಿತು.

ಒಂದು ಬಾರಿ ನಾನು ರತ್ನಳನ್ನು ರೇಪ್ ಮಾಡಲು ಪ್ರಯತ್ನಿಸಿದೆ ಎಂದರೆ ಅದು ಸರಿಯಲ್ಲ. ನಾನವಳನ್ನು ಮಾತನಾಡಿಸಲು ಯತ್ನಿಸಿದೆ ಎಂದರೆ ಅದು ಸರಿ. ಆ ದಿನ ಶಾಂತ ತವರೂರಿಗೆ ಹೋಗಿದ್ದಳು. ನಾನು ಶಾಪಿನ ಬಾಗಿಲು ಮುಚ್ಚಿ, ಮಧ್ಯಾಹ್ನ ಮನೆಗೆ ಹೋದೆ. ರತ್ನ ಮನೆಯ ಮುಂಭಾಗದಲ್ಲಿ ನಿಂತಿದ್ದಳು. ನಾನವಳ ಬಳಿಗೆ ಹೋದೆ. ರತ್ನ ಎಂದೆ. ಮುಗುಳ್ನಕ್ಕಳು. ಬನ್ನಿ ಎಂದಳು. ವರಾಂಡದಲ್ಲಿ ಕುಳಿತುಕೊಂಡೆ. ಶಾಂತಕ್ಕಳಿಗೆ ನನ್ನ ನೋಡಿದರೆ ಆಗೋದಿಲ್ಲ ಎಂದಳು. ಮಯ್ಯರಿಗೂ ನನ್ನ ನೋಡಿದರೆ ಆಗೋದಿಲ್ಲ ಎಂದೆ. ಕಾಫಿ ಕೊಡಲೇ ಎಂದಳು. ಊಟದ ಸಮಯ ಅಂದೆ. ಊಟ ಮಾಡುತ್ತೀರಾ ಎಂದಳು. ತಲೆಯಾಡಿಸಿದೆ. ಅಷ್ಟರಲ್ಲಿ ದೂರದಲ್ಲಿ ಮಯ್ಯ ಬರುತ್ತಿರೋದು ಕಾಣಿಸಿತು. ಮನೆಗೆ ಓಡಿಹೋದೆ. ಮಯ್ಯ, ನಾನು ಮನೆಗೆ ಹೊರಟಾಗಲೇ,

ಗುಮಾನಿಯಿಂದ ನನ್ನ ಹಿಂದೆ ಹೊರಟಿರಬೇಕು. ಹಿಂಬಾಲಿಸಿ ಬಂದ. ನನ್ನ ಓಟ ನೋಡಿದ. ತನ್ನ ಮನೆಗೆ ಬಂದ. ಇನ್ನೇನು ನನ್ನ ಮನೆಗೂ ಬರುತ್ತಾನೆ ಎಂದುಕೊಂಡೆ. ಬಂದರೆ, ಹೊಡೆಯಲು ಕಸಬರಿಕೆ ಕೈಗೆ ಸಿಗೋಹಾಗೆ ಪಕ್ಕದಲ್ಲಿರಿಸಿಕೊಂಡೆ. ಮಯ್ಯ ಬರಲಿಲ್ಲ. ನಾನೂ ಅವನೂ, ಪರಸ್ಪರರು ಮನೆಬಿಟ್ಟು ಹೋಗೋದನ್ನು ಕಾಯುತ್ತಾ, ಆ ದಿನದ ನಮ್ಮ ನಮ್ಮ ವ್ಯಾಪಾರವನ್ನು ಕಳೆದುಕೊಂಡೆವು.

ಒಂದು ದಿನ ಆತ ನನ್ನ ಶಾಪಿಗೆ ಬಂದ. ಗುಟ್ಟು ಮಾತನಾಡುವುದಿದೆ ಎಂದ. ರತ್ನಳ ವಿಚಾರ ಕೇಳುತ್ತಾನೇನೋ ಎಂದು ಭಯವಾದರೂ, ಹೇಳಿ ಎಂದೆ. ನನಗೆ ವಿ.ಡಿ. ಅನ್ನುತ್ತಾರಲ್ಲ ನಿಜವೇ ಎಂದು ಕೇಳಿದ. ನೋಡದೆ ಏನೂ ಹೇಳಲಾಗುವುದಿಲ್ಲ ಎಂದೆ. ನೋಡ್ತೀರಾ ಎಂದ. ಬನ್ನಿ ಎಂದು ಒಳಕೋಣೆಗೆ ಕರೆದುಕೊಂಡು ಹೋದೆ. ಬಟ್ಟೆ ಬಿಚ್ಚಲು ಹೇಳಿದೆ. ಮೊದಲು ನಾಚಿದ. ಬೇಡವಾದರೆ ಬೇಡ ಎಂದೆ. ಒಂದೊಂದಾಗಿ ಬಟ್ಟೆ ಕಳಚಿದ. ತೀರಾ ವಿಕಾರವಾಗಿದ್ದ. ಅದು ವಿ.ಡಿ. ಆಗಿರಲಿಲ್ಲ. ಆದರೆ ಎಂದೆಂದೂ ಗುಣವಾಗದ ಗಂಭೀರ ಚರ್ಮರೋಗವಾಗಿತ್ತು. ಅದಕ್ಕೆ ಔಷಧಿ ಇರಲಿಲ್ಲ. ಇದೇ ಸಮಯ ಎಂದುಕೊಂಡು ನಿದ್ದೆಗುಳಿಗೆಗಳನ್ನು ಕೊಟ್ಟೆ. ಯಾರಿಗೂ ಹೇಳಬೇಡಿ, ನಾಚಿಕೆ ಎಂದೆ. ನಾನೇನೂ ಡಾಕ್ಟರಲ್ಲ, ಆದರೂ ಇದು ವಿ.ಡಿ. ಎಂದೆ. ಆತ ಭಯದಿಂದ ನಡುಗಿದ. ಭಯವಾಗಲೀ, ನಾಚಿಕೆಯಾಗಲೀ, ಮೋಹವಾಗಲೀ, ಕುರೂಪಿ ದೇಹಗಳಿಗೆ ಯಾವುದೂ ಶೋಭಿಸುವುದಿಲ್ಲ. ಕಪ್ಪು ದೇಹದಲ್ಲಿ ಬಿಳಿ ಮಚ್ಚೆಗಳನ್ನು ಪ್ರದರ್ಶಿಸುತ್ತ, ನಾಚಿಕೆಬಿಟ್ಟು ನಿಂತವನನ್ನು ನೋಡಿ ಅಸಹ್ಯವೆನಿಸಿತು. ದೇಹವನ್ನು ಕ್ರಾಸ್ ಆಗಿ ಸೀಳಿದಂತೆ ಅವನ ಜನಿವಾರವಿತ್ತು. ಮುಚ್ಕೊಳ್ಳಿ ಎಂದು ಗದರಿದೆ. ಅವಸರ ಅವಸರವಾಗಿ ಮುಚ್ಚಿಕೊಂಡ. ಮಾತ್ರೆ ಯಾವಾಗ, ಯಾವಾಗ ಎಲ್ಲಾ...? ಎಂದು ಕೇಳಿದ. ರಾತ್ರಿ ಮಲಗುವಾಗ ಎಂದೆ. ಅಸಿಧಾರಾ ವ್ರತ ಮಾಡಬೇಕು ಎಂದೆ. ಮಿಕಿ ಮಿಕಿ ಮುಖ ನೋಡಿದ. ಎರಡನೇ ಆಟ ಸಿನಿಮಾ ನೋಡಬಾರದು ಎಂದೆ. ಇನ್ನೂ ಪೆಚ್ಚಾದ. ಅಂಟು ರೋಗ ಹೆಂಡತಿಗೂ ಬರಬಹುದು ಹಾಗೆ ಎಂದೆ. ತುಳಿಗೆ ಸಕ್ಕ. ಆ ಕ್ಷಣದಲ್ಲಿ ನನಗೆ ವಿಪರೀತ ಸಂತೋಷವಾಯಿತು.

ಇನ್ನೊಮ್ಮೆ ಹೇಳುತ್ತೇನೆ: ನನಗಾಗ ಬಹಳ ಸಂತೋಷವಾಯಿತು. ಆ ಕುರೂಪಿ ದೇಹ ನನ್ನ ರತ್ನಳನ್ನು ಸ್ಪರ್ಶಿಸುವುದನ್ನು ತಪ್ಪಿಸಿದೆ ಎಂದು ಮತ್ತು ಮಯ್ಯ ನಿದ್ದೆಯಲ್ಲಿರುವಾಗ ರತ್ನಳನ್ನು ಸಮೀಪಿಸುವುದು ಸುಲಭ ಎಂದು. ರಾತ್ರಿ ಶಾಂತಳಿಗೂ ನಿದ್ದೆಮಾತ್ರೆಯನ್ನು, ಅವಳು ಕುಡಿಯುವ



ನೀರಿನಲ್ಲಿ ಬೆರೆಸಿ ಕೊಟ್ಟೆ. ಶಾಂತ ಬಹಳ ಬೇಗ ನಿದ್ರಿಸಿದಳು. ಬಾಗಿಲು ತೆರೆದು ಹೊರಗೆ ಬಂದೆ. ಮಯ್ಯನ ಮಲಗುವ ಕೋಣೆಯ ಕಿಟಕಿಯ ಬಳಿ ಬಂದೆ. ಮಯ್ಯ ಗಾಢವಾಗಿ ನಿದ್ರಿಸುತ್ತಿದ್ದ. ರತ್ನ ಹೊರಳಾಡುತ್ತಿದ್ದಳು. ಶಬ್ದಮಾಡಿ ಕರೆದೆ. ಹೊರಗೆ ಬಂದಳು. ಕೈ ಹಿಡಿದೆ. ಅವಳ ಕೈ ಕಂಪಿಸಿತು. ಬಿಸಿಯಾಗಿತ್ತು. ನೀನು ನವವಧುವಾಗಿ ಈ ಮನೆಗೆ ಬಂದಾಗಲೇ ನೋಡಿದೆ. ಭವ್ಯ ನಿಲುವು. ನಡಿಗೆ ಹಂಸದ ಹಾಗೆ. ನಿನ್ನ ಕಣ್ಣುಗಳಲ್ಲಿ ನೀರಿತ್ತು. ಆದರೆ ನಿನ್ನ ಕಣ್ಣುಗಳು ನೀಲಿಬಣ್ಣದವುಗಳೆಂದು ತಿಳಿದಿರಲಿಲ್ಲ ಆಗ ಎಂದೆ. ಅವಳು ತಲೆ ಎತ್ತಿದಳು ಮಹಾಪ್ರಳಯವಾಗುತ್ತಿದ್ದ ಎರಡು ನೀಲ ಸಮುದ್ರಗಳನ್ನು ಕುಗ್ಗಿಸಿ, ಅವಳ ಮುಖದಲ್ಲಿ ನೆಟ್ಟಂತೆ ಭಾಸವಾಯಿತು. ಮುಖ ಮುಟ್ಟಿದೆ, ತಣ್ಣಗಿನ ಬೆಂಕಿಮುಟ್ಟಿದ ಹಾಗಾಯಿತು. ಬೊಗಸೆಯಲ್ಲಿ ಅವಳ ಮುಖ ಹಿಡಿದೆ. ಭೂಲೋಕವನ್ನೇ ಬಂಧಿಸಿದ ಹಾಗಾಯಿತು. ಮನೆಗೆ ಬಾ, ಶಾಂತಳಿಗೆ ಮದ್ದು ಕೊಟ್ಟಿದ್ದೇನೆ, ಬೆಳಗ್ಗಿನವರೆಗೂ ಎಚ್ಚರವಾಗೋದಿಲ್ಲ ಎಂದೆ. ಅವರಿಗೆ ಅವರಿಗೆ...? ಎಂದು ಕೇಳಿದಳು. ಅವನಿಗೂ ಕೊಟ್ಟಿದ್ದೇನೆ ಎಂದೆ. ಮನೆಗೆ ಬಂದಳು. ನಮ್ಮ ಮನೆಯಲ್ಲಿ, ಮನಸ್ಸಿನಲ್ಲಿ ಮತ್ತು ಶಯ್ಯೆಯಲ್ಲಿ ನಾನು ಮೊತ್ತ ಮೊದಲ ಬಾರಿಗೆ ಗಂಡುಸಾದೆ.

ಅವಳು ಹೆಣ್ಣಾದಳು. ಮತ್ತೊಮ್ಮೆ ಒತ್ತಿ ಹೇಳುತ್ತೇನೆ: ನಾನು ಗಂಡಾದೆ. ಅಹಂಕಾರ ಪಡುತ್ತೇನೆಂದು ತಿಳಿಯಬೇಡಿ. ಅಹಂ ಇಲ್ಲವಾದರೆ ಮನುಷ್ಯನಿಗೂ ಪಶುಗಳಿಗೂ ಏನು ವ್ಯತ್ಯಾಸ-ಅಲ್ಲ-ಮನುಷ್ಯನಿಗೂ ಶವಕ್ಕೂ ಏನು ವ್ಯತ್ಯಾಸ ಅಲ್ಲ....?

...ಆಮೇಲೂ, ಆಗಾಗ, ಅಂದರೆ ಶಾಂತಳ ನೀರಿನಲ್ಲಿ ನಿದ್ರೆಗುಳಿಗೆ ಬೆರೆಸಲು ಸಾಧ್ಯವಾದಾಗಲೆಲ್ಲಾ ನಾವು ಒಂದಾಗುತ್ತಿದ್ದೆವು. ಸಾಧ್ಯವಾಗದ ದಿನ, ಶಾಂತ ನನ್ನ ಹೆಣ್ಣಾಗುತ್ತಿದ್ದಳು. ನನ್ನಲ್ಲಾದ ಬದಲಾವಣೆ ಶಾಂತಳಿಗೆ ಮೊದಮೊದಲು ಆಶ್ಚರ್ಯ ಉಂಟುಮಾಡಿತು. ಆಮೇಲೆ ಗೌರವ ಉಂಟು ಮಾಡಿತು. ಮಾತುಮಾತಿಗೂ, ನನ್ನ ದೇವರೆ, ನನ್ನ ಬಂಗಾರ, ನನ್ನ ಯಜಮಾನ, ಅನ್ನುತ್ತಿದ್ದಳು. ಕತ್ತಲಲ್ಲಿ ನನ್ನ ಕೈಗಳು ಶಾಂತಳನ್ನು ರತ್ನಳನ್ನಾಗಿ ತಿದ್ದುತ್ತಿದ್ದುವು. ಇನ್ನೊಮ್ಮೆ ಹೇಳುತ್ತೇನೆ: ನನ್ನ ಕೈಗಳಲ್ಲಿ ಶಾಂತ, ರತ್ನಳಾಗುತ್ತಿದ್ದಳು.

ಮಯ್ಯ ಆಗಾಗ ನನ್ನ ಶಾಪಿಗೆ ಬರತೊಡಗಿದ. ಮಾತ್ರೆಗೆ ಅವನು ಗುಲಾಮನಾಗಿದ್ದ. ಅವನ ಚರ್ಮರೋಗ ಬಿಗಡಾಯಿಸಿತ್ತು. ಗಾರೆ ಕೆಲಸಕ್ಕೆ ಹೋಗಿ, ಮೀಯದೆ ಬಂದ ಸಫಲಿಗನ ಹಾಗೆ ಕಾಣಸುತ್ತಿದ್ದ. ಕಪ್ಪು ಮೈಯಿಂದ ಬಿಳಿ ಬಣ್ಣದ ಒಣಹೊಟ್ಟುಗಳು ಉದುರುತ್ತಿದ್ದುವು. ನನಗೆ ಅವನ ಮೇಲೆ ಮೊತ್ತ ಮೊದಲ ಬಾರಿಗೆ ಕನಿಕರ ಮೂಡಿತು. ಹೇಳಿದೆ: ಬಹುಶಃ ನಿಮ್ಮದು ವಿ.ಡಿ. ಆಗಿರಲಾರದು. ಅವನಿಗೆ ಬಹಳ ಸಂತೋಷವಾದ ಹಾಗೆ ಕಂಡಿತು. ನೀವು ಅಷ್ಟು ಹೇಳಿದರೆ ಧೈರ್ಯ ಅಂದ. ನಾನೆಂದೂ ಬೇಡದ ಕೆಲಸ ಮಾಡಿಲ್ಲ ಅಂದ. ಹಣ ಎಂದರೆ ನನಗೆ ದೇವರು ಅಂದ. ನಮ್ಮಪ್ಪನಿಗೂ ಹಣ ಕಂಡರೆ ಅಷ್ಟು ಮೋಹ ಅಂದ. ಸ್ವಲ್ಪ ಅಳುಕಿ ನಿಂತ. ಆಮೇಲೆ ಮುರಿಯೋ ಎಂದು ನನ್ನ ಕೈಗಳೆರಡನ್ನೂ ಹಿಡಿದು ಅಳಲಾರಂಭಿಸಿದ. ಅಳು ನಿಲ್ಲಿಸಿ ಹೇಳಿದ, ನಮ್ಮ ತಂದೆ ಶಿವ ದೇವಸ್ಥಾನದ ಹುಂಡಿಯಿಂದ ಹಣ ಕದ್ದ. ನಾಲ್ಕಾರು ತಿಂಗಳು ಮೋಜು ಮಾಡಿದ. ದಿನಾ ಪಾಯಸದ ಊಟ. ಎಂದೆಂದೂ ಪಾಯಸ ನೋಡದವರ ಹಾಗೆ ತಿಂದ... ತಿಂದ.... ತಿಂದ... ನಾವೂ ಆತ ಮಿಗಿಸಿದ್ದನ್ನು ತಿಂದೆವು. ಬಹಳ ದಿನ, ಏನೂ ಮಿಗುತ್ತಿರಲಿಲ್ಲ. ಆಮೇಲೆ ರೋಗ ಬಂದು ಸತ್ತ. ಮಾತು ಬಿಡ ಮಂಜುನಾಥ, ಕಾಸು ಬಿಡ ತಿಮ್ಮಪ್ಪ-ಗಾದೆ ಕೇಳಿದ್ದೀರಲ್ಲ. ನಮಗೆ ದೇವರ ಶಾಪ ಎಂದ. ಸರಿ ಸರಿ, ಎಲ್ಲಾ ಒಳ್ಳೇದಾಗುತ್ತದೆ ಎಂದೆ.

ಮನಸ್ಸಿನ ಭಾರ ಇಳಿಸಿದವರಂತೆ ಹೊರಟು ಹೋದ. ಡೆಟ್ಟಾಲ್‌ನಲ್ಲಿ ಕೈ ತೊಳೆದುಕೊಂಡು ಶಾಪಿನ ಬಾಗಿಲಲ್ಲಿ ನಿಂತೆ. 'ಗಣೇಶ ಕಾಫೀ ಕ್ಲಬ್' ನಿಂದ ಮಾಣಿ, ಎರಡು ದೊಡ್ಡ ತೋತಾಪುರಿ ಮಾವಿನ ಹಣ್ಣುಗಳನ್ನು ಎತ್ತಿಕೊಂಡು ಬಂದು ನನಗೆ ಕೊಟ್ಟ. ಧಣಿ ಕೊಟ್ರು ಎಂದ. ಸರಿ ಎಂದೆ. ರತ್ನಳ ನೆನಪು ಬಂತು. ಇನ್ನೊಮ್ಮೆ ಹೇಳುತ್ತೇನೆ: ನನಗೆ ಯಾವಾಗಲೂ ರತ್ನಳ ನೆನಪು ಬರುತ್ತಾ ಇರುತ್ತದೆ. ಈಗಲೂ...

ಆ ರಾತ್ರಿ ಶಾಂತಳಿಗೆ ನಿದ್ದೆ ಗುಳಿಗೆ ಕುಡಿಸಿದೆ. ರತ್ನಳನ್ನು ಕರೆದುಕೊಂಡು ಬಂದೆ. ರತ್ನ ಎಂದಿನಂತೆ ಗೆಲುವಾಗಿರಲಿಲ್ಲ. ಏಕೆ ನನ್ನ ಹಕ್ಕಿ ಮೌನವಾಗಿದೆ ಎಂದು ಕೇಳಿದೆ. ಗರ್ಭಿಣಿಯಾಗಿದ್ದೇನೆ ಎಂದಳು. ನಗಬೇಕಾದವಳು ಅಳುತ್ತೀಯಲ್ಲ ಎಂದು ಕೇಳಿದೆ. ಅವರು ನನ್ನ ಮೈಮುಟ್ಟಲ್ಲ ಎಂದಳು. ಎಷ್ಟು ತಿಂಗಳು ಎಂದೆ. ಎರಡು ಎಂದಳು. ಯಾಕೆ ಇದುವರೆಗೂ ಹೇಳಿಲ್ಲ? ಆಪರೇಷನ್ ಮಾಡಿಸಬೇಕಾಗುತ್ತೆ ಇಲ್ಲಾ ಸಕ್ ಮಾಡಿಸಬೇಕಾಗುತ್ತೆ ಎಂದೆ. ಭಯದಿಂದ ನಡುಗಿದಳು. ಅವನದೇ ಎಂದು ಹೇಳು ಎಂದೆ. ವಿಷಾದವಾಗಿ ನಕ್ಕಳು. ರಾತ್ರಿ ಹಾಸಿಗೆಯಲ್ಲಿ ಮಲಗಿದ ಕೂಡಲೇ ನಿದ್ರಿಸುತ್ತಾರೆ, ಏಕೆ ಹಾಗೆ ಎಂದು ಕೇಳಿದಳು. ಚರ್ಮರೋಗಕ್ಕೆ ಔಷಧಿ ಎಂದು ನಿದ್ದೆಗುಳಿಗೆ ಕೊಡುತ್ತೇನೆ ಎಂದೆ. ಸುಳ್ಳು ಸುಳ್ಳೇ ಎಂದೆ. ನನ್ನ ಮೇಲಿನ ನಂಬಿಕೆ ಬಹಳ ಎಂದೆ. ಅವಳು ಮತ್ತೊಮ್ಮೆ ನಕ್ಕಳು. ಅವಳ ಕೆಂಪು ತುಟಿಗಳ ಬಿರುಕುಗಳೊಳಗೆ ಬಿಳಿ ಹಲ್ಲು ಸಾಲು ಮಿಂಚಿತು. ಎದೆ ಮುಟ್ಟಿದೆ. ಮೈ ಮುಟ್ಟಿದೆ. ಅವಳೊಳಗಿನ ಚೈತನ್ಯ ಆ ರಾತ್ರಿ ಎಚ್ಚರಾಗಲೇ ಇಲ್ಲ. ಇನ್ನೊಮ್ಮೆ ಹೇಳುತ್ತೇನೆ: ಅವಳೊಳಗಿನ ಅಭಿಸಾರಿಕೆ ಎಚ್ಚರಾಗಲೇ ಇಲ್ಲ. ತುಟಿಗಳು ಸ್ಪಂದಿಸಲಾರಂಭಿಸಿದುವು. ಏನೋ ಲೆಕ್ಕಾಚಾರ ಮಾಡುವವಳಂತೆ, ಬೆರಳುಗಳನ್ನು ಬಿಡಿಸಿ, ಮಡಿಸಲಾರಂಭಿಸಿದಳು. ಶಂಖದಂಥಾ ಅವಳ ಕೊರಳು ಹಿಂದೆ ಬಾಗಿತ್ತು. ನೀಲಿ ಕಣ್ಣುಗಳ ಆಳದಲ್ಲಿ ನನ್ನ ಬಿಂಬ ಮುಳುಗೇಳುತ್ತಿತ್ತು. ಅವಳ ಮುಡಿಯ ಮಲ್ಲಿಗೆ, ಮುರಿದುಹೋಗುತ್ತಾ, ಮುದ್ದೆಯಾಗುತ್ತಾ ಪರಿಮಳಿಸುತ್ತಿತ್ತು. ಮೊದಲ ಬಾರಿಗೆ ಅವಳು ಹೆಣ್ಣಿನ ಶವವಾದಳು. ಜೀವಿಸುತ್ತಾ ಮರಣಿಸಿದ, ಮರಣಿಸುತ್ತಾ ಜೀವಿಸುವ ಚಿನ್ನದ ಪ್ರತಿಮೆಯಾದಳು. ಶಿಲ್ಪಿಯ ಕಲಾ ನೈಪುಣ್ಯದಿಂದಷ್ಟೇ ಜೀವ ಕಾಣುವ ಪುತ್ಥಳಿ ಪ್ರತಿಮೆಯಂತೆ!

ನಾನು ಮತ್ತೊಮ್ಮೆ ಹೇಳುತ್ತೇನೆ: ನನ್ನ ಚಲನೆಯಲ್ಲೂ ನಾನು ಮತ್ತೊಮ್ಮೆ ಅರ್ಧ ಶವವಾದೆ: ಅರ್ಧ ಮನುಷ್ಯನಾದೆ.


ರತ್ನ ಹೊರಟುಹೋದಳು.

... ಮತ್ತು ಬೆಳಿಗ್ಗೆ ಎದ್ದಾಗ, ಮಯ್ಯ ಹುಯಿಲೆಬ್ಬಿಸುತ್ತಾ, ರಾಯರೇ ರಾಯರೇ ಎಂದು ಕರೆಯುತ್ತಿದ್ದ. ನಾನು ಎದ್ದೆ. ಗಂಟೆ ಎಂಟಾಗಿತ್ತು. ಮಯ್ಯ ಒಳಗೆ ಬಂದ. ರತ್ನ ಏಳೋದೇ ಇಲ್ಲ ಮಾರಾಯರೇ ಎಂದ. ಏನು ಎಂದೆ. ಉಸಿರಾಡುವುದೇ ಇಲ್ಲ ಎಂದ. ಅವನೊಂದಿಗೆ ಅವನ ಮನೆಗೆ ಹೋದೆ. ಹಾಸಿಗೆಯಲ್ಲಿ ಮಲಗಿದ್ದಳು ರತ್ನ. ಅವಳ ತುಟಿಗಳಲ್ಲೊಂದು ಮುಗುಳುನಗೆ ಇತ್ತು. ಇನ್ನೊಮ್ಮೆ ಹೇಳುತ್ತೇನೆ: ಅವಳ ತುಟಿಗಳು ಉಲ್ಲಾಸಗಾನದ ಕೊನೆಯ ಪಂಕ್ತಿಯಂತೆ ಮುಚ್ಚಿದ್ದುವು. ಎರಡು ಕೊನೆಗಳೂ ನಸು ಬಾಗುತ್ತಾ. ಮಯ್ಯನೆದುರೇ ಅವಳ ಮುಖ ಮುಟ್ಟಿದೆ. ರತ್ನಾ, ರತ್ನಾಬಾಯಿ ಎಂದು ಕರೆದೆ. ಓಗೊಡಲಿಲ್ಲ. ನಿಮ್ಮ ಔಷಧಿ ಎಲ್ಲಿ ಎಂದು ಕೇಳಿದೆ. ಶೆಲ್ಫ್ ತೋರಿಸಿದ. ನೋಡಿ ಎಂದೆ. ನೋಡಿದ. ಖಾಲಿ ಎಂದ. ಎದೆ ಮುಟ್ಟಿದೆ. ಚೂರು ಬಿಸಿ ಇತ್ತು. ಡಾಕ್ಟರನ್ನ ಕರೆಯಿರಿ ಎಂದೆ. ಉಟ್ಟಬಟ್ಟೆಯಲ್ಲೇ ಧಿಮಿ ಧಿಮಿ ಓಡಿಹೋದ. ಹೂವಿನ ರಾಶಿಯಂತಹಾ ಮೃತ ದೇಹವನ್ನು ಇನ್ನೊಮ್ಮೆ ನೋಡಿದೆ. ಅಲ್ಲಿ ಅವಳ ಜೀವ ಗೋರಿಯಾಗಿತ್ತು. ಸರಿಯಾಗಿ

ಹೇಳುತ್ತೇನೆ: ನಿದ್ರಿಸುವಾಗ ಒಂಟಿಯಾಗಿಯೇ ನಿದ್ರಿಸಬೇಕಾಗುತ್ತದೆ. ಸಾಯುವಾಗ ಕೂಡಾ:.. ಸುಖ ಸಾಯುತ್ತದೆ; ಪ್ರೀತಿ ಸಾಯುತ್ತದೆ; ನೆನಪು ಸಾಯುವುದಿಲ್ಲ. ಇಲ್ಲ ಈಗ ಹೇಳಿದುದು ತಪ್ಪು. ಇದನ್ನು ಸರಿಪಡಿಸಿ ಹೇಳುವುದು ನನ್ನಿಂದಾಗೋದಿಲ್ಲ. ಇನ್ನೊಮ್ಮೆ ಹೇಳುತ್ತೇನೆ: ಸಾವನ್ನು ವಿವರಿಸಲು ನನಗೆ ಶಬ್ದ ಗೊತ್ತಿಲ್ಲ. ಭಾಷೆ ಗೊತ್ತಿಲ್ಲ. ಇಲ್ಲ. ಶ್ಯೋ ಇಲ್ಲ.

ಕೊನೆಯ ಬಾರಿಗೆ ಅವಳ ನೀಲಿ ಕಣ್ಣುಗಳನ್ನು ನೋಡಿದೆ. ಇನ್ನೂ ತೇವವಾಗಿದ್ದ ಆ ಕಣ್ಣಗೊಂಬೆಗಳಲ್ಲಿ ನಾನು ನೂರು ಮಡಿ ಚಿಕ್ಕವನಾಗಿ ಕಂಡೆ. ರೆಪ್ಪೆಗಳನ್ನು ಮುಚ್ಚಿದೆ. ನಿದ್ದೆಯಲ್ಲಿ ಸತ್ತವಳ ಕಣ್ಣುರೆಪ್ಪೆಗಳನ್ನು ಸಾಯುತ್ತಿರುವ ಕೊನೆಯಲ್ಲಿ ಮಯ್ಯ ಬಿಡಿಸಿರಬೇಕು ಅನ್ನಿಸಿತು. ಅಥವಾ ಅವಳೇ, ಸಾಯುತ್ತಾ, ಕೊನೆಯದಾಗಿ ಯಾರನ್ನಾದರೂ ನೋಡಲು ಬಯಸಿದಳೇನೋ, ಎಂದು ಅನ್ನಿಸಿತು. ಕೊನೆಯ ಬಾರಿಗೆ ಅವಳ ಮೃತ ತುಟಿಗಳನ್ನು ಚುಂಬಿಸಿದೆ. ಹಿಂದಿನ ರಾತ್ರಿ ನನ್ನ ತುಟಿಗಳಿಗೂ ಇಂತಹ ಮೃತ ಚುಂಬನಗಳು ಹಲವು ಸಿಕ್ಕಿದ್ದುವು. ತಿರುಗಿ ಹೇಳುತ್ತೇನೆ: ನಿನ್ನೆ

ಎಂ. ವ್ಯಾಸರ ಒಂದು ಕಾಗದದಿಂದ....


ಮೊಮ್ಮಗನೊಂದಿಗೆ...

ಯೋಚಿಸಿದ ಹಾಗೆಲ್ಲಾ, ಶೂನ್ಯವೇ ಕಾಣುತ್ತಿರುವ ಮನೋಪ್ರಪಂಚದಲ್ಲಿ ಇನ್ನು ಘಟನೆಗಳು ನಡೆಯುವುದೇ ಇಲ್ಲ ಎಂದಾಗಲೂ ಒಂದು ರೋದನ, ಮೂಕರೋದನ ಭಾಸವಾಗುತ್ತದೆ. ಅದಕ್ಕಿನ್ನೂ ರೂಪ ಬಂದಿಲ್ಲ. ಬರೆದುದನ್ನೇ ತಿದ್ದಿ ಬರೆದು, ಮನಸ್ಸಿನಲ್ಲೇ ಬರೆದು ಅದಕ್ಕೆ ರೂಪ ಕೊಡಲು ಯತ್ನಿಸುತ್ತಲೇ ಇದ್ದೇನೆ. ಕಾದಂಬರಿಯೋ ಕತೆಯೋ ಲೇಖನವೋ ಕವಿತೆಗಳೋ ನನಗೇ ಗೊತ್ತಾಗುತ್ತಿಲ್ಲ. ಅದರ ಆಕಾರ ನೋಡಿ ತಲೆಬರಹ ಕೊಡುತ್ತಿದ್ದೇನೆ. ಇಷ್ಟು ದೀರ್ಘ ಕಾಲದವರೆಗೂ ಬರೆದುದನ್ನು ತಿದ್ದಿ ಬರೆಯಲಾಗುವುದಿಲ್ಲ. ಪ್ರವಾಹದ ಹಾಗೆ ಭಾವಗಳು ಸುರಿಯುತ್ತಿರುತ್ತವೆ, ಕಂಬನಿಗಳ ಹಾಗೆ, ರಕ್ತದ ಹಾಗೆ. ಎಂತಹಾ ಕಲೆಯೋ ದೇವರಿಗೇ ಗೊತ್ತು.

ಈಚೆಗೆ, ಒಂದು ಸಭೆ ಕಳೆದ ಮೇಲೆ ಯುವತಿಯೊಬ್ಬರು ಬಂದು, ''ನಿಮ್ಮ ಕೃತಿ ಓದಿದೆ ಸಾರ್ ತುಂಬಾ ಫೀಲ್ ಆಯಿತು. ರಾತ್ರಿಯಿಡೀ ಅಳುತ್ತಲೇ ಇದ್ದೆ'' ಎಂದರು ಗದ್ಗದಿತರಾಗಿ. ಆಗ ನಾಲಿಗೆಯೇ ಬರಲಿಲ್ಲ. ''ನಿಮ್ಮ ಹೆಸರು'' ಎಂದಷ್ಟೇ ಕೇಳಿದೆ. 'ಸಂಧ್ಯಾ' ಎಂದರು. ಸಂಜೆಯಾಗುತ್ತಿತ್ತು. ಆಮೇಲೆ ಇಬ್ಬರು ನಡುವಯಸ್ಕ ಮಹಿಳೆಯರು ಬಂದರು. ''ನಿಮ್ಮ ನೋಡುವ ಭಾಗ್ಯ ಸಿಕ್ಕಿತು. ಅದೇ ಸಂತೋಷ'' ಎಂದರು. ಇನ್ನಷ್ಟು ದಿಗಿಲಾಯಿತು. ಹೀಗೆ ಇನ್ನು ಮೇಲೆ ಯಾವ ಸಭೆಗೂ ಹೋಗಬಾರದು ಅನ್ನಿಸಿತು.

ಈಗಲೂ ಅನ್ನಿಸುತ್ತಾ ಇದೆ, ಮಧುರ ವ್ಯಸನದ ಹಾಗೆ ಈಗಲೂ ಅನ್ನಿಸುತ್ತಾ ಇದೆ ಜಯಂತ, ಹೀಗಾಡುವ ಒಬ್ಬ ಓದುಗ ಸಿಕ್ಕಿದರೆ ಸಾಕು, ಬರೆದ ಜೀವಕ್ಕೆ ಧನ್ಯತಾಭಾವ ಬರಲು.

ನಿಮ್ಮ ಹೊಸ ವೃತ್ತಿಯಲ್ಲಿ, ಮೊದಲ ಹಂತದಲ್ಲಿ, ನನ್ನ ನೆನಪಿಸಿಕೊಂಡುದನ್ನು ನೆನೆಯುತ್ತಿರುತ್ತೇನೆ.

ಪ್ರೀತಿ ಇರಲಿ, ವಂದನೆಗಳು

ಎಂ. ವ್ಯಾಸ

ಕೃಪಾ ನಿಧಿ, ಆರ್.ಡಿ. ನಗರ ಪೋಸ್ಟ್, ಕಾಸರಗೋಡು-671 125


ರಾತ್ರಿಯೇ ಅವಳ ತುಟಿಗಳು ಸತ್ತುಹೋಗಿದ್ದುವು.

... ಚುಂಬಿಸಿ, ಎದ್ದು ತಿರುಗಿದಾಗ ಬಾಗಿಲಲ್ಲಿ ಶಾಂತ ನಿಂತಿದ್ದಳು. ಸತ್ತುಹೋಗಿದ್ದಾಳೆ ಎಂದೆ. ಶಾಂತಳ ತುಟಿಗಳಲ್ಲಿ ಮಾತಿನ ಗರ್ಭಸ್ರಾವ ವಾಯಿತು. ಅವಳು ಹಿಂತಿರುಗಿದಳು. ನಾನೂ. ಅವಳು ಮನೆ ತಲುಪಿದಳು. ನಾನೂ. ನನ್ನ ದುರುದುರನೆ ನೋಡಿದಳು. ನಾನೂ. ನಿಮಗೆ ಅವಳೊಡನೆ ಸಂಬಂಧವಿತ್ತಾ ಎಂದು ಕೇಳಿದಳು. ನನ್ನ ನಾಲಿಗೆ ರತ್ನಳ ನಾಲಿಗೆಯಾಗಿತ್ತು. ಜೀವ ಜೀವಿಸಿದಂತೆ, ಮರಣವೂ ಜೀವಿಸುತ್ತದೆ. ಜೀವಕ್ಕೆ ವಯಸ್ಸು ಕ್ಷಣ ಕ್ಷಣಗಳಾಗಿ ಕೂಡುತ್ತಿರುವಂತೆ, ಮರಣಕ್ಕೂ ಕೂಡುತ್ತದೆ. ನಾನೊಂದು ಸಾಮ್ರಾಜ್ಯವನ್ನು ಕಳೆದುಕೊಂಡಂತೆ ರತ್ನಳನ್ನು ಕಳೆದುಕೊಂಡೆ. ರತ್ನ ಅವಳ ದೇಹದೊಳಗೆ ಸಮಾಧಿಯಾಗಿದ್ದಳು. ಅವಳ ಸಪ್ತಸಾಗರಗಳು ಬತ್ತಿಹೋಗಿ, ಅವಳೊಂದು ಬಿರುಕು ಭೂಮಿಯಾಗಿ ಬೆಚ್ಚಿ ನಿಂತಿದ್ದಳು-ಅಲ್ಲ-ಮಲಗಿದ್ದಳು. ಅಲ್ಲ, ಹಾಗೂ ಅಲ್ಲ. ನನಗವಳ ಸ್ಥಿತಿಯನ್ನು ವರ್ಣಿಸಲಾಗುವುದಿಲ್ಲ.

... ಮತ್ತೂ ಹೇಳಬೇಕು - ಅವಳ ಕುರಿತು. ನಿಮಗೆ ನಗು ಬರುವಷ್ಟು ಭಾವುಕ ಶಬ್ದಗಳಲ್ಲಿ. ಅವಳು ಶುಷ್ಕ ಶಬ್ದಗಳಿಗೆ ನಗುವಿನಿಂದ ರಾಗ ಸಂಯೋಜಿಸುತ್ತಿದ್ದಳು. ಅವಳ ಮಾತುಗಳನ್ನು ನನ್ನ ಮಾತುಗಳು ಭೋಗಿಸಿದ್ದುವು. ನನ್ನ ಕಾಮ-ಅವಳ ಕಾಮ, ಪವಿತ್ರ ಪ್ರೇಮಕ್ಕಿಂತಲೂ ಪವಿತ್ರವಾಗಿತ್ತು. ನಾನವಳ ನಗ್ನ ಪಾದಗಳ ಬಳಿಯಲ್ಲಿ ಹುಚ್ಚು ಪ್ರವಾಹವಾಗಿ ಪ್ರವಹಿಸಿದ್ದೆ... ನನ್ನ ಯೌವನದ ತೇಜಸ್ವೀ ಮುಖ, ಅವಳ ಕನ್ನಡಿ ಮೈಯಲ್ಲಿ ಕಂಪಿಸುತ್ತಾ ಪ್ರತಿಬಿಂಬಿಸಿತ್ತು. ವರಪೂಜೆಗೆ ಹೊರಟ ನನ್ನ ಅನಲಂಕರಿತ ಮುಖ ಸಾವಿರ ಬಾರಿ ನಕ್ಕಿತು-ಗಹಗಹಿಸಿ. ಅವಳ ಪ್ರೇತಭೂಮಿಯ ಸ್ನಾನಘಟ್ಟದ ಮೆಟ್ಟಿಲ ಬಳಿ ಕುಳಿತು, ಅವಳ ಮಧು ಪ್ರವಾಹದಲ್ಲಿ ನಾನು ನನ್ನ ದಾಹವನ್ನು ತೀರಿಸಿಕೊಂಡಿದ್ದೆ... ಅವಳ ಗರ್ಭಗುಡಿಯೊಳಗಿಂದ ನಿತ್ಯ ನಿರ್ಮಾಲ್ಯ ಪುಷ್ಪಗಳನ್ನು ಅವಳು ತೆಗೆದೆಸೆಯುತ್ತಿದ್ದಳು - ನಾನು ಮುಡಿಯುತ್ತಿದ್ದೆ.... ಅಲ್ಲ ನನ್ನ ಗರ್ಭಗುಡಿಯೊಳಗಿನಿಂದ ನಿ.....

"[illegible]
[illegible]
[illegible]"
[illegible]

[illegible]



ಒಡೆದ ಪತ್ರ


ಆ ಸಂಜೆ ಜಿನುಗುವ ಮಳೆಯಲ್ಲಿ ರಾಂಪುರಕ್ಕೆ ಅಂಚೆಪತ್ರಗಳನ್ನು ಡೆಲಿವರಿ ಮಾಡಲಿಕ್ಕೆ ಹೊರಟಿದ್ದೆ. ಮಳೆಗೆ ಮರದ ಮರೆಯಲ್ಲಿ ನಿಂತುಕೊಳ್ಳೋಣ ಎಂದು ಯೋಚಿಸುತ್ತಿದ್ದಂತೆಯೇ ಸೈಕಲ್ ಚೈನ್ ಬಿಚ್ಚಿತು. ಸೈಕಲ್ ನಿಲ್ಲಿಸಿ, ಬಗ್ಗಿ, ಚೈನ್ ಹಾಕುವ ಆತುರಕ್ಕೆ, ಮೇಲಿನ ಜೇಬಿನಲ್ಲಿದ್ದ ಪತ್ರಗಳು ನೆಲಕ್ಕೆ ಬಿದ್ದವು. ಅವುಗಳನ್ನು ಎತ್ತಿಕೊಳ್ಳುವಾಗ, ಒಂದು ಇನ್‌ಲ್ಯಾಂಡ್‌ಲೆಟರ್‌ನ ಒಂದು ಮಗ್ಗಲು ಹರಿಯಿತು. ಮರದ ಮರೆಯಲ್ಲಿ ನಿಂತು, ಏನೋ ಯೋಚಿಸುತ್ತ, ಹರಿದ ಪತ್ರವನ್ನು ತೆಗೆದು, ಅಂಟು ಹಚ್ಚೋಣವೆಂದು ಯೋಚಿಸಿದೆ. ಆದರೆ ಅದೇಕೋ ಓದಬೇಕೆನಿಸಿತು, ಓದಿದೆ, ಅಚ್ಚರಿಯಾಯಿತು.

ಅದರಲ್ಲಿ, ''ಪ್ರೀತಿಯ ಮಹೇಶ, ನಾನು ಪ್ರೀತಿಸುವ ಹುಡುಗಿಯನ್ನು ನೀನು ಮದುವೆಯಾಗುತ್ತಿರುವೆಯಲ್ಲ, ನಾನು ಅವಳೊಂದಿಗೆ ಕಳೆದ ಕ್ಷಣಗಳು, ಅವಳು ನನಗೆ ನೀಡಿದ ಸುಖ ನಾ ಹೇಗೆ ಮರೆಯಲಿ, ನೀನು ನನ್ನ ಆತ್ಮೀಯ ಸ್ನೇಹಿತ. ನನ್ನ ಸ್ನೇಹಕ್ಕೆ ಬೆಲೆ ಕೊಡುವುದಾದರೆ, ನೀನವಳನ್ನು ಮರೆತು ಬಿಡು. ಈ ಮದುವೆ ನಡೆಯಲು ಸಾಧ್ಯವಿಲ್ಲ. ಬೇರೆ ಹೆಣ್ಣು ನೋಡಿ, ಇದೇ ಮುಹೂರ್ತದಲ್ಲಿ ಮದುವೆಯಾಗು, ಇಂತಿ ನಿನ್ನ ಗೆಳೆಯ ಪ್ರಕಾಶ'' ಎಂದಿತ್ತು.

ರಾಂಪುರದ ಬಸವಣ್ಣನ ಮಗಳು ಸುಮ, ಅಂಥವಳೇ ಎಂದು ಯೋಚಿಸಿದೆ. ಅದು ಸತ್ಯವೋ ಅಸತ್ಯವೋ ಬಲ್ಲವರಾರು? ಎಂದು ಆ ಯೋಚನೆ ಬಿಟ್ಟೆ. ಮಹೇಶ ಮತ್ತು ಸುಮಳ ಮದುವೆಗೆ ಇನ್ನು 15 ದಿನಗಳಿದ್ದವು. ನಾನು, ಮಹೇಶನ ಗೆಳೆಯ ಅರುಣ ಕುಮಾರನಿಂದ ಸತ್ಯ ಸಂಗತಿ ತಿಳಿದೆ. ಸುಮಾಳಿಂದ ಕಪಾಳ ಮೋಕ್ಷ ಮಾಡಿಸಿಕೊಂಡು ಅವಮಾನಿತನಾದ ಪ್ರಕಾಶ, ಈ ಅವಮಾನದ ಸೇಡು ತೀರಿಸಿಕೊಳ್ಳಲು, ಮಹೇಶನಿಗೆ ಈ ರೀತಿ ಬರೆದು ಮದುವೆ ನಿಲ್ಲಿಸುವ ಸಂಚು ಮಾಡಿದ್ದ.


ಅಂದಿನಿಂದ ನಾನು, ಪ್ರಕಾಶನಿಂದ ಮಹೇಶನಿಗೆ ಬರುವ ಪತ್ರಗಳನ್ನು ಮದುವೆಯಾಗುವವರೆಗೆ ಕೊಡಲಿಲ್ಲ. ನಾನು ಅಂಚೆಯವನಾಗಿ ಪತ್ರ ಓದಿದ್ದು ಮತ್ತು ಪತ್ರಗಳನ್ನು ಮುಟ್ಟಿಸದೆ ಇದ್ದದ್ದು ತಪ್ಪಾಗಿದ್ದರೂ ಬಡತನದಲ್ಲಿ ಬೆಂದ ಸುಮ, ಮದುವೆಯಾಗಿ ನೆಮ್ಮದಿಯಾಗಿರಲು ನಾ ಮಾಡಿದ ತಪ್ಪು ಅನಿವಾರ್ಯವಾಗಿತ್ತು. ಸುಮ ಮತ್ತು ಮಹೇಶರಂತಹ ಸುಂದರ ಜೋಡಿಯ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಾಗ, ನನಗಾದ ಸಂತೋಷ ಅಪಾರ.

ಟಿ.ಎಸ್. ಕುಮಾರ



ಆದೀಬ್ ಅಖ್ತರ್

ಗುಲ್‌ಮೊಹರ್ ನೆರಳು



ಅಖೀಲಳನ್ನು ನಸೀಮ್ ಮನಸಾರ ಪ್ರೀತಿಸಿದರೂ, ಬಾಯಿಬಿಟ್ಟು ಹೇಳುತ್ತಿರಲಿಲ್ಲ. ತನ್ನ ಮನದ ಕಣಿವೆಯಲ್ಲಿ ಪ್ರತಿಧ್ವನಿಸುವ ಪ್ರೇಮ ಗೀತೆಗಳು ಅವಳಿಗೆ ಕೇಳದಿರಲಿ ಹಾಗೂ ಅವಳನ್ನು ಇಷ್ಟಪಡುವ ವಿಚಾರ ಯಾರಿಗೂ ತಿಳಿಯದಿರಲಿ ಎಂಬ ಬಯಕೆ ಅವನದಾಗಿತ್ತು. ಈ ಕಾರಣಕ್ಕಾಗಿಯೇ ಅವನು, ಅವಳ ಮುಂದೆ ಮುಗುಳ್ನಗುತ್ತಿರಲಿಲ್ಲ.

ಒಂದು ನಿಮಿಷ ಸಹ ಅವಳು ಕಣ್ಣುಗಳಿಂದ ದೂರವಾಗದಿರಲಿ ಎನ್ನುವ ಮತ್ತು ಅವಳೊಂದಿಗೆ ಗಂಟೆಗಟ್ಟಲೆ ಮಾತನಾಡುವ ಆಸೆ ಯಾವೊಂದು ಕ್ಷಣದಿಂದ ಅವನ ಮನದಲ್ಲಿ ಎದ್ದೇಳಿತೋ, ಆ ಕ್ಷಣದಿಂದ ಅವನ ಇಪ್ಪತ್ತೆರಡರ ಪ್ರಾಯದ ಮುಖದ ಮೇಲೆ ಗಾಂಭೀರ್ಯ ಆವರಿಸಿಕೊಳ್ಳಲು ಪ್ರಾರಂಭವಾಗತೊಡಗಿತು.

ನಸೀಮ್ ಸ್ವಯಂ ತನ್ನನ್ನು ತಾನೇ ಏಕಾಂತತೆಯ ವರ್ತುಲದಲ್ಲಿ ಸೆರೆ ಹಿಡಿದುಕೊಂಡಿದ್ದ. ಯಾವೊಂದು ಕ್ಷಣ ಈ ವರ್ತುಲದ ಗೆರೆ ದಾಟಿ, ಹೊರಗೆ ಬಂದು, ಅಖೀಲಳ ಮುಂದೆ ಪ್ರೀತಿ ವ್ಯಕ್ತಪಡಿಸಿಬಿಡುತ್ತಾನೆಯೋ ಆ ಕ್ಷಣವೇ ಅವಳನ್ನು ನೋಡುವ ಕೊನೆ ಕ್ಷಣವಾಗಿ ಬಿಡಬಹುದು. ಅಷ್ಟೆ ಅಲ್ಲ, ಅಖೀಲಳ ಮನೆಯವರ ದೃಷ್ಟಿಯಲ್ಲಿ ತನಗೆ ಮೂರು ಕಾಸಿನ ಬೆಲೆಯೂ ಇರುವುದಿಲ್ಲ. ಇನ್ನು ತನ್ನ ಮನೆಯವರಿಗೆ ಗೊತ್ತಾದರೆ... ಇದೆಲ್ಲದರ ಕಲ್ಪನೆ ಸಹ ಮಾಡಲು ಅವನು ಇಷ್ಟಪಡುವುದಿಲ್ಲ.



ಪ್ರೇಯಸಿಯ ಮುಂದೆ ಪ್ರೀತಿಯನ್ನು ಬಾಯಿಂದ ಅಲ್ಲ, ಕಣ್ಣುಗಳ ಮೂಲಕವೂ ವ್ಯಕ್ತಪಡಿಸದಿರುವಂಥ ನಿರ್ಬಂಧ ಅವನು ತನ್ನ ಮೇಲೆ ಹೇರಿಕೊಂಡಿದ್ದ. ಈ ನಿರ್ಬಂಧದ ಮುಂದೆ ಯಾವ ಕ್ರೂರ ಶಿಕ್ಷೆಯೂ ಇಲ್ಲ.

ಪ್ರೀತಿಸಿದ ತಪ್ಪಿಗಾಗಿ ಶಿಕ್ಷೆ ಅನುಭವಿಸುತ್ತಿದ್ದರೂ, ತನ್ನನ್ನು ಅದೃಷ್ಟವಂತ ಎಂದು ತಿಳಿದುಕೊಳ್ಳುತ್ತಿದ್ದ. ಏಕೆಂದರೆ ತನ್ನ ಮನ ಬಯಸಿದಾಗ, ತನಗೆ ಪ್ರೇಯಸಿಯನ್ನು ನೋಡುವ ಸ್ವಾತಂತ್ರ್ಯ ಇದೆ ಎಂದು ಯೋಚಿಸುತ್ತಿದ್ದ. ಅಖೀಲ ಅವನ ಚಿಕ್ಕಮ್ಮನ ಮಗಳಾಗಿದ್ದಳು.

ಒಂದು ವೇಳೆ, ಅವನೇನಾದರೂ ಒಬ್ಬನೇ ಮಗನಾಗಿದ್ದರೆ ತಾಯಿಯ ಮುಂದೆ ತನ್ನ ಇಷ್ಟ ಹೇಳಬಹುದಿತ್ತೇನೋ. ಆದರೆ ಅವನು ಎಲ್ಲರಿಗಿಂತ ಚಿಕ್ಕವನಾಗಿದ್ದ. ಅವನ ಮೂರು ಮಂದಿ ಅಣ್ಣಂದಿರು ಇನ್ನೂ ಅವಿವಾಹಿತರಾಗಿದ್ದರು. ಅವರೆಲ್ಲರೂ ಏನಾದರೊಂದು ಸಂಪಾದನೆಯ ದಾರಿ ಹಿಡಿದು, ಸಂಪಾದಿಸಿದ್ದನ್ನು ತಂದು ತಾಯಿಗೆ ಒಪ್ಪಿಸುತ್ತಿದ್ದರು. ಆದರೆ ಅವನು ಮಾತ್ರ ಹತ್ತನೆ ತರಗತಿವರೆಗೆ ವಿದ್ಯಾಭ್ಯಾಸ ಮಾಡಿ ಯಾವುದಾದರೊಂದು ದಾರಿ ಹಿಡಿಯುವ ಬದಲು, ನಿತ್ಯ ಎಲ್ಲರಿಂದ ಬೈಸಿಕೊಂಡು, ಬೆಳಗ್ಗೆ ಯಿಂದ ಸಂಜೆವರೆಗೆ ಸುಮ್ಮನೆ ಒಂಟಿಯಾಗಿ ಅಲೆಯುತ್ತಿದ್ದ.

ಕೆಲವು ದಿನಗಳ ಹಿಂದೆ ರೇಡಿಯೋ ಮೆಕ್ಯಾನಿಕ್ ಒಬ್ಬನೊಂದಿಗಿದ್ದು ಅವನು ಸಹ ರೇಡಿಯೋ ಮೆಕ್ಯಾನಿಕ್ ಆಗಲು ಪ್ರಯತ್ನಪಡುತ್ತಿದ್ದ. ಮಗ, ಅಲೆಯುವುದನ್ನು ನಿಲ್ಲಿಸಿ, ಕೊನೆಗೆ ಏನಾದರೊಂದು ಆಸಕ್ತಿ ತೋರಿಸುತ್ತಿರುವುದನ್ನು ಕಂಡು ಅವನ ತಾಯಿ ಅವನ ಬಗ್ಗೆ ಕನಸು ಹೆಣೆಯಲು ಪ್ರಾರಂಭಿಸಿದಳು. ಆದರೆ, ಅಖೀಲಳನ್ನು, ಎಷ್ಟೇ ಪ್ರಯತ್ನಪಟ್ಟರೂ, ಜೀವನ ಸಂಗಾತಿಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬ ವಿಚಾರ ಅರಿವಿಗೆ ಬಂದ ದಿನದಿಂದಲೇ ರೇಡಿಯೋ ಮೆಕ್ಯಾನಿಕ್ ಆಗುವ ಆಸೆಯನ್ನು ತ್ಯಜಿಸಿ ಮತ್ತೆ ಅಲೆದಾಡಲು ಪ್ರಾರಂಭಿಸಿದ.

ಇಂಥ ಅಲೆದಾಟದ ದಿನಗಳಲ್ಲಿ ಅವನು ವಿಚಿತ್ರವಾಗಿ ಯೋಚಿಸುತ್ತಿದ್ದನು: ನಾನು ಭಯಂಕರ ಕಾಯಿಲೆಗೆ ತುತ್ತಾಗಿರುವಾಗ ಒಂದು ವೇಳೆ ಅಖೀಲ ನನ್ನನ್ನು ನೋಡಲು ಬಂದರೆ ನಾನು ಹೇಳುವೆ, ''ಅಖೀಲ, ಈಗ ನಾನು ಸಾವಿನೊಂದಿಗೆ ಹೋರಾಟ ಮಾಡುತ್ತಿದ್ದೇನೆ. ಇಂಥದರಲ್ಲಿ ಯಾರಾದರೂ ನಿನ್ನ ಸಂತೋಷ ಮತ್ತು ನನ್ನ ಜೀವ ಇವೆರಡರಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಲು ಹೇಳಿದರೆ, ನಾನು ಮಾತ್ರ ನಿನ್ನ ಸಂತೋಷವನ್ನು ಆಯ್ಕೆ ಮಾಡುವೆ.''

ಒಮ್ಮೊಮ್ಮೆ ಅವನು ಯೋಚಿಸುತ್ತಿದ್ದ, ಅಖೀಲಳನ್ನು ನೋಡದಿರುವ ದಿನ ತನ್ನ ಪಾಲಿಗೆ ಅಶುಭ ದಿನವಾಗಿರುತ್ತೆ. ಇಷ್ಟೆಲ್ಲ ಕಲ್ಪಿಸಿಕೊಳ್ಳುವವನು, ಒಮ್ಮೆಯೂ, ಈ ಒಂದು ವಿಚಾರ ಅಪ್ಪಿತಪ್ಪಿಯೂ ಸಹ ಕಲ್ಪಿಸಿಕೊಳ್ಳುತ್ತಿರಲಿಲ್ಲ. ಅದೇನೆಂದರೆ ಮೈಸೂರಿನ ಮಂಡಿ ಮೊಹಲ್ಲದಲ್ಲಿರುವ ಈ ಪುಟ್ಟಮನೆಯನ್ನು ಬಿಟ್ಟು, ಒಂದಲ್ಲ ಒಂದು ದಿನ ಅಖೀಲ, ತನ್ನ ಗಂಡನ ಮನೆಗೆ ಹೊರಟು ಹೋಗುತ್ತಾಳೆ, ಆಗ ತಾನು ಇನ್ನಷ್ಟು ಒಂಟಿಯಾಗಿ ಹೋಗುತ್ತೇನೆ.

ಅಖೀಲಳಿಂದ ದೂರವಾಗಿ ಬಾಳುವ ಕಲ್ಪನೆ ಮಾಡುವುದರಿಂದ ಅಥವಾ ಮಾಡದಿರುವುದರಿಂದ ಭವಿಷ್ಯದಲ್ಲಿ ಘಟಿಸಬಹುದಾದ ಘಟನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಒಂದೆಡೆ ಅವನು, ಅಖೀಲಳು ಯಾವಾಗಲೂ ತನ್ನ ಕಣ್ಣುಗಳ ಮುಂದೆಯೇ ಇರಲೆಂದು ಆಸೆ ಹೊಂದಿದ್ದರೆ, ಮತ್ತೊಂದೆಡೆ ಅಖೀಲಳ ತಂದೆ-ತಾಯಿ, ಆದಷ್ಟು ಬೇಗ ಅವಳ ಮದುವೆ ಮಾಡಿ, ಅವಳನ್ನು ಗಂಡನ ಮನೆಗೆ ಕಳುಹಿಸುವುದರ ಬಗ್ಗೆ ಯೋಚಿಸುತ್ತಿದ್ದರು. ಅವನು ಇಲ್ಲದುದನೆಲ್ಲ ಯೋಚಿಸಿ, ಜೀವನದಲ್ಲಿ ಬೇಸರ ಹೊಂದಿದ್ದ. ವ್ಯರ್ಥವಾಗಿ ಸಾಗುತ್ತಿರುವ ಜೀವನದಲ್ಲಿ, ಪ್ರತಿ ಹೊಸ ದಿನ, ಕಪ್ಪು ವಸ್ತ್ರಗಳನ್ನು ಧರಿಸಿಕೊಂಡು ಬರುತ್ತದೆ, ತನ್ನ ಜೀವನದಲ್ಲಿ ಮೊದಲೇ ಆವರಿಸಿಕೊಂಡಿರುವ ಕಪ್ಪನ್ನು ಇನ್ನಷ್ಟು ಕಪ್ಪಾಗಿ ಮಾಡಿಹೋಗುತ್ತದೆ.

ಅವನು ಪ್ರತಿ ದಿನವನ್ನು ಬೇಸರದಿಂದ ಪ್ರಾರಂಭಿಸಿ ಬೇಸರದಿಂದ ಮುಗಿಸುತ್ತಾನೆ. ಅಖೀಲಳ ಮನೆಗೆ ಹೋದಾಗ ಮಾತ್ರ ಒಂದಿಷ್ಟು ನೆಮ್ಮದಿ ಸಿಗುತ್ತದೆ. ಅಖೀಲಳ ಬಳಿ ಕಳೆದಿರುವ ಕ್ಷಣಗಳನ್ನು ತನ್ನ ಜೀವನದ ಅಮೂಲ್ಯ ಆಸ್ತಿಯೆಂದು ತಿಳಿದುಕೊಂಡಿದ್ದಾನೆ. ತನ್ನ ಪಾಲಿಗೆ ಸುಖ ಸಂತೋಷವೇ ಇಲ್ಲ ಎನ್ನುವಂಥ ದಿನಗಳಲ್ಲಿ ಒಂದು ದಿನ ಎಂಥ ನೋವು ಸಿಗುತ್ತದೆಂದರೆ ಅದನ್ನು ವರ್ಣಿಸಲು ಅಸಾಧ್ಯ. ಅಖೀಲಳ ಮದುವೆ ನಿಶ್ಚಯವಾದ ಸುದ್ದಿ ಅವನ ಪಾಲಿಗೆ ಮರೆಯಲಾರದ ನೋವಾಗಿತ್ತು.

ಅಖೀಲಳ ಮದುವೆಯ ದಿನ ಹತ್ತಿರ ಬರುತ್ತಿದ್ದಂತೆ ಅವನು ಮತ್ತಷ್ಟು ಮಂಕಾಗಿ ಹೋದ. ಅವನ ಸ್ಥಿತಿ, ಗಲ್ಲು ಶಿಕ್ಷೆಗೊಳಗಾಗಿರುವ ಖೈದಿಯಂತೆ ಆಯಿತು. ಅಖೀಲಳ ಮದುವೆಯ ದಿನದಂದು ತನಗೆ ಗಲ್ಲುಶಿಕ್ಷೆ ವಿಧಿಸಲಾಗುವುದೆಂದು ಭಾವಿಸಿ, ಮದುವೆಯ ದಿನಾಂಕವನ್ನು ಎಣಿಸುವುದೇ ಒಂದು ಮುಖ್ಯ ಕಾರ್ಯ ಎಂದುಕೊಂಡ.

ಅಖೀಲಳ ಮದುವೆಯ ಯಾವ ಶಾ
ದಲ್ಲಿಯೂ ತಾನು ಇರಬಾರದೆಂದು ನಿರ್ಧರಿಸಿ
ಆ ದಿನವೆಲ್ಲ ಅವನು ಕುಕ್ಕರಹಳ್ಳಿ ಕೆರೆ ಏರಿ ಮೇ
ಕುಳಿತು ಕಣ್ಣೀರು ಹಾಕುತ್ತಿರುವಾಗ, ಹೊ
ದೊಂದು ವಿಚಾರ ಹೊಳೆಯಿತು. ಅದೇನೆಂದ
ಅಖೀಲಳನ್ನು ಬೀಳ್ಕೊಡುವ ಸಂದರ್ಭದ
ಯಾದರೂ ತಾನು ಇರಬೇಕಾಗಿತ್ತು ಎಂದು
ಆದರೆ ಒಡೆದು ಹೋಗಿರುವ ಹೃದಯದೊಂದಿ
ಅಲ್ಲಿ ಹೋಗಲು ಇಷ್ಟಪಡಲಿಲ್ಲ. ಮದುವೆಯ
ಸಂದರ್ಭದಲ್ಲಿ ತಾನು ಯಾವ ಕಾಣಿಕೆಯನು
ಕೊಡದಿದ್ದಕ್ಕೆ ಅವನಿಗೆ ದುಃಖವಾಯಿತು
ತಾನೊಬ್ಬ ನಿರ್ಗತಿಕ, ಯಾವ ಕಾಣಿಕೆಯನು
ಕೊಡಲು ತನ್ನಿಂದ ಸಾಧ್ಯವಾಗಲಿಲ್ಲವೆಂದು ತನ
ತಾನೇ ಸಮಾಧಾನ ಮಾಡಿಕೊಂಡ. ಪುನ
ಯೋಚಿಸಿದ, ಬೇರೆಯವರು ಕೊಡು
ಕಾಣಿಕೆಗಿಂತ, ತಾನು, ಅಖೀಲಳ ಗಮನ
ಬರದಿರುವಂತೆ ಕೊಟ್ಟಿರುವ ತನ್ನ ಹೃದಯ
ಕಾಣಿಕೆ ದೊಡ್ಡದು ಎನ್ನಿಸಿತು. ಜೀವನದ
ಪ್ರತಿಯೊಬ್ಬನೂ ಯಾವ ಮುಂದಾಲೋಚ
ಇಲ್ಲದೆ ತನ್ನ ಹೃದಯವನ್ನು ಇನ್ನೊಬ್ಬರಿ
ನೀಡಿಬಿಡುತ್ತಾನೆ. ಅನಂತರ ಅವನು ಎಷ್ಟೇ
ಶ್ರೀಮಂತನಾಗಿದ್ದರೂ ಬಡವನೇ!

ತನ್ನ ದಿನಚರಿಯಲ್ಲಿ, ಅಖೀಲಳ ಮದು
ವೆಯ ದಿನವನ್ನು ದುಃಖದಿಂದ ಕೂಡಿದ ಒಂದ
ದಿನ ಮತ್ತು ಅಖೀಲ ಇಲ್ಲದ ಚಿಕ್ಕಮ್ಮನ ಮನೆ



ಭೇಟಿ ನೀಡಿದ ಮೊದಲ ದಿನ ಸಹ, ದುಃಖ ದಿಂದ ಕೂಡಿದ ದಿನ, ಎಂದು ಗುರುತಿಸಿಕೊಂಡ.

ಅಖೀಲ ಇಲ್ಲದ ಚಿಕ್ಕಮ್ಮನ ಮನೆ ಎಷ್ಟೊಂದು ಪಾಳಾಗಿ ಕಂಡಿತು ಎಂದರೆ ಅದನ್ನು ಕಂಡು ಅವನಿಗೆ ದುಃಖ ಉಕ್ಕಿಬಂದಿತು.

ಇದಾದ ಬಳಿಕ ಅವನ ಜೀವನವೇ ಬದಲಾಗಿಹೋಯಿತು. ಬಿಸಿಲು ಏರುವವರೆಗೆ ಮಲಗಿಕೊಳ್ಳುತ್ತಿದ್ದ. ಕೆಲವೊಮ್ಮೆ ಏನಾದರೂ ತಿಂಡಿ ತಿಂದು, ಕೆಲವೊಮ್ಮೆ ಖಾಲಿ ಹೊಟ್ಟೆಯಲ್ಲೇ ಮನೆ ಬಿಟ್ಟು ಹೋಗಿ, ರಾತ್ರಿ ಹಿಂತಿರುಗುತ್ತಿದ್ದ. ಅವನ ಈ ನಡೆವಳಿಕೆಯಿಂದ ಮನೆ ಮಂದಿಯೆಲ್ಲ ಬೇಸತ್ತು, ಅವನಿಂದ ಯಾವೊಂದು ಒಳ್ಳೆ ನಿರೀಕ್ಷೆ ಇಟ್ಟುಕೊಂಡರೂ ಸುಮ್ಮನೆ ನೋವು ಅನು ಭವಿಸಬೇಕು ಎಂಬ ತೀರ್ಮಾನಕ್ಕೆ ಬಂದಿದ್ದರು.

ಅಲ್ಲಿಂದ ದೂರ ಓಡಿ ಹೋಗುವುದರ ಬಗ್ಗೆ ಹಗಲಿರುಳು ಯೋಚಿಸತೊಡಗಿದ. ಆ ಕುರಿತು ಗಟ್ಟಿ ಮನಸ್ಸು ಮಾಡಿಕೊಳ್ಳುವಷ್ಟರಲ್ಲೇ ಅಖೀಲ ಕಷ್ಟದಲ್ಲಿದ್ದಾಳೆ ಎಂಬ ವಿಚಾರ ಅವನ ಗಮನಕ್ಕೆ ಬಂತು. ಇದರಿಂದ ಅವನು ಚೇತರಿಸಿಕೊಳ್ಳಲು ಅಸಾಧ್ಯವಾಯಿತು.

ಅಖೀಲಳ ಮದುವೆಯಾಗಿ ಮೂರು ತಿಂಗಳು ಕಳೆದಿತ್ತು. ಈ ಮಧ್ಯೆ ಅವಳು ನಾಲ್ಕಾರು ಬಾರಿ ತವರಿಗೆ ಬಂದಿದ್ದರೂ, ಒಮ್ಮೆಯೂ, ಗಂಡ, ಇಪ್ಪತ್ತು ಸಾವಿರ ತರಲು ತನಗೆ ನಿತ್ಯ ಕೊಡುತ್ತಿರುವ ಕಿರುಕುಳದ ಬಗ್ಗೆ ಬಾಯಿ ಬಿಟ್ಟಿರ ಲಿಲ್ಲ. ಆದರೆ ಈ ಬಾರಿ ತಾಳ್ಮೆ ಕಳೆದುಕೊಂಡು ನಿಜಾಂಶವನ್ನು ಹೊರಕ್ಕೆ ಹಾಕಿದ್ದಳು.

ತನ್ನ ಪ್ರೇಯಸಿ ತನಗೆ ದಕ್ಕಲಿಲ್ಲವಾದರೂ ಅವಳು ಸಂತೋಷವಾಗಿರಲಿ ಎಂದು ಅವನ ಅಭಿಲಾಷೆಯಾಗಿತ್ತು. ಅವಳ ದಾಂಪತ್ಯ ಸಂತೋಷ ದಿಂದ ಕೂಡಿಲ್ಲ ಎಂದು ತಿಳಿದು, ಅವನು ಮತ್ತಷ್ಟು ಮೌನ ಧರಿಸಿಕೊಂಡ.

ಒಮ್ಮೊಮ್ಮೆ ಅವನು ಒಂದೊಂದು ಮಾತು ಯಾವ ರೀತಿ ಹೇಳುತ್ತಿದ್ದ ಎಂದರೆ ಅದನ್ನು ಕೇಳಿದ ಪ್ರತಿಯೊಬ್ಬರಿಗೂ ಅವನಿಗೆ ಹುಚ್ಚು ಹಿಡಿದಿದೆ ಎಂಬ ಅನುಮಾನ ಬರದೆ ಇರುತ್ತಿರಲಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಒಮ್ಮೆ ಅವನು, ಚಿಕ್ಕಮ್ಮನ ಮನೆಯಲ್ಲಿ, ಎಲ್ಲರ ಎದಿರು ಅಖೀಲಳಿಗೆ ಸಮಾಧಾನಿಸುತ್ತ, 'ಆದಷ್ಟು ಬೇಗ ತಾನು ಹೇಗಾದರೂ ಇಪ್ಪತ್ತು ಸಾವಿರ ಒದಗಿಸಿ ಕೊಡುತ್ತೇನೆ' ಎಂದಾಗ ಎಲ್ಲರೂ ಅವನ ಮುಖ ವನ್ನೇ ಸಂಶಯದಿಂದ ನೋಡತೊಡಗಿದರು.

ಇದಾದ ಮಾರನೇ ದಿನವೇ ಅವನು ಊರು ಬಿಟ್ಟು ಹೊರಟುಹೋದ. ಅವನು ಹೊರಟುಹೋದ ದಕ್ಕೆ ಯಾರೂ ಸಹ ಅವನನ್ನು ಹುಡುಕುವ ಬಗ್ಗೆ ಚಿಂತಿಸಲಿಲ್ಲ. ಆರಂಭದ ಕೆಲವು ದಿನ, ಸೋದರರು ಅಪರೂಪಕ್ಕೊಮ್ಮೆ ಅವನನ್ನು ಜ್ಞಾಪಿಸಿಕೊಳ್ಳುತ್ತಿ ದ್ದರು. ಹೋದಕಡೆ ಸಹ ನೆಮ್ಮದಿ ಪಡೆಯದೆ ಹಿಂತಿರುಗಿಬರುತ್ತಾನೆ ಎಂದು ಅವರ ಅಭಿ ಪ್ರಾಯವಾಗಿತ್ತು.

ಅವನ ತಾಯಿ, ತನ್ನ ಮಕ್ಕಳ ಮುಂದೆ ಅವನ ಹೆಸರೆತ್ತದಿದ್ದರೂ, ನಿತ್ಯ ಅವನನ್ನು ನೆನೆದು ಕಣ್ಣೀರು ಹಾಕುತ್ತಿದ್ದಳು.

ಎರಡು ತಿಂಗಳು ಕಳೆದಿರಬಹುದು. ಅಷ್ಟ ರಲ್ಲೇ ನಸೀಮ್, ಕಲ್ಕತ್ತೆಯಿಂದ ಇಪ್ಪತ್ತು ಸಾವಿರ ರೂಪಾಯಿ ಡ್ರಾಫ್ಟನ್ನು ಅಖೀಲಳ ಹೆಸರಿಗೆ ಕಳು ಹಿಸಿಕೊಟ್ಟ. ಅವನನ್ನು ಹುಚ್ಚ ಎನ್ನುತ್ತಿದ್ದ ಮಂದಿ ಬೆಚ್ಚಿಹೋದರು.

ಡ್ರಾಫ್ಟ್ ತಲುಪಿದ ಬಳಿಕ ಎಲ್ಲರೂ ಸಂತೋಷ ಪಟ್ಟರು. ಯಾರೂ ಸಹ ಇದರ ಬಗ್ಗೆ ವಿಮರ್ಶೆ ಮಾಡುವ ಗೋಜಿಗೆ ಹೋಗದೆ, ಒಬ್ಬರ ಮುಖ ಒಬ್ಬರು ನೋಡಿಕೊಂಡು ಮೌನ ಧರಿಸಿಕೊಂಡರು. ಇಷ್ಟೊಂದು ದೊಡ್ಡ ಮೊತ್ತವನ್ನು ಹೇಗೆ ಸಂಪಾದಿ ಸಿದ ಎಂಬುದು ಎಲ್ಲರ ಪಾಲಿಗೆ ಒಂದು ರಹಸ್ಯ ವಾಯಿತು. ಆದಷ್ಟು ಬೇಗ ಅವನು ಹಿಂತಿರುಗು ತ್ತಾನೆ ಎಂಬುದು ಎಲ್ಲರ ಅಭಿಪ್ರಾಯವಾಯಿತು.

ಅವನು ತುಂಬ ಉಲ್ಲಾಸದಿಂದ ಬಂದಿದ್ದ. ಆದರೆ ಇಲ್ಲಿ ಬಂದಾಗ ಅವನಿಗಾಗಿ ಹೊಸ



ದೊಂದು ದುಃಖದ ಸಂಗತಿ ಕಾದು ಕುಳಿತಿತ್ತು. ಅಖೀಲಳ ಗಂಡನ ಆರೋಗ್ಯ ತುಂಬ ಹದಗೆಟ್ಟು ಆಸ್ಪತ್ರೆಯಲ್ಲಿ ಸೇರಿಸಲಾಗಿತ್ತು.

ಮಾರನೇ ದಿನವೇ ಅವನು, ಅಖೀಲಳ ವಿಳಾಸ ಪಡೆದು, ಬೆಂಗಳೂರಿಗೆ ಹೊರಟುನಿಂತ. ಅಲ್ಲಿ ತಲುಪಿ, ಎಲ್ಲಕ್ಕಿಂತ ಮೊದಲು ಆಸ್ಪತ್ರೆಗೆ ಭೇಟಿಯಿತ್ತಾಗ, ಅಖೀಲ ಅಲ್ಲೇ ಇದ್ದಳು.

ಅಖೀಲ ದುಃಖಕ್ಕೊಳಗಾಗಿದ್ದರೂ, ಅವನನ್ನು ನೋಡಿ ತುಂಬ ಹರ್ಷಪಟ್ಟಳು. ಸರಿಯಾದ ಸಮಯದಲ್ಲಿ ಆಪದ್ಬಾಂಧವ ಹುಡುಕಿ ಬಂದಿದ್ದಾನೆ ಎನ್ನಿಸಿತು ಅವಳಿಗೆ.

ತುಂಬ ಸಮಯದವರೆಗೆ ಅಖೀಲಳ ಗಂಡನ ಬೆಡ್ ಹತ್ತಿರ ಕುಳಿತ ಬಳಿಕ, ಅವನು ವಾರ್ಡ್‌ನಿಂದ ಹೊರಗೆ ಹೊರಟು ನಿಂತಾಗ, ಅಖೀಲ ಅವನನ್ನು ಹಿಂಬಾಲಿಸಿದಳು. ಅವಳ ಕಣ್ಣುಗಳನ್ನು ನೋಡಿದರೆ ತನ್ನ ದುಃಖವೆಲ್ಲವನ್ನು ಹೇಳಿ ಅವಳು ಅತ್ತುಬಿಡುತ್ತಾಳೆ ಎಂದು ಭಾಸವಾಗುತ್ತಿತ್ತು.

ವಾರ್ಡ್‌ನಿಂದ ಹೊರಗೆ ಬಂದ ಅವನು, ಆಸ್ಪತ್ರೆ ಎದುರಿಗಿರುವ ಮೈದಾನದಲ್ಲಿ, ಅಲ್ಲಲ್ಲಿ ಹರಡಿಕೊಂಡಿರುವ 'ಗುಲ್‌ಮೊಹರ್' ಗಿಡಗಳ ಪೈಕಿ ಒಂದು ಗಿಡದ ಅಡಿಯಲ್ಲಿ ಕುಳಿತು, ಎಲೆಗಳನ್ನು ಕಳಚಿಕೊಂಡು ಬೋಳಾಗಿ ನಿಂತಿರುವ ಗಿಡಗಳ ಕೊಂಬೆಗಳನ್ನು ನೋಡತೊಡಗಿದ. ಇನ್ನು ಕೆಲವೇ ದಿನಗಳಲ್ಲಿ ಕೊಂಬೆಗಳ ಮೇಲೆ ಕೆಂಪನೆ ಹೂವುಗಳ ರಾಶಿ ಜಿಡುವ ಸೂಚನೆಗಳಿದ್ದುವು.

ಅಷ್ಟರಲ್ಲೇ ಅಖೀಲಳು ಸಹ ಬಂದು, ಅವನ ಸಮೀಪ ಕುಳಿತು, ಬಹಳಷ್ಟು ಸಮಯದವರೆಗೆ ಮೌನವಾಗಿದ್ದ ಬಳಿಕ ಹೇಳಿದಳು, ''ನಸೀಮ್, ನೀನು ಇಚ್ಛಿಸಿದರೆ ನೀನೇ ನನ್ನ ಗಂಡನಿಗೆ ಒಂದು ಮೂತ್ರಪಿಂಡ ಕೊಡಬಹುದು.''

ಇದನ್ನು ಕೇಳುತ್ತಿದ್ದಂತೆಯೇ ಅವನಿಗೆ ಉಸಿರಾಟವೇ ನಿಂತಂತೆ ಭಾಸವಾಯಿತು. ತುಂಬ ಸಮಯದವರೆಗೆ ಅಖೀಲಳ ಮುಖವನ್ನೇ ನೋಡಿದ ಬಳಿಕ ತಲೆ ತಗ್ಗಿಸಿಕೊಂಡು ಅಳತೊಡಗಿದ.

ಮೂರು ವರ್ಷಗಳಾಚೆ ಅವನು ತನ್ನ ಒಂದು ಮೂತ್ರಪಿಂಡವನ್ನೇ ಮಾರಿ ಅವಳಿಗೆ ಇಪ್ಪತ್ತು ಸಾವಿರ ಕಳುಹಿಸಿದ್ದು, ಈಗ ಒಂದೇ ಒಂದು ಮೂತ್ರಪಿಂಡದ ನೆರವಿನಿಂದ ಬದುಕಿಕೊಂಡಿರುವುದು, ಏನನ್ನೂ ಹೇಳಲು ಬಾಯಿ ಬರದೆ ಸುಮ್ಮನೆ ಸುಯ್ಯತೊಡಗಿದ.

ತೀರ ದುಃಖಕ್ಕೊಳಗಾದಾಗ ಕಥೆ ಬರೆದು
ಆ ಮೂಲಕ ನನ್ನ ವೇದನೆಯನ್ನು ವ್ಯಕ್ತ
ಪಡಿಸುತ್ತೇನೆ

ಅಬೀಬ್ ಅಖ್ತರ್.





ವಿವೇಕ ಶಾನಭಾಗ

ಕಥನ ಕುತೂಹಲ

ನಮ್ಮ ಸುತ್ತಲಿನ ಕಥನ ಕಲೆ

ಕಥನ ಕಲೆಯ ಬಗ್ಗೆ ಮನಸ್ಸು ಹರಿದಂತೆ ನೆನಪಿಗೆ ಬರುವುದು, ನಾನು ಬಾಲ್ಯದಲ್ಲಿ ಒಡನಾಡಿದ ಅನೇಕ ವ್ಯಕ್ತಿಗಳು, ಅದನ್ನು ನಾನಾ ರೀತಿಯಲ್ಲಿ ಬಳಸಿಕೊಂಡ ಬಗೆ. ಇದನ್ನು ನೆನೆಸಿಕೊಂಡಂತೆಲ್ಲ, ಅವರಿಗೆ ಸಹಜವಾಗಿ ಒದಗಿಬಂದ ಕಥನಕಲೆಯ ಪ್ರಾವೀಣ್ಯತೆಯ ಬಗ್ಗೆ ಬೆರಗಾಗುತ್ತೇನೆ. ಇವರೆಲ್ಲರಿಂದಾಗಿ, ನನಗರಿವಿಲ್ಲದೇ, ನನ್ನ ದೈನಿಕದ ಭಾಗವಾಗಿ ಸೃಷ್ಟಿಯಾಗಿದ್ದ ಕಥಾಲೋಕವೊಂದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.


ನನ್ನ ಹತ್ತಿರದ ಸಂಬಂಧೀಕರೊಬ್ಬರು ಹೊನ್ನಾವರದಲ್ಲಿದ್ದರು. ಮುದುಕರಾದ ಅವರ ಬಗ್ಗೆ ನೂರಾರು ಕತೆಗಳಿದ್ದವು. ಯುದ್ಧಕಾಲದಲ್ಲಿ ಅವರು ಮುಂಬೈಯಲ್ಲಿ ಟ್ಯಾಕ್ಸಿ ಓಡಿಸುತ್ತಿದ್ದದ್ದು, ಅವರು ಮುರಾರ್ಜಿಯವರ ತಂದೆಯ ಕಾರಿನ ಡ್ರೈವರಾಗಿದ್ದದ್ದು, ಆ ಸಂಬಂಧದಿಂದ ಮುರಾರ್ಜಿ ಹೊನ್ನಾವರಕ್ಕೆ ಬಂದು ಅವರನ್ನು ನೋಡಿದ್ದು ಇತ್ಯಾದಿ ರೋಚಕ ಕತೆಗಳು. ಅವರು ನಮಗೆ, ಅಸ್ತ್ರ ಸನ್ಯಾಸ ತೆಗೆದುಕೊಂಡ ವೀರಾಗ್ರಣಿಯಂತೆ ತೋರುತ್ತಿದ್ದರು. ಅವರ ಸುತ್ತ ಹುಟ್ಟಿದ ಕೆಲವು ಕತೆಗಳು ಮಾಯಾವಾಸ್ತವದಂತಿರುತ್ತಿದ್ದವು. ಈ ಎಲ್ಲ ಕತೆಗಳ ಹೀರೋ ಅವರೇ ಆಗಿದ್ದರೂ, ಅವರು ಶುರುಮಾಡಲು ಪ್ರೇರಣೆ ನೀಡುತ್ತಿದ್ದರೇ ವಿನಃ ಯಾವತ್ತೂ ಕತೆಯನ್ನು ತಾವೇ ಹೇಳುತ್ತಿರಲಿಲ್ಲ. ಮೂಲ ಘಟನೆಯನ್ನು, ಒಮ್ಮೆ ಮಾತ್ರ, ಯಾರಿಗೋ, ಯಾವಾಗಲೋ ಹೇಳಿದ್ದಿರಲೇಬೇಕು ಎಂದು ನಮ್ಮ ಊಹೆ. ಅವಳನ್ನು ಕೇಳು ಎಂದು ತಮ್ಮ ಹೆಂಡತಿಯತ್ತಲೋ, ನಿನ್ನ ಅಪ್ಪನನ್ನು ಕೇಳು ಎಂದೋ, ಅದೋ ಅವರನ್ನು ಕೇಳು ಎಂದು ಆ ಹೊತ್ತಿಗೆ ಮನೆಯಲ್ಲಿದ್ದ ಬೇರೆ ಯಾರನ್ನೋ ತೋರಿಸುತ್ತಿದ್ದರು. ಯಾರೂ ಇಲ್ಲದಿದ್ದರೆ, ಇಂಥವರು ಬರಲಿ, ಅವರಿಗೆ ಅದು ಗೊತ್ತುಂಟು ಎಂದು ನಾವು ಆ ವ್ಯಕ್ತಿಗಾಗಿ ಕಾಯುವಂತೆ ಮಾಡುತ್ತಿದ್ದರೇ ವಿನಃ ಅವರೇ ಎಂದೂ ಹೇಳಿದ್ದಿಲ್ಲ. ಅವರ ಕುರಿತ ಬಗೆಬಗೆಯ ಕತೆಗಳೆಲ್ಲ ಕುಟುಂಬದ ಎಲ್ಲರಿಗೂ ಗೊತ್ತಿದ್ದಂತಿದ್ದವು.

ಬೇರೆ ಯಾರೋ ಅವರ ಕುರಿತ ಕತೆಗಳನ್ನು ಹೇಳುವಾಗ, ಅವರು ಹೌದು ಅಲ್ಲ ಅನ್ನದೇ ಸುಮ್ಮನೇ ಮುಗುಳುನಗುತ್ತ ಕೇಳಿಸಿಕೊಳ್ಳುವರು. ತಮ್ಮ ಬಗ್ಗೆ ಹೇಳಿದ ಯಾವುದನ್ನೂ ಅವರು ನಿಜವೆಂದು ಯಾವತ್ತೂ ಖಾತ್ರಿಪಡಿಸಿದವರಲ್ಲ; ಅಥವಾ ಸುಳ್ಳೆಂದು ಅಲ್ಲಗಳೆದವರಲ್ಲ. ನಾವು ಮಕ್ಕಳು, ವಿವರಗಳಿಗಾಗಿ ಪೀಡಿಸಿದರೆ, ಕಥೆ ಹೇಳಿದವರನ್ನೇ ಕೇಳು ಎಂದು ಅವರತ್ತ ನಮ್ಮನ್ನು ಕಳಿಸುತ್ತಿದ್ದರು. ಹಿಂದೆ ಯಾವಾಗಲೋ ಅವರು ಗಣಪತಿ ಮುಳುಗಿಸಲು ಹೋದಾಗ ಗಣಪತಿಯ ಜೊತೆಗೇ ಬಾವಿಗೆ ಬಿದ್ದು, ಒಮ್ಮೆ ಮುಳುಗಿ ಎದ್ದ ನಂತರ ದಂಡೆಯ ಮೇಲಿದ್ದ ಜನ ಅವರನ್ನು ಮೇಲೆ ಎಳೆದುಕೊಂಡದ್ದು ಒಂದು ಕತೆ. ಇದರ ನಾನಾ ರೂಪಗಳನ್ನು, ಹೇಳುವವರ ಕಲ್ಪನಾಶಕ್ತಿಯ ಪ್ರಕಾರ ನಾವು ಕೇಳಿದ್ದೆವು. ಗಣಪತಿಯೇ ಅವರನ್ನು ಕೈಹಿಡಿದು ಮೇಲೆ ತಂದುಬಿಟ್ಟದ್ದು, ಇಷ್ಟಾಗಿಯೂ, ಅವರ ಧೋತರವೂ ಒದ್ದೆಯಾಗಿರಲಿಲ್ಲ ಅನ್ನುವುದು ಕತೆಯ ಕೊನೆಯಲ್ಲಿ ಬರುವ ಶೃಂಗಪ್ರಾಯವಾದ ಕೆಲವು ಮಾತುಗಳಾಗಿದ್ದವು. ಅವರು, ಸ್ವತಃ ಇದಾವುದನ್ನೂ ಖಚಿತಪಡಿಸುವ ಗೋಜಿಗೇ ಹೋಗುತ್ತಿರಲಿಲ್ಲವಾದ್ದರಿಂದ ಎಲ್ಲವೂ ಕತೆ ಹೇಳುವವರ ಕಲ್ಪನೆಗೆ ಬಿಟ್ಟ ಸಂಗತಿಗಳಾಗಿದ್ದವು. ನಂಬಲು ತಯಾರಿರುವ ಮಕ್ಕಳು ಸಿಕ್ಕರೆ ಏನಾದರೂ ಹೇಳಬಹುದಿತ್ತು. ಅತ್ಯಂತ ಸಾಮಾನ್ಯ ಎಂದು ಮೇಲ್ನೋಟಕ್ಕೆ ಅನಿಸುವಂಥ ಬದುಕು ಬಾಳಿದ ಅವರು, ಈ ಕತೆಗಳಿಂದಾಗಿ ಮತ್ತು ಅವು ಅವರ ವ್ಯಕ್ತಿತ್ವದ ಬಗ್ಗೆ ಹುಟ್ಟಿಸಿದ ಪುರಾಣಸದೃಶ ರೂಪಕಗಳಿಂದಾಗಿ, ಕುಟುಂಬದಲ್ಲಿ ವಿಶಿಷ್ಟ ವ್ಯಕ್ತಿಯೆಂಬ ಗೌರವಕ್ಕೆ ಪಾತ್ರರಾದರು. ಇದೆಲ್ಲದರ ಮೂಲಕ, ಅವರ ಸಂಪರ್ಕಕ್ಕೆ ಬಂದವರಲ್ಲೆಲ್ಲ ಯಾವುದೋ ಕಥೆಯಾಗಿ ಉಳಿದರು.

ಈಗ ಅದನ್ನೆಲ್ಲ ಯೋಚಿಸಿದರೆ, ಅವರು ತಮ್ಮ ಸುತ್ತ ನೇಯುತ್ತ ಹೋದ ಪುರಾಣದ ಸಂರಚನೆಯ ಬಗ್ಗೆ ಕೌತುಕವಾಗುತ್ತದೆ. ಕುಶಲ ಕಲೆಗಾರನೊಬ್ಬ ಕಟ್ಟಿದ ಕತೆಯಂತೆ, ನಾನಾ ಎಳೆಗಳನ್ನು ಹಿಡಿದು ಒಂದಕ್ಕೊಂದು ಜೋಡಿಸುತ್ತ, ಕುತೂಹಲ ಕೆರಳಿಸುತ್ತ, ಭಾವೋನ್ಮಾದಗಳನ್ನು ಸೃಷ್ಟಿಸುತ್ತ ಅವರು ಅದನ್ನು ತಮ್ಮ ಸುತ್ತ ಹೆಣೆದ ರೀತಿ ಒಂದು ಕಾದಂಬರಿಯ ಸಂಕೀರ್ಣ ರಚನೆಯ ಹಾಗೆ ಕಾಣುತ್ತದೆ. ಅವರಿವರ ಮೂಲಕ ತಮ್ಮ ಕಥೆಯನ್ನು ಕಥಿಸುತ್ತ, ಹಾಗೆ ಮಾಡುವ ಮೂಲಕ ಪ್ರತಿ ವ್ಯಕ್ತಿಯಲ್ಲೂ ಅವರ ವ್ಯಕ್ತಿತ್ವದ ಅಂಗವಾಗಿ ಇರುವ ಕಥನ ಕ್ರಮವನ್ನೇ ಬಳಸಿ, ತಮ್ಮ ಸುತ್ತ ಪುರಾಣವನ್ನು ಹೊಸೆದರು. ಸ್ವತಃ ಏನೂ ಹೇಳದೇ ಇದ್ದುದರಿಂದ ಕತೆ ಹೇಳುವವರಿಗೆ ವಾಸ್ತವ ಕಥನದ ಮಿತಿ ಇರದ ಹಾಗೆ ಮಾಡಿದರು. ಇದೆಲ್ಲ ಜರುಗುವಾಗ ಅವರು ಜಗುಲಿಯ ಮೂಲೆಯ ಕುರ್ಚಿಯಲ್ಲಿ ಕೂತಿರುತ್ತಿದ್ದುದರಿಂದ, ಕತೆಗಳ ಎಲ್ಲ ಅತಿಗಳಿಗೂ ಒಂದು ಸೂಕ್ಷ್ಮ ಮಿತಿಯನ್ನೂ ಒಡ್ಡಿದರು.

ನನ್ನ ನೆನಪಿಗೆ ಬರುವ ಇನ್ನೊಂದು ರೀತಿಯ ಕಥಾನಕಕ್ಕೆ ಕಾರಣವಾದ ವ್ಯಕ್ತಿ, ನನ್ನ ಅಜ್ಜನ ತಂಗಿ. ಅವರ ಹೆಸರು ಸುಶೀಲಕ್ಕ. ಅವರ ಮನೆಗೆ ಹೋದಾಗಲೆಲ್ಲ ಅವರನ್ನು ಕತೆಗಾಗಿ ಪೀಡಿಸುತ್ತಿದ್ದೆವು. ಅದೂ, ಅವರು ಯಾವಾಗಲೂ ಹೇಳುವ 'ನೆರಳಿನ ಕಳ್ಳ' ಎಂಬ ಆ ಒಂದೇ ಕತೆಗಾಗಿ! ಪ್ರತಿ ದಿನವೂ ಮತ್ತು ಕೆಲವು ಸಾರಿಯಂತೂ ಒಂದೇ ದಿನದಲ್ಲಿ ಹಲವು ಬಾರಿ ಅದೊಂದೇ ಕತೆಗಾಗಿ ಪೀಡಿಸುತ್ತಿದ್ದೆವು. ಅದೇ ಕತೆ, ಅದೇ ಆರಂಭ, ಅದೇ ಕೊನೆ. ಆದರೂ ಅವರಿಂದ ಕೇಳಿದಾಗ ಅದು ಪ್ರತಿ ಬಾರಿಯೂ ಹೊಸತಾದ ಅನುಭವ ಕೊಡುತ್ತಿತ್ತು. ಅವರ ಕಥನಕ್ಕೆ ಕುತೂಹಲದ ಕುದುರೆಯೇರುವ ಹಂಗಿರಲಿಲ್ಲ. ಇಡೀ ಕಥೆ ಗೊತ್ತಿದ್ದೂ, ಕಥೆ ತಣಿಸುವ

ಕುತೂಹಲವನ್ನು ಬಿಟ್ಟುಕೊಟ್ಟು, ಅದು ಕೊಡುವ ಇತರ ಅನುಭವಗಳಿಗಾಗಿ ನನ್ನಂಥ ಮಕ್ಕಳು ಕಥೆಯನ್ನು ಬೇಡತೊಡಗುವಂತೆ ಮಾಡಿದ್ದು ಅವರ ಕಥನಕಲೆಯ ಹೆಚ್ಚಳಿಕೆ. ಅವರು ಕೆಲಸ ಮಾಡುತ್ತ ಕಥೆ ಹೇಳುವರು. ಆ ಹೊತ್ತಿಗೆ ಅಡಿಗೆ ಮನೆಯಲ್ಲಿದ್ದರೆ, ಅಲ್ಲಿಯ ವಿವರಗಳು, ಕೊಟ್ಟಿಗೆಯಲ್ಲಿದ್ದರೆ, ಅಲ್ಲಿಯ ವಾತಾವರಣಕ್ಕೆ ತಕ್ಕ ಮಾತುಗಳು ತುಸು ಹೆಚ್ಚು ಸೇರಿಕೊಳ್ಳುತ್ತಿದ್ದವು. ಅವರು ವಿವರಗಳನ್ನು ಹೇಳುವ ಕ್ರಮದಲ್ಲಿ, ಅದೇ ಸಂಭಾಷಣೆಯನ್ನು ಅವರು ತುಸು ಸ್ವರ ಬದಲಿಸಿ ಹೇಳುವ ರೀತಿಯಲ್ಲಿ, ಆ ಕಳ್ಳ ತನ್ನ ತಾಯಿಗೆ ಏನನ್ನೋ ಹೇಳಲು ಬಗ್ಗಿದ ರೀತಿಯಲ್ಲಿ ಅಥವಾ ಅವನು ಕಳ್ಳತನಕ್ಕೆ ಹೋದ ರಾತ್ರಿ ಇದ್ದ ಕತ್ತಲೆಯ ಗಾಢಾಂಧಕಾರದಲ್ಲಿ ಅಥವಾ ನೆರಳಿನ ಹಾಗೆ ಬಂದು ಮಾಯವಾಗಿ ಹೋಗುವ ಅವನನ್ನು ಹಿಡಿಯಲಾಗದೇ ಹೋದ ಮಂತ್ರಿಯ ನಿಟ್ಟುಸಿರಿನಲ್ಲಿ... ಹೀಗೆ, ಎಲ್ಲೋ ಒಂದು ಕಡೆ ಅವರ ಪ್ರತಿ ಕಥನವೂ ಸೂಕ್ಷ್ಮವಾಗಿ ಬೇರೆಯಾಗಿ, ಪ್ರತಿ ಬಾರಿಯೂ ಭಿನ್ನವಾದ ಅನುಭವ ಕೊಡುತ್ತಿತ್ತು. ಇಲ್ಲವಾದರೆ, ನಮ್ಮಂಥ ಮಕ್ಕಳನ್ನು, ಆ ಒಂದೇ ಕತೆಯಿಂದ, ಅಷ್ಟು ವರ್ಷಗಳ ಕಾಲ ತಣಿಸಲು ಸಾಧ್ಯವಿತ್ತೇ?



ರೋಮಿಯೊ

ಜಾನಪದ ಸಾಹಿತ್ಯದ ಒಂದು ಮುಖ್ಯ ವೈಶಿಷ್ಟ್ಯ ಇಂಥ ಕಥನ ಕ್ರಮ. ರಸಾನುಭವಕ್ಕೆ, ಕುತೂಹಲಶಮನಕ್ಕಿಂತ ಮುಖ್ಯವಾದದ್ದು ಕಥೆಯ ದೇಹ, ಅದರ ಒಳ ತಿರುವುಗಳು, ಏರಿಳಿತಗಳು, ಲಯಗಳು ಎಂಬ ನಂಬಿಕೆಯಿಂದ ಕಥಿಸುವುದು. ನಾವು ಪುರಾಣಗಳನ್ನು ಕಥೆಯ ಕುತೂಹಲಕ್ಕಾಗಿ ಪದೇ ಪದೇ ಓದುವುದಿಲ್ಲ. ಅವು ಪ್ರತಿ ಓದಿನಲ್ಲೂ ಇನ್ನಷ್ಟು ಬಿಟ್ಟುಕೊಡುವ ಭಿನ್ನ ಅರ್ಥವಿನ್ಯಾಸಕ್ಕಾಗಿ, ಹೊಸ ಬೆಳಕಿನಲ್ಲಿ ಗೋಚರಿಸುವ ಯಾವುದೋ ವಿವರಗಳಿಗಾಗಿ ಮತ್ತೆ ಮತ್ತೆ ಅವುಗಳತ್ತ ಹೋಗುತ್ತೇವೆ. ಅತಿ ವೇಗದ ಆಮಿಷವನ್ನು ತೊರೆದು ಒಂದೆಡೆ ನೆಲೆನಿಂತ ಮನಸ್ಸು ಮಾತ್ರ, ಇಂಥ ಅನುಭವಗಳನ್ನು ಮತ್ತು ಒಳನೋಟಗಳನ್ನು ಪಡೆಯಲು ಸಜ್ಜಾಗಿರುತ್ತದೆ. ಯಕ್ಷಗಾನದ ಸ್ವರೂಪ ಮತ್ತು ಅದು ನೋಡುಗನಿಂದ ಬೇಡುವ ಶಿಸ್ತು ಇಂಥದ್ದು. ಅಲ್ಲಿ ಭೀಷ್ಮ ಪ್ರತಿಜ್ಞೆ ರಾತ್ರಿಯಿಡೀ ವ್ಯಾಪಿಸುತ್ತದೆ. ಕ್ಷಣಮಾತ್ರದಲ್ಲಿ ಜರುಗುವ ಯುದ್ಧಕ್ರಿಯೆ, ಕಥೆಯನ್ನು ಮುಂದುವರಿಸುವ ಅಗತ್ಯ ಮಾತ್ರವಾಗಿ ಕಾಣುತ್ತದೆ. ಆದರೆ ಟಿವಿಯ ಮಹಾಭಾರತದಲ್ಲಿ, ಐದು ನಿಮಿಷಗಳಲ್ಲಿ ಭೀಷ್ಮ ಪ್ರತಿಜ್ಞೆ ಮುಗಿದು, ನಾನಾ ರೀತಿಯ ಅಸ್ತ್ರಗಳ ಡಿಕ್ಕಿಯನ್ನು ಕಾಣಿಸುವ ಯುದ್ಧ ತಿಂಗಳುಗಟ್ಟಲೇ ನಡೆಯುತ್ತದೆ. ಜಾನಪದ ಕಲೆಗಳ ಜೊತೆ ನಮ್ಮ ಸಂಬಂಧ ದುರ್ಬಲವಾದ ಹಾಗೆ, ಯಕ್ಷಗಾನದಂಥ ಕಲೆಗಳು ನಿತ್ಯ ಜೀವನದಿಂದ ದೂರವಾಗುತ್ತ ಹೋದ ಹಾಗೆ, ನಮ್ಮ ಮನಸ್ಸು, ನೆಲೆನಿಂತು ಬೇರು ಬಿಡಲು ಹವಣಿಸುವುದಿಲ್ಲ. ಬದಲಿಗೆ ಧಾವಂತದಲ್ಲಿ ಮೈಮರೆಯಲು ಬಯಸುತ್ತದೆ. ಕುತೂಹಲದ ಕಾಳ್ಗಿಚ್ಚನ್ನು ಎಬ್ಬಿಸಿ, ಹಬ್ಬಿಸಿ, ತಣಿಸಿಕೊಳ್ಳಲು ಬಯಸುತ್ತದೆ. ಇಂಥ ಜಗತ್ತಿನಲ್ಲಿ ಸುಶೀಲಕ್ಕನಂತೆ ಕಥೆ ಹೇಳುವವರಿಗೆ, ಆ ರೀತಿಯ ಕಥನ ಕ್ರಮಕ್ಕೆ ಜಾಗ ಮಾಡಿಕೊಡಲು ನಾವು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ■



ಮಾರುತಿ

''ಊರಲ್ಲಿ ಯಾರಿಗೋ ಆರಾಮಿಲ್ಲ'' ಅಂತ ನನ್ನ ತಳಮಳ ಹತ್ತಿಕ್ಕಲಾರದೆ, ನನ್ನ ಜತೆ ಚಳಿಯಲ್ಲಿ ನಡುಗುತ್ತ ಕೂತ ಹಳ್ಳಿಯ ಮುದುಕಿಗೆ ಹೇಳಿದೆ. ಸುಮಾರು ಎರಡು ಗಂಟೆಗಳಿಂದ ಬೆಂಚ್‌ಮೇಲೆ ನಡುಗುತ್ತಾ ಕೂತಿದ್ದೆವು. ಯಾರೆನ್ನುವುದು ಅವಳಿಗೆ ಮುಖ್ಯವಾದಂತಿರಲಿಲ್ಲ. ''ಹಿಂಥಾ ಯಾಲ್ಯಾದಾಗು ಹಿಂಗ ಕಾಡಿಸಬೇಕ್ರೀ ಈ ಗಾಡಿ!'' ಎಂದಳು. ನನ್ನ ತಾಯಿಗೆ ಸೀರಿಯಸ್ ಅನ್ನುವ ಸಂದೇಶ ತಲುಪಿದ ತಕ್ಷಣ, ಶಾಲಿಲ್ಲದೆ, ಚೂಡೀದಾರ್, ಸ್ವೆಟರ್ ಕೂಡಾ ಇಲ್ಲದೆ, ಎರಡೇ ಜೋಡಿ ಬಟ್ಟೆ ತೆಗೆದು ಒಂದು ಸೂಟ್‌ಕೇಸ್‌ನಲ್ಲಿ ತುರುಕಿ ಹೊರಟಿದ್ದೆ. ಥಟ್ಟನೆ, ಅಪ್ಪನ ಮೋರೆ ಸಿಗದೆ ಊರಿಗೆ ಭಾರಹೃದಯ ಹೊತ್ತು ಬಂದಿದ್ದು ನೆನಪಾಯಿತು. ಅಮ್ಮನನ್ನು ಕಳೆದ



ಕಮಲಾ ಹೆಮ್ಮಿಗೆ

ಒಂದು ಸಾವು

ಸಲ ನೋಡಿದಾಗ ಏನೇನು ಮಾತಾಡಿದ್ದಿವಿ ಎಂದು ಯೋಚಿಸಿದೆ. ಅಮ್ಮ, ''ಇನ್ಯಾಕೆ ಬದುಕಿರಬೇಕಮ್ಮ ನಾನು ದಿನಕ್ಕೆ ಎರಡು ಸಲ ಎದೆಶೂಲೆ, ಎಲ್ಲಾ ಚೆನ್ನಾಗಿರುವಾಗ......'', ಅರ್ಧಕ್ಕೆ ಬಿಕ್ಕಿದ್ದಳು.

ಹಿಂಗ್ಯಾಕೆ ಮಾಡಿದಳು, ನನ್ನದೇ ಚಿಂತೆ, ಎದೆಗುದಿಗೆ ಕಾರಣವಾಗಿದ್ದೀತೇ ಎಂದು ಅಪರಾಧಪ್ರಜ್ಞೆ ಕಾಡಿತು. ''ಹಂಗೆ ನೀನು ಹೇಳೋಕೆ ಶುರುಮಾಡಿ ಆರು ವರ್ಷವಾದುವಮ್ಮಾ, ಹೋಗೋದು ಯಾರ ಕೈಲಿದೆ'', ನಾನು. ವಾಸ್ತವವಾಗಿ, ಪ್ರತಿ ಸಲ ಆಕೆ, ಬಾಲ್ಕನಿಯಲ್ಲಿ ನಿಂತು ಕೈಬೀಸುತ್ತಾ, ಆಟೋದಲ್ಲಿ ಕೂತ ನಾನು ಕೈಬೀಸುತ್ತಾ, ಜೂಮ್ ಔಟ್ ಆಗುತ್ತಿದ್ದಂತೆ, ''ಮುಂದಿನ ಸರ್ತಿ ಈಕೆ ಇರ್ತಾಳೋ ಇಲ್ಲವೋ'' ಎಂದುಕೊಳ್ಳುತ್ತಿದ್ದಿಲ್ಲವೆ? ಎಂದೂ ಸಾವು, ಮಣ್ಣಿಗೆ ಹೋಗದಿದ್ದ ನಾನು ಈಚಿನ ದಿನಗಳಲ್ಲಿ ಅಂತಹ ಸಂದರ್ಭಗಳು ಬಂದಾಗ, ಹೋಗುತ್ತಾ, ಅಮ್ಮನ ಸಾವಿನ ದೃಶ್ಯ ಕಲ್ಪಿಸಿಕೊಳ್ಳುವುದು ಪರಿಪಾಠವಾಗಿತ್ತು. ನನ್ನ ಸ್ನೇಹಿತೆಯ ತಂದೆ ಸತ್ತಾಗ, ಆಕೆ ಹದಿನೈದು ದಿನ ರಜಾದ ನಂತರ ಸಿಕ್ಕವಳು, ಗೆಲುವಾಗೇ ಇದ್ದುದನ್ನು ಕಂಡು ಅಚ್ಚರಿಪಟ್ಟಿದ್ದೆ. 'ಎಲ್ರೂ, ಒಂದ್ ದಿನ ಸಾಯಲೇಬೇಕಲ್ರಿ,' ಎಂಬ ಆಕೆಯ ಮಾತು, ಸೊರಗಿದ್ದ ನನಗೆ ಚೈತನ್ಯ ನೀಡಿತ್ತು. ಪಕ್ಕದ ಹೆಂಗಸು, ''ನಡ್ರಿ, ಅಟ ಚಾ ಅರ ಕುಡ್ದು ಬರೋಣು'' ಅಂದಾಗ, ''ನನಗೇ ಟ್ಯಾಕ್ಸ್ ಹಾಕಬೇಕಂತಿದ್ದಾಳೇನೋ'' ಎಂದು ಸಂಶಯಿಸುತ್ತಾ, ''ನಡ್ರಿ'' ಅಂದೆ. ಎರಡು ಇಡ್ಲಿ ಒಂದು ಚಹಾ ತೆಗೆದುಕೊಂಡೆವು. ಆಕೆ, ಬಾಳೇಕಾಯಿಯಿಂದ ದುಡ್ಡು ತೆಗೆದು, ''ನನ್ನ ಪಾಲಿಂದು'' ಎಂದು ಎಲೆಯಡಿಕೆ ಜಗಿದು ಕೆಂಪಾದ ತುಟಿಗಳಲ್ಲಿ ಹೇಳಿದಾಗ ನಾಚಿದೆ. ಎಲ್ಲರೂ ಒಂದೇ ನಮೂನೆ ಇರೋದಿಲ್ಲ ಎನಿಸಿತು.

ತಿರುಗಿಬಂದಾಗ ಬಸ್ಸು ಬಂದಿರಲಿಲ್ಲ. ನನ್ನ ಎದೆಬಡಿತವೂ ಹೆಚ್ಚಾಗಿತ್ತು. ''ಹುಬ್ಬಳ್ಳಿಗೇನೇ ಹೋಗಿಬಿಡಬೇಕಿತ್ರಿ, ಮದಲಿಗೇನೇ,'' ಎಂದಳಾಕೆ. ನಾನು ಮಾತಿಲ್ಲದೇ ಅವಳನ್ನು ಹಿಂಬಾಲಿಸಿದೆ. ಹುಬ್ಬಳ್ಳಿಯಲ್ಲಿಳಿದರೆ, ಜನತಾ ಟ್ರಾವೆಲ್ಸ್ ಬಸ್ಸು ನಿಂತಿದ್ದು ಕಂಡಿತು. ''ಹತ್ತೇ ನಿಮಿಷ, ಹೊರಡ್ತದೆ'' ಎಂದ ಒಬ್ಬ. 'ಅರೆ, ಫೋನ್ ಮಾಡಿದರೆ ಅಮ್ಮನ ವಿಷಯ ತಿಳಿಯುತ್ತಲ್ಲ' ಎಂದು ಎದುರಿಗಿದ್ದ ಎಸ್.ಟಿ.ಡಿ. ಬೂತ್‌ಗೆ ಹೋದೆ. ಫೋನ್ ಮಾಡಿದ್ದು ಅಣ್ಣನ ಮನೆಗೆ. ನನ್ನಣ್ಣನ ಅತ್ತೆ, ಮುದುಕಿ, ಫೋನೆತ್ತಿದ ಕೂಡಲೇ ''ನಿಮ್ಮಮ್ಮ ಹೋಗಿಬಿಟ್ರಮ್ಮ'' ಎಂದಿತು. ಅದಕ್ಕೂ ಅಷ್ಟು ದುಗುಡ ದಾಟಿಸಿದ ನೆಮ್ಮದಿ ಇರಬೇಕು. ''ಹೌದಾ!' ಎಷ್ಟೊತ್ಗೆ?''

''ಈಗ್ತಾನೇ, ಏಳುಗಂಟೆಗೆ. ಅವ್ರೆಲ್ಲಾ ಹೊರಗೆ ಹೋಗಿದಾರೆ.'' ನಾನು ಪಟ್ಟನೆ ಫೋನಿಟ್ಟೆ. ಅಮ್ಮ ಇದ್ದಾಗಲೇ ಅವಳ ಅಗಲಿಕೆಗಾಗಿ ಅತ್ತಿದ್ದ ರಿಂದಲೋ ಏನೋ, ಕಣ್ಣಲ್ಲಿ ಹನಿ ನೀರೂ ಬರ ಲಿಲ್ಲ. ಆದರೆ ತಲೆ ಭಾರವಾಯಿತು. ವಾಪಸು ಬಂದಾಗಲೂ ಬಸ್ಸು ಖಾಲಿ ಇತ್ತು. ಅಷ್ಟರಲ್ಲಿ ಸರ್ಕಾರಿ ಬಸ್ಸೊಂದು ಬಂದಿದ್ದರಿಂದ, ''ನಾನು ಬರ್ತೀನವ್ವ'' ಎಂದವಳೇ ಹತ್ತಿಕೊಂಡೆ. ಬಸ್ಸು ಸಾಗುತ್ತಿರುವಂತೆ, ಆ ಹೆಂಗಸಿಗೂ ನನ್ನ ತಾಯಿ ಯಷ್ಟೇ ವಯಸ್ಸಲ್ಲವೇ ಎನಿಸಿತು. ಯಾವುದೋ ಆಸರೆಗಾಗಿ ಆಕೆ ಕೂಡ ಸಂಭಾಷಿಸಿದ್ದಿರಬಹು ದೆನಿಸಿತು.

ಒಂದು ಕ್ಷಣ ನಿರಾಳ. ಅಮ್ಮ, ಎದೆಶೂಲೆ ಯಿಂದ ಮುಕ್ತಳಾದಳು. ಇನ್ನು, 'ರಾತ್ರಿ, ಯಾವಾಗ ಏನು ಸುದ್ದಿ ಬರುತ್ತೋ' ಎಂಬ ಆತಂಕವಿಲ್ಲ. ಮರುಕ್ಷಣ, 'ಅಮ್ಮನ ದೇಹವನ್ನು, ಅಣ್ಣ ಕೊಚ್ಚಿನ್ ನಿಂದ ಬಂದ ತಕ್ಷಣ ಸುಟ್ಟುಹಾಕಿಬಿಡ್ತಾರೆ. ಅಷ್ಟ ರೊಳಗೆ ತಲುಪಿಯೇನೋ ಇಲ್ಲವೋ' ಎಂಬ ತಲ್ಲಣ. 'ಪಾಪ ಆಕೆ, ದವಾಖಾನೆಯಲ್ಲಿದ್ದಾಗ ಹತ್ತಿರ ಇರಬೇಕಿತ್ತು, ಆಗ ಇಷ್ಟು ಕಾತರವಿರು ತ್ತಿರಲಿಲ್ಲ' ಎಂದಿತು ಇನ್ನೊಂದು ಮನಸ್ಸು. ಅಂತೂ, ಬಸ್ಸು ನಿಧಾನಕ್ಕೆ ಸಾಗುತ್ತಾ ಬೆಂಗಳೂರು ಮುಟ್ಟಿ ದಾಗ ರಾತ್ರಿ ಏಳೂವರೆ. ಇಳಿದ ತಕ್ಷಣ, ಮಲ್ಲೇಶ್ವರದ ಒಂದು ಅಂಗಡಿಗೆ ಹೋಗಿ ಹೂವಿನಹಾರ ಕೊಂಡೆ.

ಎದೆ ಢವಢವಿಸುತ್ತಿತ್ತು. ರಿಕ್ಷಾದಲ್ಲಿ ಸದಾಶಿವ ನಗರಕ್ಕೆ ಹೋದೆ. ದಾವಣಗೆರೆಯಿಂದ ಫೋನ್ ಮಾಡಿದಾಗ ಅತ್ತಿಗೆ ತಗೊಂಡು, ''ನಿಮ್ಮಣ್ಣ ಇನ್ನೂ ಬಂದಿಲ್ಲಮ್ಮ'' ಎಂದಾಗ ನಿರಾಳವಾಗಿತ್ತು. ''ಹಾಗಾದ್ರೆ, ಅಮ್ಮನ ಮುಖ ಸಿಕ್ಕಬಹುದು'', ಪಿಸುಗುಟ್ಟಿಕೊಂಡಿದ್ದೆ. ಅವನು ಕೇರಳದಿಂದ ಬರೋದರೊಳಗೆ ತಲುಪಿಯೇನು.... ಆದರೆ, ವಾಸ್ತವ ಹಾಗಿಲ್ಲದೇ ಅವನೇ ಫ್ಲೈಟಿನಲ್ಲಿ ಮುಂಚೆ ಬಂದಿಳಿದಿದ್ದ. ರಾತ್ರಿ, ನಾನು ಮೆಟ್ಟಿಲು ಹತ್ತು ವಾಗ ಹೊರಗೆ ಬಂದ ಕೇಶವ, ''ಅಮ್ಮಾ ಎಲ್ಲಾ ಮುಗಿದ್ಹೋಯ್ತು'' ಎಂದ. ಮೌನವಾಗಿ, ಒಳಗೆ ಪ್ರವೇಶಿಸಿದೆ. ನನಗಾಗಿ ಮೈಸೂರಿಂದ ಬಂದ ಅಕ್ಕ-ಭಾವ, ನಾನು ಸ್ತಂಭಿತಳಾದಂತಿದ್ದುದನ್ನು ಕಂಡು ನಿರಾಶರಾದಂತೆ ಕಂಡಿತು. ''ನಿಂಗೋ ಸ್ಕರ ನಿನ್ನ ತಂಗಿ ಕಾದಿದ್ದು ಮನೆಗೆ ಹೋದ್ಳು. ಶೀನು ಆಗ್ಲೇ ಬಂದ. ಫ್ಲೈಟ್ ಸಿಕ್ತು, ಸಧ್ಯ ಬೇಗ ಬರೋಕ್ಕಾಯ್ತು.'' ನಾನು ಕಕ್ಕಾಬಿಕ್ಕಿಯಾಗಿ, ಹಾಲ್‌ನಲ್ಲಿದ್ದ ಅಮ್ಮನ ಫೋಟೋ, ಅದರ ಪಕ್ಕವೇ ಶಾಂತವಾಗಿ ಉರಿಯುತ್ತಿದ್ದ ಒಂಟಿ ದೀಪ ನೋಡಿದೆ. ಹೊಟ್ಟೆಯಿಂದ ಯಾವುದೋ ದ್ರವ, ಹೊರಗೆ ಬರುವಂತೆನಿಸಿತು. ಕುಸಿದು ಕುಳಿತೆ. ಅತ್ತಿಗೆ, ಅಣ್ಣ ಸುಮ್ಮನೆ ನೋಡುತ್ತಿದ್ದರು. ಫೋನ್ ಮೆಸೇಜ್ ಕೊಟ್ಟ ಮುದುಕಿ, ಗಾಭರಿಯಿಂದ ಕಾದಿತ್ತು. ಆದರೆ, ಎಲ್ಲರಿಗೂ ನಿರಾಶೆಯಾಗು ವಂತೆ, ನನಗೆ ಅಳು ಬರಲೇ ಇಲ್ಲ. ಅಥವಾ 'ಇವತ್ತು ನಿಜವಾಗಿ ನಾನು ತಬ್ಬಲಿಯಾಗ್ಬಿಟ್ಟೆ' ಎಂದು ಹೊಟ್ಟೆ ಬಡಿದುಕೊಳ್ಳಲೂ ಆಗಲಿಲ್ಲ. ಸೋಫಾದ ಮೇಲೆ ಕೂತೆ. ''ಅವ್ಳಿಗೆ ಶಾಕ್ ಆಗಿದೆ. ಇಡ್ಲಿ, ಕಾಫಿ ಕೊಡು'', ಅಕ್ಕನ ಅಣತಿ. ಸರಿ, ಬೇಡ ಬೇಡ ಅಂದರೂ ತಿನ್ನಬೇಕಾಯಿತು. ಅಕ್ಕನ ಮುಖ, ಅತ್ತತ್ತು ಉಬ್ಬಿಕೊಂಡಿತ್ತು.

ನಾನು ಅಮ್ಮನ ರೂಮಲ್ಲೇ ಗೀಜರ್ ಹಚ್ಚಿ, ನೀರು ಕಾದ ಮೇಲೆ ಸ್ನಾನ ಮಾಡಿದೆ. ಅವಳ ಕಪಾಟು ತೆಗೆದೆ. ಅವಳಿಗೆ ಪ್ರಿಯವಾದ ಡಾಂಬರು ಗುಳಿಗೆ ವಾಸನೆ. ನಾನು ಊರಿಗೆ ಬಂದಾಗೆಲ್ಲ, ಎರಡು ಟವೆಲ್ ತೆಗೆದಿಟ್ಟು, ಒಂದು ತಲೆಗೆ, ಒಂದು ಮೈ ಒರೆಸಿಕೊಳ್ಳಕ್ಕೆ, ಅಂತ ಸಂಭ್ರಮಿಸು ತ್ತಿದ್ದುದು ನೆನಪಾಯಿತು. ಹಠದಿಂದ, ನಾನು ಒಂದನ್ನೇ ಬಳಸುತ್ತಿದ್ದೆ! ಅಕ್ಕ ಒಳಗೆ ಬಂದಳು. ಬಿಕ್ಕುತ್ತ, ದೇಹ ಹೇಗೆ 'ಮಲ್ಯಾ'ದಿಂದ ತಂದಿದ್ದು, ಅಮ್ಮ, ವಿಕಾರವಿಲ್ಲದೇ ಸುಮ್ಮನೆ ಮಲಗಿದಂತಿ ದ್ದುದು, ಬ್ರಾಹ್ಮಣರೆಲ್ಲಾ ಪುರುಷಸೂಕ್ತ ಹೇಳಿ ದಾಗ ಭಾವನೂ ಹೇಳಿದ್ದು, ಕೇಳಿದ ಅಣ್ಣನಿಗೆ

ಆಶ್ಚರ್ಯವಾದುದು, ಎಲ್ಲ ವಿವರಿಸಿದಳು. ಆಗಲೂ ಕಣ್ಣು ಒಣಗಿದ ಕೆರೆಯೇ. ಅಕ್ಕ ಹೊರಗೆ ಹೋದಳು. ಅರ್ಧಗಂಟೆ ಬಿಟ್ಟು ಮತ್ತೆ ಬಂದು, ''ನೋಡಮ್ಮ ಶಾಲೂ, ಅಮ್ಮ ಎಷ್ಟೆಂದರೂ ವಾಪಸ್ಸು ಬರಲ್ಲ. ಇದೇ ವಾತಾವರಣದಲ್ಲಿ ನೀನು, 'ವೈಕುಂಠ'ದ ತನಕ ಇರಕ್ಕಾಗಲ್ಲ. ಹೇಗೂ ಕಾರಿದೆ. ನಮ್ಜತೆ ಬಂದ್ಬಿಡು'' ಎಂದಾಗ ನನಗೆ ಬಿಡುಗಡೆ ಸಿಕ್ಕಂತಾಗಿ, ಸರಿ, ಅಂತ ಒಂದು ಟಿಕಳಿ ಅಂಟಿಸಿಕೊಂಡೆ. ಅಣ್ಣ-ಅತ್ತಿಗೆಗೆ ಮನನೋಯದಂತೆ, ''ಪಾಪ! ಇವಳಿಗೂ ಹೇಳಲಾರದ ನೋವು, ನಮಗೂ ದುಃಖ, ಕರಕೊಂಡ್ಹೋಗ್ತೀವಪ್ಪ. ಒಟ್ಟಿಗೇನೆ ಹತ್ತಕ್ಕೆ ಬರ್ತೀವಿ'' ಎಂದರು. ಅಲ್ಲದೆ, ಹೊರಡುವಾಗ, ''ನಾಳೆ ಹ್ಯಾಗೂ ಪಶ್ಚಿಮವಾಹಿನಿಗೆ ಅಸ್ತಿ ವಿಸರ್ಜನೆಗೆ ಬರ್ತೀರಲ್ಲ, ಅವಾಗ ನಾವೂ ಅಲ್ಲಿಗೆ ಬರ್‌ತೀವಿ'' ಎಂದು ಭಾವ ಹೇಳಿದಾಗ ನಾನು ಥಟ್ಟನೆ, ''ನಾನು ಇವತ್ತಿಲ್ಲೇ ಇರ್ತೀನಿ. ನಾಳೆ ಅಣ್ಣನ ಜತೆ, ಆ ಕಡೆಗೆ ಬಂದು ನಿಮ್ಜತೆ ಊರಿಗೆ ಬರ್ತೀನಿ'' ಎಂದೆ. ಭಾವ ''ಹಂಗೇ ಮಾಡಮ್ಮಾ'' ಎಂದರು. ನನಗೆ ಪ್ರಯಾಣದ ಆಯಾಸ. ಮಲಗಲೆತ್ನಿಸಿದೆ.

ಮರುದಿನ ಹನ್ನೊಂದು ಗಂಟೆಗೆ ಅಣ್ಣ, ನಾನು ಮತ್ತು ನಮ್ಮ ದೊಡ್ಡಪ್ಪನ ಮಗ ರಘು ಕಾರಲ್ಲಿ ಹೊರಟೆವು. ಮೈಸೂರು ರಸ್ತೆಯ ವಿದ್ಯುತ್ ಚಿತಾಗಾರದಲ್ಲಿದ್ದ ಅಸ್ತಿಗಳನ್ನು ತೆಗೆದುಕೊಳ್ಳಬೇಕಿತ್ತು. ಕಾರ್‌ನಲ್ಲಿ ಮುಂದಿನ ಸೀಟಿನಲ್ಲಿ ನಾನು, ಹಿಂದೆ ಅವರಿಬ್ಬರು. ಅಣ್ಣ ಶೀನು, ಬಾಯಲ್ಲಿ ಗುಟ್‌ಕಾ ಹಾಕಿದ್ದರಿಂದ, ಅಸ್ಪಷ್ಟವಾಗಿ ಮಾತಾಡುತ್ತಿದ್ದ. ಅಕ್ಕನ ಬಗ್ಗೆ ಮಾತಾಡುತ್ತಿದ್ದರಿಂದ ಕುತೂಹಲಿಯಾದೆ. ಶೀನು: ''ಅಲ್ಲೇ ಶವಬಿದ್ದಿದೆ, ಇವಳು ಸೀರೆಗಳನ್ನು ಜೋಡಿಸಿ ಕೋತಿದ್ಲು''. ರಘು: ''ಅದಿರ್‍ಲಿ, ಅಮ್ಮ ಸತ್ತಾಗ ಪದೇ ಪದೇ ಕಾಫಿ ಕುಡಿಯೋದೇನು!'' ನನಗೆ, ಇಡೀ ದಿನ ಕಳೇಬರ ಇಟ್ಟುಕೊಂಡು, ಸಕ್ಕರೆ ಬಾಯಿಲೆ ಇರುವ ಅಕ್ಕ ಹಾಗೆ ಮಾಡಿದ್ದು ತಪ್ಪೆನಿಸಲಿಲ್ಲ. ಆದರೆ ಕಪಾಟು, ನಿಧಾನವಾಗಿ ತೆಗೆಯಬಹುದಿತ್ತು. ಸುಮ್ಮನೆ ಹೊರಗಿನ ದೃಶ್ಯ ನೋಡಲೆತ್ನಿಸಿದೆ.

ಮೌನ ಕೂಡಾ ಅಪಾಯಕಾರಿ ಅಂತ ಆಗ ತಿಳಿದಿರಲಿಲ್ಲ. ಹೆಂಗಸಾದ ನಾನು 'ಅಸ್ತಿ ಸಂಚಯನ'ಕ್ಕೆ ಬಂದುದಲ್ಲದೇ ಮುಟ್ಟಿ ಅಪವಿತ್ರ ಮಾಡಿದೆ ಅಂತ ರಘು ತೀವ್ರವಾಗಿ ಆಕ್ಷೇಪಿಸಿದ್ದು ನನಗೆ ನಂತರ ಗೊತ್ತಾಯ್ತು. ವೇದಕಾಲದಲ್ಲೇ ಹೆಂಗಸರು ಅದರಲ್ಲಿ ಭಾಗಿಗಳಾಗುತ್ತಿದ್ದರು ಎಂದು ವಿವರಿಸಲೆತ್ನಿಸುವುದು ಕೇವಲ ಗಿಳಿಪಾಠವೆಂದು ತೋರಿತು. ಅಮ್ಮನ ಮೌನ ಸಹ, ಇದೇ ರೀತಿ ಅಪಾರ್ಥ ಕಲ್ಪಿಸುತ್ತಿತ್ತು. ಶೀನು ಮನೆಯಲ್ಲಿ ಅವರೆಲ್ಲ ಶುಕ್ರವಾರ, ಮಂಗಳವಾರ ಸ್ನಾನ ಮಾಡದೇ ಕಾಫಿ ಕೂಡ ಕುಡಿಯದೇ ಇರುತ್ತಿದ್ದುದನ್ನು ಒಪ್ಪದಿದ್ದರೂ ಪಾಲಿಸುತ್ತಿದ್ದಳು. ಲಲಿತಾ ಸಹಸ್ರನಾಮ ಮುಗಿಯಲು ಒಂದು ಗಂಟೆಕಾಲ ಬೇಕಾದ್ದರಿಂದ, ಮೌನವಾಗಿ ಕೂತಿರುತ್ತಿದ್ದಳು. 'ತಿರುಪ್ಪಾವೈ' ಬಂದರೂ ಮನಸ್ಸಿನಲ್ಲೇ ಗುನುಗಿಕೊಳ್ಳುತ್ತ, ನಿದ್ರಿಸಿದ ಭಂಗಿಯಲ್ಲಿರುತ್ತಿದ್ದಳು!

''ನೋಡು, ಇವಳೇ ಅಮ್ಮ!'', ಅಣ್ಣ, ಸ್ಮಶಾನದಲ್ಲಿ ಆಳು ತಂದಿಟ್ಟ ಅಸ್ತಿಬೂದಿ ತುಂಬಿದ ಒಂದು ಗಡಿಗೆ ತೋರಿಸಿದ. ಆಗ ಭ್ರಮೆ ತುಂಬಿದಂತಾಗಿ, 'ಅಮ್ಮ' ಎಂದು ಕೂಗುತ್ತಾ ಗಡಿಗೆ ಮುಟ್ಟಿದೆ. ಕ್ರಿಯಾಕರ್ಮಕ್ಕೆ ಬಂದಿದ್ದ ಬ್ರಾಹ್ಮಣ, ಸಿಟ್ಟಾಗಿ, ''ಹೆಣ್ಣು ಮಕ್ಳು ಮುಟ್ಟಬಾರ್‍ದು'' ಎಂದ. ನಾನು ಲಕ್ಷಿಸಲೇ ಇಲ್ಲ. ಬೆಳ್ಳಗೆ ಚಿಪ್ಪಿನಂತಿದ್ದ ಅಸ್ತಿ ನೇವರಿಸಿದೆ. ರಘು ಮುಖವೂ ಕೆಂಪಾಗಿತ್ತು. ಅಣ್ಣನ ಮುಖ ಮ್ಲಾನವಾಗಿತ್ತು. ''ದೂರ ನಿಲ್ರೀ'', ಪುರೋಹಿತ ಗದರಿಸಿದಾಗ, ಅಲ್ಲಿದ್ದ ಬೆಂಚಿನ ಮೇಲೆ ಕೂತೆವು. ಅವನು ಬೆರಣಿ ಚೂರು ನೆಲದ ಮೇಲಿಟ್ಟು, ವಡೆಯ ಹಿಟ್ಟು ತಟ್ಟಿ ಅದರ ಬೆಂಕಿಯ ಮೇಲೆ ಬೇಯಿಸಿದ. ಚಾಕ್‌ಪೀಸಿನಿಂದ ದುಂಡಗೆ ಒಂದು ಆಕೃತಿಯ ಚಿತ್ರ ತೆಗೆದು, 'ಶಾಂತಮ್ಮ ನೆಂಬ ಪ್ರೇತವೇ ಇಲ್ಲಿಗೆ ಬಂದು, ಇದನ್ನು

ಸ್ವೀಕರಿಸು' ಎಂಬರ್ಥದ ಮಂತ್ರ ಹೇಳಿದ. ಅಮ್ಮ, ಚಿತ್ರದಲ್ಲೂ 'ಸಕೇಶಿ'ಯಲ್ಲ! ಏಕೆಂದರೆ, ಆಕೆ ವಿಧವೆ. ಅದರ ಕೈ, ಬಾಯಿಯ ಮೇಲೆ ಜೇಯಿಸಿದ ವಡೆಯಿಟ್ಟು ತುಪ್ಪ ಸುರಿದ. (ಅಣ್ಣ ಒಟ್ಟಿಗೆ ದುಡ್ಡು ಕೊಡುತ್ತಾನಲ್ಲ?) ಇವೆಲ್ಲಾ, ಆದಿಮ ಸಂಸ್ಕೃತಿಯಿಂದ, ಭಯದ ಮೂಲವಾಗಿ ಬಂದಿರಬೇಕು ಎನಿಸಿತು. ಆಮೇಲೆ ಒಂದು ಎಲೆ, ಒಂದು ಅಡಿಕೆ ಇಟ್ಟು ಭೋಜನ ಮುಗಿಯಿತೆಂದು ಸೂಚಿಸಿಯಾದ ಮೇಲೆ, ಗಡಿಗೆ ಬಾಯಿಗೆ ಬಿಳಿಯ ಬಟ್ಟೆ ಕಟ್ಟಿದ. ಈ ಮಧ್ಯೆ ಶೀನು, ಯಜ್ಞೋಪವೀತವನ್ನು ಎಡಕ್ಕೆ, ಬಲಕ್ಕೆ ಬದಲಾಯಿಸುತ್ತಾ 'ಪ್ರಾಚೀನಾವೀತಿ' ಎನ್ನುತ್ತಾ 'ಗಾಯತ್ರೀ ಮಂತ್ರ' ಹೇಳುತ್ತಿದ್ದ. ರಘು, ''ಇವೆಲ್ಲಾ ಘೋರ ದೃಶ್ಯಗಳು. ಅದಕ್ಕೇ ನಮ್ಮ ಹೆಣ್ಣುಮಕ್ಕು ಕಾಡು ಪುರಕ್ಕೆ ಬರಬಾರ್ದು ಅನ್ನೋದು'' ಎಂದ.

ಕೊನೆಗೆ, ಗಡಿಗೆ ಕಾರಲ್ಲಿಟ್ಟುಕೊಂಡು ಪಶ್ಚಿಮ ವಾಹಿನಿಗೆ ಹೋದೆವು. ''ಅಮ್ಮಂಗೇ ಇದರಲ್ಲೆಲ್ಲಾ ನಂಬಿಕೆ ಇರ್ಲಿಲ್ಲ ಅನ್ನುತ್ತೆ'' ಎಂದೆ.


ಗಂಡಸರಿಬ್ಬರೂ ಅಲಕ್ಷ್ಯದಿಂದ ಸುಮ್ಮನಿದ್ದರು.

ಅಕ್ಕ-ಭಾವ, ಮೊದಲೇ ಬಂದು ಕಾದು ಸಿಟ್ಟಿಗೆದ್ದಿದ್ದರು. ಫ್ಲಾಸ್ಕ್‌ನಲ್ಲಿ ಕಾಫಿ ತಂದಿದ್ದರು. ಎಲ್ಲರೂ ಗಡಿಗೆ ಸಹಿತ, ಕಾವೇರಿಗೆ ಹೋದೆವು. ಸೂರ್ಯ ಪ್ರಖರನಾಗಿದ್ದ. ಶೀನು, ಗಡಿಗೆ ಭುಜದ ಮೇಲಿಟ್ಟು ಮೊಗಚಿದ. ಅಮ್ಮನ ಬೂದಿ, ಅಸ್ಥಿ, ಸರ್ರನೆ ನೀರಲ್ಲಿ ತೇಲಿ ಹೋದವು. ''ಕಾವೇರಿ ತೀರದಲ್ಲಿ ಹುಟ್ಟಿದೋಳು, ಕಾವೇರೀಲೇ ಹೋದಳು'', ಅಕ್ಕ ಸ್ವಗತವೆಂಬಂತೆ ಪಿಸುಗುಟ್ಟಿದಳು. ಸೋಪಾನದ ಮೇಲೆ ಕೂತೆವು. ಕಾಫಿ ಕುಡಿದಾಗ ತಳಮಳ ಕಡಿಮೆಯಾದಂತೆ ಕಂಡಿತು. ನನಗೆ ಮಾತ್ರ ಅಳುವೇ ಬರಲೊಲ್ಲದು. ಎದೆ ಭಾರ, ತಲೆನೋವು. (ಶಿಷ್ಟತೆ, ಹೀಗೆ ಭಾವನೆಗಳನ್ನು ಹತ್ತಿಕ್ಕಲು ಕಾರಣವಾಗುತ್ತಿರಬಹುದೆ?)

ಅರ್ಧಗಂಟೆಯ ನಂತರ ಎರಡು ಕಾರುಗಳೂ ವಿಮುಖವಾಗಿ ಹೊರಟವು. ಒಂದು ಮೈಸೂರಿಗೆ, ಮತ್ತೊಂದು ಬೆಂಗಳೂರಿಗೆ. ಮೈಸೂರಿಗೆ ಹೋಗಲು ನನ್ನವೇ ಕಾರಣಗಳಿದ್ದವು. ನಮ್ಮಪ್ಪ-ಅಮ್ಮ ಇದ್ದ ಮನೆಯ ಹತ್ತಿರವೇ ಅಕ್ಕನ ಮನೆಯೂ. ಅಲ್ಲಿದ್ದು, ನೆನಪುಗಳನ್ನು ಮೆಲುಕುಹಾಕಬಹುದು. ಮನೆಗೆ ಬಂದು ಸ್ನಾನ ಮಾಡುವಷ್ಟರಲ್ಲಿ, ತಂಗಿಯ ಫೋನು. ಅಳು.... ಅಳು.... ಅಳು.... ತಂಗಿ, ಅಕ್ಕ. ಭಾವನೂ ಪಂಚೆಯಿಂದ ಕಣ್ಣೊರೆಸಿಕೊಂಡರು. ನನಗೂ ಬಹಳ ಜಿಪುಣತನ ಮಾಡಿದಂತೆ ಒಂದಿಷ್ಟು ಕಣ್ಣೀರು. ಕನ್ನಡಿ ನೋಡಿದರೆ, ಕಣ್ಣು ಆಳಕ್ಕಿಳಿದಿದೆ. ಏನೋ ಅಶಕ್ತತೆ.

ರಾತ್ರಿ ಮಲಗುವಾಗ, ''ಭಾವಾ ಒಂದು ಕಾಂಪೋಸ್'' ಎಂದೆ. ಮಾತಾಡದೆ ಕೊಟ್ಟರು. ಹಾಸಿಗೆಯಲ್ಲಿ ಮಗ್ಗಲು ಬದಲಿಸಿದೆ. ಬೆಳಗಿನ ಜಾವ ನಿದ್ದೆ ಬಂತು. ''ಎಂಟಾದ್ರೂ, ಹ್ಯಾಗೆ ಮಲಗಿದಾಳೆ ನೋಡಿ'', ಅಕ್ಕನ ದನಿ ಕೇಳಿ ಗಡಬಡಿಸಿ ಎದ್ದೆ. ಟಿ.ವಿ. ತುಂಬಾ ಜೋರಾಗಿ ಹಚ್ಚಿಟ್ಟರು. ಒಬ್ಬರ ಮಾತು ಒಬ್ಬರಿಗೆ ಕೇಳದಷ್ಟು ಅಸಹನೆಯ ವಾತಾವರಣ. ಅಮೃತಾಂಜನ ಹಚ್ಚಿಕೊಂಡೆ. ಕೆಟ್ಟ ಕಾಸ್ಟ್ಯೂಮಿನ, ಕೆಟ್ಟ ಹಾಸ್ಯದ ಸೀರಿಯಲ್. ಅದೂ ತಮಿಳಿನಲ್ಲಿ! ಅಮ್ಮ, ಸದಾ ಟಿ.ವಿ. ಚಾನೆಲ್ ಬದಲಿಸುತ್ತಿದ್ದ ಸೊಸೆಯ ಬಗ್ಗೆ ಶಿಕಾಯತು ಮಾಡುತ್ತಿದ್ದಳಲ್ಲವೆ? ''ಒಂದನ್ನು ಅರ್ಥ ಮಾಡಿಕೊಳ್ಳೋಷ್ಟರಲ್ಲಿ ಇನ್ನೊಂದಕ್ಕೆ ಬದ್ಲಾಯಿಸಿಬಿಟ್ಟಿರ್ತಾಳೆ. ಈಗಿನ ಕಾಲದೋರೇ ಹೀಗೇನೊ!''. ''ಇಷ್ಟು ಜೋರಾಗಿ ಹಾಕಿದರೆ ಆರೋಗ್ಯಕ್ಕೆ ಹಾನಿ ಅಲ್ವೆ?'' ಭಾವ ನಕ್ಕರು. 'ಲಲಲಾ' ಎಂದು ಯಾವುದೋ ಹಾಡನ್ನು ಗುನುಗುವ ಮೂಲಕ, ಅಕ್ಕ ನನಗೆ ಪ್ರತಿಕ್ರಿಯಿಸಲಿಲ್ಲ.

ಎದ್ದು ಮುಂದಿನ ರೂಮಿಗೆ ಹೋದೆ. ತೂಗಾಡುವ ಖುರ್ಚಿಯಲ್ಲಿ ಕೂತೆ. ಅಮ್ಮನಿಗೂ ಅದು ಇಷ್ಟವಾದ ಜಾಗ. ಒಂದಿಷ್ಟು ಗಿಡಮರ, ವಿಸ್ತಾರ ಆಕಾಶ. ತಾಯಿಮಗಳಿಬ್ಬರೂ ಎಷ್ಟು ದಿನ, ಮೌನವಾಗಿ ಕೂತಿರುತ್ತಿದ್ದೆವು! ಎರಡುಸಲ ಡೈವೋರ್ಸ್ ಆಗಿದ್ದ ಸ್ಫುರದ್ರೂಪಿ ಡಾಕ್ಟರ್



ವರನ ಆಶೆಹಚ್ಚಿ, ಅಮ್ಮನನ್ನು ಬಲವಂತವಾಗಿ ಬೆಂಗಳೂರಿಗೆ ಕರೆತಂದಿಟ್ಟುಕೊಂಡಿರುತ್ತಿದ್ದರು. ಧಾರವಾಡದ ಕೆಟ್ಟ ಬಸ್‌ನಲ್ಲಿ ನಿದ್ರೆಗೆಟ್ಟು ಬಂದಿದ್ದ ನಾನು, ''ಮೂರನೇ ಸಲ, ನನ್ನ ಜತೆ ಬಾಳುತ್ತಾನಂತ ಏನು ಗ್ಯಾರಂಟಿ?'' ಎಂದು ರೇಗಿದ್ದೆ. ಇವೆಲ್ಲಾ ಇನ್ನಷ್ಟು ಆತಂಕಕ್ಕೆ ಕಾರಣ ಎಂದು ಎಷ್ಟು ಚೆನ್ನಾಗಿ ಅಮ್ಮನಿಗೆ ಮನವರಿಕೆಮಾಡಿದ್ದೆ! ಅಕ್ಕ, ''ಅವ್ನ ಹತ್ರ ವಿದ್ಯೆ ಇದೆ. ಡಾಕ್ಟರ್. ಕೊಳೆಯೋವಷ್ಟು ದುಡ್ಡಿದೆ. ಹೇಳೀಕೇಳೀ ಅವ್ರ ವಂಶದೋರು ರತ್ನಪಡಿ ವ್ಯಾಪಾರಿಗಳಾಗಿದ್ರಂತೆ'' ಎಂದಾಗ ಭಾರೀ ಸಿಟ್ಟು ಬಂದಿತ್ತು. ''ದುಡ್ಡು ನಂಗೆ ಹುಣಿಸೇ ಬೀಜ'' ಎಂದೆ. ಅಮ್ಮ ಸನ್ನೆ ಮಾಡಿ ತಡೆದಿದ್ದಳು. ರಾತ್ರಿ ನಾವಿಬ್ಬರೇ ಮಲಗಿದ್ದಾಗ, ''ಅಮ್ಮಾ, ಇವ್ರು ಫಾಯ್ದೆ ಇಲ್ದೇ ಯಾವ ಕೆಲಸಾನ್ನೂ ಮಾಡಲ್ಲ. ಅದಕ್ಕೇ ಇಷ್ಟೊಂದು ಉತ್ಸಾಹ'' ಅಂದೆ. ''ಈ ಎರಡು ಡೈವೋರ್ಸುಗಳ ಮಧ್ಯೆ ಹತ್ತು ವರ್ಷದ ಮಗುವೊಂದಾಗಿರಬಾರದೇಕೆ?'' (ಯಾವಾಗಲೂ ಈ ಥರದ ಸಂದೇಹಗಳನ್ನು ಹುಟ್ಟಿಸುವುದು, ನನ್ನ ವ್ಯಕ್ತಿತ್ವ ವಿಶೇಷ.) ಅಮ್ಮ ಹೆದರಿದ್ದಳು. ''ನಾಳೆ ಮಧ್ಯಾಹ್ನ ಹೊರ್ಟು ಬಿಡೋಣ'' ಅಂದಳು. ಸದ್ಯ, ಆತಂಕ ತಪ್ಪಿತು. ಅವರಿಬ್ಬರ ಗೊಣಗಾಟ ಲಕ್ಷಿಸದೇ ಬಸ್ಸು ಹತ್ತಿಯೇಬಿಟ್ಟಿದ್ದೆವು.

ಆಮೇಲೆ ಯಾವಾಗಲೋ ಅಮ್ಮ, ಒಬ್ಬಳೇ ಹೋಗಿ, ಅವರೊಂದಿಗೆ ತಿಂಗಳಕಾಲವಿದ್ದು ಆ ವಿಷಯಕ್ಕೆ ತೇಪೆಹಾಕಿ ಬಂದಿದ್ದಳಂತೆ. ಹೀಗೇ ನೆನಪುಗಳ ಧಾರೆಯೊಂದಿಗೆ, ಒಬ್ಬಳೇ ಇರುವಾಗ, ಕೊಂಚ ಅತ್ತು, ಮನಸ್ಸು ಕೊಂಚ ಸ್ಥಿರವಾಯಿತು. ಅಕ್ಕ ಮಧ್ಯಾಹ್ನ ಊಟ ಬಡಿಸುತ್ತಾ, ''ಆ ಡಾಕ್ಟರ್ ಹಾಗೇ ಇದಾನೆ. ಕರೆಸ್ಲಾ? ನಿಂಗೂ ಗಂಡು ದಿಕ್ಕು ಬೇಕು'' ಎಂದಳು. ''ಬೇಡ'' ಖಂಡಿತವಾದ ಧ್ವನಿಯಲ್ಲಿ ಹೇಳಿದೆ. ''ಅಮ್ಮನ ಆಶೆ...'' ''ಛೇ! ಅಮ್ಮಾನೆ, 'ಬಲವಂತ ಇಲ್ಲಮ್ಮ. ನಾನೇನೋ ಮುದಿಗೊಡ್ಡು ಸತ್ತು ಹೋಗ್ತೀನಿ. ನೀನು ತಾನೇ ಸಂಸಾರ ಮಾಡೋಳು' ಅಂದಿದ್ಳು''. ಅಕ್ಕ-ಭಾವ, ಬೈಯಲು ಶುರು ಮಾಡಿದರು. ''ಮಹಾ ಘನವಂತೆ, ಮಗಳ ಬಾಳು ಹ್ಯಾಗೋ ಸರಿ ಹೋಗಲಿ ಅನ್ನಬಾರದಾ, ತುಂಬಾ ಚೆನ್ನಾಗಿದೆ''. ನಾನು ಥಟ್ಟನೆ ಎದ್ದೆ. ಎಲ್ಲ ಬಟ್ಟೆಬರೆ, ಸೂಟ್‌ಕೇಸಿಗೆ ತುರುಕಿದೆ. ''ನಾನು ಬೆಂಗಳೂರಿಗೆ ಹೋಗ್‌ತೀನಿ''. ''ಸರಿ'' ಅಸಹನೆಯಿಂದ ಒಪ್ಪಿದರು. ಅಮ್ಮ ಹೋದ ಮೇಲೆ, ನಾನು ಒಂಟಿ ಅಂತ ಅನ್ನಿಸುತ್ತಿದೆ, ಎಷ್ಟು ಹಳೆಯ ಕಾಲದವಳಾದರೂ, ಎಂದೂ ಒಬ್ಬರ ಮೇಲೆ ಅಭಿಪ್ರಾಯ ಹೇರದ ಲಕ್ಷಣವಾದ ಹೆಂಗಸು. ಅಮ್ಮಾ, ನೀನಿಲ್ಲದೆ ಅಣ್ಣನಲ್ಲಿಗೆ ಹೇಗೆ ಹೋಗಲಿ?

ನಾನು ಸದಾಶಿವನಗರಕ್ಕೆ ಮತ್ತೆ ಬಂದೆ. ಅತ್ತಿಗೆ ಸುಸ್ತಾಗಿ ಮಲಗಿದ್ದಳು. ಟೇಬಲ್ ಮೇಲಿದ್ದ ಅನ್ನದ ಪಾತ್ರೆಯಿಂದ ಸ್ವಲ್ಪ ಬಡಿಸಿಕೊಂಡು ಉಂಡೆ. ಕೈಕಾಲು ತೊಳೆದು, ಅಮ್ಮನ ಕೋಣೆಗೇ ಹೋಗಿ, ಹಾಸಿಗೆ ಮೇಲೆ ಮಲಗಿದೆ. ಚೆನ್ನಾಗಿ ನಿದ್ರೆ ಬಂತು.

ಎಚ್ಚರವಾದಾಗ ಹೊರಗೆ ಮಾತು. ಕ್ರಿಯಾ ಕರ್ಮಗಳಲ್ಲಿ ಬೇಸತ್ತು, ಬಳಲಿ, ಮನೆಗೆ ಬಂದಿದ್ದ ಅಣ್ಣ ಕೊಂಚ ಬಿಯರ್ ಕುಡಿಯುತ್ತಿದ್ದನೆಂದು ಕಾಣುತ್ತದೆ. ಅಮ್ಮನಿಗೆ ಬೇಜಾರಾಗಬಾರದೆಂದು ಸ್ಟೀಲ್ ಲೋಟದಲ್ಲಿ ಕುಡಿಯುತ್ತಾನೆ ಎಂದು ಅಮ್ಮನೇ ಹೇಳಿದ್ದಳು!

ಎದ್ದು, ಬ್ರಶ್ ಮಾಡಿ, ಮುಖ ತೊಳೆದು, ಹಾಲ್‌ಗ ಬಂದೆ. ಅತ್ತಿಗೆ 'ಕಾಫಿ ಕೊಡ್ಲಾ' ಎಂದು, ತಂದುಕೊಟ್ಟಳು. ಅಮ್ಮನ ದೀಪ ಆರಿತ್ತು. ಎಣ್ಣೆ ತೀರಿರಬೇಕು. ನಾನು ಆ ಕಡೆ ನೋಡಿದ್ದರಿಂದ ಅತ್ತಿಗೆ, ಒಂದಿಷ್ಟು ಎಣ್ಣೆ ತಂದು ಹಾಕಿ, ಬತ್ತಿಗೆ ಚೆಂಕ ತಾಗಿಸಿದರು. ದೀಪ ಮತ್ತೆ ಹೊತ್ತಿತು. ಎಲ್ಲರಿಗೂ ಏನೋ ಆತಂಕ. ಮೈಸೂರಿನ ಕರಟಕ ದಮನಕಗಳು, ಫೋನ್ ಮಾಡಿ, ನನ್ನ ಮೇಲೆ ಚುಚ್ಚಿಕೊಟ್ಟಿರಬೇಕು ಎನಿಸಿತು. ನಾನೇ ಹೇಳಿ ಬಿಡುವುದು ವಾಸಿ ಎಂದು, ''ಅದೇ, ಆ ವರನ ದೆಸೆಯಿಂದ ಮನಸ್ತಾಪ ಆಯ್ತು. ಹೊರಟು ಬಂದೆ'' ಎಂದೆ. ಅಣ್ಣ ಎದ್ದು ಬಾಲ್ಕನಿಗೆ ಹೋದ. ನನ್ನ, ಅತ್ತಿಗೆ ಹೇಮಾ ಮಧ್ಯೆ ಮೌನದ ಗೋಡೆ. ಥಟ್ಟನೆ, ಅಮ್ಮನ ಕರುಳು ನಮ್ಮೆಲ್ಲರನ್ನೂ ಬಂಧಿಸಿತ್ತೋ ಏನೋ, ಈಗ ಆಕೆಯ ಅಭಾವ ಮನದಟ್ಟಾಗತೊಡಗಿದೆ ಎನಿಸಿತು.

ಅಲ್ಲಿಗೂ ಇಲ್ಲಿಗೂ ಇದೇ ವ್ಯತ್ಯಾಸ. ಅಲ್ಲಿ ಮಾತಿರುವುದೇ ಮತ್ತೊಬ್ಬರ ಆತ್ಮವನ್ನು ಘಾತಿಸ ಲಿಕ್ಕೆ ಎಂದಾದರೆ, ಇಲ್ಲಿಯ ಮೌನದ ಉಪೇಕ್ಷೆ ಕುಗ್ಗಿಸುವಂಥದ್ದು!

ಏನು ಮಾಡಲಿ, ತಂಗಿಯ ಮನೆಗೆ ಹೋದರೆ, (ಅವರದ್ದು ಒಟ್ಟು ಕುಟುಂಬ) ಅತ್ತೆ, ಮಾವ ಸೂತಕದ ಹೊತ್ತಲ್ಲಿ ಯಾಕೆ ಬಂದಳು ಎಂದು ಬೈದುಕೊಂಡರೆ? ಆ ವಿಚಾರ ಬಿಟ್ಟೆ.

ಅಮ್ಮನ ರೂಮು ಹೊಕ್ಕೆ. ಮೊದಲಾದರೆ, ಮೌನವಾಗಿ ಹುಬ್ಬೇರಿಸುತ್ತಿದ್ದ ಆಕೆಯ ಸಾನಿಧ್ಯವೇ ಹಿತವೆನಿಸುತ್ತಿತ್ತು. ಕುಂತಿಯಂತೆ ಧೈರ್ಯ ಹೇಳುತ್ತಿದ್ದ ನಿಪುಣೆಯಲ್ಲವೇ ಆಕೆ?

ಅಟ್ಯಾಚ್ಡ್ ಬಾತ್‌ರೂಂಗೆ ಹೋಗಿ, ''ಅಮ್ಮಾ ಹಿಂಗ್ಯಾಕೆ ಮಾಡಿದಿ? ನನಗೀಗ ಯಾರು ಹಿತ ವಂತರು? ಮಾತಾಡಮ್ಮಾ'', ಕರ್ಟನ್ ಜಗ್ಗಿದೆ. ಅದು ಕೈಬಿಟ್ಟರೂ ಅಲುಗಾಡಿತು. ಅಮ್ಮನ ಸಾವನ್ನು ರೊಮ್ಯಾಂಟಸೈಸ್ ಮಾಡುತ್ತಿದ್ದೇನೆಯೇ ಎನಿಸಿತು. ಹಾರ್ಟ್ ಬ್ಲಾಕೇಜ್ ಇದ್ದ ಆಕೆ ಹೋಗುವುದು ಖಾತ್ರಿಯಿತ್ತು. ಪ್ರತಿಕ್ಷಣ, ಅದೇ ಸುದ್ದಿಗೆ ಆತಂಕದಿಂದ ಕಾದಿರಲಿಲ್ಲವೇ? ಈ 'ಅನಾಥತೆ' ನಾನಾಗಿ ಆವಾಹಿಸಿಕೊಳ್ಳುತ್ತಿದ್ದೇನೆಯೇ? ಒಟ್ಟು, ರಾತ್ರಿ ರೈಲಿಗೆ ಹೊರಡುವುದೆಂದು ನಿಶ್ಚ ಯಿಸಿದೆ. ಹೇಳಿದಾಗ, ''ವೈಕುಂಠಕ್ಕೆ ಬರ್ತೀ ತಾನೆ!'' ಎಂದ ಅಣ್ಣ. ಸಕ್ಕಾಗ ಕಣ್ಣಲ್ಲಿ ನೀರಿನ ಸೆಲೆಯೊಡೆಯಿತು. 'ಇನ್‌ಫೋಸಿಸ್' ಶೇರ್‌ಗಳ ರಾಜ ಅಂತ ಹೇಳಲು ಪೇಪರ್ ಕಟಿಂಗ್‌ಗಳನ್ನು ಹಿಡಿದುಕೊಂಡಿದ್ದ ಅತ್ತಿಗೆ, ವಿಸ್ಮಯದಿಂದ ನೋಡಿದಳು. ''ಹತ್ತನೇ ದಿನ ಬಲಿಗೆ ಹೆಣ್ಣುಮಕ್ಕು ನಮಸ್ಕಾರ ಮಾಡಬೇಕು. ಯಾಕೆ ಹೋಗ್ತೀರಿ?'' ನಾನು, ''ಸಾಧ್ಯವಾದ್ರೆ, ಬರ್ತೀನಿ. ಎಲ್ಲಾ ಲೀವೂ ಎಕ್ಸ್‌ಟ್ರಾ ಆಗಿದೆ. ಎಕ್ಸ್ಟ್ರಾರ್ಡಿನರಿ ಅಂತ ಟ್ರೀಟ್ ಮಾಡಿಬಿಡ್ತಾರೆ'', ಹೇಳುತ್ತಿರುವುದು ಸುಳ್ಳು ಎಂದು ಎಲ್ಲರಿಗೂ ಗೊತ್ತು.

ಅಷ್ಟರೊಳಗೆ ಮತ್ತೆ ತಂಗಿಯ ಫೋನು. ''ಹಿಂಗಂತಲ್ಲ? ಅಕ್ಕಾ-ಭಾವಾ ಫೋನು ಮಾಡಿದ್ದರು. ಜಗಳಾ ಮಾಡಿ ಹೊರ್ಟುಬಿಟ್ಟೆಯಂತೆ, ಅಲ್ಲಿರಕ್ಕೆ ಮನಸ್ಸು ಬರದಿದ್ರೆ, ಇಲ್ಲಿ ಬಾ. ವೈಕುಂಠ ಮುಗಿಸಿ ಹೋಗು. ಮತ್ತೆ ಅಮ್ಮನದೇ ಮಾತು-ಕಾಲಂ ಪೋರ್ನ, ವಾರ್ತೆ ಸಿರ್ನ। (''ಕಾಲ ಹೋಗುತ್ತೆ; ಮಾತು ನಿಲ್ಲುತ್ತೆ) ಜನಾಪವಾದ ಕೇಳಬೇಕಾ ಗುತ್ತೆ!'' ಎಂದು ನೆನಪಿಸಿದಳು, ಬಿಕ್ಕಿದಳು. ಜತೆಗೇ, ''ಅಮ್ಮ, ಚೆರಡು, ಪದರ, ಬೆಳ್ಳಿಕೊಡ, ಲೋಟ, ಪಂಚಪಾತ್ರೆ, ಒಂದಿಷ್ಟು ಎನ್ಸೆಸ್ಸಿ ಸರ್ಟಿ ಫಿಕೇಟ್ಸು ನಿಂಗೆ ಒಪ್ಪಿಸಲು ಹೇಳಿದ್ದಳು'' ಎಂದಳು.

ಇಷ್ಟು ಸಲ ಬಂದಾಗಲೂ ಏನನ್ನೂ ಹೇಳಿರದ ಅಮ್ಮನ ಔದಾರ್ಯದ ಬಗ್ಗೆ ಮನಸ್ಸು ಆರ್ದ್ರಗೊಂಡಿತು.

ಚೂಡಿದಾರ್ ಹಾಕಿಕೊಳ್ಳಲು ಅಮ್ಮನ ರೂಮಿಗೆ ಹೋದೆ. ಅತ್ತಿಗೆ, ಅಲ್ಲಿದ್ದ ಅಮ್ಮನ 'ಆ್ಯಂಜಿಯೋಗ್ರಾಂ' ಕ್ಯಾಸೆಟ್ಟು ಕೈಗೆ ಕೊಡುತ್ತಾ, 'ಇದನ್ನ ಏನು ಮಾಡ್ತೀರಿ ನೋಡಿ' ಎಂದಳು. ''ಅಂದ್ರೆ?'' ಹುಬ್ಬೇರಿಸುವ ಸರದಿ ನನ್ನದಾಯಿತು. ''ಇದನ್ನ ನಾವೇನು ಮಾಡೋದು ಗೊತ್ತಿಲ್ಲ. ಸೀರೆ, ನಾನು ಕೊಡಿಸಿದ್ದು ನಾನು ಎತ್ತಿಕೊಂಡಿದ್ದೀನಿ. ನಿಮ್ಮಕ್ಕ ಒಂದಿಷ್ಟು ತಗೊಂಡ್ರು. ಶೇಷಪ್ರಸಾದ ಅಂತ, ನೀವು ನಿಮಗೆ ಬೇಕಾದ ಒಂದಿಷ್ಟು ಸೀರೆ ತಗೊಳ್ಳಿ'' ಎಂದಳು.

ಬದುಕಿದ್ದಾಗ, ''ಶಾಲೂ, ಇಸ್ತ್ರಿ ಮಾಡ್ಸಿಟ್ಟಿದೆ. ನಿಂಗೆ ಬೇಕಾದ ಸೀರೆ ತಗೊಂಡ್ಹೋಗಮ್ಮ'' ಎನ್ನುತ್ತಿದ್ದ ಅಮ್ಮ ನೆನಪಾದಳು. ''ಸರಿ'' ಎಂದು ನಾಲ್ಕು ಸೀರೆ ಎತ್ತಿಕೊಂಡರೆ, ಅಮ್ಮನ ಮೈ ವಾಸನೆ!

''ಇದು?'' ಅತ್ತಿಗೆ ಮತ್ತೆ, ಒತ್ತಿ ಕೇಳಿದಳು. ''ಶೀನೂಗೆ ಕೇಳಿ''. ''ಅವ್ರು, ಎಸ್ದುಬಿಡೋಣ ಅಂತಾರೆ'', ನಕ್ಕಳು.

ಅಮ್ಮನ ಶಾಲು ನೆನಪಾಯಿತು. ಅದೆಲ್ಲಿ ಎಂದೆ. ಸಿಮ್ಲಾದಿಂದ ತಂಗಿ ತಂದುಕೊಟ್ಟಿದ್ದು, ಚಳಿಗಾಲದಲ್ಲಿ ಹೊದ್ದು ಕೂತಿರುತ್ತಿದ್ದಳು.

''ಓ ಅದಾ, ಕೆಲಸದ ಹುಡುಗೀಗೆ ಕೊಟ್ವಿ''. ನಾನು ಕ್ಯಾಸೆಟ್ ಕೈಗೆ ತಗೊಂಡೆ. ಅತ್ತಿಗೆಗೆ ನಿರಾಳವಾಯಿತು.

''ಇದನ್ನು ಸ್ಯಾಂಕೀ ಕೆರೆಗೆ ಬಿಟ್ಟು ಊರಿಗೆ ಹೋಗ್‌ತೀನಿ'' ಎಂದೆ. ಅಂದಿದ್ದೇ ತಪ್ಪಾಯಿತು. ''ಓಹೋ! ಅವ್ರು, ನಿಮಗೊಬ್ರಿಗೇ ತಾಯಿನಾ? ಇವ್ರೂ, ಅವ್ರ ಮಗ ಅಲ್ವಾ?'', ಉದ್ರಿಕ್ತಳಾಗಿ ಮುಂದುವರಿಸಿದಳು.

''ಇವ್ರಿಗೆ ದುಃಖ ತೋರಿಸಕ್ಕೆ ಇಷ್ಟವಿಲ್ಲ. ನೀವೆಲ್ಲಾ ಆಡಿಕೊಂಡಿರಬೇಕಲ್ವಾ''


''ನಂಗೂ ಎಲ್ಲರೆದುರ್ಗೆ ಅಳಲಿಕ್ಕಾಗಲ್ಲ. ನಾನೂ ಅವ್ನ ತಂಗೀ ತಾನೆ?''

''ನಿಮ್ಮಮ್ಮನ ಹಾಗೇ, ಸೂಕ್ಷ್ಮವಾಗಿ ಚಾವಟೀಲಿ ಬಾರಿಸ್ತೀರ್‍ರಿ, ಪರ್ವಾಗಿಲ್ಲ''. ಅಣ್ಣ, ಮಾತಿಗೆ ಬಂದಾನೆಯೆ? ಚಪ್ಪಲಿ ಮೆಟ್ಟಿ ಹೊರಗೆ ಹೋದ. (ವಾಕಿಂಗ್ ಮಾಡು ಅಂತ ಡಾಕ್ಟರ್ ಹೇಳಿದ್ದಾರಂತೆ.)

''ಮಾತು, ಕೇಡನ್ನೂ ನೋವನ್ನೂ ತರುತ್ತೆ. ನಾ ಬರ್‍ತೀನ್ರಿ'' ಅನ್ನುತ್ತಲೇ ಬ್ಯಾಗ್ ರೆಡಿ ಮಾಡಿದೆ. ಧಡಧಡ ಮೆಟ್ಟಿಲಿಳಿದು, ಹತ್ತಿರವೇ ಇದ್ದ ಸ್ಯಾಂಕೀಕೆರೆಯ ಕಡೆಗೆ ನಡೆದೆ.

'ನೋಡು, ಇವಳೇ ಅಮ್ಮ!' ಅಣ್ಣ, ಸ್ಮಶಾನದಲ್ಲಿ ಬಿಳಿ ಕೆಂಡದಲ್ಲಿ ಅಸ್ಥಿ ಬೂದಿ ತುಂಬಿದ ಒಂದು ಗಡಿಗೆ ತೋರಿಸಿದ. ಆಗ ಪ್ರೇಮ ತುಂಬಿದಂತಾಗಿ 'ಅಮ್ಮ' ಎಂದು ಕೂಗುತ್ತ ಗಡಿಗೆ ಮುಟ್ಟಿದೆ.

[illegible]



ಮಾನಸೋಲ್ಲಾಸ

ಸಂತೋಷಕುಮಾರ ಗುಲ್ವಾಡಿ



ಆಲಾಪ(ನಾ)

ಸಂಗೀತ- ಅದು ಹಿಂದುಸ್ಥಾನಿ ಪದ್ಧತಿಯಿರಲಿ, ಕರ್ನಾಟಕಿ ಪದ್ಧತಿಯಿರಲಿ, ಹಾಡುಗಾರಿಕೆಯಲ್ಲಿ ಮೊದಲು ಸಾದರಪಡಿಸುವ ರಾಗವಿಸ್ತಾರ ಕೌಶಲವೇ ಆಲಾಪ (ಹಿಂದುಸ್ಥಾನಿ) ಆಲಾಪನಾ (ಕರ್ನಾಟಕಿ). ಹಾಡುಗಾರಿಕೆ ಆರಂಭ ಮಾಡಿದೊಡನೆ ಅದು ಯಾವ ರಾಗ ಎಂಬ ಕುತೂಹಲ ರಸಿಕನಿಗೆ ಉಂಟಾಗುತ್ತದೆ. ಆಲಾಪದಲ್ಲಿ ಈ ರಾಗದ ಒಂದು ಸೆಳಕನ್ನು ಕೂಡಲೇ ಪತ್ತೆಹಚ್ಚಬಹುದು.

ಹಾಡುಗಾರನು ಕಲ್ಪಿಸಿಕೊಂಡ ರಾಗದ ಸ್ವರಗಳನ್ನು ಪೋಣಿಸಿಕೊಂಡು, ತನ್ನ ಸೃಜನಶೀಲ ಕೌಶಲವನ್ನು ವಿಸ್ತಾರಗೊಳಿಸಿ, ಸ್ವರಸಂಭ್ರಮದಲ್ಲಿ ವಿಹರಿಸುವ ಈ ಅನುಭವ ಹಾಡುಗಾರನಿಗೂ ಶ್ರೋತೃಗಳಿಗೂ ವಿಶಿಷ್ಟ ಆನಂದ ಕೊಡುತ್ತದೆ. ಮನಸ್ಸಿಗೆ ಮುದಕೊಟ್ಟು, ನೆಮ್ಮದಿ ಉಂಟುಮಾಡಿ ಶಾಂತಿದಾಯಕವಾಗುತ್ತದೆ. ಈ ಕಲ್ಪನಾ ವಿಹಾರವನ್ನು ರಾಗದ ಸ್ವರಗಳ ಚೌಕಟ್ಟಿನಲ್ಲೇ ಮಾಡುವುದಾದರೂ, ಹಾಡುಗಾರನಿಗೆ ತನ್ನ ಪ್ರತಿಭೆ ತೋರಿಸಲು ಇಲ್ಲಿ ಧಾರಾಳ ಅವಕಾಶ ಇರುತ್ತದೆ.

ಆಲಾಪವು ರಾಗದ ಮುನ್ನೋಟವನ್ನು, ಅಂತರಂಗದಲ್ಲಿ ಅದು ಉಂಟುಮಾಡುವ ಪರಿಣಾಮವನ್ನು, ರಾಗದ ವಿಶಿಷ್ಟ ಚೈತನ್ಯವನ್ನು, ಸ್ಪಂದನದ ನಾಡಿಮಿಡಿತವನ್ನು ಅಭಿವ್ಯಕ್ತಗೊಳಿಸುತ್ತದೆ. ಅದು ಕಲಾವಿದನ ಕೌಶಲ, ತಾಲೀಮು ಮಾಡಿದ ಸೆಳಕನ್ನು, ರಾಗದ 'ಮೂಡ್'ನೊಂದಿಗೆ ಎಲ್ಲ ಕಡೆಗಳಲ್ಲೂ ಪ್ರಕಾಶ ಹರಡುವಂತೆ ಮಾಡುತ್ತದೆ. ರಾಗದ ಸ್ವರೂಪವನ್ನು ಅದು ತಿಳಿಸಬಲ್ಲುದು. ಎಲ್ಲಕ್ಕೂ ಹೆಚ್ಚಾಗಿ ಹಾಡುಗಾರನ ಕ್ರಿಯಾಸೃಷ್ಟಿಯನ್ನು ಅದು ಪದರು ಪದರಾಗಿ ತೆರೆದು ತೋರಿಸುತ್ತದೆ.

ಈ ಆಲಾಪ ಸೃಷ್ಟಿ ಕಲಾವಿದನಿಂದ ಕಲಾವಿದನಲ್ಲಿ ಪ್ರತ್ಯೇಕವಾಗಿರುತ್ತದೆ. ಅಲ್ಲಿ ಅದು ಕಲಾವಿದನ ವ್ಯಕ್ತಿತ್ವವನ್ನು ಹೊರಗೆಡಹಬಲ್ಲುದು. ಆಲಾಪವು ಹೀಗೆ ಮೊದಲಿನಿಂದಲೂ ಕೊನೆಯವರೆಗೆ ಕಣ್ಣುಮುಚ್ಚಾಲೆ ಆಡುತ್ತಲೇ ಕಚಗುಳಿ ಇಡುತ್ತಿರುತ್ತದೆ. ಅದರ ಪರಿಣಾಮವಾಗಿ ಕಲಾವಿದ ಹಾಗೂ ಶ್ರೋತೃಗಳ ಕೈ ಮತ್ತು ತಲೆಗಳು ಆಂತರಂಗಿಕವಾಗಿ ಮತ್ತು ಹೊರಗೆ ನಡೆಯುವ ಕ್ರಿಯೆಗಳಿಗೆ ಪೂರಕವಾಗಿ ಚಲಿಸುತ್ತವೆ, ತೂಗುತ್ತವೆ. ಮನಸ್ಸು ವಿಹರಿಸುತ್ತದೆ. ಈಜುತ್ತದೆ. ಹಾರುತ್ತದೆ. ಒಟ್ಟಿನಲ್ಲಿ ಅದು ಒಂದು ಪ್ರತ್ಯೇಕ ವಾತಾವರಣ ಸೃಷ್ಟಿ ಮಾಡುತ್ತದೆ.



ಶಾಸ್ತ್ರೀಯ ಸಂಗೀತದಲ್ಲಿ ಆಲಾಪವು ರಾಗದ ಚೌಕಟ್ಟನ್ನು ಬಿಟ್ಟು ಹೊರಗೆ ಹೋಗುವಂತಿಲ್ಲ. ಅದು ಜ್ಞಾಪಕಶಕ್ತಿಯನ್ನು (Mnemonic) ಅಭಿವೃದ್ಧಿಪಡಿಸಿ ವಿಕಾಸವನ್ನೂ ಉಂಟು ಮಾಡುತ್ತದೆ. ನೆನಪಿನ ಶಕ್ತಿಯ ವೃದ್ಧಿಗೆ ಪೂರಕವಾಗಿ ಸ್ವರಜ್ಞಾನದ ಅರಿವು ಕ್ರಮೇಣ ಆಗಲಾರಂಭವಾಗುತ್ತದೆ. ಸ್ವರಜ್ಞಾನವೇ ಸಂಗೀತದ ಮೂಲಸತ್ವ, ಹಿಡಿತ, ನಿಯಂತ್ರಣ.

ನಿಶ್ಚಲವಾದ ಸಾಗರದ ತೆರೆಗಳು ಒಂದರ ಹಿಂದೆ ಒಂದಾಗಿ ಏಳುವಂತೆ, ಅದು ಬೆಳೆದಾಗ ಹಾಡುಗಾರಿಕೆಯಲ್ಲೇ ತಲ್ಲೀನರಾಗುತ್ತೇವೆ. ಹಾಡುಗಾರ ಹಾಗೂ ಕೇಳುಗ ಒಂದು ವಿಚಿತ್ರವಾದ ಭಾವಸಮಾಧಿಗೆ ಒಳಗಾಗುತ್ತಾರೆ. ಒಂದಾಗುತ್ತಾರೆ. ಸಮರಸರಾಗುತ್ತಾರೆ.

ಆಲಾಪದಲ್ಲಿ ಎರಡು ವಿಧ. ಅನಕ್ಷರ ಆಲಾಪ ಎಂದರೆ ಯಾವುದೇ ಶಬ್ದಗಳಿಲ್ಲದೆ ರಚಿಸುವ ರಾಗ ಸಂಚಾರದ ಭಾವ. ಸಾಕ್ಷರ ಆಲಾಪದಲ್ಲಿ ಸ್ವರಗಳ, ಶಬ್ದಗಳ ಸಂಯೋಜನೆಯೊಂದಿಗೆ ಹೊಸ ಧ್ವನಿ,

ಪ್ರತಿಕ್ರಿಯೆ

ನಿಮ್ಮ ಅಂಕಣ ಮಾಸೋಲ್ಲಾಸ ತುಂಬಾ ಅರ್ಥಪೂರ್ಣವಾಗಿದ್ದು, ಪ್ರತೀಸಲ ಹೊಸತನ್ನು ಬಿಚ್ಚಿಡುತ್ತದೆ. ಜೂನ್ ಸಂಚಿಕೆಯ 'ಕವ್ವಾಲಿ' ಮೆಚ್ಚುಗೆ ಆಯಿತು. ಉರ್ದು ಕಾವ್ಯಪ್ರಕಾರ ಮತ್ತು ಅವುಗಳ ರಚನೆ ಕುರಿತು ಒಂದು ಪುಸ್ತಕ ಇದೆ. ಇವುಗಳಲ್ಲಿ 'ಕವ್ವಾಲಿ' ಕುರಿತು ಎಲ್ಲಿಯೂ ಪ್ರಸ್ತಾಪವಿಲ್ಲ.

ಭಾವನಾ ಜುಲೈ ಸಂಚಿಕೆಯಲ್ಲಿ **ಖಯಾಲ್** ಕುರಿತ ನಿಮ್ಮ ಮತ್ತು ಡಾ. ಫೈರಪ್ಪನವರ ಪ್ರಬುದ್ಧ ವಿಚಾರಗಳಿವೆ. **ಖಯಾಲ್** ಎಂಬುದು ಪಾರಸೀ ಶಬ್ದವಲ್ಲ; ಅದು ಅರಬ್ಬೀ ಶಬ್ದ. ಅದಕ್ಕೆ ಅನೇಕ ಅರ್ಥಗಳಿವೆ. ಉರ್ದು ನಿಘಂಟುಗಳಲ್ಲಿ ಖೇಲ್, ಖೇಲಣ ಕ್ರೀಡೆ ಎಂಬ ಅರ್ಥ **ಖಯಾಲ್** ಶಬ್ದಕ್ಕಿಲ್ಲ. ಕರ್ನಾಟಕ ಉರ್ದು ಸಾಹಿತ್ಯ ಅಕಾದೆಮಿ ಪ್ರಕಟಿಸಿದ ಉರ್ದು-ಕನ್ನಡ ನಿಘಂಟನಲ್ಲಿ **ಖಯಾಲ್** ಶಬ್ದಕ್ಕೆ ಈ ಅರ್ಥಗಳಿವೆ- ವಿಚಾರ, ಅಭಿಪ್ರಾಯ, ಭಾವನೆ, ಅಮಿರ್ ಖುಸ್ರೊ ರಚಿಸಿದ ಒಂದು ರಾಗ.

ಫಿರೋಜ್ ಉಲ್ಲೋಗಾತ್ ಎಂಬ ಪ್ರಸಿದ್ಧ ನಿಘಂಟಿನಲ್ಲಿರುವ **ಖಯಾಲ್** ಕುರಿತ ಅರ್ಥಗಳನ್ನು ಇಲ್ಲಿ ಕೊಟ್ಟಿದ್ದೇನೆ.

ಕಲ್ಪನೆ, ಭಾವನೆ, ಪರಿಭಾವನೆ, ಜಾಗ್ರತದಲ್ಲಿ ಮನುಷ್ಯನು ಕಲ್ಪಿಸುವ ರೂಪ ಅಥವಾ ಕನಸಿನಲ್ಲಿ ನೋಡುವುದು, ವ್ಯಾಕುಲತೆ, ಚಿಂತೆ, ಕಾಳಜಿ, ಯೋಜನೆ, ಭಯ, ಸಂದೇಹ, ಧ್ಯಾನ, ಪರಿಶೀಲನೆ, ಯೋಚನೆ, ಅನುಮಾನ, ತಿಳಿವಳಿಕೆ, ಬುದ್ಧಿ, ಜ್ಞಾನ, ಸಲಹೆ, ಮತ, ಅಭಿಪ್ರಾಯ, ಇರಾದೆ, ಇಚ್ಛೆ, ತಾತ್ಪರ್ಯ, ಮನೋಗತ, ಗಮನ, ಲಕ್ಷ್ಯ, ಅನುಗ್ರಹ, ಕರುಣೆ, ಕೃಪೆ ಮಾಡು, ವಿಷಾದ, ಪ್ರಬಂಧ, ಪಹರೆ, ಕಾವಲು, ವೇಳೆ, ಮೂರು ತಾಸಿನ ಅವಧಿ, ಪಕ್ಷಪಾತ, ದೃಷ್ಟಿ, ಶಿಷ್ಟಾಚಾರ, ನಾಚಿಕೆ, ದಾಕ್ಷಿಣ್ಯ, ಪಥ್ಯ, ಅಭಿಮಾನ, ಒಂದು ರಾಗದ ಹೆಸರು (ಇಲ್ಲಿ ಅಮಿರ್ ಖುಸ್ರೊನ ಹೆಸರು ಇಲ್ಲ. ಇದು ಮಹತ್ವದ್ದು).

'ಖಯಾಲ್ ಆನಾ' ಎಂಬ ನಾಣ್ಣುಡಿ ಇದೆ. ಇದರ ಅರ್ಥ 'ಏನೋ ನೆನಪಾಗುವುದು'. 'ಕಭೀ ಕಭೀ ಮೆರೆ ದಿಲ್ ಮೆ ಖಯಾಲ್ ಆತಾ ಹೈ' ಎಂಬ ಸಾಹಿರ್ ಲೂಧಿಯಾನ್ವೀ ಅವರ ಪ್ರಸಿದ್ಧ ಗೀತೆಯನ್ನು ನೀವು ಕೇಳಿರಬಹುದು.

ಗದಗ

ಶಾಂತರಸ

ಹೊಸ ಮೂಡ್, ಹೊಸ ವಾತಾವರಣ ನಿರ್ಮಾಣವಾಗುತ್ತದೆ. ಶ್ರುತಿ ಪರಂಪರೆಯ ನಮ್ಮ ದೇಶದಲ್ಲಿ ಅದರ ಮಹತ್ವ ಅರಿವಾಗುವುದೇ ಆಲಾಪದಲ್ಲಿ. ಈ ಶ್ರುತಿಬದ್ಧ ಸಂಗೀತದ ಆಲಾಪ ನಮ್ಮ ವೇದಘೋಷದಲ್ಲೂ ಇದೆ. ಮಂತ್ರಗಳಲ್ಲೂ ಇದೆ. ಸಾಮಗಾನದಿಂದಲೇ ಮುಂದೆ ಆಲಾಪನಾ ಕ್ರಮವೂ ಬೆಳೆಯಿತು.

ಓಂಕಾರವನ್ನೇ ವಿವಿಧ ರೀತಿಯ ಆಲಾಪವಾಗಿ ಹಾಡುತ್ತಾರೆ. ಹರಿ ಓಂ ಅನಂತ ನಾರಾಯಣ, ಶಿವಾಯ ನಮಓಂ... ಹೀಗೆ ಬೇರೆ ಬೇರೆ ಮಂತ್ರಗಳನ್ನು ಆಲಾಪದಲ್ಲಿ ಬಳಸುತ್ತಾರೆ. ಮುಘಲರ ಕಾಲದಲ್ಲಿ 'ಅನಂತನಾರಾಯಣ' ಇದ್ದುದು 'ನೋಂ ತೋಂ' ಎಂದಾಯಿತು ಎಂಬ ದಂತಕತೆಯೂ ಇದೆ.

ಭಾರತೀಯ ಸಂಗೀತದಲ್ಲಿ ಅಧ್ಯಾತ್ಮದ ಸಾಮರಸ್ಯ ಆಗಿರುವುದೇ ಅದರ ಮಹತ್ವದ ಕೊಡುಗೆ. ಆತ್ಮಸಾಕ್ಷಾತ್ಕಾರಕ್ಕೆ ಸಂಗೀತವೂ ಒಂದು ಸೋಪಾನ. ನಾರದನ (ನಮ್ಮ ಪುರಾಣಗಳಲ್ಲಿ ಅನೇಕ ನಾರದರು ಬರುತ್ತಾರೆ. ಬ್ರಹ್ಮವೀಣೆ ಹಿಡಿದುಕೊಂಡು ಬರುವ ಸಂಗೀತದ ನಾರದ 'ಪಂಚಮ ಸಾರಸಂಹಿತೆ'ಯನ್ನು ಬರೆದವನು) ಮಾತಿನಲ್ಲಿ ಇದು ವ್ಯಕ್ತ-


"ಆರು ರಾಗಗಳು, 36 ರಾಗಿಣಿಯರು - ಇವರೆಲ್ಲರ ಸುಂದರ ಅಂಗಾಂಗಗಳು ಬ್ರಹ್ಮನಿಂದಲೇ ಹುಟ್ಟಿ ಮತ್ತೆ ಎಲ್ಲೆಲ್ಲೂ ವಿಹರಿಸಿ, ಬ್ರಹ್ಮನ ಗೌರವದ ಕುರಿತು ಹಾಡಿ ಅನಂತರ ಬ್ರಹ್ಮನಲ್ಲೇ ಐಕ್ಯರಾಗುತ್ತಾರೆ."

ಋಗ್ವೇದ, ಸಾಮವೇದದ ಮಂತ್ರಗಳನ್ನು 'ಉದಾತ್ತ', 'ಅನುದಾತ್ತ' ಮತ್ತು 'ಸ್ವರಿತ' ರೀತಿಯಲ್ಲಿ ಹಾಡುವುದು ಕ್ರಮ. ಅಂದರೆ ಸ್ವರಗಳ ಸ್ಥಾಯೀ ಮತ್ತು ಸಂಚಾರೀ ಭಾವಗಳ ಏರಿಳಿತ, ವಿಸ್ತಾರ, ಬಣ್ಣ, ಆಕಾರಗಳನ್ನು ಮನಸ್ಸಿನ ಭಿತ್ತಿಯಲ್ಲಿ ಚಿತ್ರಿಸಿಕೊಳ್ಳುವಂತೆ ಹಾಡುತ್ತಾರೆ. ಅದೊಂದು ಬಗೆಯ ಧ್ಯಾನವೇ ಆಗುತ್ತದೆ. ಅವುಗಳ ಏರಿಳಿತಗಳು, ಸ್ವರಸಂಚಾರಗಳು ಮೈಮನಸ್ಸುಗಳಲ್ಲಿ ರೋಮಾಂಚನ, ಸ್ಪಂದನ ಉಂಟುಮಾಡುತ್ತವೆ. ಈ ಹಾಡುಗಾರಿಕೆಯಲ್ಲೂ ಒಂದು ಛಂದಸ್ಸು, ಒಂದು ಲಯ ಇದೆ. ವೇದ, ಸಂಹಿತೆ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು, ಪುರಾಣ, ಉಪಪುರಾಣ, ಮಹಾಕಾವ್ಯಗಳ ಈ ಗುಣಗಳೇ ನಮ್ಮ ಸಂಗೀತದಲ್ಲೂ ಪರಂಪರಾಗತವಾಗಿ ಆಲಾಪನಾರೂಪದಲ್ಲಿ ಬಂದಿವೆ. ಅವು ಗಮಕವಾಗಿ, ಯಕ್ಷಗಾನ ಪದ್ಯ ರೂಪಗಳಲ್ಲೂ ಲೋಕಕಲೆಯಾಗಿ, ಜಾನಪದದೊಂದಿಗೆ ಒಂದಾಗಿವೆ.

ಸ್ವರಮಂತ್ರ, ಸ್ವರಸಾಧನೆ, ಸ್ವರಸಿದ್ಧಿ, ಆಲಾಪನೆಯ ಮುಖ್ಯ ಉದ್ದೇಶ. ಅದು ಮನುಷ್ಯ ಮಾತ್ರವಲ್ಲ ಸರ್ವಪ್ರಾಣಿಗಳ ಮನಸ್ಸಿನ ಮೇಲೂ ಪರಿಣಾಮ ಬೀರಬಲ್ಲುದು.

ಆಲಾಪವು ಲೌಕಿಕ ಜೀವನದಲ್ಲಿ ಪ್ರಲಾಪವಾಗಿ, ವಿಲಾಪವಾಗಿ, ಸಲ್ಲಾಪವಾಗಿಯೂ ತನ್ನ ಬೇರೆ ಬೇರೆ ಅವತಾರಗಳನ್ನು ತೋರಿಸುತ್ತಲೇ ಇರುತ್ತದೆ. ಸಂಗೀತ ವಲಯದಲ್ಲಿ ಅದು ಅತ್ಯಂತ ಸೃಜನಾತ್ಮಕವಾದ ಕಲೆ ಮತ್ತು ಕೌಶಲವಾಗಿ ಮೆರೆಯುತ್ತದೆ. ಒಂದು ಕಾಲದಲ್ಲಿ ಮೂರು-ನಾಲ್ಕು ತಾಸುಗಳಷ್ಟು ದೀರ್ಘಕಾಲ ಆಲಾಪ ಮಾಡುತ್ತಿದ್ದರು. ಅವಸರದ 'ಇಂದಿನ ಯಾಂತ್ರಿಕ ದಿನಗಳಲ್ಲಿ ಈ ಸೌಂದರ್ಯಾನುಭೂತಿಯೇ ನಶಿಸಿ ಹೋಗುತ್ತಿರುವುದು ಮಾತ್ರ ನಮಗೆ ದೊಡ್ಡ ನಷ್ಟ. ಆಲಾಪನೆಯ ಆ ಸುಖ ಇನ್ನೆಲ್ಲಿ?

□



ನೀಡುವ ಕೈ

ಸುನಂದಾ ಬೆಳಗಾಂವಕರ

-ಉತ್ತರಾರ್ಧ-



ಕಮಲವ್ವ, ನಿಂಗನಗೌಡರಿಗೆ ಅವಳ ವರ್ತನೆ ದುಃಖ ತಂದಿತ್ತು. ನಿಂಗನಗೌಡರು ತಪ್ಪು ಮಾಡಿದ್ದರು. ತುಟಿ ಎರಡು ಮಾಡುವಂತಿರಲಿಲ್ಲ. ಆದರೆ ಯಾವ ತಪ್ಪೂ ಇಲ್ಲದೇ ಈ ಜೀವನದ ಮಹಾಯಜ್ಞಕ್ಕೆ ಬಲಿಪಶುವಾದ ರತ್ನವ್ವನ ಮೇಲೆ ಕಮಲವ್ವನಿಗೆ ಪ್ರೀತಿ ಹುಟ್ಟಿತ್ತು. ಗೌರವ ಇಮ್ಮಡಿಸಿತ್ತು. ತನ್ನನ್ನು ಸವತಿಯಂತೆ ಕಾಣದೇ ತಂಗಿಯೆಂದು ಪ್ರೀತಿಸುವ ಅವಳ ಬಗ್ಗೆ ವಿಪರೀತ ಕನಿಕರವುಂಟಾಗಿತ್ತು. ಅತ್ತೆ ಗೌರಕ್ಕ, ಮನೆಯೊಡತಿಯಾದ ರತ್ನವ್ವನನ್ನು ಜೀತದಾಳಿನಂತೆ ನೋಡಿಕೊಳ್ಳುತ್ತಿದ್ದುದನ್ನು, ಕಣ್ಣಿದ್ದೂ ಕುರುಡನಂತಿದ್ದ ನಿಂಗನಗೌಡರನ್ನೂ, ಕಣ್ಣಿದ್ದೂ ಸುಮ್ಮನೇ ಹೆದರಿ ಇರುತ್ತಿದ್ದ ತನ್ನ ಬಗ್ಗೆಯೂ ಅವಳಿಗೆ ಜಿಗುಪ್ಸೆಯುಂಟಾಗಿತ್ತು.

ಅದೇ ದಿನ ರಾತ್ರಿ ಅವಳು ನಿಂಗನಗೌಡರಿಗೆ ''ನಿಮ್ಮೊಳಗ ನಂದ ಒಂದ ವಿನಂತಿ ಐತಿ'' ಅಂದಳು.

''ಏನ ಹೇಳ''

''ಇಲ್ಲಾ ಅನಬಾರದು. ಮಾತ ಕೊಟ್ರ ಹೇಳ್ತೀನಿ''

''ಕೊಟ್ಟೆ ಹೇಳು'' ಎಂದು ಅವಳ ಕೈ ಹಿಡಿದು, ಅದರ ಮೇಲೆ ತಮ್ಮ ಕೈಯಿಟ್ಟರು.

''ಅಕ್ಕಾರಿಗೆ ನೀವು ಬಾಳ್ವಿಕೊಡಬೇಕು. ನಾ ಅದೇನಿ ಅಂತ ನೀವು ಅವರ್ನ ನಿರ್ಲಕ್ಷ ಮಾಡಬಾರದು''

''ನಾಯೆಲ್ಲಿ ಇಲ್ಲ ಅಂದೇನಿ''

''ನೀವು ಅವರ ಹತ್ರ ಹೋಗಿಲ್ಲ''

''ಆಕಿ ನಾ ಇದ್ದಲ್ಲಿ ಇರೂದಿಲ್ಲ''

''ಪಾಪ ಹ್ಯಾಂಗ ಇರ್ತಾರು? ಅತ್ತೆವರ ಅಂಜಿಕಿ. ಒಂದ ಚಂದ ಸೀರಿ ಉಡಾಕ ಬಿಟ್ಟಿಲ್ಲ. ಒಳ್ಳೆ ಖಣದ ಕುಬಸಾ ತೊಟ್ರ ಸೆರಗ ಬಿಟ್ಟ ಅಡ್ಡ್ಯಾಡತಿ ಅಂತ ಸುಮಾರ ಖಣದ ಕುಬಸಾ ತೊಡಬೇಕಂತ. ಶ್ರಾವಣ ಶುಕ್ರ್ಯಾರಾ ಲಕ್ಷ್ಮಿಗೆ ಏರಿಸಿದ್ದ ಮಾಲಿ ಮುಡದದ್ದಕ್ಕ ಅಳಿಸಿಬಿಟ್ಟಿದ್ರು.''

''ಹೌದ? ನನಗ ಗೊತ್ತಿಲ್ಲ''

''ನಿಮಗ್ಯಾರ ಹೇಳಬೇಕು?''

''ನೀನು''

''ಅತ್ತೆವರ ವಿರುದ್ಧ ನಿಮ್ಮುಂದ ಹೇಳಾಕ ಧೈರ್ಯ ಎಲ್ಲಿಂದ ಬರಬೇಕು. ಅಕ್ಕಾರ ಮುಂದ ನನಗ ಉಡಾಕ, ತೊಡಾಕ ದುಃಖ ಆಗತಿತ್ತ''

''ಭಾಳ ಅನ್ಯಾಯ ಆಗೇತಿ''

''ಅಕ್ಕಾರು ಸನ್ಯಾಸಿ ಹಾಂಗ ಇರ್ತಾರ. ತಾವ ಮಾಡಿರ್ತಾರ, ಆದ್ರ ಒಂದ ಸಿಹಿ ತಿನಸ ಬಾಯಿಗೆ ಹಾಕೂದಿಲ್ಲ. ಹಣ್ಣಿಲ್ಲ ಹಂಪಲಿಲ್ಲ. ಹಾಲಿಲ್ಲ, ಮೊಸರಿಲ್ಲ, ಒಪ್ಪತ್ತು ಊಟ, ಅದು ರೊಟ್ಟಿ, ಖಾರಬ್ಯಾಳಿ, ಮಜ್ಜಿಗಿ.''

ನಿಂಗನಗೌಡರ ಎದೆ ಕರಗಿಹೋಯಿತು.

''ನಾಯೇನ ಮಾಡ್ಲಿ?'' ಎಂದು ಕಣ್ಣಲ್ಲಿ ನೀರು ತಂದರು. ಕಮಲವ್ವ ಸಮಾಧಾನ ಮಾಡಿದಳು.

''ಒಂದ ದಿನಾ ನೀನ, ಆಕಿಗೆ ಪ್ರೀತಿಯಿಂದ ತಿಳಿಸಿಹೇಳಿ, ನನ್ನ ಹತ್ರ ಕಳಿಸಿಕೊಡ. ನನಗ ಆಕಿ ಜತಿ ಮಾತಾಡಬೇಕಾಗೇತಿ. ನಾ ಆಕಿ ಕಾಲ ಬಿದ್ದ ಕ್ಷಮ ಕೇಳತೀನಿ'' ಎಂದು ಮತ್ತೆ ಬಿಕ್ಕಿದರು.

ಕಮಲವ್ವ ಒಪ್ಪಿದಳು.

''ನಾಳಿನಿಂದ ನಾನೂ ಅವರುಟ್ಟಂಥಾದ್ದ ಸೀರಿ ಉಡತೀನಿ. ಅವರ ಜತಿನ ಊಟ ಮಾಡ್ತೀನಿ. ರೊಟ್ಟಿ, ಬ್ಯಾಳಿ ಎರಡ ತಿಂತೀನಿ, ಅವರ ಜತಿನ ಮಲಗತೀನಿ. ನೀವು ಯಾವದಕ್ಕೂ ಏನೂ ಕೇಳಬಾರದು. ಅವರ್ನ ಒಲಿಸಿಕೊಳ್ಳಾಕ ಅದ ಒಂದ ಹಾದಿ ಐತಿ. ಅದಕ್ಕೂ ಅವರು ಮಣಿಲಿಲ್ಲಾಂದ್ರ ನೀವೂ ರೊಟ್ಟಿ ಬ್ಯಾಳಿ ತಿನಬೇಕು''

ನಿಂಗನಗೌಡರು ಒಪ್ಪಿದರು. ''ಅಕ್ಕಾ ತಂಗಿ, ಹಿಂಗ ಪ್ರೀತಿಯಿಂದ ಇರ್ರಿ. ಅದ ನನಗ ಸಂಪತ್ತು'' ಅಂದು ಕಮಲವ್ವನ ಕೈಗಳೆರಡನ್ನು ಗಟ್ಟಿ ಹಿಡಿದು ಕಣ್ಣಿಗೊತ್ತಿಕೊಂಡು,

''ಆಕಿ ನೀಡೋ ಕೈ, ನೀ ನೋಡೋ ಕೈ. ಈ ಎರಡೂ ಕೈ ಕೂಡಿದ್ರ ಈ ಗಂಡಿನ ಬಾಳಿಗೆ ಪ್ರೀತಿ. ಅವನ ಸಂಸಾರ ಸುಂದರ. ಅವನ ಮನಿ ಮಂದಿರ. ಕಮಲು, ನೀನು ನಿನ್ನ ಅಕ್ಕಾ ಇಬ್ರು ಬಂಗಾರದ ಕಂಕಣ ಮಾಡಿಸಿಕೊಳ್ರಿ. ಕೈ ತುಂಬ ಚಂದಾ ಚಂದದ ಕಾಜಿನ ಬಳಿ ಇಟಗೊಳ್ರೀ. ನಿಮ್ಮಿಬ್ಬರ ಕೈ ನೋಡಿ ಈ ಗಂಡು ಹುಚ್ಚ ಆಗಬೇಕ'' ಎಂದು ಸಣ್ಣದಾಗಿ ನಕ್ಕು, ರಸಿಕರಾದ ನಿಂಗನಗೌಡರು ಹೆಂಡತಿಯನ್ನು ಅಪ್ಪಿದರು.

೧೨

ಮರುದಿನದಿಂದ ಕಮಲವ್ವನೂ ನಸುಕಿನಲ್ಲಿ ಎದ್ದು ಅಕ್ಕನೊಡನೆ ಹಣಮಪ್ಪನ ದರ್ಶನಕ್ಕೆ ಹೋಗಹತ್ತಿದಳು. ಮನೆಕೆಲಸಕ್ಕೆ ನಿಂತಳು. ಅಕ್ಕನಂತೆ ಸಾದಾ ಸೀರೆ ಉಡಹತ್ತಿದಳು. ಪತಿಯೊಡನೆ ಊಟಕ್ಕೆ ಕೂಡ್ರಲಿಲ್ಲ. ರೊಟ್ಟಿ, ಖಾರಬ್ಯಾಳಿ, ಮಜ್ಜಿಗೆ ಅಷ್ಟೇ ಉಂಡಳು. ರಾತ್ರಿ ಮಲಗಲು ಅಕ್ಕನ ಕೋಣೆಯಲ್ಲಿ. ಪಾರೆವ್ವ, ರತ್ನವ್ವರಿಗೆ ಅವಳ ವರ್ತನೆ ದಿಗಿಲು ಹುಟ್ಟಿಸಿತು. ಒಂದೆರಡು ದಿನ ಕಳೆದವು. ಅಕ್ಕತಂಗಿಯರಿಬ್ಬರೂ ಪಾರೆವ್ವನ ಜೊತೆ ಊಟಕ್ಕೆ ಕುಳಿತಿದ್ದರು. ರತ್ನವ್ವ ಒತ್ತಾಯದಿಂದ ಅವಳ ಎಲೆಗೆ **ಗೋಧಿಯ ಹುಗ್ಗಿ ಬಡಿಸಿ,**

''ನನ್ನಾಣೆ ಆಗೇತಿ ನೋಡ ತಂಗಿ, ಹುಗ್ಗಿ ತಿಂದ ಏಳ'' ಅಂದರೆ, ಕಮಲವ್ವನೂ ರತ್ನವ್ವನ ಎಲೆಗೆ **ಹುಗ್ಗಿ ಬಡಿಸಿ,**

''ನನ್ನಾಣೆ ಆಗೇತಿ ನೋಡ್ರಿ, ಅಕ್ಕಾರ, ಹುಗ್ಗಿ ತಿಂದ ಏಳ್ರೀ'' ಅಂದಳು.

ಪಾರೆವ್ವನ ಮುಖದಲ್ಲಿ ನಗೆ ಮಿಂಚಿತು.

''ಹಿಂಗ್ಯಾಕ ಮಾಡಾಕ ಹತ್ತಿ ತಂಗಿ?'', ಕೇಳಿದಳು ರತ್ನವ್ವ.

''ಹಿರಿಯಕ್ಕನ ಚಾಳಿ ಮನಿ ಮಂದಿಗೆಲ್ಲಾ'', ಪಾರೆವ್ವ ಪಿಸ್ಸನೇ ನಕ್ಕಳು.

''ನನ್ನ ನಗಚಾಟಿಕಿ ಮಾಡಾಕ ಇಬ್ರು ಮಾತಾಡಿಕೊಂಡಿರೇನ?'' ಅಂದಳು ರತ್ನವ್ವ.

ಪಾರೆವ್ವ ಒಮ್ಮೆಲೇ ಗಂಭೀರಳಾಗಿ, ''ಅಯ್ಯ... ನನ್ನ ಶಿವನ, ರತ್ನವ್ವಾರ, ನೀಡೋ ಕೈ ನಗಚಾಟಿಕಿ ಮಾಡಿದ್ರ, ಪರಶಿವಾ ಮುಂದಿನ ಜನ್ಮಕ್ಕ ತುತ್ತ ಅನ್ನಾ ಕೊಡಾಕಿಲ್ಲರಿ'' ಅಂದಳು.

''ಮತ್ತ ಇದೆಲ್ಲಾ ಏನ ನಡದೈತಿ?'' ಎಂದು ರತ್ನವ್ವ, ಕಮಲವ್ವನತ್ತ ಹುಸಿಕೋಪದ ನೋಟ ಬೀರಿದಳು.

''ಅಕ್ಕಾರ ನಮ್ಮ ಮ್ಯಾಗ ಸಿಟ್ಟಗೇಳಬ್ಯಾಡ್ರಿ. ನೀವು ಈ ಮನಿ ಹಿರಿ ಸೊಸಿ. ಲಕ್ಷ್ಮಿ ಸಮಾನ. ನೀವ ಒಣ ರೊಟ್ಟಿ ತಿಂದು, ನಾವು ಮೃಷ್ಟಾನ್ನ ಉಣ್ಣಾಕ ಶಕ್ಯ ಯಿಲ್ಲ. ಇಂದ ನೀವ ಈ ತುತ್ತ ಎತ್ತಲಿಲ್ಲಾಂದ್ರ, ನಾನಟ ಅಲ್ಲ, ಗೌಡ್ರು, ಬರೇ ರೊಟ್ಟಿ ತಿಂದ ಇರ್ತಾರಂತ. ವಿಚಾರ ಮಾಡ್ರಿ.'' ಎಂದ ಕಮಲವ್ವನ ಮಾತಿಗೆ ರತ್ನವ್ವನ ಕಣ್ಣು ತುಂಬ ನೀರು ಬಂದವು. ಗಂಟಲು ಬಿಗಿದು ಬಂದು, ಉತ್ತರಿಸಲಾರದೇ ಬಿಕ್ಕಿ ಬಿಕ್ಕಿ ಅಳಹತ್ತಿದಳು.

ಕಮಲವ್ವ, ಪಾರೆವ್ವರೂ ಅಳಹತ್ತಿದರು. ಪಾರೆವ್ವ ಮೂಗು ಸುಂಗುತ್ತ.

''ತುಂಬಿದ ಎಲಿ ಮುಂದ ಕುಂತ ಅಳಬಾರದು ಅವ್ವಾರ. ಕಮಲವ್ವಾರ, ರತ್ನಾವ್ವಾರಿಗೆ ಬಾಳೇವ ನೀವ ಕೊಡಬೇಕು. ಶಿವಾ ನಿಮಗ ಕಲ್ಯಾಣ ಮಾಡ್ತಾನ. ಇದೆಲ್ಲಾ ಹಿರೇಗೌಡತಿ ಆಜ್ಞಾ. ರತ್ನವ್ವಾರದೇನ ತಪ್ಪ ಐತಿ ನೀವ ಹೇಳ್ರಿ. ಹಿರೇರ್ನಾಗಿ, ಹೆಣ್ಣಾಗಿ ಹಿಂಗ ಮಾಡಿದ್ರ, ಉಟ್ರ, ತೊಟ್ರ, ಉಂಡ, ತಿಂದ ಚಂದ ಕಂಡ್ರ, ಸಣ್ಣಗೌಡರ ಲಕ್ಷ ನಿಮ್ಮಿಂದ ಅವರತ್ತ ಜಾರ್ಲೀತಂತ ಆ ಸ್ವಾರ್ಥಿ ತಾಯಿ ತಿಳಕೊಂಡ್ರ. ಆದ, ಇನ್ನೊಂದ ಎಳೆ ಹೆಣ್ಣ ಜೀವನಾ ಮರಗಸ್ತಿನಂತ ಅವರಿಗೆ ತಿಳೀಲಿಲ್ಲ. ಆತಲ್ಲರಿ ಅವ್ವಾರ, ಶಿವಾನ ಎಲ್ಲಾ ಕಷ್ಟ ದೂರ ಮಾಡುವನ. ಇಬ್ರು, ಅಕ್ಕಾ-ತಂಗಿ ಹುಗ್ಗಿ ಉಣ್ಣರಿ. ನೀವಿಬ್ರು ಈ ಮನ್ಯಾಗ 'ಹು' ಅಂದ್ರ, ಹುಗ್ಗಿ ಆಗಲಿ, 'ಹಾ' ಅಂದ, ಹಾಲ ಉಕ್ಕಲಿ. ಹಾಲು, ತುಪ್ಪ, ಹುಗ್ಗಿ ಹರೀಲಿ'' ಅಂದಳು.

ಮೂವರು ಕುಳಿತು ಊಟ ಮಾಡಿದರು. ಎಲೆ ಅಡಿಕೆ ಹಾಕಿಕೊಂಡರು. ರತ್ನವ್ವ, ಕಮಲವ್ವ ಕೋಣೆಗೆ ಬಂದು ಒಂದೇ ಮಂಚದ ಮೇಲೆ ಅಕ್ಕಪಕ್ಕ ಮಲಗಿಕೊಂಡರು. ಕಮಲವ್ವ ತನ್ನ ಮನಬಿಚ್ಚಿ ಮಾತನಾಡಿದಳು.


''ಅಕ್ಕಾರ, ಗೌಡ್ರಿಗೆ ನಿಮ್ಮ ಮ್ಯಾಗ ಭಾಳ ಪ್ರೀತಿ, ಗೌರವ ಐತಿ. ತಾಯಿ ಮಾತಿಗೆ ಕಟ್ಟಬಿದ್ದ ನನ್ನ ಮದವಿ ಆಗ್ಯಾರ. ಅವರು ನನ್ನೂ ಪ್ರೀತಿ ಮಾಡ್ತಾರ. ಆದ್ರ ನಿಮ್ಮ ಸಲುವಾಗಿ ಅವರ ಮನಸ್ಸಿನ್ಯಾಗ ಪಶ್ಚಾತ್ತಾಪ ಐತಿ. ಅವರದು ಹಸಗೂಸಿನಂಥ ಮನಸ್ಸು. ಸುಸಂಸ್ಕೃತ ಮನಸ್ಯಾರ. ಅದಕ ಇವತ್ತ ನಮ್ಮಿಬ್ಬರ್ನ್ನು ಗೆದ್ದಾರ ನೋಡ್ರಿ. ಮುಂಬಯಿ ಡಾಕ್ಟರ ಔಷಧಿ ನಿಲ್ಲಿಸಿಬಿಟ್ಟಾರ, ರಾಮಣ್ಣಾರ ಔಷಧಿ ನಡದೈತಿ. ಅಂಥಾದ್ದೇನ ದೊಡ್ಡ ದೋಷ ಅವರಾಗ ಇಲ್ಲಂತ್ರಿ. ಶಿವಾ ಕೃಪಾ ಮಾಡಿದ್ರ, ನಾವಿಬ್ರು ಈ ಮನ್ಯಾಗ ಜೋಡಿ ತೊಟ್ಟಿಲಾ ತೂಗಸೋಣಂತ. ಅದಕ ನಿಮಗ ಉಡಿ ಒಡ್ಡಿ ಬೇಡತೀನಿ, ನೀವು ಗೌಡರ್ನ ಸ್ವೀಕಾರ ಮಾಡ್ರಿ. ಈ ಮನ್ಯಾಗ ನೀವ ಉಸರ ಹಾಕಿದ್ರ ಈ ಮನಿ ತೊಳದ ಹೋಗತೈತಿ'' ಎಂದು ರತ್ನವ್ವನನ್ನು ತಬ್ಬಿ ಅಳಹತ್ತಿದಳು.

ರತ್ನವ್ವನೂ ಅಳುತ್ತಿದ್ದಳು. ಆದರೆ ಉತ್ತರಿಸಲಿಲ್ಲ.

ಆ ದಿನ ಸಂಜೆ ನಿಂಗನಗೌಡರಿಗೆ ಕಮಲವ್ವ, ಮಧ್ಯಾಹ್ನ ನಡೆದ ಎಲ್ಲ ಸುದ್ದಿ ಹೇಳಿದಳು. ರಾತ್ರಿ ಊಟವಾದ ನಂತರ ರತ್ನವ್ವನನ್ನು ತನ್ನ ಸ್ವಂತ ಕೈಯಿಂದ ಶೃಂಗರಿಸಿದಳು. ಕೇದಿಗೆ ಹೆರಳು ಹಾಕಿ ಮುಡಿ ಕಟ್ಟಿದಳು. ಮಲ್ಲಿಗೆ ಮೊಗ್ಗಿನ ಮಾಲೆ ಮುಡಿಸಿದಳು. ಕೈತುಂಬ ಕೆಂಪು ಶ್ರೀಮಂತ ಕಾಪಿ ಬಳೆಗಳನ್ನು ಬಂಗಾರದ ಪಾಟಲಿ, ಬಳೆಗಳ ಜೊತೆ ಇಡಿಸಿದಳು. ಮುತ್ತಿನಬಟ್ಟಿನ ಇಳಕಲ್ ಸೀರೆವುಡಿಸಿ, ಕುಂಕುಮಗೆರೆ ಧಾರವಾಡ ಖಣದ ಕುಪ್ಪಸ ತೊಡಿಸಿ, ಎರಡು ಲೋಟ ಕೇಸರಿ ಹಾಲಿನೊಂದಿಗೆ ಗೌಡರ ಕೋಣೆ ಪ್ರವೇಶಿಸಿ, ರತ್ನವ್ವನನ್ನು ಅಲ್ಲಿ ಬಿಟ್ಟು ಕೋಣೆಯ ಬಾಗಿಲು ಮುಂದೆ ಮಾಡುತ್ತ,

''ನನ್ನ ಧಣಿ, ನಿಮ್ಮ ನೀಡೋ ಕೈ ನಿಮಗ ಒಪ್ಪಿಸೇನಿ. ಅದನ್ನ ಗಟ್ಟಿ ಹಿಡಿಯೋ ಕೆಲಸ ನಿಮ್ಮದು. ನಿಮ್ಮ ನೋಡೋ ಕೈ ನಿಮಗಿವತ್ತ ಕೈ ಕೊಟ್ಟ ಹೊಂಟೇತಿ'' ಎಂದು ಕೈ ಜೋಡಿಸಿ ನಮಸ್ಕರಿಸುತ್ತ, ನಗುತ್ತ ಹೊರ ಬಂದಳು.

ನಿಂಗನಗೌಡರು ಬಾಗಿಲು ಕೊಂಡಿ ಹಾಕಿ ಬಂದು, ಚಿತ್ರದ ಗೊಂಬೆಯಂತೆ ನಿಂತಿದ್ದ ರತ್ನವ್ವನ ಹತ್ತಿರ ಬಂದು, ಅವಳ ಕೈ ಹಿಡಿದು ಕಣ್ಣಿಗೆ ಒತ್ತಿಕೊಂಡರು. ರತ್ನವ್ವನ ಕೈ ಒದ್ದೆಯಾದವು. ಅವಳು ಚಟ್ಟನೇ ತಲೆಯೆತ್ತಿ ಅವರತ್ತ ನೋಡಿದಳು. ತಲೆಯ ಮೇಲೆ ಹೊದ್ದ ಸೆರಗು ಜಾರಿತ್ತು, ಕೇದಿಗೆ, ಮಲ್ಲಿಗೆ, ಹಚ್ಚಿಟ್ಟ ಊದು ಬತ್ತಿಗಳ ಪರಿಮಳ, ಚಂದ್ರಮುಖಿ ರತ್ನವ್ವನ ಹಣೆಯ ಕುಂಕುಮಚಂದ್ರ ಮಹಾಲಕ್ಷ್ಮಿ ಮೂರ್ತಿಯ ನೆನಪು ತಂದಿತ್ತು. ಗೌಡರು ಅವಳ ಎರಡೂ ಕಾಲುಗಳನ್ನು ಗಟ್ಟಿ ಹಿಡಿದುಬಿಟ್ಟರು. ಅವಳೆಷ್ಟು ಕೊಸರಾಡಿದರೂ ಬಿಡಲಿಲ್ಲ.



''ನನ್ನ ಕ್ಷಮಾ ಮಾಡ್ರಿ. ನೀವು ನನ್ನ ಮನಿ ಲಕ್ಷ್ಮಿ. ನಿಮಗ ಅನ್ಯಾಯ ಮಾಡಿದೆ. ದಯಮಾಡಿ ನನ್ನ ಬಾಳಿಗೆ ಜೀವಾ ತುಂಬರಿ. ನಾ ಹತಭಾಗಿ ಅಂತ ತಿಳಿದಿದ್ದೆ. ಆದ್ರ ನನ್ನಂಥಾ ಭಾಗ್ಯವಂತ ಇಂದ ಯಾರ ಅದಾರ? ಅಕ್ಕಾ ತಂಗಿ ಇಬ್ರೂ

ಒಂದಾಗಿ, ನಿಮ್ಮ ಪ್ರೀತಿ ದೀಪ ನನ್ನ ಹೃದಯದಾಗ ಹಚ್ಚಿ ಬಿಟ್ಟೀರಿ'' ಎಂದು ಅಳಹತ್ತಿದ ಅವರನ್ನು ಸಂತೈಸಲು ರತ್ನವ್ವ ನಿಂತಲ್ಲಿಯೇ ಕುಸಿದು ಕೂತರೂ ಗೌಡರು ಅವಳ ಕಾಲು ಬಿಟ್ಟಿರಲಿಲ್ಲ.

ರತ್ನವ್ವ ಮೌನ ಒಡೆಯಲೇಬೇಕಾಯಿತು.

''ಇದೇನ ನೀವ ಮಾಡುಕ ಹತ್ತೀರಿ. ಕೈಹಿಡದಾಕಿಗೆ ಬಹುವಚನ ಹಚ್ಚತೀರಿ. ಹಿರೇರು ಕಿರೇರಿಗೆ ನಮಸ್ಕಾರ ಮಾಡಿದ್ರ ಕಿರೇರ ಆಯುಸ್ಯ ಕಮ್ಮಿ ಆಕ್ಕೇತಿ'' ಎಂದು ಕಣ್ಣೀರು ಸುರಿಸುತ್ತ, ಗಂಟಲು ಬಿಗಿದು ಬಂದು ನುಡಿದಳು.

ನಿಂಗನಗೌಡರು ಅವಳ ಕಾಲು ಬಿಟ್ಟರು. ಅವಳನ್ನೆತ್ತಿ ನಿಲ್ಲಿಸಿ, ತಮ್ಮ ಬಲಿಷ್ಠವಾದ ತೋಳುಗಳಲ್ಲಿ ಅವಳನ್ನು ಬಂಧಿಸಿ.

''ಇಲ್ಲ, ಹಾಂಗ ಅನಬ್ಯಾಡಾ ರತ್ನಾ'' ಅಂದರು.

ಪತಿ ಬಾಯಿಂದ ನಾಲ್ಕು ವರುಷಗಳ ನಂತರ ತನ್ನ ಹೆಸರನ್ನು ಕೇಳಿ ರತ್ನವ್ವ ವಸಂತ ಚಿಗುರಿಸಿದ ಹೊಸ ಗಿಡವಾದಳು. ನಿಂಗನಗೌಡರು ಅವಳನ್ನು ಕೈ ಹಿಡಿದು ಕರೆದುಕೊಂಡು ಬಂದು, ಶೃಂಗಾರವಾದ ತಮ್ಮ ಮಂಚದ ಮೇಲೆ ಕೂಡ್ರಿಸಿ, 'ನೀಡೋ ಕೈ' ಮತ್ತೆ ಮತ್ತೆ ಕಣ್ಣಿಗೊತ್ತಿಕೊಂಡರು.

ಇಷ್ಟು ದಿನ ಬಂಜೆಯಾದ ಭೂಮಿ ಶ್ರಾವಣನ ಮಳೆಯಲ್ಲಿ ಮಿಂದಿತ್ತು.

ನೀಡುವ ಕೈ, ನೋಡುವ ಕೈ ನಿಂಗನಗೌಡರ ಬಾಳಿಗೆ ಸುಖ ತುಂಬಿದರು. ಒಂದು ವಾರ ತಿರುಗುವುದರಲ್ಲಿ ಗೌಡರ ಮೈ ಬಣ್ಣ ತಿರುಗಿತು. ಮುಖದ ಕಳೆ ಏರಿತು. ಮೊದಲೇ ಸ್ಫುರದ್ರೂಪಿ ಗೌಡರು, ಭೂಸಪ್ಪಾಟಿಯ ಕಾಮಣ್ಣನಂತೆ ಜನರ ಕಣ್ಣಲ್ಲಿ ನಿಂತರು. ಒಂದು ತಿಂಗಳು, ಏನಾದರೂ ಗಟ್ಟಿ ನೆವ ಹೇಳಿ ತನ್ನನ್ನು ತೌರಿಗೆ ಕರೆಯಿಸಬೇಕೆಂದು, ಕಮಲವ್ವ ತಾಯಿಗೆ ಪತ್ರ ಬರೆದಳು. ಒಂದು ದಿನ ಶಿವಪ್ಪ ಶೆಟ್ರು, ಸುಶೀಲವ್ವ ತಮ್ಮ ಕಾರಿನಲ್ಲಿ ಬಂದು, ಅಳಿಯದೇವರ ಮನವೊಲಿಸಿ ಕಮಲವ್ವನನ್ನು ಹುಬ್ಬಳ್ಳಿಗೆ ಕರೆದುಕೊಂಡು ಹೋದರು.

ನಿಂಗನಗೌಡರಿಗೆ ನೋಡುವ ಕೈಯಿಲ್ಲದೇ ಭಣಭಣವಾಯಿತು. ರತ್ನವ್ವನೆದುರು ಅದೆಷ್ಟು ಬಾರೆ ನುಡಿದರೋ-

''ಹುಬ್ಬಳ್ಳಿಗೆ ಹೋಗಿ ನೋಡಿ ಬರ್ರಿ.''

''ಇನ್ನ ಒಂದ ವಾರ ಆಗಿಲ್ಲ. ಅವರ ಮನ್ಯಾಗ ಏನಾ ಅಂದಾರ?''

''ಏನ ಅಂತಾರ? ಅಲ್ಲೆ ನಮ್ಮ ವಸ್ತು ಐತಿ.''

''ಇವಗ ಆಳುಕ ಇಬ್ರ ಹೆಂಡ್ರ, ಜೇಕ ಅಂತ ನಗಚಾಟಕಿ ಮಾಡ್ತತೈತಿ ಜನ''

''ಪತ್ರಾ ಬರೀರಿ. ಅಲ್ಲಿ ಕೆಲಸ ಮುಗದ ಕೂಡ್ಲೆ ಬಾ ಅನ್ನರಿ. ನೀಡೋ ಕೈ ಜತಿ ನೋಡೋ ಕೈನೂ ನಿಮಗ ಬೇಕ. ಜೀವ ನೆನಸ್ಕೈತಿ ಅಂತ ಬರೀರಿ''

ಗೌಡರ ನಾಲ್ಕು ಪತ್ರ ಹೋದರೂ ಕಮಲವ್ವ ಉತ್ತರಿಸಲಿಲ್ಲ. ದೀಪಾವಳಿಗೆ ಗೌಡರು ಕಾರು ತೆಗೆದುಕೊಂಡು ರತ್ನಮ್ಮನ ಜೊತೆ ಹುಬ್ಬಳ್ಳಿಗೆ ಬಂದೇಬಿಟ್ಟರು. ಕಮಲವ್ವನಿಗೆ ಖುಷಿಯೋ ಖುಷಿ.

''ಅಕ್ಕಾರ ನಾ ಅಲ್ಲೇ ಇದ್ರ ನೀವು ನಮ್ಮ ಮನಿಗೆ ಬರ್ತಿದ್ದಿಲ್ಲ. ನಮ್ಮವ್ವಾರು ಪ್ರತಿ ಸಾರೆ ದೀಪಾವಳಿಗೆ ನಿಮ್ಮನ್ನ ಕರಕೊಂಡ ಬಾ ಅಂತ ನನ್ನ ಲಗ್ನ ಆದಾಗಿಂದ ಹೇಳ್ತಾರ, ನೀವ ಬಂದಿಲ್ಲ ಈಗ...'' ಅಂದು ಕಿಲ ಕಿಲನೇ ನಕ್ಕಳು.

''ನೀ ಬಿಡುವಾಕೇ? ನಿನ್ನ ಪ್ರೀತಿ ಮುಗದಾಣ ಹಾಕಿ ಎಳಕೊಂಡ ಬರುವಾಕಿ... ನಾಕ ಪತ್ರಕ್ಕ ಒಂದ ಉತ್ತರಯಿಲ್ಲ'' ಅಂದಳು ರತ್ನವ್ವ.

''ನಾ ಅಲ್ಲೇ ಇದ್ರ ನನಗ ದಿನಾ ಒಂದ, ಇಂಥಾ ಚಂದದ ಪತ್ರ ಯಾರ ಬರೀತಿದ್ರೀ ಅಕ್ಕಾರ'' ಎಂದು ಮತ್ತೆ ಕಿಲ ಕಿಲನೇ ನಕ್ಕಳು.

ಗೌಡರು ನಾಚುತ್ತ, ''ಇನ್ನ ತೌರಮನಿ ಸುಖಾ ಸಾಕ. ಅತ್ತೀಮನಿಗೆ ನಡೀರಿ'' ಅಂದು ನಕ್ಕರು. ಶಿವಪ್ಪಶೆಟ್ರು, ಸುಶೀಲವ್ವ ಇಬ್ಬರೂ ನಕ್ಕರು.

''ನಮ್ಮ ನಶೀಬದಾಗ ಅತ್ತಿ ಮನಿ ಎಲ್ಲಿ ಐತಿ, ಗಂಡನ ಮನಿ'' ಅಂದ ಕಮಲವ್ವನ ಮಾತಿಗೆ ಗೌಡರು ನಗುತ್ತ,

''ಈ ಗಂಡೇನ ತಲಿಗೆ ಕಾದ ಎಣ್ಣಿ ಊರ್‍ಯಾನೇನ?''

''ಇಲ್ಲರಿ ನನ್ನ ಧಣಿ. ಭಾಳ ಸವಿನೂ ಬಾಯಿ ಕೆಡಸ್ತೈತಿ ಅಲ್ಲರಿ. ತುಸಾ ಉಪ್ಪು, ಖಾರ'' ಅಂದು ಕಿಲಿ ಕಿಲಿ ನಕ್ಕಳು.

ಅವಳ ಕಿಲಿ ಕಿಲಿ ಹಕ್ಕಿಗಳ ಉಲಿ ಉಲಿಯಂಥ ನಗೆ ಶೆಟ್ಟರ ಮನೆ ತುಂಬಿತ್ತು.

ಆಗ ನಿಂಗನಗೌಡರ ಕಿವಿಯಲ್ಲಿ ಶಿವಪ್ಪಶೆಟ್ರು,

''ಉಪ್ಪು ಖಾರದ ಜೊತಿ ನಿಮ್ಮ ಸಣ್ಣಾಕಿಗೆ ಮಾವಿನಕಾಯಿ ಬೇಕಾಗ್ಯಾವ'' ಅಂದರು.

''ಹೌದ್ರೇ?... ಹೌದ್ರೇ?'' ನಿಂಗನಗೌಡರ ಮುಖದಲ್ಲಿ ಸಂತಸವುಕ್ಕಹತ್ತಿತು. ಕಣ್ಣು ಸಂತಸದಿಂದ ಮಂಜಾದವು.

ಆಗಲೇ ಸುಶೀಲವ್ವ ರತ್ನವ್ವನಿಗೆ ಸುದ್ದಿ ಮುಟ್ಟಿಸಿದ್ದಳು. ರತ್ನವ್ವನಿಗೆ ಆನಂದದಿಂದ ಸ್ವರ್ಗ ಮೂರೇ ಗೇಣು ಉಳಿದಿತ್ತು. ಆದರೆ ಅವಳ ಮನದಲ್ಲೂ ಡುಗು ಡುಗು. ತಿಂಗಳ ಮೇಲೆ ಒಂದು ವಾರವಾದರೂ ಅವಳಿಗೆ ಮುಟ್ಟು ಬಂದಿರಲಿಲ್ಲ. ಯಾರೆದುರು ಬಾಯಿ ಬಿಡಲು ಧೈರ್ಯವಿಲ್ಲ. ಅತ್ತೆ ಮಾವನವರ ಒತ್ತಾಯಕ್ಕೆ ಗೌಡರು ದೀಪಾವಳಿಗೆ ಹುಬ್ಬಳ್ಳಿಯಲ್ಲಿಯೇ ಉಳಿದರು. ರತ್ನವ್ವನಿಗೆ ಬಯಕೆ ಲಕ್ಷಣ, ನಸುಕಿನಲ್ಲಿ ವಾಂತಿ ಮಾಡಿಕೊಂಡು ಮಲಗಿಬಿಟ್ಟಿದ್ದಳು. ಸುಶೀಲವ್ವ ಎಲ್ಲರಿಗೂ ಊಟಕ್ಕೆ ಬಡಿಸುತ್ತ,



''ರತ್ನವ್ವ, ಕೋಳಿ ಬುಟ್ಟಿ, ಬುಡಕ ಮುಚ್ಚಿಟ್ಟರ, ಕೂಗದ ಬಿಡತೈತೇನಯವ್ವಾ'' ಅಂದು ನಕ್ಕಳು.

ರತ್ನವ್ವ ನಾಚಿ ನೀರಾದಳು. ಅವಳ ಮುಖದಲ್ಲಿ ಮೂಡಣದ ರತ್ನದೋಕುಳಿ ಚಿಮ್ಮಿತ್ತು. ನಿಂಗನಗೌಡರು ಹೆಂಡತಿಯತ್ತ ನೋಡಿದರು. ಸಂತಸದ ಸುದ್ದಿ ಕ್ಷಣದಲ್ಲಿ ಸುಗಂಧಮಯವಾಗಿತ್ತು.

''ನಮ್ಮ ಕಿಟ್ಟದ ಹಣಮಪ್ಪನ ಕೃಪಾ. ಒಂದ ಕಣ್ಣ ಬೇಡಿದ್ರ, ಎರಡ ಕೊಟ್ಟಾನ'' ಎಂದು ನಿಂಗನಗೌಡರು ಗದ್ಗದಿತರಾದರು.

ಮರುದಿನ, ಅಕ್ಕತಂಗಿಯರಬ್ಬರನ್ನು ಹಿರಿಯ ಸೂಲಗಿತ್ತಿಯೊಬ್ಬರಿಂದ ಪರೀಕ್ಷೆ ಮಾಡಿಸಿದರು. ಅವರು ಅಭಿನಂದನೆಗಳನ್ನು ಸಲ್ಲಿಸಿದ್ದರು. ಹಬ್ಬ ಮುಗಿಸಿ, ಭಂಡಿವಾಡ ಮುಟ್ಟಿದ ಗೌಡರು, ಪತ್ನಿಯರೊಂದಿಗೆ ಕಿಟ್ಟದ ಹಣಮಪ್ಪನ ದರ್ಶನ ಮಾಡಿ, ಹಣ್ಣು ಕಾಯಿ ಮಾಡಿಕೊಂಡೇ ಮನೆ ಮುಟ್ಟಿದರು. ಗೆಳೆಯ ರಾಮಣ್ಣನಿಗೆ ಪತ್ರ ಬರೆದರು.

ಆ ದಿನ ಶನಿವಾರವಿತ್ತು. ಅಂದಿನಿಂದ ಅವರು ಪ್ರತಿ ಶನಿವಾರ ಉಪವಾಸ ಮಾಡುತ್ತಿದ್ದರು. ಸುದ್ದಿ ಕೇಳಿದ ಪಾರೆವ್ವ ಕುಣಿದಾಡಿಬಿಟ್ಟಳು.

''ನಾಳಿಂದ ಇಬ್ಬರೂ ಅಡಿಗಿಮನಿಗೆ ಕಾಲ ಹಾಕಿದ್ರ, ನಾ ಈ ಮನಿ ಬಿಟ್ಟ ಹೊಂಟೆ'' ಎಂದು ಗೌಡರಿಗೆ ಕೇಳುವಂತೆ ಆಜ್ಞೆ ಹೊರಡಿಸಿದ್ದಳು.

ಅಕ್ಕತಂಗಿಯರಿಬ್ಬರ ಜೀವದಲ್ಲಿ ಜೀವಗಳು ಹುಣ್ಣಿಮೆ ಚಂದ್ರನಂತೆ ಬೆಳೆಯಹತ್ತಿದವು. ಸುಶೀಲವ್ವ, ಇಬ್ಬರಿಗೂ ಐದರಲ್ಲಿ ಉಡಿ ತುಂಬಿದರು. ಇಬ್ಬರಿಗೂ ಒಂದೇ ನಮೂನೆಯ ರೇಶಿಮೆ ಜರಿ, ಅಂಚು, ಸೆರಗಿನ ಹಸಿರುಸೀರೆ, ಖಣ, ಬಂಗಾರ ಪದಕ ಮತ್ತು ಹಸಿರುಮಣಿಗಳ ಸರ, ಹಸಿರು ಹರಳಿನ ಕಿವಿಯೋಲೆ ಉಡುಗೊರೆ ಮಾಡಿದ್ದರು.

''ಅವ್ವಾರ, ನೀವು ನನಗ ತಾಯಿ ಇಲ್ಲ ಅನಸಲಿಲ್ಲ'', ರತ್ನವ್ವ ಸುಶೀಲವ್ವನ ಪಾದಕ್ಕೆ ಹಣೆಯಿಟ್ಟು ನಮಸ್ಕರಿಸಿದಳು.

''ನೀನು, ಕಮಲಾ ಇಬ್ರು, ನನ್ನ ಹೆಣಮಕ್ಕಳ ರತ್ನವ್ವಾ. ಬಸರಿ ಹೆಂಗಸು ಕಣ್ಣೀರ ತಗದು ಉಸರ ಹಾಕಬಾರದು ಮಗಳ'' ಅಂದರು ಸುಶೀಲವ್ವ.

ಎಂಟನೆ ತಿಂಗಳಲ್ಲಿ ನಿಂಗನಗೌಡರ ಮನೆಯಲ್ಲಿ ಸೀಮಂತ. ಸುಶೀಲವ್ವ ಬಂದು ನಿಂತರು. ಗೌಡರು ಮಡದಿಯರಿಗೆ ಬಂಗಾರದ ಕಂಕಣ ಮುಂಬಯಿಂದ ತರಿಸಿದ್ದರು. ಕಾರವಾರದಿಂದ ರಾಮಣ್ಣ, ಸೀತಕ್ಕ ಬಂದಿದ್ದರು. ರಾಮಣ್ಣ, ಅತ್ತಿಗೆಯರಿಗಾಗಿ ಬಾಣಂತಿ ಔಷಧಿ ಮಾಡಿ ತಂದಿದ್ದರು. ಸೀತಕ್ಕ ಹಸಿರು ಇಳಕಲ್ ಸೀರೆ, ಖಣ ಉಡಿ ತಂದಿದ್ದಳು.

ನಿಂಗನಗೌಡರು, ರತ್ನವ್ವ ಪರೋಪರಿಯಾಗಿ ವಿನಂತಿಸಿದರೂ ಕಿವಿಯ ಮೇಲೆ ಹಾಕಿಕೊಳ್ಳದೇ ಶೆಟ್ಟರ ದಂಪತಿಗಳು,

''ರತ್ನವ್ವನೂ ನಮ್ಮ ಮಗಳ. ಮೊದ್ಲ ಬಾಣಂತಿತನ ತೌರ ಮನಿಯವರ ಮಾಡಬೇಕ'' ಎಂದು ಹೇಳಿ ಕಮಲವ್ವ, ರತ್ನವ್ವರನ್ನು ಹುಬ್ಬಳ್ಳಿಗೆ ಕರೆದುಕೊಂಡು ಹೋಗಿಬಿಟ್ಟರು.

ನವಮಾಸ ತುಂಬಿತು. ಮೊದಲು ರತ್ನವ್ವ ಗಂಡು ಮಗುವಿನ ತಾಯಿ ಆದಳು. ಹೆರಿಗೆ ಸುಸೂತ್ರವಾಗಿತ್ತು. ಗೌಡರ ಕಾಲು ನೆಲದ ಮೇಲಿರಲಿಲ್ಲ. ಒಂದು ವಾರದ ನಂತರ ಕಮಲವ್ವ ಹೆಣ್ಣು ಮಗುವಿನ ತಾಯಿಯಾದಳು. ಅವಳ ಹೆರಿಗೆ ಬಲು ಪ್ರಯಾಸವಾಗಿತ್ತು.

''ಕಮಲಾ, ನಮ್ಮವ್ವ ಹುಟ್ಟಿ ಬಂದ್ಲು'' ಎಂದು ನಿಂಗನಗೌಡರು ಸಂತಸದಿಂದ ನುಡಿದರು. ಮಗು, ನೋಡಲು, ತದ್ರೂಪ ಗೌರಕ್ಕನಂತೇ ಎಂದು ಎಲ್ಲರ ಅಭಿಪ್ರಾಯವಾಗಿತ್ತು. ನಿಂಗನಗೌಡರು ತಮ್ಮನ್ನು

ಜೀವಕ್ಕಿಂತ ಪ್ರೀತಿಸಿದ, ಈ ಶುಭ ಸುದ್ದಿಗಾಗಿ ಕಾದುಕಾದು ಹುಚ್ಚಿಯಾಗಿದ್ದ ತಾಯನ್ನು ಸ್ಮರಿಸಿದರು. ಕಣ್ಣು ತುಂಬಿ ಬಂದವು. ಮಗಳನ್ನು 'ಶ್ರೀಗೌರಿ'ಯೆಂದು ಎದೆಗವಚಿಕೊಂಡರು. ರಾಮಣ್ಣ, ಸೀತಕ್ಕ ಆನಂದದ ಸುದ್ದಿ ಕೇಳಿ ಅಭಿನಂದನೆ ಸಲ್ಲಿಸಿ ಪತ್ರ ಬರೆದಿದ್ದರು. ಅಲ್ಲದೇ, ಮಕ್ಕಳ ಪರೀಕ್ಷೆಯ ಕಾರಣ ತೊಟ್ಟಿಲು ಸಮಾರಂಭಕ್ಕೆ ಬರಲಾಗುತ್ತಿಲ್ಲವೆಂದು ಕ್ಷಮೆ ಕೇಳಿದ್ದರು. ನಿಂಗನಗೌಡರು ಮಗನಿಗಾಗಿ ಆರಿಸಿದ ಹೆಸರು 'ರಾಮದಾಸ', ಪತ್ನಿಯರಿಬ್ಬರಲ್ಲದೇ ರಾಮಣ್ಣನ ಮನದುಂಬಿದ ಮೆಚ್ಚಿಗೆ ಗಳಿಸಿತ್ತು. ಆ ಹೆಸರು, ಗೌಡರಿಗೆ, ಎರಡು ವಿಧದಲ್ಲಿ ಪ್ರಿಯವಾಗಿತ್ತು. ಒಂದು, ಅದು ಅವರ ಆರಾಧ್ಯದೈವ ಭಂಡಿವಾಡ ಹಣಮಪ್ಪನ ಹೆಸರು. ಎರಡನೆಯದು, ತನ್ನ ಜೀವನದ ಗೆಳೆಯ 'ರಾಮ' ಅದರಲ್ಲಿದ್ದ. ಹಣಮಪ್ಪನೇ, ರಾಮಣ್ಣನ ಸಿದ್ಧಹಸ್ತಕ್ಕೆ ಸಂಜೀವಿನಿಯಿತ್ತ ಧನ್ವಂತರಿ. ಆತ, ತಾನು ಮಾಡಬೇಕಾದ ಈ ಕೆಲಸ ರಾಮಣ್ಣನಲ್ಲಿ ನಿಂತು ಮಾಡಿಸಿದನೆಂಬ ದೃಢ ವಿಶ್ವಾಸ ಅವರಲ್ಲಿ ಮೂಡಿತ್ತು.

ಒಂದು ಶುಭ ಮುಹೂರ್ತದಲ್ಲಿ ನಿಂಗನಗೌಡರ ಮನೆಯಲ್ಲಿ ಜೋಡು ತೊಟ್ಟಿಲು ತೂಗಿದವು. ಮಗ 'ರಾಮದಾಸ', ಮಗಳು 'ಶ್ರೀಗೌರಿ', ಗೌಡರ ಮನೆಯ ನಂದಾದೀಪವಾದರು. ಅಜ್ಜಿಯಲ್ಲಿ ಮಗ 'ಕಿಟ್ಟಪ್ಪ'ನಾದ, ಮಗಳನ್ನು ಹೃದಯತುಂಬಿ, ಬಾಯಿತುಂಬ 'ಶ್ರೀಗೌರಿ' ಎಂದು ಕರೆದರು. ನಿಂಗನಗೌಡರು ಮಾತ್ರ, ಮಗಳನ್ನು 'ಅವ್ವಾ' ಎಂದೇ ಕರೆದು ಮುದ್ದು ಮಾಡುತ್ತಿದ್ದರು. ಮಕ್ಕಳ ಕಾಲ್ಗುಣದಿಂದ ಆ ಮನೆಯಲ್ಲಿ ಸುಖ ಸಂಪತ್ತಿನೊಂದಿಗೆ ಶಾಂತಿಯೂ ನೆಲಸಿತ್ತು. ಗೌಡರ ಸಂಸಾರ ಸ್ವರ್ಗಕ್ಕೆ ಕಿಚ್ಚು ಹತ್ತಿಸಿತ್ತು.

ಒಂದು ವರುಷ ತುಂಬಿ ಎರಡು ತಿಂಗಳಿಗೇ ಕಮಲವ್ವ ಮತ್ತೆ ಗರ್ಭಿಣಿ. ವಿಪರೀತ ಬಯಕೆ. ಶಿವಪ್ಪ ಶೆಟ್ರು, ಸುಶೀಲವ್ವ ಬಂದು ಅವಳನ್ನು ಹುಬ್ಬಳ್ಳಿಗೆ ಕರೆದೊಯ್ದರು. ಅವಳು ಅಶಕ್ತಳಾಗುತ್ತ ನಡೆದಿದ್ದಳು. ವೈದ್ಯರ ಔಷಧಿ ನಡೆದಿತ್ತು. ಟಾನಿಕ್ ರೂಪದಲ್ಲಿ ರಾಮಣ್ಣನ ಸಿದ್ಧೌಷಧಿಯನ್ನೂ ತೆಗೆದುಕೊಳ್ಳುತ್ತಿದ್ದಳು. ನಾಲ್ಕನೆಯ ತಿಂಗಳಲ್ಲಿ ಅವಳನ್ನು ಪರೀಕ್ಷಿಸಿದ ವೈದ್ಯರು, ಅವಳಿಗೆ ಅವಳಿ ಮಕ್ಕಳಾಗಬಹುದೆಂದು ಹೇಳಿದರು. ಸುಶೀಲವ್ವ, ಶಿವಪ್ಪ ಶೆಟ್ಟರ ಎದೆಯೊಡೆದು ನೀರಾಯಿತು. ಈ ಕೊಡದಲ್ಲಿಯ ಕುಂಬಳಕಾಯಿಯಿಂದ ಮಗಳು ಹೇಗೆ ಪಾರಾದಾಳು ಎಂದು ಚಿಂತಿಸಿದರು. ಅವಳಿ ಮೊಮ್ಮಕ್ಕಳ ಚಿತ್ರ ಕಣ್ಣೆದುರುಬಂದಾಗ ಹೃದಯದಲ್ಲಿ ಸಂತಸ ಜಿಲ್ಲೆಂದು ಜಿನುಗುತ್ತಿತ್ತು. ಮತ್ತೊಂದು ಕ್ಷಣ ಮಗಳ ಹೆರಿಗೆಯ ಬಗ್ಗೆ ಚಿಂತೆಯಾಗುತ್ತಿತ್ತು. ಅವರು, ನಿಂಗನಗೌಡರನ್ನು ಮೊದಲುಗೊಂಡು ಯಾರೆದರೂ ಬಾಯಿಬಿಟ್ಟಿರಲಿಲ್ಲ. ವೈದ್ಯರು, ಕಮಲವ್ವನಿಗೂ ಸದ್ಯ ತಿಳಿಸುವುದು ಬೇಡವೆಂದೇ ಹೇಳಿದ್ದರು. ಅಂತೂ ನವಮಾಸ ತುಂಬುವವರೆಗೆ ಸುಶೀಲವ್ವ, ಮಗಳನ್ನು ವೈದ್ಯರ ಸಲಹೆಯಿಂದ ಚಾಚೂ ತಪ್ಪದೇ ನೋಡಿಕೊಂಡರು.

ಹೆರಿಗೆಯ ದಿನಗಳ ಒಂದು ವಾರ ಮೊದಲೇ ಅವಳಿಗೆ ಕಳ್ಳಬೇನೆ ಪ್ರಾರಂಭವಾಗಿತ್ತು. ಆ ಕಾಲದಲ್ಲಿ ಹೆರಿಗೆಗಳೆಲ್ಲ ಮನೆಯಲ್ಲಿಯೇ ಆಗುತ್ತಿದ್ದವು. ಆದರೆ ಈ ಸಾರೆ ಸುಶೀಲವ್ವ, ಶಿವಪ್ಪಶೆಟ್ಟರಿಗೆ ವಿಪರೀತ ಕಾಳಜಿಯಾಗಿತ್ತು. ಸೂಲಗಿತ್ತಿಯನ್ನು ಮನೆಯಲ್ಲಿಯೇ ಇರಿಸಿಕೊಂಡರು. ಕಮಲವ್ವ ತನ್ನ ಜೀವವನ್ನೇ ಪಣಕ್ಕೆ ಹಚ್ಚಿದಂತೆ, ಅತಿ ಪ್ರಯಾಸಪಟ್ಟು ಗಂಡು ಮತ್ತು ಹೆಣ್ಣು ಅವಳಿ ಮಕ್ಕಳಿಗೆ ಜನ್ಮವಿತ್ತಳು. ತಾಯಿ, ಮಕ್ಕಳು ಕುತ್ತಿನಿಂದ ಪಾರಾಗಿದ್ದರು. ನಿಂಗನಗೌಡರು, ರತ್ನವ್ವ, ಪಾರೆವ್ವ, ಶಿವಪ್ಪ ಶೆಟ್ಟರು, ಸುಶೀಲಮ್ಮ ಆನಂದದಲ್ಲಿ ಅತ್ತುಬಿಟ್ಟಿದ್ದರು.

ಮಕ್ಕಳಿಬ್ಬರೂ ದಷ್ಟಪುಷ್ಟವಾಗಿ ಆರೋಗ್ಯವಾಗಿದ್ದರು. ಆದರೆ ಕಮಲವ್ವ ಮಾತ್ರ ತುಂಬಾ ಅಶಕ್ತಳಾಗಿದ್ದಳು. ಅವಳು ಎದ್ದು ಓಡಾಡಲು ತಿಂಗಳುಗಳೇ ಬೇಕಾದವು.

ಗೌಡರ ಮನೆಯಲ್ಲಿ ಮತ್ತೆ ಜೋಡು ತೊಟ್ಟಿಲು ತೂಗಿದವು. ಮಗನಿಗೆ 'ಅಮರೇಶ್ವರ', ಮಗಳಿಗೆ 'ಅಂಜನಾ' ಎಂದು ಹೆಸರಿಟ್ಟರು. ಸಮಾರಂಭಕ್ಕೆ ರಾಮಣ್ಣ, ಸೀತಕ್ಕ ಹುಬ್ಬಳ್ಳಿಗೆ ಹೋಗಿದ್ದರು. ಗೆಳೆಯನ ಮನೆ ಮಕ್ಕಳಿಂದ ತುಂಬಿದ್ದು ರಾಮಣ್ಣನ ಹೃದಯಕ್ಕೆ ಹಾಲೆರೆದಂತಾಗಿತ್ತು. ಗೌಡರು ಗೆಳೆಯನೆದರು ತಾಯಿಯನ್ನು ನೆನಸಿ ಕಣ್ಣೀರು ತೆಗೆದಿದ್ದರು. ಕಮಲವ್ವನಿಗೆ ಮೂವರು ಮಕ್ಕಳನ್ನು ಸಂಬಾಳಿಸುವುದಕ್ಕೆ ಮೈಯಲ್ಲಿ ತ್ರಾಣವೇ ಇರಲಿಲ್ಲ. ಕಿಟ್ಟಪ್ಪನ ಜೊತೆ ಶ್ರೀಗೌರಿ, ರತ್ನವ್ವನ ಮಡಿಲಲ್ಲಿಯೇ ಬೆಳೆಯಹತ್ತಿದಳು. ಅಂಜನಾಳನ್ನು ಅಂಜು ಎಂದು ಅಮರೇಶ್ವರನನ್ನು 'ಪುಟ್ಟಪ್ಪ' ಎಂದು ಅಚ್ಚೆಯಿಂದ ಕರೆಯಹತ್ತಿದರು. ಕಮಲವ್ವನ ಪ್ರಕೃತಿ ಅಶಕ್ತವಾದ್ದರಿಂದ ಅವಳು, ಅವಳ ಮಕ್ಕಳೊಂದಿಗೆ ತೌರುಮನೆಯಲ್ಲಿಯೇ ಉಳಿದಳು.

ನಿಂಗನಗೌಡರು ಪ್ರತಿ ಶನಿವಾರ, ರವಿವಾರ ಹುಬ್ಬಳ್ಳಿಗೆ ಹೋಗುತ್ತಿದ್ದರು. ವೇಳೆಯಿದ್ದಾಗ ರತ್ನವ್ವನೂ ಮಕ್ಕಳೊಂದಿಗೆ ಅವರ ಜೊತೆಗೆ ಹೋಗಿಬರುತ್ತಿದ್ದಳು. ಶ್ರೀಗೌರಿಯನ್ನು ಹುಬ್ಬಳ್ಳಿಯಲ್ಲಿ ಒಂದು ವಾರವಾದರೂ ಕಮಲವ್ವನ ಜೊತೆ ಬಿಟ್ಟು ಬರಬೇಕೆಂದು ನಾನಾ ರೀತಿಯಲ್ಲಿ ಪ್ರಯತ್ನಿಸಿದರೂ ಅವಳು ರತ್ನವ್ವನನ್ನು ಬಿಟ್ಟಿರಲು ಸಿದ್ಧಳಿರುತ್ತಿರಲಿಲ್ಲ. ಸುಶೀಲವ್ವ ಮನದುಂಬಿಬಂದು,

''ಅಕ್ಕಾ-ತಂಗಿ ಇಬ್ಬರಿಗೂ ಅವಳಿ ಜವಳಿ ಮಕ್ಕಳು'' ಅಂದರು.

''ಯವ್ವಾ ನಮ್ಮತ್ತೆವರ ಹೆಸರಿಟಗೊಂಡಾಳ ಅಂದಮ್ಯಾಗ ಅಕ್ಕಾರ್ನ ಕಾಡಸಾಕ ಬ್ಯಾಡ'' ಎಂದು ಚೇಷ್ಟಿಸಿದಳು ಕಮಲವ್ವ.

''ಈ ಮನಿ ಆಶಾ ಮುಗದಿಲ್ಲ, ಹುಟ್ಟಿ ಬರ್ತೀನಿ ಅಂತ ಹೇಳಿ ಬಂದುರ. ಜೀವದ ಮಗನಾ ಬಿಟ್ಟ ಇರಾಕ ಆಗಬೇಕಲ್ಲ'', ರತ್ನವ್ವ ಪತಿಯ ಮನ ನೊಂದೀತೆಂದು ತಂಗಿಯ ಮಾತು ತಿದ್ದಿ ಆಡಿದಳು. ಹೆಂಡರಿಬ್ಬರ ಮಾತಿಗೆ ನಿಂಗನಗೌಡರು,

''ನಮ್ಮವ್ವಾರದ ರೂಪ, ಅವರ್ದ ಗುಣಾ, ಅವರಟ ನನ್ನ ಪ್ರೀತಿ ಮಾಡ್ತಾಳ. ಆಕಿನ್ನ ಬಿಟ್ಟ ಇರಾಕ ನನಗೂ ಆಗೂದಿಲ್ಲ'' ಎಂದು ಮಗಳನ್ನು ಎತ್ತಿ ಮುದ್ದಾಡಿದರು.

ಆ ಮನೆಯಲ್ಲಿ ಸಂತೋಷ, ಸಂಭ್ರಮ ಸೂಸಿ ಹರಿಯಿತು. ನಿಂಗನಗೌಡರು ಮಗಳನ್ನು ಮುಂದಿನ ಕೈತೋಟಕ್ಕೆ ಎತ್ತಿಕೊಂಡು ಹೋಗುವುದೇ ತಡ ರತ್ನವ್ವ,

''ಕಮಲಾ, ಅವರೆದುರು ಅತ್ತೆವರಿಗೆ ಏನ ಅನ್ನಬ್ಯಾಡಾ. ಅವರಿಗೆ ತಾಯಿ ಮ್ಯಾಲ ಭಾಳ ಜೀವ'' ಅಂದಳು.


ಅದಕ್ಕೆ ಸುಶೀಲವ್ವ, ''ಹೌದ ಮಗಳ, ಗೌಡ್ರು ಸಿಟ್ಟಿಗೆದ್ದಾರು'' ಅಂದಾಗ,

''ಎದ್ದರ ಏಳಲಿ ಬಿಡ. ಕಂಡದ್ದ ಅಂದ್ರ ಕೆಂಡದಂಥಾ ಸಿಟ್ಟ ಅಂತ. ನಿನಗ ಗೊತ್ತಿಲ್ಲ ಯವ್ವಾ, ಅಕ್ಕಾರ್ನ, ಅತ್ತೆವ್ವ ಎಷ್ಟ ಉರಿಸಿ ಕೊಂಡುರಂತ. ನಾ ಅಕ್ಕಾರ ಜಗದಾಗ ಇದ್ರ, ನನ್ನ ಗಂಡಗ ಇನ್ನೊಂದ ಲಗ್ನಾ ಮಾಡಿಸಿಕೊಟ್ಟೇನ? ಹೊಸ್ತಿಲದಾಗ ಅಡ್ಡ ಮಲಗತಿದ್ದೆ. ನನ್ನ ದಾಟಿ ಹೋಗಿ ಹೆಣ್ಣ ತರ್ರಿ ಅಂತ ಹೇಳತಿದ್ದೆ. ತಪ್ಪು ಮಗನಾಗ ಇತ್ತಂತ ಗೊತ್ತಿದ್ದೂ ಸೊಸಿಗೆ ಬಂಜೆ ಅಂದ್ರು. ಪಾಪ ಅಕ್ಕಾರು ಸಣ್ಣಾವರು. ಉಂಡಿಲ್ಲ, ತಿಂದಿಲ್ಲ ಉಟ್ಟಿಲ್ಲ ತೊಟ್ಟಿಲ್ಲ, ಸನ್ಯಾಸಿ ಹಾಂಗ ಜನ್ಮಾ ತಗದಾರು. ಪಾರೆವ್ವನ ಕೇಳ, ಎಲ್ಲಾ ಹೇಳ್ತಾಳೆ.''

ಆಗಲೆ ರತ್ನವ್ವನ ಕಣ್ಣಲ್ಲಿ ನೀರಾಡುತ್ತಿತ್ತು.

''ಇರ್ಲಿ ಬಿಡ, ಹಿಂದಿನದು ನೆನಸಿ ಪಿತ್ತಲದಾಗ ಅತ್ತಿರಂತ. ಆದದ್ದ ಆಗಿಹೋತ. ಈಗ ಚಂದಾಗಿ ಅದೀರಲ್ಲ, ಅದರಾಗ ಗೌಡರದೇನ ತಪ್ಪಿಲ್ಲ''

''ಹೌದ ಯವ್ವಾ, ನನಗೂ ಗೊತ್ತ ಐತಿ. ಆದ್ರ ತಾಯಿನ್ನ ಎದುರಿಸಿ ನಿಂದ್ರಾಕರ ಬರ್ತಿತ್ತೋ ಇಲ್ಲೋ?''



''ದೊಡ್ಡವರ ಮನಿ ನಡತಿ ಹಾಂಗ ಇರ್ತಿತ್ತ ಮಗಳ, ಪ್ರತಿಯೊಂದ ಮನಿಗೆ ಒಬ್ಬ ಯಜಮಾನ ಇಲ್ಲ ಯಜಮಾನತಿ. ಅವರ ಹಾಕಿದ ಉಗಳಿ ದಾಟೋ ಹಾಂಗಿಲ್ಲ. ನಿಮ್ಮ ಮಾಮರು, ಸಂಗನಗೌಡ್ರು, ಹೆಂಡ್ತಿ ಕೂಡ ಅಂದ್ರ ಕೂಡತಿದ್ರು, ಏಳ ಅಂದ್ರ ಏಳತಿದ್ರು. ಈಗ ನಿಂಗನಗೌಡ್ರು ಹಾಂಗ'' ಅಂದು ನಕ್ಕಳು.

''ನೀ ಏನ ಹೇಳ ಯವ್ವಾ, ನಾ ಅಕ್ಕಾರ ಜಗಾಕ್ಕ ಇದ್ರ, ಎಂದೋ ಗಂಡನ್ನ ಬಿಟ್ಟ ಬರ್ತಿದ್ದೆ ಇಲ್ಲಾಂದ್ರ ಜೀವಾ ಕೊಡತಿದ್ದೆ''

''ಶಿವ ಶಿವಾ ಶಿವ ಶಿವಾ'' ಅನ್ನುತ್ತ ಸುಶೀಲವ್ವ, ''ರತ್ನವ್ವಾ ಈ ನಿನ್ನ ತಂಗಿ ಗಂಡಸಾಗಿ ಹುಟ್ಟಬೇಕಿತ್ತ, ಎಲ್ಲಾ ಅವರಪ್ಪಂದ ಗುಣಾ ಅದಾವ''- ಎಂದು ನಕ್ಕಾಗ

''ಅವ್ವಾರ, ಆಕಿ ಸಾಲಿ ಕಲತಾಕಿ ಅದಾಳ'' ಅಂದಳು ರತ್ನವ್ವ.

''ನಾಮದಲ್ಲಿ ಹೆಂಗಸೆಂಬ ಹೆಸರಾದರೇನು, ಭಾವಿಸಲು ಗಂಡು ರೂಪು ನೋಡಾ ಯವ್ವಾ'' ಎಂದು ಕಮಲವ್ವ ಅಕ್ಕಮಹಾದೇವಿಯ ನುಡಿ ಆಡಿ, ಸುಶೀಲವ್ವ ರತ್ನವ್ವರನ್ನು ನಗಿಸಿ, ತಾನೂ ನಗುತ್ತ ತಾಯಿಯನ್ನು ಅಪ್ಪಿಕೊಂಡಳು.

ಕಮಲವ್ವನ ಪ್ರೀತಿಗೆ, ತನ್ನಂತೆ ಪರರು ಎಂದು ನಡೆಯುವ ಅವಳ ಮಾನವೀಯತೆಗೆ ರತ್ನವ್ವನ ಹೃದಯದಲ್ಲಿ ಅಂತಃಕರಣ, ಕೃತಜ್ಞತೆಯ ಬುಗ್ಗೆಗಳು ಪುಟಿದೆದ್ದಿದ್ದವು.

ನಿಂಗನಗೌಡರ ಸಮರಸ, ಸರಸ ಜೀವನದ ಕಥೆ, ಅಜ್ಜಿ ತನ್ನ ಗೆಳತಿಯರೆದುರು ಹೇಳುತ್ತಿದ್ದುದನ್ನು ಕೇಳಿದ ನೆನಪು ಇಷ್ಟಕ್ಕೇ ನಿಂತುಹೋಗಿತ್ತು. ಅಜ್ಜಿ ಸತ್ತು ಹೋಗಿದ್ದಳು. ನನಗಿಂದು ಅವರ ಮುಂದಿನ ಬದುಕಿನ ಸವಿಸ್ತಾರ ಸುದ್ದಿ ಹೇಳುವವರಾರು? ಬರೆಯುವುದನ್ನು ನಿಲ್ಲಿಸಿ ಎದ್ದೆ. ತಾಯಿಯವರು ಅಡಿಗೆ ಮಾಡುತ್ತಿದ್ದಲ್ಲಿಗೆ ಹೋಗಿ ಕುಳಿತು ನೇರವಾಗಿ ಕೇಳಿಬಿಟ್ಟೆ.

''ಅಲ್ಲ, ನಿನಗ ನಿಂಗನಗೌಡರ ಮನಿ ಕಥಿ ಗೊತ್ತೇನು?''

''ಯಾಕ ಬರಿತಿಯೇನು?''

''ಹೂಂ'' ಎಂದು ನಕ್ಕು, ''ಅರ್ಧಾ ಬರದೀನಿ, ಅವರ ಹೆಂಡಂದಿರದು, ಮಕ್ಕಳದು ಏನೂ ಗೊತ್ತಿಲ್ಲ. ಅವರ ದೇವರ ಮನಿ ಗ್ವಾಡಿಯೊಳಗ ಒಂದ ಕಲ್ಲಿನ ಕೈ ಇತ್ತಲ್ಲ ಅದು ಒಡಮೂಡಿದ್ದೇನು?''

''ಅದ? ಅದ 'ನೀಡೋ ಕೈ', ರತ್ನವ್ವ ಪುಣ್ಯವಂತಿ, ಅಂಥಾ ಗಂಡ ಸಿಗಬೇಕಾದ್ರ ಎಷ್ಟು ಜನ್ಮದ ತಪಸ್ಸ ಮಾಡಿದ್ಲೋ''

''ಯಾಕ?''

''ಶಹಾಜಹಾನ ತಾಜ ಮಹಾಲ ಕಟ್ಟಿಸಿದ. ನಮ್ಮ ನಿಂಗನಗೌಡರು, ತಮ್ಮ ಹೆಂಡ್ತಿ ಕೈ, ಪ್ರತಿ ದಿನಾ ಪೂಜೆ ಮಾಡೇ ತುತ್ತ ಎತ್‌ತಿದ್ರು. ಅದೇನ ಸಾಮಾನ್ಯ ಕೈ ಏನ್ರೀ, ಅದು ಲಕ್ಷ್ಮಿ ಕೈ. ಅದು 'ನೀಡೋ ಕೈ' ಅಂತ ಯಾರ ಬಂದವರಿಗೂ ತೋರಿಸಿ ಹೇಳತಿದ್ರು.''

''ಏನಾತು?''

''ಮನ್ಯಾಗೇನೋ ಪೂಜಿ ಇಟಗೊಂಡಿದ್ರಂತ. ಅವರ ದೇವರ ಮನಿ ನೋಡಿದ್ದೆಲ್ಲ? ದೊಡ್ಡದ ಇತ್ತು. ಅಯ್ಯನವರು, ಗೌಡ್ರು, ರತ್ನವ್ವ, ಕಮಲವ್ವ ಪೂಜೆಗೆ ಕೂತಿದ್ರು. ಅಯ್ಯನವರು, ರತ್ನವ್ವ, ಕಮಲವ್ವಗೆ, ಶಿವಪಾರ್ವತಿಗೆ ಇಬ್ರು ಆರತಿ ಮಾಡ್ರಿ ಅಂತ ಹೇಳಿದ್ರಂತ. ಇಬ್ರು ಚಟ್ಟನ ಎದ್ದಾರ. ಕಮಲವ್ವಗ ಜೋಲಿ ಹೋತು. ರತ್ನವ್ವ, ಕೈಯಾಗ ಆರತಿ ತಾಟ ಅದ ಅನ್ನೋದನ್ನ ಮರತ, ತಂಗಿ ಬಿದ್ದಗಿದ್ದಾಳಂತ ಹಿಡೀಲಿಕ್ಕೆ ಹೋಗ್ಯಾಳ, ಆರತಿ ತಾಟ ರತ್ನವ್ವನ ಕೈಯಾಗಿಂದ ಬಿತ್ತು, ಕಮಲವ್ವ ಬಿದ್ಲು, ರತ್ನವ್ವ ಬಲಗೈಯಲೆ ಗ್ವಾಡಿ ಹಿಡದ್ಲು, ಅರಿಷಿಣ, ಕುಂಕುಮ, ಎಣ್ಣೆ ಆದ ಹಸ್ತಾ ಗ್ವಾಡಿ ಮ್ಯಾಲ ಮೂಡಿತು-ಮುಂದ ಎಂಟ ದಿವಸ ತಿರುಗಿಲ್ಲ, ಇಬ್ರು ಕಿಟ್ಟದ ಹಣಮಪ್ಪನ ಪ್ರದಕ್ಷಿಣೆ ಹಾಕೋ ಮುಂದ ಬಾಳಿಹಣ್ಣಿನ ಸಿಪ್ಪಿ ಮ್ಯಾಲ ಕಾಲ ಜಾರಿ ಬಿದ್ದು, ತಲೀಗೆ ಪೆಟ್ಟ ಆಗಿ ಸತ್ರಂತ'' ತಾಯಿ ಉಸ್ಸೆಂದು ದೀರ್ಘಶ್ವಾಸ ಎಳೆದುಬಿಟ್ಟರು.

''ಅಯ್ಯೋ ದೇವರ'', ನಾನೂ ಉಸಿರು ಹಾಕಿದೆ.

''ನಿಂಗನಗೌಡ್ರು ಹುಚ್ಚ ಆಗಿ ಹೋಗಿದ್ರಂತ. ನಿಮ್ಮಜ್ಜ, ಅವರ್ನ ಕಾರವಾರಕ್ಕೆ ಕರಕೊಂಡ ಹೋದ್ರು. ಪ್ರತಿದಿನಾ, ಮುಂಜಾನೆ, ಸಂಜೆ, ಇಬ್ರು ತಾಸಗಟ್ಟಲೇ ಸಮುದ್ರ ದಂಡಿ ಮ್ಯಾಲ ಕೂಡತಿದ್ರು. ಸಣ್ಣ ಮಕ್ಕಳ ಹಾಂಗ ಶಂಖಾಶಿಂಪ ಆರಸ್ತಿದ್ರಂತ, ಉಸಕಿನ್ಯಾಗ ಗುಬ್ಬಿ ಗೂಡ ಕಟ್ಟತಿದ್ರಂತ-ಸಾವು ಇದ್ದಿದ್ದಲ್ಲ ಅಂದ್ರ ಬದುಕು ಸುದ್ಧಾ ಇರ್ತಿದ್ದಿಲ್ಲಂತ ನಿಮ್ಮಜ್ಜ ಪ್ರೀತಿಯಿಂದ ತಿಳಿಸಿಹೇಳಿ, ಸಂತರ, ದಾಸರ ಪದಾ ಹಾಡತಿದ್ರಂತ. ಅವರ ಧ್ವನಿ ಭಾಳ ಇಂಪ ಇತ್ತು. ಅವರ ತಾಯಿಯಿಂದ ಬಂದ ಕಲಾ ಅದು. ವಿದ್ವಾನ್ ಜೀವ, ಪುರಾಣ ಪುಣ್ಯಕತಿ ಓದಿ, ಗೆಳ್ಯಾನ ಮನಸ್ಸು ಮಕ್ಕಳ ಕಡೆ ತಿರುಗಿಸಿ, ಅವರಿಗೆ ಪುನರ್ಜನ್ಮ ಕೊಟ್ಟ ಕಳಿಸಿದ್ರಂತ. ನಿಂಗನಗೌಡ್ರು, ಸಾಯೋತನಕ ಸಂಜೀ ದೀಪಾ, ಗೆಳ್ಯಾನ ನೆನಸೇ ಹಚ್ಚತಿದ್ರು. ಕಾಲರಾಯಾ ಎಲ್ಲಾ ದುಃಖ ಮರಸ್ತಾನ''

''ಈ ಸಾವಿನ ನಿರ್ಧಾರ ದೇವರ ಮನ್ಯಾಗ ಹ್ಯಾಂಗ ಆಗ್ತಿರಬೇಕು?''

''ಒಂದ ಜೀವಾ ಹೊಟ್ಟ್ಯಾಗ ಮೂಡಿದ ದಿನಾನ, ಅದರ ಸಾವಿನ ದಿನಾನೂ ನಿರ್ಧಾರ ಆಗಿ ಹೋಗಿರ್ತದಂತ. ಅದಕ ಯಾತರಿಂದ ಸಾವು? ಹ್ಯಾಂಗ ಸಾವು? ಯಾವಾಗ ಸಾವು ಎಲ್ಲಾ ಆ ಶಟವಿ ಬರದದ್ದು. ನೀವು ನಂಬೂದಿಲ್ಲಾ ಅಂದ್ರೂ ಅದು ನಂಬಸ್ತದ. ಮನುಷ್ಯನ ತರ್ಕಕ್ಕ, ದೇವರ ಲೆಖ್ಖಕ್ಕ, ಋಣದ ಸಂಬಂಧ ಇಲ್ಲ. ಅದನ್ನ ತಿಳಿಯೋದು ಶಕ್ಯ ಇಲ್ಲ.''

ತಾಯಿ ಮಾತಿಗೆ ನನ್ನ ತಲೆ ತೂಗಿತು.

''ಮೊನ್ನೆ ಪೇಪರಿನ್ಯಾಗ ಓದಿದ್ಯೋ ಇಲ್ಲೋ. ಉತ್ತರ ಹಿಂದುಸ್ಥಾನದಿಂದ ಒಂದು ಹುಡಿಗಿ, ಹುಬ್ಬಳ್ಳಿ

ಇಂಜಿನಿಯರ ಕಾಲೇಜಿಗೆ ಕಲೀಲಿಕ್ಕೆ ಬಂದಿದ್ಲು. ಬ್ಯಾಸಿಗ, ವಾರ್ಷಿಕ ಪರೀಕ್ಷಾದ ದಿವಸಾ, ಸಂಜೀಮುಂದ, ಆರಾಮ ಗಾಳಿಗೆ ಕೂತು ಓದಿದರಾತು ಅಂತ ತನ್ನ ಹಾಸ್ಟೆಲ್ಲದ ಖೋಲಿ ಬಿಟ್ಟು ಬಂದು, ಅಲ್ಲೇ ಅಂಗಳದಾಗಿದ್ದ ಗಿಡದ ಕೆಳಗ ಕೂತು ಓದುತ್ತಿದ್ದಳಂತ, ಗಿಡದ ಮ್ಯಾಲಿಂದ ಒಂದ ದೊಡ್ಡ ನಾಗರಹಾವು ಆಕಿ ಮೈಮ್ಯಾಲ ಬಿತ್ತು. ಆಕಿನ್ನ ಕಡದಬಿಡ್ತು. ಡಾಕ್ಟರ ಬರೋದ್ರಾಗ ಆ ಹುಡುಗಿ ಸತ್ತಹೋಗಿತ್ತು ಪಾಪ. ಇದಕ್ಕ ಏನಂತೀ?

''ಬ್ರಹ್ಮಲಿಖಿತ- ಶಟವಿ ಬರದದ್ದು''

ತಾಯಿ ಸಣ್ಣದಾಗಿ ನೋವಿನ ನಗೆ ನಕ್ಕು, ''ನಿಂಗನಗೌಡ್ರು, ಇಬ್ರು ಹೆಂಡಂದಿರನ್ನ ಒಂದ ದಿನಾ ಕಳಕೊಂಡು ಮುಂದಿನ ಆಯುಷ್ಯ ಎಲ್ಲಾ ಸನ್ಯಾಸಿ ಹಾಂಗ ಕಳದ್ರು. ಅವರ ದೇವರ ಮನಿ ಗ್ವಾಡಿ ಮ್ಯಾಲ ಒತ್ತಿದ ರತ್ನವ್ವನ ಬಲಗೈಗೆ, ಗೌಡ್ರು ಕಲ್ಲಿನ ಹಸ್ತ ಮಾಡಿಸಿ ಕೂಡಿಸಿದ್ರು, ಅದಕ ಬಂಗಾರದ ಕವಚ ಹಾಕಿಸಿದ್ರು. ಪ್ರತಿ ದಿನಾ ಪೂಜೆ ಮಾಡುತಿದ್ರು. ಶ್ರಾವಣ ಮಾಸದಾಗ, ಅವರಿಬ್ಬರ ಶ್ರಾದ್ಧದ ದಿನಾ ವಿಶೇಷ ಪೂಜೆ, ಅನ್ನದಾನ, ವಸ್ತ್ರದಾನ ಮಾಡತಿದ್ರು, ನಾವೂ ಆ ಪೂಜೆಗಿ ಹೋಗಿದ್ದು ನಿನಗ ನೆನಪ ಅದ ಏನು?''

''ಅದ ಅಲ್ಲಾ, ಅದಕ, ಆ ಕೈ ಒಡಮೂಡಿದ್ದೇನು ಅಂತ ಕೇಳಿದೆ. ನಿಂಗನಗೌಡರ ಪ್ರೀತಿ...'' ನನ್ನ ಗಂಟಲು ಬಿಗಿದು ಬಂದಿತ್ತು.

''ಮತ್ತ...? ದೇವರು ತಾ ಹುಟ್ಟಿಸಿದ ಪ್ರತಿಯೊಂದು ಜೀವದಾಗ ಪ್ರೀತಿ ಇಟ್ಟಾನಂತ ಈ ಜಗತ್ತು ಇವತ್ತ 'ಸತ್ಯ ಶಿವ ಸುಂದರ' ಆಗೇದ'', ಅಂದರು ತಾಯಿ.

■

ನಾನು [illegible] ನೋಡಿದಾಗ ಬಹಳ ಚಿಕ್ಕವಳಿದ್ದೆ. ಆದರೆ ಅವರ ನೆನಪು ಮಾತ್ರ ಈ ದಿವಸದವರೆಗೂ ಮಾಸಿಲ್ಲ. ಕಾರಣ ಅವರನ್ನು ಒಮ್ಮೆ ನೋಡಿದವ ಮರೆಯುವದೇ ಅಸಾಧ್ಯ. ಅಂಥ ಹಿರಿ ಜೀವ ಅವರು!

ಸುನಂದಾ ಬೆಳಗಾಂವಕರ





ಕವಿ ಸಮಯ





ಹರಿಯಪ್ಪ ಪೇಜಾವರ

ಮಗು

ತಾಯಪ್ರೀತಿಯಿಂದ ಒದ್ದೆಯಾದ ಮಗು
ಅವಳ ಪೆಟ್ಟಿಗೂ ತನ್ನನ್ನು ಅಷ್ಟೇ ವಿಧೇಯವಾಗಿ
ಒಪ್ಪಿಸಿಕೊಳ್ಳುವುದು
ಹಾಗಲ್ಲದಿದ್ದರೇ ಅಚ್ಚರಿ ಪಡುವುದು

ಪ್ರೀತಿ ಕೊಟ್ಟಾಗ ಎಷ್ಟು
ನಾಚುಗೆಯಲ್ಲಿ ಆನಂದಿಸುವುದೋ
ಪೆಟ್ಟುಕೊಟ್ಟಾಗಲೂ ಅದೇ ನಾಚುಗೆ ಮತ್ತು
ಅಸಾಧಾರಣ ನಿಯಂತ್ರಣದಲ್ಲಿ
ತುಟಿ ನಡುಗಿ ಬಿಕ್ಕುವುದು
ತನ್ನೊಳಗಿನ ಮಾರ್ದವದಲ್ಲಿ ಅಮ್ಮನನ್ನು
ಒಪ್ಪುವುದು

ಆದರೆ ಪ್ರೀತಿಸಲರಿಯದ ಅಪ್ಪನ ಪೆಟ್ಟಿಗೆ ಮಾತ್ರ
ಮಗು ಕಂಡೆಯಿಂದ ರೊಚ್ಚಿದ್ದು ಅಳುವುದು
ಹೊಡೆಯುವ ಅಪ್ಪನನ್ನೇ ಧಿಕ್ಕರಿಸಿದಂತೆ ಅದು
ಹುಲಿಯಂತೆ ಕೆರಳುವುದು

ಏ ಮತ್ತು ಬಿ

ಏ ಮತ್ತು ಬಿ ಪರಸ್ಪರ ಶತ್ರುಗಳಾಗಿದ್ದರೂ
ಅಕ್ಕಪಕ್ಕದಲ್ಲೆ ವಾಸಿಸುತ್ತಿದ್ದರು
ದಿನಾ ಮುಖ ಮುಖ ನೋಡುತ್ತಿದ್ದರು

ಹಾಗಾಗಿ ಒಬ್ಬರನ್ನೊಬ್ಬರು ಮೀರಿಸುವಂತೆ
ಒಬ್ಬರು ಮತ್ತೊಬ್ಬರ ಬಗೆಗೆ ಆಡಿಕೊಳ್ಳಲು
ಅವಕಾಶವೇ ಕೊಡದಂತೆ ಮಾನವಾಗಿ
ಛಲದಿಂದ ಬದುಕುತ್ತಿದ್ದರು

ಹೀಗೆ ಅವರು ಆರಂಭದಲ್ಲಿ
ಬಹಿರಂಗವಾಗಿ ಅಳುವ ಸ್ವಾತಂತ್ರ್ಯವನ್ನೂ
ಕ್ರಮೇಣ ಬಹಿರಂಗವಾಗಿ
ಸೋಲುವುದನ್ನೂ ತಪ್ಪಿಸಿಕೊಂಡರು

ಆದರೆ ಗುಟ್ಟಿನಲ್ಲಿ ಒಬ್ಬರಿನ್ನೊಬ್ಬರ
ಕಾಲೆಳೆಯಲು ಪ್ರಯತ್ನಿಸಿ
ಪರಸ್ಪರ ನಾಶಮಾಡಲು
ಉಪಾಯ ಹೂಡುತ್ತಿದ್ದರು

ಹೀಗಿರಲಾಗಿ ಒಂದು ದಿನ ಏಗೆ
ಹೀಗೆ ವೇಷ ತೊಡುವುದು ಬೇಸರವಾಗಿ
ಆದರೆ ಹೇಗಾದರೂ ಬೀಯನ್ನು
ಕೊಂದೇ ತೀರಬೇಕೆಂದು ನಿರ್ಧರಿಸಿ

ಒಂದು ದಿನ ಉಪಾಯ ಮಾಡಿ
ತನ್ನನ್ನೇ ತಾನು ಇರಿದುಕೊಂಡು ಸತ್ತ

ಒಬ್ಬಂಟಿ ಬಿ ಇದ್ದೂ ಸತ್ತ

ನೆನೆದದ್ದು ಹೆಚ್ಚಾಗಿ

ನಿನ್ನ ಜಾತಕದಲ್ಲಿ ನೀನು ದೇವರ ವೈರಿಯೆಂದಿದೆ
ನಿನ್ನ ಹೆಸರೂ ಕೂಡಾ ಹಿರಣ್ಯಾಕ್ಷ
ಆಮೇಲೆ ಬದಲಿಸಿ ವೀರಪ್ಪ ಎಂದಿಟ್ಟದ್ದು
ಅದೂ ಬೇಡವೆಂದು ಹರಿಯಪ್ಪ ಎಂದಿಟ್ಟದ್ದು
ಹೀಗಾಗಿ ದಿನಾ ನೀನು ದೇವರನ್ನು ನೆನೆಯಬೇಕು
ಭಜನೆ ಮಾಡಬೇಕು'
ಹೀಗೆ ನಾನು ಸಣ್ಣವನಾಗಿದ್ದಾಗ
ಅಮ್ಮನಿಗೆ ಸಹಾಯ ಮಾಡುತ್ತಿದ್ದಾಗ
ಅರೆಯುವ ಕಲ್ಲಿನಲ್ಲಿ ಜತೆಯಾಗಿ ಅಕ್ಕಿ ಅರೆಯುತ್ತ
ಅಮ್ಮ ಹೇಳುತ್ತಿದ್ದಳು

ನಾನು ಅದರಂತೆ ದಿನಾ ದೇವರಿಗೆ ಹತ್ತಿರವಾಗಲು
ಪ್ರಯತ್ನಿಸಿ ಮೂರೂ ಹೊತ್ತು
ದೇವದೇವಿಯರನ್ನು ನೆನೆಯಲೆತ್ನಿಸಿ
ಅದರ ಅಂಗವಾಗಿ ದೇವಿಯ ಮೇಲೆ
ಒಂದು ಭಜನೆಯನ್ನೂ ಬರೆದು
ಅದನ್ನು ಉಳಿದ ಮಕ್ಕಳ ಜತೆ
ದಿನಾ ಸಂಜೆ ದೀಪಹಚ್ಚುವ ಹೊತ್ತು
ರಾಗಬದ್ಧವಾಗಿ ಹಾಡುತ್ತ
ತುಂಬಾ ತುಂಬಾ ದೈವಭಕ್ತನಾಗಲು ಪ್ರಯತ್ನಿಸಿದೆ

ಹೀಗೆ ನೆನೆದೂ ನೆನೆದೂ
ಒಂದು ರಾತ್ರಿ
ದೇವಿಯ ಜತೆ ಸಂಭೋಗಿಸಿದ
ಕನಸಾಗಿ
ಬೆಚ್ಚಿಬಿದ್ದೆ!






ಬುದ್ಧಿವಾದ

ಆವೊತ್ತೊಂದು ದಿನ ಅಮ್ಮ ಅಂದಳು
ದಾರಿಯಲ್ಲಿ ಹೋಗುವಾಗ ಮಗಳೆ
ತಲೆ ಎತ್ತಿ ನೋಡಬೇಡ
ಅಲ್ಲಿ ರಸ್ತೆ ತಿರುವಲ್ಲಿ ಗೂಡಂಗಡಿ ಬದಿಯಲ್ಲಿ
ಕಿಲಾಡಿ ಮಕ್ಕಳ ಗುಂಪು
ತಲೆ ಎತ್ತಿ ಕಂಡರೆ
ಸಿಳ್ಳೆ ಹಾಕುವರು
ಕೈ ತಟ್ಟಿ ಕರೆಯುವರು
ಆದ್ದರಿಂದ ಆಚೆ ಈಚೆ ನೋಡದೆ ಮಗಳೆ
ನಿನ್ನ ಪಾಡಿಗೆ ನೀನು
ನಿನ್ನ ಕೆಲಸ ಮುಗಿಸಿ
ಬೇಗನೆ ಮನೆಗೆ ಬರುವುದು

ಆಯ್ತೆಂದು ತಲೆ ಅಲ್ಲಾಡಿಸಿದ ಹುಡುಗಿ
ಅರೆ ಹೌದೆ? ಇಲ್ಲಿಯವರೆಗು ಅದೇ ದಾರಿಯಲ್ಲಿ
ನಾ ಸ್ಕೂಲಿಗೆ ಹೋಗುತ್ತಿದ್ದೆ; ಬರುತ್ತಿದ್ದೆ
ಇದೆಲ್ಲ ಒಂದೂ ತಿಳಿದಿರಲಿಲ್ವೆ ನನಗೆ
ಅಂದು ಆಶ್ಚರ್ಯಗೊಂಡು
ಅಮ್ಮ ಹೇಳಿದ್ದು ನಿಜವೆ ನೋಡಬೇಕೆಂದು
ಆವೊತ್ತು ಮಾತ್ರ ಸ್ಕೂಲಿಂದ ಬರುವಾಗ ಸಂಜೆ
ತುಸುವೆ ತಲೆ ಎತ್ತಿ ನೋಡಿದಳು



ಬಂದರಲ್ಲದ ತೀರದಲ್ಲಿ




ಪಿ. ಚಂದ್ರಿಕಾ


ಅಲೆಸವೆಸುವ ಮರಳದಂಡೆ
ಧ್ಯಾನಕ್ಕೆ ಪಕ್ಕಾಗಿ ನಿಂತ ಬಂಡೆ
ಬಂದರಲ್ಲದ ತೀರದಲಿ
ಲಂಗರು ಹಾಕಲು ಯತ್ನಿಸಿದೆ ಹಡಗು
ಕಾಲಮೇಲೆ ಮರಳ ರಾಶಿ ಹಾಕಿ
ಮಹಡಿಯ ಮೇಲೆ ಮಹಡಿಯ ಕಟ್ಟಿದರೂ
ತೀರದ ಆಸೆ

ನೀರಾಲಿಗಳ ಮೇಲೆ ತೇಲಿಹೋಗುವ
ಬೆಳ್ಳಕ್ಕಿಗಳ ಮಸುಕು ಚಿತ್ರ
ಎಳೆ ಎವೆಗಳ ಮೇಲೆ ಜಾರಿದ
ನೀರ ಹಿಂದೆ ಸರಿಸುತ್ತಾ
ಕೆನ್ನೆಗೆ ಮೆತ್ತಿದ್ದ ಮರಳ ಒರೆಸಿಕೊಳ್ಳುತ್ತಾ
ಆ ಹುಡುಗಿ ಹೊರಟುಹೋಗುತ್ತಾಳೆ
ಆಗ ಬರುತ್ತಾರೆ,

ತಾರೆಗಳ ಲೋಕಕ್ಕೆ ಲಗ್ಗೆ ಹಾಕುವವರು
ಮುಂಗಾರ ಮಿಂಚ ತೇರನೆಳೆಯುವವರು
ಮಳೆಯಲ್ಲೇ ಹಾಡ ಹಾಡುವವರು
ನಡೆದರೂ ಸವೆಯದ ಪಾದದವರು
ಅದ್ಭುತ ಕಲ್ಪನೆ ಭೂಮಿಗಿಳಿವಂತೆ
ಕಣ್ಣೀರ ಹನಿಗಳ ಚಿಪ್ಪೊಳಗಿಟ್ಟು
ಮುತ್ತು ಮಾಡುತ್ತ ಕುಳಿತವರು

ಸಂತನಾಗುವ ಇವನು
ಜೊತೆಯಿಲ್ಲದಿರುವಾಗ
ಕಟ್ಟಿದ ಮರಳ ಮನೆಗಳ
ಕಡೆಗೆ ನೋಡುತ್ತಾನೆ
ಕೆಡಿಸಿಹೋದ ಅಲೆಗಳ ಕಡೆಗೆ
ಹಾಡುತ್ತಾ ಕೇಳುತ್ತಾನೆ
ಯಾಕೆ ಹೀಗೆ?







ಜೇಲಿನ ಗೋಡೆಯ ಮೇಲೆ ರಕ್ತದಲಿ ಬರೆದ ಪದ್ಯ

ಎಲ್ಲ ಹೇಳುತ್ತಾರೆ,
ಯಾಕೆ ಈ ಹುಚ್ಚಾಟ
ಬರೆದುದಾದರೆ ಮಸಿಯಲ್ಲೋ, ಚಾಕ್‌ಪೀಸಿನಲ್ಲೋ
ಏನೂ ಸಿಗದೆ ಹೋದರೆ ಇಟ್ಟಿಗೆಯ ಚೂರಿನಲ್ಲೋ
ಬರೆಯ ಬಾರದೆ
ಒಂದು ಹನಿ ರಕ್ತಕ್ಕೆ ಎಷ್ಟು ಬೆಲೆ!

ಅರ್ಥವಾಗುವುದಿಲ್ಲ
ಪ್ರೀತಿಯೆಂದರೇನೆಂದು ತಿಳಿಯದವರಿಗೆ
ರಕ್ತದಲಿ ಬರೆದ ಕವಿತೆಯ ಬೆಲೆ
ಬೆಚ್ಚನೆಯ ಮನೆಯಲ್ಲಿ
ಸ್ವರ್ಗ ಕೈಗೆಟುಕುವಾಗ
ತಿಂದ ಅನ್ನ ಕರಗಿ ಕಲಮಲವಾಗುವಾಗ
ಪ್ರತಿಬಸಿರ ಬಯಕೆ
ಸೋರಿಹೋಗುವಾಗ....

ನಿಟ್ಟುಸಿರು ಇಲ್ಲದ ಕಡೆ ನಗುವಿರುವುದಿಲ್ಲ
ಬಿಚ್ಚಿ ಎಸೆದ ಬಟ್ಟೆಗಳ ಜತೆ
ಬದುಕೂ ಹೋಗುವುದಿಲ್ಲ

ಬೇಡಬಿಡಿ ಅರ್ಥ ಮಾಡಿಸುವುದು
ನಮ್ಮ ಕೆಲಸವಲ್ಲ
ರಕ್ತದಲಿ ಬರೆದ ಪದ್ಯವ ಯಾರೂ
ರಾಷ್ಟ್ರೀಯ ಸ್ಮಾರಕದಂತೆ ಕಾಪಾಡುವುದಿಲ್ಲ

ಒಂದು ಪುಟ್ಟ ಗೆರೆ

ನಿನ್ನೆದೆಯ ಮೇಲೆ ನಾನೊಂದು ಗೆರೆ
ಸರಿರಾತ್ರಿಯಲ್ಲಿ ಕಂಡ ಕನಸೇ!
ನಿದ್ದೆ ಇರದೆ ವಾಲುತ್ತಲಿರುವ
ಜಗದ ಜೋಲಿಗೆ ನಿನ್ನಾಗಮನ
ತುಂಬಿ ಹೋಯಿತೆ ಮನ

ಪ್ರಶ್ನೆ ಕೇಳದೆ ಇದ್ದರೆ ಹೇಗೆ?
ಗೆರೆಕೊರೆವ ಮುನ್ನ ಇಲ್ಲಿ ಬೀಸಿದ ಗಾಳಿ
ಸಾಗಿ ಹೋಗುವಾಗ ತಟಸ್ಥದ್ವೀಪ
ಅಂತರಾಳದ ತೆವರು ತಿಟ್ಟುಗಳಲ್ಲಿ
ತೆರೆದಿದ್ದ ಬೇರೆಯದೇ ಪ್ರಪಂಚ
ನೀರು, ಗಾಳಿ, ಮಣ್ಣು, ಬೆಂಕಿ, ಆಕಾಶ


ಹೆಸರಿಟ್ಟವರು ಯಾಕೋ
ಹೀಗೆ ಕರೆವಾಗ ದಂಗಾಗಿ
ಸಯಾಮಿಸ್ ಅವಳಿಗಳಂತೆ
ಆ ಕಡೆ ಈ ಕಡೆ ಕೈಕಾಲುಗಳ ಚೆಲ್ಲಿಬಿಟ್ಟಿದ್ದೇವೆ.
ಖಾಲಿ ಕೊಡದೊಳಗೆ ನಾಲ್ಕು ಕಲ್ಲು
ಲೊಳ ಲೊಳ ಶಬ್ದಕ್ಕೆ
ಖುಷಿಕೆನೆತ
ಮೂರೂಕಾಲು ನಿಮಿಷಕ್ಕೆ
ಪ್ರೀತಿಗೆ
ಯಾವ ಅರ್ಥ

ಎಲ್ಲ ನೆನಪಿದೆ-
ಕಸದ ಕುಪ್ಪೆಯಿಂದ ಅರಮನೆಯ ಛಾದರದ ತನಕ
ಹಾಗಾದರೆ ನಿಜವಾಗಿ ಮರೆತದ್ದು ಏನು
ಕೈಬೆರಳುಗಳಿಗೆ ಎಂಜಲು ಮೆತ್ತಿ
ನೆಲದ ಮೇಲಿನ ಒಂದು ಪುಟ್ಟ ಗೆರೆಯ
ಅಳಿಸಲು ಯತ್ನಿಸಿದೆ





ಪ್ರದೀಪ್ ರಾವುತ್



ಗೀತಾ ನಾಗಭೂಷಣ

ಪಟ್ಟ ಪಾಡೆಲ್ಲ ಹುಟ್ಟು ಹಾಡಾಗಿ....

ಅಡಿಗಿಡಕ್ಕಂತ ಹೊಲಾತ್ವಾಟಾ, ದಗದಕ್ಕ ಕೂಲಿನಾಲಿ ಅಂತ ಕೇರಿಬಿಟ್ಟು ಹೋಗಿದ್ದ ಮಂದೆಲ್ಲಾ ವಾಪಸ್ಸು ಹಳ್ಳಿಕಡಿಗಿ ಹೊರಟಿದ್ದರು. ದನಕರುಗಳ ಕಾಲಾಗಿನ ಧೂಳು ಮ್ಯಾಲೆದ್ದು, ಮುಗಿಲ ಮಾರಿಗೆ ಅಡರುತ್ತಿತ್ತು. ಅವುಗಳ ಕೊಳ್ಳಾಗಿನ ಗಂಟಿಸರದ ಸಪ್ಪಳ, ಅಂಬಾ ಅನ್ನೋ ಆವಾಜು, ದನಕಾಯುವ ಪೋರರ ಮಿಶ್ರಮಾತುಗಳೂ ಹಳ್ಳಿಯ ಕಡೆಗೆ ನಡೆದಿದ್ದುವು. ಹುಲ್ಲಿನ, ಕಟ್ಟಿಗೆಯ ಹೊರೆ ಹೊತ್ತ ಹೆಂಗಸರಿಬ್ಬರು, ಕೆಳಗೇರಿಯ ದಾರಿಗೆ ತಿರುಗಿ ಓಡುನಡುಗೆ ಹಾಕುತ್ತಿದ್ದರು. ಹಕ್ಕಿ ಪಕ್ಕಿಗಳು ಕಬ ಕಬ ಮಾಡುತ್ತ, ಹಾಣಾದಿ ಹಿಡಿದು ಹೊಂಟಿದ್ದ ಮಂದಿಯ ನೆತ್ತಿಯ ಮೇಲಿಂದಲೇ ಹಾರುತ್ತ ಬಂದು, ಕೆಂಚಮ್ಮ ದೇವಿಯ ಗುಡಿ ಹಿಂದಿನ ಆಲದ ಮರದ ಟೊಂಗೆಗಳಿಗೆ ತೆಕ್ಕೆಬೀಳುತ್ತಿದ್ದುವು. ಆಕಾಸದ ತುಂಬ, ಅಲ್ಲೀಟು ಕೆಂಪು, ಇಲ್ಲೀಟು ಹಳದಿ ಬಣ್ಣ ಮೆತ್ತಿಕ್ಕೊಂಡು, ಹೊತ್ತು ಕೆಂಪಗೆ ಹಣ್ಣಾಗಿ, ಗಾಳಿಮರೆವ್ವನ ಗುಡ್ಡದ ಮ್ಯಾಲ ಕಡ್ಕೊಂಡು ಬೀಳಲಿಕ್ಕೆ ತಯಾರಾಗಿ ನಿಂತಿತ್ತು.

ಚರ್ರನೆ ಕಡ್ಡಿ ಕೊರೆದು ಚಿಮಣಿ ಹಚ್ಚಿದ ಹಣಮವ್ವನ ಮಾರಿಯ ಮೇಲೆ ಬೆಳಕು ಹೊಯ್ದಾಡಿತು. ಬೆಳ್ಳಗೆ ಸುಣ್ಣ ಸವರಿದಂಗಿದ್ದ ತಲೆ ಗೂದಲು, ಹಣಿಮ್ಯಾಲ ಈಟಗಲ ಕುಂಕುಮ, ಕವಡೆಗಣ್ಣುಗಳು ತಟ್ಟನೆ ಮಿಂಚಿದುವು. ದೀಪ ಮುಡಿಸಿ, ಹೊರಬಂದು ಅಂಗಳದಲ್ಲಿ ನಿಂತಳು ಹಣಮವ್ವ. ಆಜೂ ಬಾಜು ಗುಡಿಸಲುಗಳು ತಮ್ಮ ಹೊಟ್ಟೆಯಲ್ಲಿ ದೀಪ ಹಚ್ಚಿಕೊಂಡಿದ್ದುವು. ತಿಮ್ಮಕ್ಕನ ಗುಡಿಸಲಿಂದ ಆಗಲೇ ರೊಟ್ಟಿ ಬಡಿ ಯುವ ಸದ್ದು ಕೇಳಿಬರುತ್ತಿತ್ತು. ದ್ಯಾವಪ್ಪನ ಗುಡಿಸಲಲ್ಲಿ ಕೂಸು ಅಳುತ್ತಿತ್ತು. ಸಿದ್ದವ್ವಾಯಿ, ಮಮ್ಮಗಳಿಗೆ ರಪ ರಪನೆ ತೆಲಿಮ್ಯಾಲ ಎಡ್ಡೇಟು ಭಾರಿಸಿ, ''ಛಿನಾಲೀ... ನಾ ಅಡಿಲಿಂದ ದುಡ್ಡು ಬರಟಗೆ, ಗಡಗ್ಯಾನ ಬ್ಯಾಳಿ, ಬುಟ್ಟ್ಯಾನ ರೊಟ್ಟಿಯೆಲ್ಲಾ ನಾಯಿಗಿ ತಿನ್ಸಿ ಕುಂತಿದ್ದೆಲ್ಲಗ ಸೂಳೀ... ಈಗ ನಾವೇನು ಮಣ್ಣ ಬುಕ್ಕಬೇಕೇನು?'' ಅಂತ ಬಯ್ಯುತ್ತಲೇ ಇದ್ದಳು. ''ನಾ ಯೇನು ಮಾಡ್ಲೇ ಆಯೀ... ಬಟ್ಟಿ ಒಕ್ಕೊಂಡು ಬರ್ಲಕ್ಕಂತ ನಾ ಹಳ್ಳಕ್ಕ ಹೋಗಿದ್ದಾಗ, ಯಾರೋ ಗುಡಸಿ ಬಾಗಿಲ ತೆರೆದಿರ್ಬೇಕೂ... ನಾಯಿ ಬಂದು ರೊಟ್ಟಿ ತಿಂದ್ರ ನಾಯೇನು ಮಾಡ್ಲೇ...'' ಅಂತ ಆ ಪೋರಿ ಅಳುದನಿಯಲ್ಲಿ ತನ್ನ ಸಫಾಯಿ ನೀಡುತ್ತಿತ್ತು.

ಕೋಳಿ ಹಿಂಡು ಕೊರ್ರ, ಕೊರ್ರ, ಮಾಡುತ್ತ ಗೂಡು ಸೇರುತ್ತಿದ್ದುವು. ತನ್ನೋಸು ಕೋಳಿಗಳು ಗೂಡು ಹೊಕ್ಕಿದ್ದು ಖಾತ್ರಿಪಡಿಸಿಕೊಂಡು ಹಣಮವ್ವ, ಕುಂತು ಗೂಡಿನ ಬಾಗಿಲು ಮುಚ್ಚಿ, ಹಗ್ಗ ಬಿಗಿದಳು. ಆಟೊತ್ತಿಗೆ ಕರೆಟ್ಟಾಗಿ, ಕೆಂಪಗಿನ ಸೂರ್ಯನ ಕುತ್ತಿಗೆ ಒತ್ತಿ, ಕತ್ತಲೆ ಕೆಳಗಿಳಿದು ಬಂದಿತು. ''ಏ ಕರಿಬಸ್ಯಾ, ಎಲ್ಲಿಗೊಂಟಿದ್ಯೋ ನನ್ ಹಾಟ್ಯಾ... ಬಾ ಇಕಾಡೀ'', ಬಾಜು ಝೋಪಡಿಯ ಬಕ್ಕಪ್ಪನ ಮಗ ಹತ್ತೊರ್ಸಿನ ಕರಿಬಸ್ಯಾ ನಡೆದದ್ದು ಕಂಡು ಕರೆದಳು. ಹರಕು ಅಂಗಿಗೆ ಕೈ ಒರೆಸಿಕೊಳ್ಳುತ್ತ, ಬಗಲಲ್ಲಿಯ ಚೀಲ ಒತ್ತಿ ಹಿಡಿದುಕೊಳ್ಳುತ್ತ ಓಡಿ ಬಂದವನು, ''ಸಿಂದಿ ಕಲ್ಲಪ್ಪನ ದುಕಾನಕ್ಕೇ ಆಯೀ... ನಾಕು ಬಾಟಲಿ ಸಿಂದಿ ತಗೊಂಡು ಬಾ ಅಂತ ನಮ್ಮಪ್ಪ ರೊಕ್ಕಾ ಕೊಟ್ಟಾನಬೇ...'' ಅಂದನು. ''ಯಾಕೆ? ಅಂವಾ ಸಿಂದಿ ದುಕಾನಕ್ಕೆ ಹೋಗಂಗಿಲ್ಲೇನಿವತ್ತ?''

''ಇಲ್ಲಾಯೀ... ಆ ಬೆಸ್ತರ ನಿಂಗಪ್ಪ, ಛಾಸಿಕೆ ರಲಿಂದ ಮೀನಾ ತೆಗ್ಯಾಮುಂದ, ಅಲ್ಲೇ ನಿಂತು, ಒಂದೀಸು ಮೀನಾ ಇಸ್ಗೊಂಡು ಬಂದಾನ ನಮ್ಮಪ್ಪ... ಹಿಂದ ಆ ಪಪ್ಪಿ ಗಿಡದ ತೆಳಗಿನ ಕಲ್ಲ ಮ್ಯಾಲ, ಮೀನಾ ಒರ್ಸಿ, ತೊಳ್ದು ಹಸೂನ ಮಾಡ್ಲಕತ್ತಾನವ್ವ... ಈಗ ನಮ್ಮವ್ವ ಮೀನಿನ ಪಲ್ಯಾ ಮಾಡ್ತಾಳ...'', ಕರಿಬಸ್ಯಾ ಖುಷಿಯಿಂದ ಉತ್ತರಿಸಿದ. ''ಹಿಂಗಾ... ನನಗನೂ ಎಡ್ಡು ಬಾಟಲಿ ಸಿಂದಿ ತಗೊಂಡು ಬಾರೋ ಮಗಾ... ಇಕಾ ನಿಂದ್ರು... ಬಾಟಲಿ ಮತ್ತ ರೊಕ್ಕಾ ತಂದು ಕುಡ್ತೀನಿ'' ಅನ್ನುತ್ತ ಒಳಹೋಗಿ, ರೊಕ್ಕ ಮತ್ತು ಬಾಟಲಿಗಳನ್ನು ತಂದು ಅವನಿಗೆ ಕೊಟ್ಟಳು. ''ಅದರಾಗ ಆಠಾಣೆ ರೊಕ್ಕಾ ವಾಪಸ ಬರ್ತಾವ ನೋಡು, ಅದರಲಿಂದ ನೀ ಏನರೆ ತಿಲ್ಲಕ್ಕ ತಗೊ, ಏನು...'' ಅಂದಳು.

''ಆಗಲೇ ಆಯೀ...'' ಅನ್ನುತ್ತಲೇ ಅದೆಲ್ಲ ತಗೊಂಡು ಪಾರ ಅಲ್ಲಿಂದ ಓಡಿತು.

ಅಂಗಳದಾಗಿನ ಬೇವಿನಮರದ ಸಂದಿ ಗೊಂದಿಲಿಂದ, ಆಟೀಟು ಬೆಳದಿಂಗಳು ನೆಲದ ಮ್ಯಾಲ ಸೋರಲಕತ್ತಿತ್ತು. ಸಿಂದಿಚಾಪಿ ಹಾಸ್ಗೊಂಡು, ಅದರ ಮ್ಯಾಲ ಕಾಲುಚಾಚಿ ಕೊಂಡು ಕುಂತಿದ್ದ ಹಣಮವ್ವನ ಮುಂದೆ, ಸಿಂದಿ ತುಂಬಿದ ಬಾಟಲಿ, ಅಂಚು ಹರಿದ ಸಿಲಾವರ ಗಿಲಾಸು, ಕಾಗದದ ಚೂರಿನಲ್ಲಿ ಉಪ್ಪುಹಚ್ಚಿ ಹುರಿದ ಕಡಲೆಗಳಿದ್ದುವು. ಒಂದು ಗಿಲಾಸು ಸಿಂದಿ ಹೀರಿದವಳು, ಖಾಲಿ ಗಿಲಾಸಿಗೆ ಹೆಂಡ ಬಗ್ಗಿಸಿ, ಹುರಿಗಡಲೆಕಾಳು ಬಾಯಿಗೆ ಹಾಕಿಕೊಂಡು, ಮೆಲುಕಾಡಿಸುತ್ತ ತಲೆಯೆತ್ತಿದಳು. ನೆರೆದ ನಕ್ಷತ್ರಗಳನ್ನು ಬಾಜು ಸರಿಸುತ್ತ, ಮುಂದೆ ನಡೆಯುವ ಒಡೆದ ಬಳೆಚೂರಿನಂಥ ಚಂದ್ರಾಮ. ತಣ್ಣಗೆ ತೀಡಿ ಬರುವ ಗಾಳಿಯ ಗೊಲ್ಲೆಗೆ ಸರಪರ ಸದ್ದು ಮಾಡುವ ಮರದೆಲೆಗಳು.

''ಯಾಕವ್ವಾ ಹಣಮವ್ವಕ್ಕಾ... ಇವತ್ತ ಮನ್ಯಾಗಿದ್ದಿಯಲ್ಲ? ಹಾಡ್ಲಕ್ಕ ಹೋಗಿಲ್ಲೇನು?'' ತನ್ನ ಗುಡಿಸಲ ಹಿಂದಿನ ಔಡಲಗಿಡಗಳ ನಡುವೆ ನಿಂತು ಉಚ್ಚೆಹೊಯ್ದು ಬರುತ್ತಿದ್ದ ತಿಪ್ಪಣ್ಣ, ದೂರದಿಂದಲೇ ಹಣಮವ್ವನನ್ನು ಮಾತಾಡಿಸಿದ. ''ಇಲ್ಲೋ ತಮ್ಮಾ... ಇವತ್ಯಾರೂ ಮೈನರದಿಲ್ಲಪಾ... ಯಾರ ಮನಿಲಿಂದನೂ ಇವತ್ತ ಕರ್ಯಾಕ ಬಂದಿಲ್ಲ...''

''ಅದೇ ಅಂತೀನೀ... ಇಲ್ಲಂದ್ರ ನೀ ಯೆಲ್ಲಿ ಸಂಜೆಮುಂದ ಮನ್ಯಾಗಿರ್ತೀ... ನಿನಗ ಇವತ್ತ ಆರಾಮ ಸಿಕ್ತು ಬಿಡು'' ಅನ್ನುತ್ತ ಸರಿದುಹೋದನು. ಹಣಮವ್ವ ಗೊಣಗಿದಳು, ''ಹೊಯಿಂದು ಮಗಾ... ಇವತ್ತ ಒಂದೀಟು ಆರಾಮ ಸಿಕ್ಕಾದಪಾ... ಇಲ್ಲಂದ್ರ ದಿನಾ ರಾತರಿ ಒಂದಿಲ್ಲಾ ಒಂದು ಊರಾ, ಮನಿ ಅಂತ ಹಾಡ್ಲಕ್ಕ ಹೋಗಕ್ಕಿ ನಾನೂ...'' ಹಣಮವ್ವ ತುಂಬಿದ ಗಿಲಾಸೆತ್ತಿ ತುಟಿಗಿಟ್ಟುಕೊಂಡು, ಗಟಗಟನೆ ಒಂದೇ ದಮ್ಮಿಗೆ ಎಲ್ಲ ಕುಡಿದು, ಖಾಲಿ ಗಿಲಾಸು ನೆಲಕ್ಕೆ ಇಕ್ಕರಿಸಿ, ಸೆರಗಿನಿಂದ ಬಾಯೊರೆಸಿಕೊಂಡಳು. ಬಾಜು ಇಟ್ಟುಕೊಂಡಿದ್ದ ಬೀಡಿ ಗಟ್ಟಾದಿಂದೊಂದು ಗಣೇಶನನ್ನೆಳೆದುಕೊಂಡು ಬಾಯಿಗಿಟ್ಟುಕ್ಕೊಂಡು, ಚರ್‍ನೆ ಕಡ್ಡಿ ಗೀರಿ. ಅದರ ಮಾರಿಗೆ ಬೆಂಕಿ ಹಚ್ಚಿ, ಕಡ್ಡಿ ಜಿಕಾಟಿ, ಒಂದು ಝುರಕಿ ಧಂ ಎಳೆದು, ಹೊಗೆ ಉಗುಳಿದಳು. ಹಂಗೇ ಹೊಗೆ ಸುರುಳಿ ಮೇಲೇರುವುದನ್ನೇ ನೋಡುತ್ತ ಮೈಮರೆತಳು. ಸಿಂದಿಯ ನಿಶೆ ನೆತ್ತಿಗೇರುತ್ತಿತ್ತು. ಅವಳೆದೆಯೊಳಗೆ ಸೋಬಾನದ ಹಾಡುಗಳು ಕಬಕಬ ಮಾಡುತ್ತ, ತೇಲುತ್ತ ಬರತೊಡಗಿದುವು. ಹಣಮವ್ವನ ಮನಸ್ಸು ಹಾಡುಗಳ ಬೆನ್ನು ಹತ್ತಿ ಓಡತೊಡಗಿತು...

ಹಣಮವ್ವ, ಇದೇ ಹಳ್ಳಿಯ ಕೆಳಗೇರಿಯಲ್ಲಿಯ ತಳವಾರ ಕರೆಪ್ಪನ ಹೆಂಡತಿಯಾಗಿ ಚಾಳೀಸು ವರ್ಷಗಳ ಹಿಂದೆ ಬಂದು, ಅವನ ಗುಡಿಸಲು ಹೊಕ್ಕು ನಿಂತವಳು. ಹಾಂಗ ನೋಡಿದರ ಕರೆಪ್ಪೇನೂ ಅವಳಿಗೆ ಹೊಸಬನಲ್ಲ. ಅಪ್ಪನ ಅಕ್ಕ ಸಾತವ್ವನ ಮಗನೇ. ಹಣಮವ್ವ ಇನ್ನೂ ತಾಯಿಹೊಟ್ಟೆಯೊಳಗಿದ್ದಾಗಲೇ, ಆ ಸಾತವ್ವ, ''ನಿನಗ ಹೆಣ್ಣ ಹುಟ್ಟದ್ರ ನನ್ ಮಗಾ ಕರ್ಯಾಗೇ

ೂಟ್ಟು ಮದಿ ಮಾಡ್ಬೇಕು ನೋಡೆಣ್ಣ, ನಾ ೀಳಿಕೇಳಿ ಗಂಡಸತ್ತ ರಂಡಮುಂಡಿ ಇದ್ದೀನಿ. ಲಕ್ಕ ನನಗ ಒಂದೇ ಮಗಾ ಅದಾ. ತವರ ಮನಿ ೀರಿ ಸೊಸಿಯಾಗಿ ಬಂದ್ರ, ನಾಳ ಮುಪ್ಪಿನ ಲಕ್ಕ ನನ್‌ಹೊಟ್ಟಿ, ಬೆನ್ನ ನೋಡ್ಯಾಳು ಅಂತ ಸಿ. ನಿಮಗ ಬಿಟ್ಟು ನನಗರೆ ಯಾರದಾರ ೀಳು...'' ಅಂತ ಕಣ್ಣಾಗ ನೀರುತಂದು, ತುದಿ ರಗಿನಿಂದ ಒರೆಸಿಕೊಂಡು ಕೇಳಿದಾಗ, ಆ ಣ್ಣ-ಅತ್ತಿಗಿಗಿನೂ ಕರುಣಾ ಬಂತು. ಏಟಾದ ನೂ ಬೆನ್ನಿಗಿ ಬಿದ್ದ ತಂಗಿ. ಒಂದೇ ಹೊಟ್ಟಿಲಿಂದ ಬ್ಬರೂ ಹುಟ್ಟಿ ಬಂದೀವಿ. ಒಂದೇ ತಾಯಿ ಲಿಹಾಲು ಕುಡದೀವಿ. ಏಟಾದರನೂ ಕಳ್ಳ ಳ್ಳಿ ಸಮ್ಮಂದ. ಮತ್ತ ಅಕ್ಕಗನೂ ಊರಾ ಂದು ಖೊಲ್ಲಿ, ಅಡವ್ಯಾಗೊಂದು ಹೊಲಾ ಂತದಾ. ಮುಂದ ಹುಟ್ಟೋ ತನ್ ಮಗಳಿ ನೂ, ಅತ್ತಿ ಕಾಟಾ, ಕಿರಕಿರಿ ಇರಂಗಿಲ್ಲ. ಸ್ವಾದ ತ್ತಿ, ಸ್ವಾದರ ಸೊಸಿ ಸುಕದಾಗ ಇರ್ತಾರ. ಕರ್‍ಯಾನೂ ನ್ನ ಅಂಡರದಾಗ ಇರ್ತಾನಂತ ಏನೇನೆಲ್ಲಾ ಚಾರ ಮಾಡಿ, ಆ ಅಣ್ಣ, ತಂಗೀ ಮಾತಿಗೆ ಪ್ಪಿಕೊಂಡಿದ್ದ. ಮುಂದ ಹೆಣ್ಣೇ ಹುಟ್ಟಿತ್ತು. ಕೂಸಿಗೆ ೊಟ್ಟಲಕಾರಣ ಮಾಡಾಮುಂದೇ, ಸಾತವ್ವ ಂದು, ಕೇರಿ ಮಂದಿಮುಂದ, ಅವರೆಲ್ಲೋರಿಗಿ ಗಸಿ ಇಟಗೊಂಡು, ಕೂಸಿನ ತೊಟ್ಟಿಲಕ್ಕೇ ಕುಂಕುಮ ಚ್ಚಿ, ನಿಶ್ಚಾದ ಕಾರಣ ಮಾಡಿ ಮುಗಿಸೇಬಿಟ್ಟಳು. ಂಗಾಗಿ ಹಣಮವ್ವ ಮತ್ತು ಕರೆಪ್ಪನ ಮದವಿ ಆದಾಗ ಅಕೀಗಿ ಬರೇ ಎಂಟೊರ್ಸ ವಯಸ್ಸು...

''ಆಯೀ... ತಗೋರೇ, ನಿನ್ನವ್ವನಾ... ಬಂದೇಟೊತ್ತಾಯ್ತು, ಕರೀಲಕತ್ತೀನಿ, ನೀ ಓ ಕುಡಂಗಿಲ್ಲಾಗಿದ್ದೀ... ಇಕಾ ತಗೊ... ನಮ್ಮವ್ವ ಕೋಳಿ ಪಲ್ಲ್ಯಾ ಮಾಡ್ಯಾಳ. ನಿನಗ ಕೊಟ್ಟು ಬಾ ಅಂದಳು. ಹಿಡಿ...'' ಅನ್ನುತ್ತ ನಾಟೀಕಾರ ಚೆಂದವ್ವನ ಮಗ, ಹತ್ತೊರ್ಸಿನ ಸಿದ್ದ್ಯಾ, ತನ್ನ ಕೈಯೊಳಗಿನ ಸಿಲಾವರ ಡೆಬ್ಬಿ ಕೆಳಗಿಟ್ಟು ನಿಂತನು. ಹಣಮವ್ವ ತಟ್ಟಂತ ಎಚ್ಚತ್ತಳು. ಗವ್ವೆಂದು ಮುಕುರಿದ್ದ ನೆನಪಿನ ಸೊಳ್ಳೆಗಳು, ಗುಂಯ್ ಎಂದು ಸಪ್ಪಳ ಮಾಡುತ್ತ ದೂರ ಹಾರಿದುವು. ಅವಳು ಮಾರಿಯೆತ್ತಿ ನೋಡಿದಳು. ಸಿದ್ದ್ಯಾ ತೆಲಿ ತುರಿಸಿಕೊಳ್ಳುತ್ತಿದ್ದ.

''ಇವತ್ತೇನು ಹಬ್ಬಾ ಅಲ್ಲ, ಕರೀ ಅಲ್ಲ... ಇವತ್ಯಾಕ ಕೋಳಿ ಕೊಯ್ದು ಪಲ್ಲ್ಯಾ ಮಾಡ್ಯಾಳೋ ನಿಮ್ಮವ್ವ? ಯಾ ಊರ್‌ಲಿಂದರೆ ನೆಂಟರು ಗಿಂಟರು ಬಂದಾರೇನು ನಿಮ್ಮನೀಗಿ?'' ಕೇಳಿದಳು. ''ಯಾರೂ ಬಂದಿಲ್ಲೇ ಆಯೀ... ಆ ನಮ್ಮ ಬದನಿ ಬಣ್ಣದ ಹುಂಜಾ ಇತ್ತಲ್ಲ; ಅದಕ್ಕೇನು ಬ್ಯಾನಿ ಬಂದಿತ್ತೋ ಏನೋ... ನಿನ್ನಿ ಮುಂಜಾನಿಂದ, ಕೂಳಾ ನೀರಾ ಮುಟ್ಟಲಾರ್ದೆ ಕಣ್ಣ ಮುಚಗೊಂಡು ಜಪೋ ಅಂತ ಸುಸ್ತಾಗಿ ಕುಂತಿತ್ತು. ಸತ್ತುಗಿತ್ತ ಹೋಗಂಗದಾ ಅಂತ ಅದರ ಕುತಗಿಗಿ ಚೂರಿ ಹಾಕ್ಯಾನ ನಮ್ಮಪ್ಪ. ಅದರ ಪುಚ್ಚಾಯೆಲ್ಲಾ ಸುಲ್ದು, ಪಲ್ಯಾ ಮಾಡ್ಯಾಳ ನಮ್ಮವ್ವ, ಆಯ್ತು...'' ಅನ್ನುತ್ತ ಸಿದ್ದ್ಯಾ ತಿರುಗಿ ಓಡಿದ.

ಹಣಮವ್ವ ಖಾಲಿ ಗಿಲಾಸಿಗೆ ಮತ್ತೀಟು ಸಿಂದಿ ಬಗ್ಗಿಸಿಕೊಂಡಳು. ಖಾಲಿಯಾದ ಬಾಟಲಿಯನ್ನು ಕೋಳಿಗೂಡಿನ ಸಂದಿಗೆ ಸರಿಸಿದಳು. ಗಿಲಾಸೆತ್ತಿ ಗಟಗಟನೆ ಕುಡಿದಳು. ಮತ್ತೆ ಅವಳ ಮನಸ್ಸು ಹಿಂದೆ ಸರಿಯಿತು...

''ಬಾರಾ ವರ್ಸ ವಯಸ್ಸಾಗಿತ್ತು ನನಗ. ನಮ್ಮತ್ತಿ ಸಾತವ್ವ, ನಾ ಮೈನರ್‍ಯಾ ದಾರೀನೇ ನೋಡಲಕತ್ತಿದ್ದಳು. ಯವಾಗ ಈ ನನ್ ಸೊಸಿ ಮೈನರೀತಾದ ಯವಾಗ ಮಗನ ಸೋಬಾನ ಮಾಡಿ, ಸೊಸೀಗಿ ಕರ್‍ಕೊಂಡು ಬಂದು ಮನಿ ತುಂಬಸ್ಗೋಬೇಕುಂತ ದಿನಕ್ಕ ದಿನಾ ಲೆಕ್ಕಾ ಹಾಯ್ಕೋತಿದ್ದಳಂತ. ಆದರ, ಬ್ಯಾರೆ ಪೋರಿಗೋಳೆಲ್ಲಾ, ಅಕರಾ ಬಾರಾ ವರ್ಸಕ್ಕೇ ಮೈನರದರು, ಖರೇ. ಆದರ ನನಗ ತೇರಾ, ಚವದಾ, ವರ್ಸಾದರನೂ ನನ್ನ ಮೈ ನೆರೀಲಿಲ್ಲ!

ನಮ್ಮವ್ವ, ಅಪ್ಪಗನೂ ಇದೇ ಒಂದು ಚಿಂತಿ ಆಯ್ತು. ಮುಂದ ಪಂದರಾ ವರ್ಷ ದಾಟಿದಾಗ, ನಮ್ಮೌನ್ಯಾಗ ಎಲ್ಲೋರಿಗಿ ಖಾತರಿ ಆಗಿತ್ತು. ನಾ ಇನ್ನ ಮೈನೆರೆಂಗಿಲ್ಲಂತ. ನಮ್ಮತ್ತೆ ಅಂತೂ, ನಮ್ಮೂರಿಗಿ ಬಂದು, ನಮ್ಮನಿ ಮುಂದ ಕುಂತು, ದನಿ ತಗದು ಹಾಡ್ಯಾಡಿ ಅತ್ತಿದ್ದಳಲ್ಲ. ''ಇದೆಂತಾ ಹೆಣ್ಣ ಹಡದಿದ್ದೇ ಅತ್ತಿಗೆವ್ವಾ... ಮೈನಾರಲಾರ್ದ ಮೈ ಇದರದೂ... ಇದು ಹೆಣ್ಣೇ ಅಲ್ಲೇನೋ ಸಿವನೇ... ಹೇಳಿಕೇಳಿ ನನ್ ಮಗನಿಗೇ ಹಿಂತಾ ಒಣಮೈ ಹೆಣ್ಣ ಗಂಟು ಬೀಳ್ಬೇಕೇನೋ ದೇವರೇ... ಇದ್ದೊಬ್ಬ ಮಗನ ಬಾಳ್ಯಾ ಸುದ್ದ ಆಗಲಿಲ್ಲೋ ಯಣ್ಣಾ... ನಂದೆಂತಾ ಖೊಟ್ಟಿ ನಸೀಬೇ ಯವ್ವಾ...'' ಅಂತ ಏನೇನೆಲ್ಲಾ ಅಂದಂದು, ನನಗ ತಿವ್ದೂ ತಿವ್ದೂ ಅಳಾಮುಂದೇ, ಕೇರಿ ಮಂದೆಲ್ಲಾ ಬಂದು ನಿಂತಿದ್ದರು. ಎಲ್ಲೋರೂ ಆಕಿ ಕಡೀನೇ ಆಗಿ ಮಾತಾಡುತ್ತಿದ್ದರು. ನಮ್ಮಪ್ಪಂತೂ ತೆಲಿಮ್ಯಾಲ ಕೈಯಿಟ್ಗೊಂಡು ಮೂಕಾಗಿ ಕುಂತಿದ್ದ. ಅವ್ವ, ತಾನೇ ತಪ್ಪು ಮಾಡದಂಗ ಮುಸು ಮುಸು ಅಂತ ಅಳ್ಕತ್ತಿದ್ದಳು. ''ಯಾಕಗಾ ಸಾತೀ... ಯಾರರೇ ಸತ್ತಂಗ ಹಿಂಗ್ಯಾಕ ಅಳ್ಕತ್ತೀದೆಲೆ ಭೋಸುಡೀ... ಸೊಸಿ ಮೈನರೀಲಿಲ್ಲಂದ್ರ ನಿನ್ನಣ್ಣಾ ಅತ್ತಿಗಿದೇನು ತಪ್ಪದಾ ಇದರಾಗ? ಪಾಪ, ಆ ಪೋರಿ ಹೆಣಮಿದರೆ ಏನು ತಪ್ಪದಾ ಅಂತೀನಿ, ಮೈನರ್‍ಯಾದೂ ಹಡ್ಯಾದೂ ಎಲ್ಲಾ ನಮ್ಮಂತಾ ನರಮನಸ್ಯಾರ ಕೈಯಾಗದಾ ಯೇನೇ ಸಾತೀ... ಎಲ್ಲಾ ಆ ಶಿವನಾಟಾ ಅದಾ... ಅಳಬ್ಯಾಡ ಸುಮ್ಮಿರು. ಹುಚ್ಚಿದ್ದಿಯೇನು ನೀ? ನಿನ್ನಣ್ಣ, ಅತ್ತಿಗಿ ಮದಲೆ ಬಾಯಿಸತ್ತ ಮನಸ್ಯಾರು. ಮಾನ ಮರ್ವಾದಿಗಿ ಅಂಜವರು. ನೀ ಹಿಂಗ್ ಭಂಡ ಮಾಡದ್ರ, ಅವರಿಬ್ಬರೂ ಗಂಡಾ-ಹೆಣ್ಣೆ ಎದಿ ಒಡ್ಕೊಂಡು, ಉರುಲಾಕ್ಕೊಂಡು ಸಾಯಂಗವಾ. ಪಾಪ, ಸುಮ್ಮಿರು... ನಿನ್ ಮಗನಿಗಿ ಬೇಕಾದರ, ಬ್ಯಾರೆ ಹೆಣ್ಣ ತಂದು ಮದಿಮಾಡು. ಬಂಗಾರ ಕೆಟ್ಟರ ಅಗಸಲ್ಯಾನ ಮನಿ, ಹೆಣ್ಣ ಕೆಟ್ಟರ ತವರ ಮನೀ ಅಂತ ಹಿಂದಕ್ಕ ಹಿರೇರು ಹೇಳ್ಯಾರಲ್ಲ. ಹಾಂಗೆ ನೋಡದ್ರ ಹೆಣಮಿಯೇನೂ ಕೆಟ್ಟಿಲ್ಲ, ಹಾದರಾ, ಕಳತನಾ ಮಾಡಿಲ್ಲ. ಪಾಪ, ಅದರ ನಸೀಬ ಖೋಡಿ ಅದಾ... ನೀ ಹಿಂಗ್ ಅತ್ತೂ ಕರ್‍ದೂ ರಂಬಾಟ ಮಾಡಬ್ಯಾಡಗಾ ಸಾತೀ...'' ನೆರಮನಿ ಬಕ್ಕವ್ವಾಯಿ, ಸಿಡುಕಿನಿಂದ ಜಬರಿಸಿದಾಗೇ ನಮ್ಮತ್ತಿ ಅಳು ಒಂದೀಟು ಕಮ್ಮಿ ಆಗಿತ್ತು. ''ಅಯ್ಯೋ ಪಾಪ... ಏಟಾದರನೂ ಅಣ್ಣನ ಮಗಳು. ಸ್ವಾದರ ಸೊಸಿ. ತವರಮನಿ ಸಸ್ಯಾಕ ಮಾಡ್ಕೋಬೇಕಂತ ಎಲ್ಲಾ ಮಾಡದಳು ಸಾತವ್ವ. ಆದರೆ ಆ ದೇವರು ಆಕಿನ ಸಾತ್ ಕುಡ್ಲಿಲ್ಲ! ಮನಸ್ಯಾರು ಹಾಕಾ ಲೆಕ್ಕಾಚಾರ ಒಂದಾದ್ರ, ಆ ದೇವರ ಹಾಕಾ ಲೆಕ್ಕಾಚಾರಾನೇ ಮತ್ತೊಂದಾಗಿರ್ತದ ಖೋಡಿ. ಈ ಪೋರಿ ಹೆಣ ಬರದಾಗ ಏನಾದಾನೋ ಏನೋ...'', ನೆರೆದ ಮಂದ್ಯಾಗಿಂದ ಮತ್ತೊಂದು ಹೆಣ್ಣನ ದನಿ ಬಂದಿತ್ತು. ತೆಲಿಗೊಂದೊಂದು ಮಾತಾಡ್ಕೋತ್ತ ಪಾಪ... ತ್ಚು ತ್ಚು... ಅನ್ಕೋತ, ಸುತ್ತಾಮುತ್ತಾ ನಿಂತ ಮಂದೆಲ್ಲಾ ಹೊಂಟು ಹ್ವಾದ ಮ್ಯಾಲ, ಎಟೊತ್ತಿನ ತನಕಾ, ಅಪ್ಪ, ಅವ್ವ, ಅತ್ತಿ, ನಾನು-ಎಲ್ಲೋರೂ ಗಪಚಿಪ್ಪಾಗಿ ಮೂಕದೆವ್ವಿನಂಗ ಕುಂತಿದ್ದೇವಲ್ಲ.

ಅತ್ತೂ ಕರ್‍ದೂ ಅತ್ತಿ ತಮ್ಮೂರಿಗಿ ಹ್ವಾದಳು. ಮದಲೆಲ್ಲಾ, ಹಿಂಗ ಹೋಗಾಮಂದ, ನನಗೆ ಕರ್‍ದು, ನೆತ್ತಿ, ಬೆನ್ನಾ ಸವರಿ, ಗದ್ದಾ, ತುಟಿ ಹಿಡ್ದು ರಂಬಿಸಿ, ''ಜಲ್ದಿ ದೊಡ್ಡಕ್ಯಾಗಿ ಬಂದು ನನ್ ಮನಿ, ನನ್ ಮಗನ ಮಂಚಾ ತುಂಬೇ ನನ್ ಸೊಸಿಮುದ್ದಾ...'' ಅಂತ್ಹೇಳಿ ನಕ್ಕು, ಕಾಳಜಿ, ಕಕ್ಕುಲಾತಿ ತೋರ್‍ಸುತ್ತ ಹೋಗತಿದ್ದಕ್ಕಿ ಈ ಸರ್ತಿ ನನ್‌ಕಡಿ ತಿರಗಿನೂ ನೋಡಲಿಲ್ಲ! ನಾ ಹುಚ್ಚನಂಗ ನೆಲನೋಡ್ಕೋತ ನಿಂತಿದ್ದು ನೋಡಿ, ನಮ್ಮವ್ವ ಸರ್‍ದು ಬಂದು, ನನಗ ಎದಿಗೊತಗೊಂಡು ಕಣ್ಣೀರಹಾಕಿದ್ದಳು!

ನನಗನೂ, ಆವಾಗ, ಇದೆಲ್ಲಾ ಭಾಳ ಇಚಿತ್ತರಾಗಿ ಕಾಣತಿತ್ತು. ಹೊಯಿಂದೂ, ಈ ಮೈನರ್‍ಯಾದು ಅಂದರೇನು? ಹೆಣಮಕ್ಕಳಿಗಿ ಇದು ಆಗೇ ತೀರ್ಬೇಕೇನು? ಇಲ್ಲಂದ್ರ, ಏನಾಗ್ತದ? ಅಂತೆಲ್ಲಾ ನನ್ ಗೆಳತೇರ ಜತಿ ಮಾತಾಡ್ತಿದ್ದ ನಾನು. ಆದರ

ಯಾರಿಗಿನೂ, ಎಲ್ಲಾ ಖರೇ ಖರೇ ಗೊತ್ತಿರಲಿಲ್ಲ. ಅವ್ವಗ ಕೇಳ್ಬೇಕಂದ್ರ ಧೈರ್ಯಾ ಆಗತಿರಲಿಲ್ಲ....

ಬಾಜು ಗುಡಿಸಲಲ್ಲಿ, ಕೂಸು ಚಿಟ್ಟನೆ ಚೀರಿ ಅಳತೊಡಗಿತು. ಹಣಮವ್ವ ತಟ್ಟನೆ ಎಚ್ಚರಾದಳು. ''ಇದರ ಮ್ಯಾಲ ಮಣ್ಣ ಹಾಕಲೀ... ಇವತ್ಯಾಕ ಈ ಸತ್ತ ನೆನಪುಗೋಳು ಎದ್ದುಬಂದು ದೆವ್ವಿನಂಗ ಕಾಡ್ಲಕತ್ತಾವೋ ಶಿವನೇ...'' ಅಂತ ಸಿಡುಕುತ್ತ, ಮುಂದಿನ ಬಾಟಲಿಯಲ್ಲಿ ಉಳಿದಿದ್ದ ಹೆಂಡ ಬಸಿದುಕೊಂಡಳು. ಎದ್ದು ಒಳಬಂದಳು. ಗುಡಿಸಲಲ್ಲಿ ಚಿಮಣಿ ಉರಿಯುತ್ತಿತ್ತು. ಒಲಿತೋಳೀಗಿ ಹತ್ತಿ ಕುಂತಿದ್ದ ಕೊಡದ ಮ್ಯಾಲಿಟ್ಟಿದ್ದ ಬಿದರ ಬುಟ್ಟಿಲಿಂದ, ಎಡ್ಡು ರೊಟ್ಟಿ ಎಳ್ಕೊಂಡು, ಮತ್ತೆ ಅಂಗಳದಾಗ ಬಂದು, ಚಾಪಿ ಮ್ಯಾಲ ಕುಂತು, ಸಿದ್ದ್ಯಾ ತಂದಿಟ್ಟಿದ್ದ ಡೆಬ್ಬಿ ಮುಚ್ಚಣಕಿ ತೆರೆದು, ಕೋಳಿ ಚೂರೊಂದನ್ನು ರೊಟ್ಟಿ ಮ್ಯಾಲಿಟ್ಟು ಕೊಂಡು ಉಣ್ಣತೊಡಗಿದಳು.

ಆಟೆಲ್ಲಾ ರಂಪಾಟ ಮಾಡಿ ಹೋಗಿದ್ದ ಅತ್ತಿ, ಮತ್ತ ಭಾಳ ದಿನ ಆದರನೂ ತವರಮನೀಗಿ ತಿರಗಿ ಬರಲಿಲ್ಲ. ಇದ್ದೊಬ್ಬ ತಂಗೀಗಿ ಸನೀ ಮಾಡ್ಕೋಬೇಕಂತ, ಮಗಳಿಗಿ ಆಕಿ ಮಗನಿಗಿ ಕೊಟ್ಟು ಮದವಿ ಮಾಡಿದ್ದ ಸಂಗಪ್ಪನಿಗೆ ಭಾಳ ಕೆಟ್ಟನಸ್ತು. ದುಕ್ಕ ಆಯಿತು. ಈ ಮಗಳು ಹಣಮಿ ಹುಟ್ಟಿದ ಮ್ಯಾಲ, ಮತ್ತೆ ಬ್ಯಾರೆ ಮಕ್ಕಳಾಗಿರಲಿಲ್ಲ ಅವನಿಗಿ. ದೇವರ ತನಗ ಒಂದೇ ಫಲಾ ಕೊಟ್ಟಾನಂತೇಳಿ, ಹೆಣ್ಣಂದರನೂ ಇದೇ, ಗಂಡಂದರನೂ ಇದೇ ಅಂತ ಮಗಳಿಗಿ ಅತಿಮುದ್ದಾಗಿ ಬೆಳಸಿದ್ದರು. ಈಗ, ಮಗಳ ಬಾಳ್ಯಾ ಹಾಳಾಗ್ತಾದಂತ ತಿಳ್ದು, ಆ ಗಂಡಾಹೆಣ್ತಿ ಕಂಗಾಲಾದರು. ಒಂದಿನ, ಇಬ್ಬರೂ ಕೂಡೇ ಸಾತವ್ವನ ಊರಿಗೆ ಹೋದರು. ಸಾತವ್ವ, ಸತ್ತದನಿಲಿಂದೇ ಅಣ್ಣ-ಅತ್ತಿಗೇಗೆ ಕರ್ದು, ಕೈಕಾಲಿಗೆ ನೀರು ಕೊಟ್ಟಳು. ಅಳ್ಯಾ ಕರೆಪ್ಪ ಬಂದು, ಅತ್ತಿ-ಮಾವನಿಗೆ ಕೈ ಮುಗಿದು ಕುಂತನು. ರಾತರಿ ಊಟ ಆದಮೇಲೆ, ಅಂಗಳದಲ್ಲಿ ಕುಂತು ಬೀಡಿಸೇದುತ್ತ, ಸಂಗಪ್ಪ, ಕೆಮ್ಮಿ, ನಿಧಾನವಾಗಿ ಮಾತು ಬಿಚ್ಚಿಟ್ಟ. ''ತಂಗೀ, ನಾ ಒಂದು ಮಾತ ತಗೊಂಡು ಬಂದೀನೆವ್ವ. ನನ್ ಮಾತ ಮನ್ನಿಸಬೇಕು ನೀ... ಇದೊಂದು ಕಟ್ಟಕಡೀ ಕೋಶಿಶ ಅಂತ ಹೇಳ್ತೀನಿ... ನನ್ನ ಮಗಳು ಹಣಮಿ, ಯದರಾಗನೂ ಏನೂ ಕಮ್ಮಿಯಿಲ್ಲ. ಅಡಿ ಕೆಲಸಾ, ಮನಿ ಕೆಲಸಾ ಅಂತ ಒಂದೀಟೂ ಹೈರಾಣಾಗಲಾರದೆ ದುಡೀತಾಳ. ಗಳ್ಯಾ, ನೇಗಿಲ, ಕೊಯ್ಯಾದೂ, ರಾಶಿಮಾಡಾದು ಅಂತ ಗಂಡಸರ ಕೆಲ್ಸಾನೂ ಬರ್ತದ ಅಕೀಗಿ, ಆಟು ಮಜಬೂತಾದ ಕಸುವಿನ ಹೆಣ್ಣ ಅಕಿ. ನೀನೇ ನೋಡಿದ್ದೆಲ್ಲ, ಹ್ಯಾಂಗ ಮೈಕೈ ಥುಂಬ್ಕೊಂಡು



ಮಂದಿ ಕಣ್ಣ ಕುಕ್ಕಂಗ ಆಗ್ಯಾಳಂತ? ಅದ್ಯಾಕೋ ಏನೋ ಈಟು ಛಂದನ ಮೈ ನೆರೀಲಿಲ್ಲ! ಮಗ್ಗಿ ಅಳ್ಳಿ ಹುವ್ವಾ ಆಗಲಿಲ್ಲ!...'' ಮಾತು ತಡೆದು ಸಂಗಪ್ಪ, ನಿಡಿದಾದ ಉಸಿರೆಳೆದು, ಬೆರಳುಗಳ ನಡುವಿನ ಆರಿಹೋಗಿದ್ದ ಬೀಡಿ ಬಿಸಾಡಿ, ಮಾತಿನ ಎಳೆ ಜಗ್ಗಿದ.

ದುಂಡುಮಲ್ಲಿಗಿ ಮಗ್ಗಿಯಂತಾ ಮೈ ನನ್ ಮಗಳದು. ಆದರ ಅದು ಯಾಕೋ ತಂತಾನೇ ಅಳ್ಳಲ್ಲಾಗ್ಯಾದ. ಜಬರದಸ್ತಿಲಿಂದ ಅಳ್ಳಿಸಿ ಹುವ್ವಾ ಮಾಡ್ಬೇಕೂ...'' ಇನ್ನೂ ಅಣ್ಣನ ಮಾತು ಪೂರಾ ಮುಗಿದಿರಲಿಲ್ಲ, ತಂಗಿ ಸಾತವ್ವ ತಟ್ಟಂತ ನಡುವೆ ಬಾಯಿಹಾಕಿದಳು. ''ಅದ್ಯಾಂಗ ಜೋರಾ ಜಬರದಸ್ತಿ ಮಾಡಿ ಅಕೀಗಿ ಮೈನರಸ್ತ್ಯೋ ಯಣ್ಣಾ...'' ಅಂತಂದು ಅಣ್ಣ-ಅತ್ತಿಗೆಯರ ಮಾರಿ ನೋಡಿದಳು. ''ಅಂದರ, ಈ ಪಾರಗೋಳ 'ಸೋಬಾನ' ಮಾಡಿಬಿಡಾಮಿ. ಕರ್ಯಾನ ಮೈಬಿಸಿಲಿಂದರೆ ಹಣಮಿ ಮೈನರೀತಾಳೇನೋ ನೋಡಾಮಿ... ಮದವಿ ಆದ ಹರ್ಯಾದ ಮಗಳಿಗಿ ನಾವರೆ, ಏಸೊರ್ಸಂತ ಮಸ್ಯಾಗಿಟ್ಗೊಂಡು ಕೂಡಾಮಿ ಹೇಳು...'', ಅತ್ತಿಗೆವ್ವ ವಿವರಿಸಿದಳು. ಮೂವರ ನಡುವೆ ಮತ್ತೆ ಮೌನ ಸರಿದಾಡಿತು. ಸಾತವ್ವ ಉದ್ದನೆಯ ಉಸಿರೆಳೆದು ಮೌನ ಮುರಿದಳು. ''ಆಯ್ತು ಬಿಡು ಅತ್ತಿಗಿ... ನೀವಂದಂಗೇ ಆಗ್ಲಿ ಬಿಡ್ರಿ... ಸೋಬನ ಕಾರಣ ಎಂದ ಇಟ್ಗೋ ತೀರಿ? ಇದೂ ಒಂದು ಪರಯತ್ನಾ ಮಾಡಿಬಿಡಾಮಿ''

ಮುಂದೆ ಸೋಬಾನದ ಶಾಸ್ತ್ರವೂ ಮುಗಿದಿತ್ತು. ಕರ್ಯಾಯೇನೂ ಹಣಮಿಗಿ ಹೊಸ ಮನಸ್ಯಾ ಆಗಿರಲಿಲ್ಲ. ಥೇಳಿಕೇಳಿ ಸ್ವಾದರತ್ತಿ ಮಗ. ಸಣ್ಣಕ್ಕಿದ್ದಾಗಿಂದ ಅವನನ್ನು ಮಾಮಾ ಅಂತೇ ಕರೀತಿದ್ದಳು. ಅತ್ತಿ, ಹಬ್ಬಕ್ಕ, ಹುಣ್ಣೀಗಿ ತವರ ಮನೀಗಿ ಬಂದಾಗೆಲ್ಲಾ, ಈ ಕರ್ಯಾ ಮಾಮಾನೂ ಬರ್ತಿದ್ದ. ಇಬ್ಬರೂ ಕೂಡಿ, ಗೋಟಿ, ಚಿಣಿ ದಾಂಡು, ಕುಂಟುಬಿಲ್ಲಿ ಅಂತ ಎಲ್ಲಾ ಆಟಾ ಆಡುತ್ತಿದ್ದರು. ಮದುವೆ ನಡೆದಾಗಲೂ ಅವರು, ಹಂದರದ ಹಸೆಯ ಮೇಲೆ ಕುಂತು, ಹುವ್ವ, ಬ್ಯಾಂಗಡಿ, ಭಾಸಿಂಗಗಳ ಚಿತ್ತಾರಗಳನ್ನು ಕಂಡು ಕಿಸಿ ಕಿಸಿ ನಗುತ್ತಿದ್ದರು.

''ಏ ಮಾಮಾ... ನಿನಾ ಭಾಸಿಂಗಕಿಂತಾ ನಂದೇ ಛಂದದಾ ನೋಡೋ... ನನ್ ಸೀರಿ ನೋಡು, ಏಟರೇ ಮಿರಿ ಮಿರಿ ಮಿಂಚಲಕತ್ತಾದ...'' ಅಂತ ಹಣಮಿ ಕಿಸಿಕಿಸಿ ನಕ್ಕರೆ, ಸೊಲುಪ ದೊಡ್ಡವನಾಗಿದ್ದ ಕರ್ಯಾ, ನಗು ಅಡಗಿಸಿಕೊಳ್ಳುತ್ತ ಸಿಡುಕುತ್ತಿದ್ದ.

''ಏ ಸುಮ್ಕಿರೇ... ಮಂದೆಲ್ಲಾ ನೋಡ್ತಾರ. ನಮ್ಮವ್ವ ನೋಡದದಳಂದ್ರ ಬಂದು ಗುದ್ದತಾಳ ನೋಡು... ನಿನ್ ದಂಡಿ ತೊಂಡಲ ನೋಡು, ಹ್ಯಾಂಗ ಜೊತ್ಯಾಡ್ಲಕತ್ತಾದ...'' ಅಂತಂದು ಕಿಸಿ ಕಿಸಿ ನಕ್ಕು ಮಾರಿ ತಿರುಗಿಸುತ್ತಿದ್ದ. ಹಿಂತಾ ಮಾಮಾನ ಜೋಡಿ 'ಸೋಬಾನ' ನಡೆಯಿತು.

ಕಳ್ಳಿಮರದಾಗಿರಾ ಬೆಲಪತ್ರಿ ಗಿಡದ ತುಂಬಾ ಮೆತ್ತಿ ನಿಂತಿರೋ ಬೆಲಪತ್ರಿ ಕಾಯಿಗಳಂತಾ ಬಿರುಸಿನ ಮಲಿಗೋಳು. ಬಾಳಿದಿಂಡಿನಂತಾ ತೊಡಿಗೋಳು. ತೆಳ್ಳಗ, ರೇಸಮಿ ಹಂಗ ಮಿದುವಾಗಿರೋ ಹೊಟ್ಟಿ. ನೋಡದವರ ಕಣ್ಣ ಕುಕ್ಕಂಗ, ಲಕಾಲಕಾ ಅಂತ ಭ್ಯಾಂಗಡಿ ಹೊಳ್ದಂಗ ಹೊಳ್ಯಾ ಮೈಬಣ್ಣಾದಂಥ ಹಣಮಿಗೆ, ಈಗ 'ಸೋಬಾನ' ಮಾಡಿದಾಗ, ರಾತ್ರಿ ಕರ್ಯಾನ ಮಗ್ಗಲದಾಗ, ಅವ್ವ ಹೊಲ್ದು ಕೊಟ್ಟಿರೊ ಹೊಚ್ಚ ಹೊಸ, ಪಗಡಿ ಬಾಜಾರದ ಚಿತ್ತಾರದ ಕೌದಿ ಮ್ಯಾಲ ಮಕ್ಕೊಂಡಾಗ, ಮನಸ ಏಸೊಂದು ಛಂದನ ಕನಸು ಕಟ್ಟಿತ್ತು! ಎದ್ಯಾಗ ಅದೇಸು ಬಣ್ಣದ ಚಿಕ್ಕಿಗೋಳು ಚೆಲ್ಲ್ಯಾಡಿದ್ದುವು. ಆದರ ಕರ್ಯಾನ ಉಕ್ಕಿನ ತೆಕ್ಕ್ಯಾಗ ಹೊಳ್ಯ್ಯಾಡದರನೂ, ಮೈಯಂ ಬಾದು ಮೆತ್ತಗಾಗಿ, ಮನಸಿನ ಮಾತ ಕೇಳಲೇ ಇಲ್ಲ' ಕೈಕಾಲರೆ ಬಿಡು, ಎದಿ, ನಡಾ ಯೆಲ್ಲಾ, ಬಿರ್ದ ನಂಗ ಸೆಟಗೊಂಡು, ಕರ್ಯಾನ ತೊಡಿ ಜೋಡ ತೊಡಿ ಕೂಡಸಲಕ್ಕ ತಕರಾರು ಹೂಡಿದ್ದುವಲ್ಲ ಅಂವಾ ದಣಾ ದಣಾ ಉರ್ಕ್ಯೋತ, ತನಗ ತೆಕ್ಕ್ಯಾಗ

ಬಡ್ಕೊಂಡು, ಒತ್ತಿ, ಒರಸಿ, ಹಿಂಡಿ, ಹಿಸುಕಿ, ಕಣಕಾ ಮಿದ್ದೋಹಂಗ ಮಿದ್ದಲಕತ್ತಾಗ, ತನ್ನ ಮೈಯಂಬಾದು ಮಣಲಾರ್ದೆ, ಕೊಯ್ದಂಗಾಗಿ ಉರೀಲಕತ್ತಾಗ ತಾನರೆ ಏಟಂತ ತಾಳ್ಕೋಳ್ಳಾದು? ಕಣ್ಣಾಗ ನೀರಿನ ಹೊಳಿ ಹರಿದಿತ್ತು. ''ಬ್ಯಾಡೋ ಮಾಮಾ... ನನಗ ಭಾಳಂದ್ರ ಭಾಳ ತರಾಸ ಆಗಲಕತ್ತಾದೋ... ನಾ ಸತ್ತೇ ಹೋಗ್ತಿನೋ... ಯವ್ವಾ...'' ಅಂತ ಚೀರಿ, ಅವನಲಿಂದ ಬಿಡಸ್ಗೊಂಡು ಬುದುಂಗಂತ ಎದ್ದು ಕುಂತಾಗ, ಮಾಮಾ ಏಟರೇ ಸಿಟ್ಟಿಗಿ ಬಂದಿದ್ದ? ಹಿಂದಾ ಮುಂದಾ ನೋಡಲಾರ್ದೆ, ನನ್ ಕೂದಲ ಹಿಡಿದೆಳ್ದು, ರಪ್ಪ ರಪ್ಪಂತ ಕಪಾಳಕ್ಕೇಡೇಟು ಕೊಟ್ಟು, ಹಾಸಗ್ಯಾಗ ಬಾಳಿಬಿದ್ದು ಹೊಳ್ಳ್ಯಾಡಿದ್ದನಲ್ಲ ಪಾಪ! ''ನೀ ಹೆಣ್ಣಲ್ಲೇ ಹಣಮೀ.... ಕಲ್ಲಿದ್ದೀ... ನೀ ಕೊಡ್ಡಿದ್ದೀ... ನಿನ್ ಮೈ ಕೊಡ್ಡದಾ ಕೊಡ್ಡ... ಹೆಣ್ಣಲ್ಲ ನೀನೂ...'' ಅಂತ ಅವನೂ ಬಿಕ್ಕಿ ಬಿಕ್ಕಿ ಅತ್ತಿದ್ದನಲ್ಲ... ಅಂತೆಲ್ಲ ಹಣಮಿ ನೆನಪು ಕೆದಕುತ್ತಿದ್ದಳು.

ಮುಂದೆ ನಾಕಾರು ಸಲ ಹಿಂಗೇ ಆದಾಗ, ಕರ್ರ್ಯಾ, ಹಣಮಿ ಹಾಸಗಿಗೆ ಬರಾದೇ ಬಿಟ್ಟನು. ಮತ್ತೀಸು ದಿನದ ಮ್ಯಾಲ ಅಂವಾ, ತೆಳಗೇರಿ ಸೀತಾಬಾಯಿ ಜೋಗಣಿ ಗುಡಸ್ಯಾಗ ರಾತ್ರಿ ಮಕ್ಕೊಂಡು ಬರಾದು ಸುರುಮಾಡಿದನು. ಆಯ್ತು, ಮುಗೀತು ತನ್ನ ಕತಿ ಅಂತ ಹಣಮಿಗೆ ಖಾತರಿಯಾಯಿತು. ಇನ್ನು ತನ್ನ ನಸೀಬು ಸುಧಾರಿಸೋದು ಶಿವನಲಿಂದನೂ ಸಾಧ್ಯಾಯಿಲ್ಲಂತ ಆದಾಗ, ಅತ್ತಿ, ಅವಳಿಗಿ ಕರ್ಕೊಂಡು ಬಂದು ತವರಮನ್ಯಾಗ ಬಿಟ್ಟು ಹ್ವಾದಳು!

ಮಗಳು ಹಿಂಗ ಮನೀಗಿ ಬಂದಮ್ಯಾಲ ಅದೇ ಚಿಂತಿ, ಕುದ್ಯಾಗ ಅವಳ ಅವ್ವ, ಅಪ್ಪ ಸತ್ತು ಹ್ವಾದರು. ಮುಂದಿನ ಬ್ಯಾಸಗಾಗ, ಮಗನಿಗಿ ಮತ್ತೊಂದು ಮದವಿ ಮಾಡಿ, ಸಾತವ್ವನೂ ಸತ್ತು ಶಿವನ ಪಾದಾ ಸೇರಿದಳು.

ಆದರ, ಹಣಮಿ ಮಾತರ, ಹೆಣಮಕ್ಕಳು ಮೈನೆರದಾಗ, ಸೋಬಾನದಾಗ ಹಾಡಾದು ಹೆಚ್ಚು ಮಾಡಿದಳು. ಹಣಮವ್ವಂದು ಮದಲೇ, ಮರಗವ್ವನ ಗುಡ್ಯಾಗಿನ ಗಂಟಿ ಭಾರಸದಂಗ ದನಿ. ಅವಳು ದನಿಯೆತ್ತಿ ಹಾಡ್ಲಿಕ್ಕಿ ಸುರು ಮಾಡದರ ಸಾಕು, ಲೋಡಸಪೀಕರದಾಗ ಅಕಿನ ದನಿ ಎಲ್ಲಾ ಕಡೀನೂ ಹರದಾಡ್ಕೋತ ಹೋಗಿ, ಊರ ಮಂದಿ ನಿದ್ದೀಗಿ ನಿಶ್ಯಾ ಏರಸ್ತಿತ್ತು. ಗಂಡಾ ಹೆಂಡರ ಮೈಯಾಗ ಚುರು ಚುರಿ ಬಿಸಿ ಹೊತ್ತಿಸಿ, ಬೆನ್ನು ಹುರ್ಯಾಗ ಹಾವಿನ ಹೆಡಿ ಆಗಿ ಆಡತ್ತಿತ್ತು! ಅಕಿನ ಹಾಡಿನ ಮೋಡಿಗಿ ನಕ್ಕು, ಹರ್ಯಾದವರಂತೂ ಸರೀನೇ ಸರಿ! ಮುಪ್ಪಿನ ಮುದುಕರಾಗಿದ್ದ ಗಂಡಾ ಹೆಂಡರನೂ ಮಗ್ಗಲು ಬೆಸೆದು, ತೇಕ್ಯಾಡಲಕ್ಕ ಸುರುಮಾಡುತ್ತಿದ್ದರು. ಹಿಂಗ ಹಣಮವ್ವನ ಹಾಡುಗೋಳು ಊರ ಮನಿ, ಗುಡಸಲದಾಗೆಲ್ಲಾ ಹಾವಿನಂಗ ಹರಿದಾಡುತ್ತಿದ್ದುವು. ಕೆಂಜಗದಂಗ ಮಂದಿ ಮೈಯ್ಯಾಗ ಓಡಾಡುತ್ತಿದ್ದುವು. ನಿಗಿ ನಿಗಿ ಕೆಂಡದಂಗ ಅವರ ಟೊಂಕದ ಕೆಳಗ ಬೆಂಕಿ ಹಾಕುತ್ತಿದ್ದುವು!

ಮುಂದೆ ದಿನಗಳೆದಂಗೆಲ್ಲ ಹಣಮಿ 'ಹಾಡಿನ ಹಣಮವ್ವ' ಅಂತೇ ಪರಸಿದ್ದ ಆದಳು. ಸುತ್ತಾ ಮುತ್ತಾ ಬಾರಾ ಹರದಾರಿ ದೂರದ ಹಳ್ಳಿಪಳ್ಳಿಯಿಂದ ಗೌಡ, ಸಾವ್ಕಾರಗೋಳ ಮನೀಲಿಂದ, ಅವಳಿಗಿ ಹಾಡಿನ ಕರಿ ಬರಲಿಕ್ಕೆ ಸುರು ಆಯಿತು. ಮಂದಿ ಅಕೀಗಿ, ರೊಕ್ಕಾ ರುಪೈ ಕೊಟ್ಟು ಕರ್ಸಿ, ತಮ್ಮ ಮೈನರದ ಮಕ್ಕಳನ್ನು ಮಂಟಪದಲ್ಲಿ ಕೂಡಿಸಿ, ಸರಿರಾತರಿ ತನಕ ಹಾಡಿಸುತ್ತಿದ್ದರು. ರೊಕ್ಕಾ ರುಪೈ ಇರೋ ದವುಳ್ಯ ಮಂದಿ ಲೋಡಸಪೀಕರನೂ ತಂದು ಅಕಿನ ಮುಂದಿಡುತ್ತಿದ್ದರು. ಊರೆಲ್ಲಾ ಉಂಡು ಆದಾಗ, ಎಲ್ಲೋರೂ ಮೈನರದಲ್ಲಿ ಬರ್ತಿದ್ದರು. ಹಣಮವ್ವ ಹಾಡೂದಕ್ಕೆ ಸುರು ಮಾಡದರ ಆಯ್ತು, ರಾತಲಿ ಬಾರಾ ಒಂದೂ ಭಾರಸೋತನಕಾ ಸೋಬಾನದ ಸಿಂಗಾರದ ಹಾಡುಗಳು ನಡದೇಯಿರುತ್ತಿದ್ದುವು.



ದೇವದಾಸ್

ಸೋಬಾನದ ದಿನ ಅವಳಿಗೆ ನೂರು, ದೀಡಸೆ ರುಪ್ಪೆ ಕೊಟ್ಟು, ಟೋಪಿನ ಸೆರಗಿನ ಇಲಕಲ ಸೀರಿ ಉಡಿಸಿ, ಹಣ್ಣು ಹಂಪಲದಿಂದ ಉಡಿ ತುಂಬಿ ಕಳಿಸುತ್ತಿದ್ದರು.

ದಿನ ಕಳೆದಂಗೆಲ್ಲ ಹಣಮವ್ವನಿಗೆ ಇದೇ ಬದುಕುವ ದಾರಿಯಾಯಿತು. ಗಳಿಕೆಯ ದಂಧೆಯೂ ಆಯಿತು. ತನ್ನನ್ನು ಹೆಣ್ಣು ಮಾಡಲಾರ್ದೆ, ಸೋಬಾನದ ಸುಕಾ ಸಿಗಲಾರದಂಗ ಅನ್ಯಾಯಾ ಮಾಡಿರೋ ಆ ಭಗವಂತನ ಮ್ಯಾಲೆನೇ ಸೇಡು ತೀರಿಸ್ಗೋತಾಳೇನೋ ಅಂಬಂಗ, ಸೋಬಾನದ ಹಾಡುಗಳನ್ನು ಸ್ವಂತ ತಾನೇ ಕಟ್ಟಿ ದನಿ ಸೇರ್ಸಿ ಹಾಡುತ್ತಿದ್ದಳು. ದಿನಾ ಒಂದೊಂದು ಹಳ್ಳಿಯಿಂದ, ಒಂದೊಂದು ಮನೀಗಿ ಆಕಿಗಿ ಬುಲಾವ್ ಬರುತ್ತಿತ್ತು. ಎಷ್ಟೆಷ್ಟು ಊರಾಗ, ಒಮ್ಮೆಲೇ ಆಕಿಗಿ ಕರೀಲಕ್ಕ ಬಂದ್ರ, ಹಣಮವ್ವನಿಗೆ ಫಜೀತಿ ಆಗುತ್ತಿತ್ತು. ಗಳಿಗ್ಗೆತ್ತು ಇಚಾರಮಾಡಿ ಒಂದು ರಾಜಿ ಮಾತು ನಿರ್ಧಾರ ಮಾಡಿದ್ದಳು. ಒಂದಿನಾ ಆ ಊರು, ಒಂದಿನಾ ಈ ಊರು ಅಂತ ಮುಲಾಜಿಲ್ಲದೆ ಹೇಳಿಬಿಡುತ್ತಿದ್ದಳು. ''ಬೇಕಾದರ ನನ್ ಈ ಮಾತಿಗಿ ಒಪಗೋರೀ ಗೋಡಾ... ಬ್ಯಾಡಂದ್ರ, ನಾ ಏನೂ ಮಾಡೂಹಂಗಿಲ್ಲ ನೋಡ್ರೀ... ಮಜಬೂರ ಇದ್ದೀನಿ... ಒಂದ ರಾತರಿ, ಒಂದೇ ಊರಾಗ, ಒಂದೇ ರಾತರಿ ಹಾಡುವಕ್ಕಿ ನಾನೂ...'' ಅಂತ ಅಂದಾಗ ಬ್ಯಾರೆ ದಾರೀನೇ ಇರಲಾರ್ದ ಆ ಗೌಡ ಒಪ್ಪಿಕೊಂಡು, 'ಇಲ್ಯಾ' ಕೊಟ್ಟು ಹೋಗುತ್ತಿದ್ದ.

ಹಣಮವ್ವ ಹುಟ್ಟು ಚೆಲುವಿ. ತಲಿತುಂಬಾ ಕರ‍್ರಗ ಟೊಪಿಗಿ ಇಟ್ಟಂಗ ಮಿರಿ ಮಿರಿ ಮಿಂಚಾ ಕಪ್ಪು ಕೂದಲು, ಕೆರ್ಕೊಂಡು, ಹೊಸಳಿಸಿ ಕಟಗೊಂಡ್ರ, ಬಗಸಿ ಹುತಾ ತುರುಬ ಅವಳದು. ಹಣಿಮ್ಯಾಲ ರುಪ್ಪೆ ಅಗಲ ಕುಂಕುಮ ಹಚಗೊಂಡು, ಅದರ ತೆಳಗೊಂದೀಟು 'ಕಪ್ಪ' ಇಟ್ಗೊಂಡು, ಕಿವ್ಯಾಗ ಭಂಗಾರದ ಗಂಟಿ, ಕೊಳ್ಳಾಗ ತಾಳಿಸಾಮಾನು, ಸಿಂಗಾರ ಕೆರಮಣಿ, ಗೆಜ್ಜೆ ಟಿಕ್ಕಾಸ ಹಾಯ್ಕೊಂಡು, ಬಲತೋಳಿಗಿ ಬೆಳ್ಳಿ ವಂಕೀ, ಎಡತೋಳಿಗಿ ರಟ್ಟೆ ಖಡ್ಯಾ ಇಟಗೋತ್ತಿದ್ದಳು, ಹಣಮವ್ವ. ಕೈ ತುಂಬಾ ಕಾಜಿನ ಬಳಿಗೋಳು, ಕೆಂಪ ಜರದಂಚಿನ ನೀಲದ ಬಣ್ಣದ ಟೋಪಿನ ಸೆರಗಿನ ಇಲಕಲ ಸೀರಿ ಉಡ್ಗೊಂಡು, ಫೇರಿನ ಕುಬಸಾ ತೊಟ್ಗೊಂಡು ತಯಾರಾಗಿ ಆಕಿ, ಬ್ಯಾರೆ ಊರೀಗಿ ಸೋಬನದ ಹಾಡಾ ಹಾಡ್ಲಿಕ್ಕೆ ಹೊಂಟಳಂದರ, ಗುಡ್ಯಾನ ಲಕ್ಕಸಿಮಿ ದೇವಿನೇ ಹೊಂಡಂಗಾಗುತ್ತಿತ್ತು.

ಗಂಡಾ ಹೆಣ್ತೀಗಿ ಕೂಡ್ಸಿ ಸೋಬಾನ ಮಾಡಾ ರಾತರಿ ಇದ್ದರಂತೂ ಮುಗೀತು. ಆ ಗಂಡಾ ಹೆಂಡರ ಮುಂದ ಕುಂತು ದನಿ ತೆಗೆದು ಹಾಡೋದಕ್ಕ ಸುರುಮಾಡದಳಾದರ, ಹೊತ್ತು ಕೂಡ ಒಂದೀಟು ತಪ್ಪು ನಿಂತು ಆಕಿನ ಹಾಡೋ ಗತ್ತು ನೋಡಿ ಹೋಗುತ್ತಿತ್ತು. ರಾತ್ರಿ ಕಳೆದದ್ದೇ ತಿಳೀತಿರಲಿಲ್ಲ. ತನಗ ಸಿಗಲಾರದ ಸೋಬಾನದ ಸುಖ ಈ ಗಂಡಾಹೆಂಡ್ರಿಗಿ ಸಿಗ್ತದಲ್ಲಾ ಅಂತೋ ಏನೋ ಆ ರಾತರಿ ಭಾಳೋಸು ಹಾಡಾ ಹಾಡ್ಕೋತ, ಭಾಳಹೊತ್ತಿನ ತನಕಾ, ಅವರು ಮಲಗೋ ಮಂಚಕ್ಕ ಹೋಗಲಾರದಂಗ ತಡೀತಿದ್ದಳು. ಹಾಂಗ ತಡೀಬೇಕೆಂತ ಅನ್ನಸ್ತಿತ್ತು ಹಣಮವ್ವಗ! ಯಾರ ಮ್ಯಾಲಿನ ಸಿಟ್ಟು ಯಾರ ಮ್ಯಾಲೋ ಅಂತ ಅನಸದರನೂ ಹಾಡುವ ಹಟ ಮಾತ್ರ ಬಿಡುತ್ತಿರಲಿಲ್ಲ.

''ನಿಂಬಿಯ ಬನದಾಗ ರಂಬಿ ಮೈನರದಾಳ, ಕೊಂಬಿ ಕೊಂಬೀಗೂ ಗಿಣಿ ಕುಂತು ಹಾಡ್ಯಾವ

ರಂಬಿ ಚೆನ್ನಮ್ಮ ಮೈನರದಾಳೋ... ಸೋಬಾನ!!'' ಅಂತ ಹಾಡಲು ಸುರುವಿಟ್ಟು ಕೊಂಡರೆ, ಅದು ಒಂದಕ್ಕೆ ಹತ್ತಾಗಿ, ಹತ್ತಕ್ಕೆ ನೂರಾಗಿ, ನೂರಕ್ಕೆ ಸಾವಿರ ಗೆರೆ ಕೊರೆದುಕೊಂಡು, ಹಾಡಿನ ಹೊಳೆ ಉಕ್ಕಿ ಹರಿಯುತ್ತಿತ್ತು.

ಗಂಧದ ಮಂಚದ ಮ್ಯಾಲ ಗಾದೀಗಿ ದಿಂಬಿಟ್ಟು
ಗಂಡಹೆಂಡರಿಗಿ ಬಳಮಾತು ಸೋಬಾನ...
ಮೆತ್ತಗೋ ನನ್ ರಾಯಾ ಮೀಸಿ ಒತ್ತುತ್ತಾವೋ
ಕೊಳ್ಳಾಗಿನ ಮುತ್ತು ಕಡದಾವೋ ಸೋಬಾನ...

ಹೀಗ ಒಂದೊಂದೇ ನುಡಿಗಳನ್ನೆತ್ತಿಕೊಳ್ಳುತ್ತ, ''ಕೈಬಳಿ ಒಡೀತಾವೋ ಕಾಲಗೆಜ್ಜ ಕಡೀತಾವೋ, ಗಲ್ಲದ ಮ್ಯಾಲ ಹಲ್ಲ ಮೂಡುತಾವೋ... ಸೋಬಾನ'' ಅಂತ ಹಾಡುತ್ತಿರುವಾಗ ಯಾರಾದರೂ ಎಚ್ಚರಿಸುತ್ತಿದ್ದರು. ''ನೀ ಹೀಂಗೇ ಹಾಡಲಕತ್ತರ ಹೊತ್ತೇ ಮೂಡತಾದೇ ಹಣಮವ್ವ... ಈ ಗಂಡಾಹೆಣ್ತೆ ತಮ್ಮ ಸೋಬಾನದ ರಾತರೆಲ್ಲಾ ಹಿಂಗೇ ಕುರ್ಚಿಮ್ಯಾಲ ಕುಂತೇ ಕಳೀಬೇಕಾದೀತು, ಸಾಕುಬಿಡು... ಮಂಗಳಾರ್ತಿ ಹಾಡು ಮಾರಾಯ್ತೀ...'' ಅಂತ ಹೇಳಿದಾಗಲೇ ಅವಳು ಹಾಡು ತಡೆಯುತ್ತಿದ್ದಳು.


''ಯವ್ವಾ ಹಣಮವ್ವತ್ತೀ... ಏನ್ಮಾಡ್ಲಕತ್ತೀದೇ...'' ಅಂತ ಕರೆಯುತ್ತ ತಳವಾರ ಚೆನ್ನ್ಯಾ ಒಳಬಂದನು. ''ಬಾರೋ ನನ್ ಹಾಟಗಳ್ಳಾ... ಬೆಳಗಾಗಟಗೆ ಹೊಂಟಿದ್ದೆಲ್ಲ... ಬಾ....'' ಹಣಮವ್ವ ಕರೆದಳು.

''ಹೊಯಿಂದೇ ಅತ್ತೀ... ಇಂದ ನಸಕ ನ್ಯಾಗೇ ನಮ್ ಸಾವ್ಕಾರನ ಸಣ್ಣ ಮಗಳು ಮೈನರ ದಾಳ... ನಿನಗ ಹಾಡ್ಲಕ್ಕ ಬಾ ಅಂದಾರ ನೋಡು. ಬ್ಯಾರೆ ಯಾ ಊರಿಗಿನೂ ಹೋಗಬಾರ್ದಂತ... ಹೇಳಿ ಬಾ ಅಂದಿದ್ರು ಸಾವ್ಕಾರ... ನಾ ಬರ್ತೀನೇ ಅತ್ತೀ...'' ಅಂತೇಳಿ ಹೊರಟುಹೋದನು. ಅವಳು ಹೂಂ... ಅಂತ ನಿಟ್ಟುಸಿರುಬಿಟ್ಟಳು.

ಒಲೆ ಮುಂದೆ ಕುಂತು ಚಾ ಕಾಸುತ್ತಿದ್ದ ಹಣಮವ್ವನ ತುಟಿಗಳಿಂದ ಸೋಬಾನದ ಹಾಡೊಂದು ಸಣ್ಣಗೆ ಹರಿದು ಬರತೊಡಗಿತು...

ನನ್ನ ಪಾಲಿಗೆ ಕಥೆಯೆಂದರೆ, ನಾನಾ ಬಾಳುವವರ ಕಥನಗಳು.
ಕಾಡುವ, ನಗಿಸುವ, ಕಚಗುಳಿಯಿಡುವ, ಎದೆ ಬಡಿತಗಳನ್ನು
ಏರುಪೇರಾಗಿಸುವ, ಮತಿವಂತರ ಬುದ್ಧಿಗೆ ಬಿಸಿ ಮುಟ್ಟಿಸುವ
ಸತ್ಯಾಸತ್ಯಗಳ, ಕನಸು ಕಲ್ಪನೆಗಳ ರಮಣೀಯ ಮಿಶ್ರಣ.

[illegible]
21/1/2000.



ಅನುಪಮಾ ನಿರಂಜನರ ಜತೆ

ಪ್ರತಿ ಓದುಗನಲ್ಲೊಬ್ಬ ಬರಹಗಾರ
ಪ್ರತಿ ಬರಹಗಾರನಲ್ಲೊಬ್ಬ ಓದುಗ
ಇಬ್ಬರನ್ನೂ ಉದ್ದೀಪಿಸಲೆಂದೆ ನಮ್ಮ ಪುಟಗಳು

ಕಾಗದದ ದೋಣಿ : ಸಂವೇದನೆಯ ಸಲಿಗೆಯಲ್ಲಿ ಬರೆಯುವ ಬಹಿರಂಗ ಪತ್ರ. ಕಣ್ಣಿನಿಂದ ಮರೆ ಯಾದ ಜೀವಗಳ ಜತೆ ಆಪ್ತ ಸಂಪರ್ಕ ಸಾಧಿಸಲು, ನಿಮ್ಮ ಎದೆಭಾರ ಇಳಿಸಿಕೊಳ್ಳಲು ಅವಕಾಶ. (ಪುಟಮಿತಿ ಫುಲ್‌ಸ್ಕೇಪ್ ಎರಡು)

ಸ್ಫೂರ್ತಿದೇವತೆ : ನಿಮ್ಮನ್ನು ಗಾಢವಾಗಿ ಪ್ರಭಾವಿಸಿ, ನಿಮ್ಮ ಬಾಳಿನ ದಿಶೆಯನ್ನು ಬದಲಿಸಿದ ಪಾತ್ರ, ವ್ಯಕ್ತಿ, ಉಕ್ತಿ, ಸನ್ನಿವೇಶಗಳನ್ನು ಹಂಚಿಕೊಳ್ಳಿ. ಆ ಮೂಲಕ ಅಸಂಖ್ಯ ಓದುಗರಿಗೂ ಸ್ಫೂರ್ತಿಯನ್ನು ಕೊಡಬಲ್ಲಿರಿ. (ಪುಟಮಿತಿ ಫುಲ್‌ಸ್ಕೇಪ್ ಎರಡು)

ಮುದ್ದು ತಪ್ಪು : ಅರಿವಿಲ್ಲದೆ ಜರುಗಿದ ತಪ್ಪಿನಿಂದ ಒಳಿತೂ ಘಟಿಸಬಲ್ಲುದು. ನಿಮ್ಮ ಅಮಾಯಕ ತಪ್ಪೊಂದು ಬದುಕಿನ ನಿಗೂಢ ತಿರುವಿಗೆ ಕಾರಣವಾಗಿರಬಹುದು. ಅಂಥ ಕುತೂಹಲಕಾರಿ ತಪ್ಪಿನ ಬಗ್ಗೆ ಬರೆಯಿರಿ. (ಪುಟಮಿತಿ ಫುಲ್‌ಸ್ಕೇಪ್ ಎರಡು)

ಗರಿ : ನೀವು ಓದಿದ ಕತೆ ಕಾದಂಬರಿ, ನೋಡಿದ ನಾಟಕ-ಸಿನೆಮಾಗಳ, ಪುಟ್ಟ, ಕಥಾ ರೂಪದ ಸಾರಾಂಶ. ಮೂಲ ಕೃತಿಯಿಂದ ವಂಚಿತರಾದ ಓದುಗರಿಗೆ ಈ ಮೂಲಕ ಅದರ 'ಪುಟ್ಟ ದರ್ಶನ' ಭಾಗ್ಯ. (ಪುಟಮಿತಿ ಫುಲ್‌ಸ್ಕೇಪ್ ಎರಡು).


ಮಧುವನ : ನವಿರಾದ ಲಲಿತ ಪ್ರಬಂಧ, ಶಬ್ದಚಿತ್ರ, ಸ್ಮೃತಿಚಿತ್ರಗಳು (ಪುಟಮಿತಿ ಫುಲ್‌ಸ್ಕೇಪ್ ಆರು)

ಭಾವಬಿಂದು : ಓದಿದ ಯಾವುದೇ ಒಳ್ಳೆಯ ಕೃತಿಯಿಂದ ಆಯ್ದ ಅಥವಾ ಸ್ವತಂತ್ರ 'ಉಜ್ವಲ' ಚಿಂತನಶೀಲ, ಭಾವೋದ್ದೀಪಕ ಪರಿಚ್ಛೇದಗಳು. ಮೂಲಕೃತಿ, ಲೇಖಕರ ಹೆಸರು ನಮೂದಿಸಬೇಕು. (ಪುಟಮಿತಿ ಫುಲ್‌ಸ್ಕೇಪ್ ಎರಡು)


ಪೂರ್ಣ ಹೆಸರು, ವಿಳಾಸವನ್ನು ತಿಳಿಸುವ ಹಾಳೆಯಲ್ಲಿ ಬರೆದು, ಭಾವಚಿತ್ರದೊಂದಿಗೆ ಕಳಿಸಿ, ಸ್ವೀಕೃತವಾದವನ್ನು ಪ್ರಕಟಿಸಿ, ಸೂಕ್ತ ಗೌರವಧನ ನೀಡಲಾಗುವುದು.

ಕವಿತೆ, ಕತೆ : ದೀರ್ಘವಲ್ಲದ, ಕನಿಷ್ಠ ಐದಾರು ಕವಿತೆಗಳನ್ನು ಕಳಿಸಬೇಕು.
ಕತೆ ಹತ್ತು ಪುಟ ಮೀರದಂತಿರಲಿ. ಟೈಪ್ ಮಾಡಿದ್ದರೆ, ಕತೆಯಲ್ಲಿ ನಿಮಗಿಷ್ಟವಾದ ಒಂದೆರಡು ಸಾಲುಗಳನ್ನು ನಿಮ್ಮ ಕೈಬರಹದಲ್ಲೇ ಬರೆದು, ಸಹಿ ಹಾಕಿ ಲಗತ್ತಿಸಿ.
ಮೆಚ್ಚಿನ ಸ್ವಂತ ಭಾವಚಿತ್ರವೊಂದನ್ನು-ಯಾರೊಂದಿಗಿನದೂ ಆದೀತು-ಕಳಿಸಿ.

ಸ್ವೀಕೃತ ಬರಹಗಳನ್ನು ಕ್ರಮೇಣ ಯಥಾವಕಾಶ ಪ್ರಕಟಿಸಲಾಗುವುದು.



ಮನುಷ್ಯನಿಗೆ ಭೂಮಿ ಎಷ್ಟು ಬೇಕು?



ಗುಡ್ಡದ ಇಳಿಜಾರು ಭೂಮಿ, ಫಲವತ್ತಾದ ಸವಿಸ್ತಾರ ಬಯಲು, ಶ್ರಮಪಟ್ಟು, ಬೆವರು ಹರಿಸಿ ದುಡಿದದ್ದರಿಂದ, ಹಸಿರು ಬೆಳೆ ಬೆಳೆದು ನಿಂತಿದೆ. ಬೆಳಗಿನಿಂದ ಬೇಸಾಯ ಮಾಡಿ ದುಡಿಯುತ್ತಿದ್ದ, ಆ ಜಮೀನಿನ ಒಡೆಯ ರೈತ. ಕೆಲಸ ಮಾಡಿ ಆಯಾಸವಾದ ನಂತರ ಅಲ್ಲೇ ಅವನ ಜಮೀನಿನ ಮೂಲೆಯಲ್ಲಿದ್ದ ಮರದ ಕೆಳಗೆ, ಗುಡ್ಡದ ತುದಿಯಲ್ಲಿ, ತನ್ನ ಹೊಲವನ್ನೆಲ್ಲ ಕಣ್ತುಂಬ ನೋಡುತ್ತ ಕುಳಿತುಕೊಳ್ಳುವುದು ಅವನ ನಿತ್ಯದ ವಾಡಿಕೆ.

ಪಕ್ಕದಲ್ಲೇ ಮತ್ತೊಬ್ಬ ರೈತನ ಚಿಕ್ಕ ಜಮೀನು. ಅಲ್ಪ ಜಮೀನು ಎಂಬ ಅನಾದರವೋ, ಮೈ ಮುರಿದು ದುಡಿಯಲಾರದ ಮೈಗಳ್ಳತನವೋ, ಅಥವಾ ತನ್ನಲ್ಲಿದ್ದ ಅಸೂಯೆಯ ಫಲವೋ, ಯಾವಾಗಲೂ ಚಡಪಡಿಕೆ. ತನ್ನ ಹೊಲದಲ್ಲಿ ಹುಲುಸಾಗಿ ಬೆಳೆ ಬೆಳೆಯದು, ಆದರೆ ಈ ಪಕ್ಕದ ದೊಡ್ಡ ರೈತನ ಹೊಲದಲ್ಲಿ ಎದೆಮಟ್ಟದ ಬೆಳೆ, ಸಾಲದ್ದಕ್ಕೆ ನಿತ್ಯವೂ ಮರದ ಕೆಳಗೆ ಕುಳಿತಿರುತ್ತಿದ್ದ ಆ ಸಂತೃಪ್ತಭಂಗಿ.... ಇವೆಲ್ಲವನ್ನೂ ಕಂಡು ಕರುಬುತ್ತಲೇ ಇದ್ದ.

ತನ್ನೆದೆಯೊಳಗಿನ ಅಸಂತೃಪ್ತಿಯ ಅಗ್ನಿಯ ಬೇಗೆಯನ್ನು ಹತ್ತಿಕ್ಕಿದರೂ ತಾಳಲಾರದೆ, ಒಂದು ದಿನ, ಕುಳಿತಿದ್ದ ದೊಡ್ಡ ರೈತನ ಬಳಿಗೆ ಬರುತ್ತಾನೆ. ಆ ದೊಡ್ಡ ರೈತ ಹಸನ್ಮುಖನಾಗಿ, 'ಕುಳಿತುಕೋ' ಎಂದು ಹೇಳುತ್ತಾನೆ. ಕುಳಿತುಕೊಂಡು ಸ್ವಲ್ಪ ಹೊತ್ತಿನ ನಂತರ ಅವನನ್ನು ಕೇಳುತ್ತಾನೆ. ಇಷ್ಟೊಂದು ಜಮೀನಿದ್ದರೂ, ನೀವು ನಿತ್ಯವೂ ದುಡಿಯುತ್ತಲೇ ಇರುತ್ತೀರ, ಹಸನಾದ ಬೆಳೆಯನ್ನು ಬೆಳೆಯುತ್ತಲೇ ಇರುತ್ತೀರ, ಸಾಲದ್ದಕ್ಕೆ, ಈ ನಿಮ್ಮ ಪ್ರತಿದಿನದ ಸಮಾಧಾನ, ಇರುವಿಕೆಗಳು ನನ್ನ ಇರಸುಮುರಿಸಿಗೆ ಕಾರಣ. ನನಗೂ ಇನ್ನಷ್ಟು ಭೂಮಿ ಇದ್ದಿದ್ದರೆ! ನಿಮ್ಮಂತಹ ತೃಪ್ತ ಬದುಕು ನನ್ನದಾಗುತ್ತಿತ್ತು. ಏನು ಮಾಡುವುದು, ನನಗಿರುವ ಸ್ವಲ್ಪ ಜಮೀನು ಯಾತಕ್ಕೂ ಸಾಲದಾಗಿದೆಯೆಂದು ಅಲವತ್ತುಕೊಳ್ಳುತ್ತಾನೆ.

ದೊಡ್ಡ ರೈತ, ಆಯಿತು, ನಿನಗೆ ಅಪಾರ ಜಮೀನು ತಾನೇ ಬೇಕಾಗಿರುವುದು, ಈ ನನ್ನ ಜಮೀನನ್ನೇ ಕೊಡುತ್ತೇನೆ. ಆದರೆ ನನ್ನ ನಿರ್ಧಾರದಂತೆ ನೀನು ನಡೆಯಬೇಕು ಎಂದು ಹೇಳುತ್ತಾನೆ. ಕೂಡಲೇ ಸಣ್ಣ ರೈತ ಆಗಲಿ, ಚಾಚೂತಪ್ಪದೆ ಪಾಲಿಸುತ್ತೇನೆ. ಅದೇನು ಬೇಗ ಹೇಳಿ ಎಂದು ಪೀಡಿಸುತ್ತಾನೆ.

ದೊಡ್ಡ ರೈತ, ನೋಡು, ಈಗ ನೀನು ಇಲ್ಲಿಂದ ಹೊರಟು, ಎಷ್ಟು ಜಮೀನನ್ನು ಸುತ್ತಿಕೊಂಡು ಬರುತ್ತೀಯೋ ಅಷ್ಟೆಲ್ಲ ಜಮೀನನ್ನು ನಾನು ಪುಕ್ಕಟೆಯಾಗಿ ನಿನಗೆ ಬಿಟ್ಟುಕೊಡುತ್ತೇನೆ. ಓಡಿ, ಜಮೀನನ್ನು



ಸುತ್ತಿಕೊಂಡು ಬರುವುದು ನಿನ್ನ ಶಕ್ತಿಗೆ ಬಿಟ್ಟಿದ್ದು. ಆದರೆ ಬಹುಮುಖ್ಯವಾದ ಒಂದು ನಿಯಮ ತಪ್ಪದೆ ಅನುಸರಿಸಬೇಕು. ಅದೇನೆಂದರೆ ನಿನಗೆ ಸಾಕಾಗುಷ್ಟು ಜಮೀನು ಸುತ್ತಿಕೊಂಡು, ಕೊನೆಗೆ, ನಾನು ಕುಳಿತಿರುವಲ್ಲಿಗೆ, ಈ ದಿನ ಸೂರ್ಯ ಮುಳುಗುವುದರೊಳಗೆ ಬಂದುಸೇರಬೇಕು. ಒಂದೇ ಒಂದು ಕ್ಷಣ ತಡವಾದರೂ ಸಹ ಒಂದಂಗುಲ ಭೂಮಿ ನಿನ್ನದಾಗದು, ಎಚ್ಚರಿಕೆ ಎಂದು ಹೇಳುತ್ತಾನೆ.

ಅಷ್ಟೇ ತಾನೆ, ಇದೋ ಹೊರಟೆ. ಮಾತಿಗೆ ತಪ್ಪಬೇಡಿ ಆಯಿತೇ, ಇದೋ ಹೊರಟೆ. ಈ ದಿನ ಸೂರ್ಯ ಮುಳುಗುವುದರೊಳಗೆ ನಿಮ್ಮ ಬಳಿಗೆ ಬಂದು ಸೇರುತ್ತೇನೆ ಎಂದು ಹೇಳಿದ ಸಣ್ಣ ರೈತ ಓಡಲಾರಂಭಿಸುತ್ತಾನೆ. ಮೊದಲೇ ಗುಡ್ಡದ ಇಳಿಜಾರು, ಓಡಿಯೇ ಓಡಿದ. ಜಮೀನು, ಫಸಲು ಎಲ್ಲವೂ ನನ್ನದಾಗುತ್ತದೆ, ನಾಳೆಯಿಂದ ನನಗಿನ್ನೇನು ಕೊರತೆ? ಆಯಾಸವಾದರೂ ಸರಿ ಈ ದೊಡ್ಡ ರೈತನ ಜಮೀನೆಲ್ಲವನ್ನೂ ಸುತ್ತಿ ಅವನು ನಾಳೆಯಿಂದ ಈ ಕಡೆ ಬರದಂತೆ ಮಾಡಬೇಕು ಎನ್ನುವ ದುರಾಸೆಯಿಂದ ಓಡುತ್ತ ಆಗಲೇ ಗುಡ್ಡದ ಬುಡಕ್ಕೆ ಬಂದುಬಿಟ್ಟಿದ್ದಾನೆ.

ಆಗೊಮ್ಮೆ, ಆ ಜಮೀನ್ದಾರನ ನಿಯಮ ನೆನಪಾಗುತ್ತದೆ. ಓಹೋ ಸೂರ್ಯನು ಆಗಲೇ ಪಡುವಣ ದಿಕ್ಕಿನತ್ತ ಸಾಗುತ್ತಿದ್ದಾನೆ, ಎಂದುಕೊಳ್ಳುತ್ತ ಮತ್ತೆ ಓಡುತ್ತಾ ಗುಡ್ಡ ಹತ್ತಲು ಶುರುಮಾಡಿದ. ಗುಡ್ಡ ಏರುವ ಕೆಲಸ, ಮಧ್ಯಾಹ್ನದ ಊಟವಿಲ್ಲದ ಆಯಾಸ ಇವೆಲ್ಲವೂ ಅವನ ಶಕ್ತಿಯನ್ನು ಕುಗ್ಗಿಸಿದರೂ ಸಹ, ಜಮೀನಿನ ಆಸೆ ಅವನನ್ನು ಯಮಪಾಶದಂತೆ ಸೆಳೆಯುತ್ತದೆ.

ಕೈಕಾಲುಗಳಲ್ಲಿನ ಶಕ್ತಿಯನ್ನೆಲ್ಲ ಒಗ್ಗೂಡಿಸಿ, ಏದುಸಿರು ಬಿಡುತ್ತ ಹತ್ತುತ್ತಿದ್ದಾನೆ. ಇನ್ನೇನು, ಸ್ವಲ್ಪ ದೂರದಲ್ಲಿ ಕುಳಿತಿದ್ದ ದೊಡ್ಡ ರೈತನನ್ನು ಮುಟ್ಟಬೇಕು; ತಲೆಯೆತ್ತಿ ನೋಡಿದ. ಸೂರ್ಯ ಮುಳುಗಲು ಇನ್ನೂ ಕೊಂಚ ಸಮಯವಿದೆ. ಈಗಲೇ ಅವನ ಬಳಿ ಏಕೆ ಹೋಗಬೇಕು? ಈ ಕಡೆ ಮತ್ತಷ್ಟು ಫಲವತ್ತಾದ ತನ್ನ ಸಣ್ಣ ಜಮೀನಿಗೆ ಹೊಂದಿಕೊಂಡ ಭೂಮಿಯಿದೆ. ಅದನ್ನೂ ಸುತ್ತಿಬಿಟ್ಟರೆ ಆಯಿತು. ಇನ್ನು ಈ ಗುಡ್ಡದ ಇಡೀ ಇಳಿಜಾರು ಭೂಮಿಯೆಲ್ಲ ತನ್ನದೇ. ಛಲಾ! ಓಡಿಯೇ ಬಿಡುವ ಎಂದುಕೊಂಡು ಮತ್ತೆ ಓಡಲು ಪ್ರಾರಂಭಿಸಿದ. ಆದರೆ ಓಡಲು ತ್ರಾಣವಿಲ್ಲ, ಬಿಡಲೂ ಆಗುತ್ತಿಲ್ಲ. ಆಯಾಸ, ಬಾಯಾರಿಕೆಗಳಿಂದ ಬಳಲಿ ಹೋಗಿದ್ದಾನೆ. ಕಾಲುಗಳಲ್ಲಿಯೂ ಬಲವೇ ಇಲ್ಲ. ಬೆವರು ಬಸಿಯುತ್ತಿದೆ, ಪಶ್ಚಿಮದ ಕಡೆ ನೋಡುತ್ತಾನೆ; ಮುಳುಗಲು ಧಾವಿಸುತ್ತಿದ್ದಾನೆ ದಿನಕರ. ನೋಡುನೋಡುತ್ತಿದ್ದಂತೆಯೇ ಸೂರ್ಯ ಮುಳುಗಿಯೇ ಬಿಟ್ಟ. ಆ ದೊಡ್ಡ ರೈತನ ಬಳಿ ಬಂದು ಸೇರಲು ಕೆಲವೇ ಮಾರುಗಳಷ್ಟು ಮಾತ್ರ ದೂರವಿದೆ. ಅತ್ತಕಡೆ, ಸೂರ್ಯ ಮುಳುಗಿದ್ದನ್ನು ಕಂಡ ಈ ಸಣ್ಣ ರೈತ, ಅತಿ ಆಸೆಯ ಆಯಾಸದಿಂದ, ದುಃಖದಿಂದ ಕುಸಿದುಬಿದ್ದುಬಿಟ್ಟ.

ಇವನ ಅತಿ ಆಸೆಯನ್ನು ಕಂಡು ಕರುಣಾದ್ರ್ರವಾಗಿ ದೊಡ್ಡ ರೈತ ಹೇಳುತ್ತಾನೆ, ''ಮನುಷ್ಯನಿಗೆ ಭೂಮಿ ಎಷ್ಟು ಬೇಕು?''

ಹೇಳಲಿಕ್ಕೆ ಈ ಲೋಕದಲ್ಲಿಲ್ಲ ಆ ಸಣ್ಣ ರೈತ.

□ ಸಾಲ್ಕಟ್ಟೆ ಈಶ್ವರಯ್ಯ
ತುಮಕೂರು

(ಕನ್ನಡ ಎಂ.ಎ., ತರಗತಿಯಲ್ಲಿ ಪ್ರಾಧ್ಯಾಪಕರೊಬ್ಬರು ಹೇಳಿದ್ದು)



ಮೂವರು ಆಗಂತುಕರು

ಅದೊಂದು ಚಂದದ ಮನೆ. ಸುಂದರ ಸಂಸಾರ. ಅಪ್ಪ, ಅಮ್ಮ, ಮಗಳು.

ಅಪ್ಪ ಹೊರಗೆ ಕೆಲಸಕ್ಕೆ, ಮಗಳು ಕಾಲೇಜಿಗೆ ಹೋದರೆ, ಮನೆಯಲ್ಲಿ ಆಕೆ ಒಬ್ಬಳೇ, ಗೃಹಿಣಿ.

ಒಂದಿನ ಹೀಗೇ ಗಂಡ-ಮಗಳನ್ನು ಕಳಿಸಿ, ಒಳಬಂದಾಕೆಯ ಬೆನ್ನಿಗೇ ಮೂರು ಜನ ಆಗಂತುಕರು ಮನೆ ಜಗುಲಿ ಏರಿ ಮಾತಾಡುತ್ತಿರುವುದು ಕೇಳಿಬಂತು. ಸಹೃದಯಿಯೂ, ಸ್ನೇಹಮಯಿಯೂ ಆದ ಆಕೆ, ಮರಳಿ ಬಾಗಿಲಿಗೆ ನಡೆದು, ಅವರನ್ನು ವಿಚಾರಿಸಿ, 'ಬನ್ನಿ, ಒಳಬಂದು ಆತಿಥ್ಯ ಸ್ವೀಕರಿಸಿ...' ಅಂತ ವಿನಂತಿಸಿಕೊಂಡಳು.

ಒಬ್ಬರ ಮುಖ ಒಬ್ಬರು ನೋಡಿಕೊಂಡ ಆ ಮೂವರು, ವಿಚಿತ್ರವಾಗಿ ಉತ್ತರಿಸಿದರು.

''ತಡೆಯಮ್ಮಾ, ನಮ್ಮನ್ನು ಹೀಗೆ ಆಹ್ವಾನಿಸುತ್ತಿದ್ದೀ, ಅದಕ್ಕಾಗಿ ಕೃತಜ್ಞತೆಗಳು, ತುಂಬಾ ಸಂತೋಷವೂ ಆಗ್ತಿದೆ. ಆದ್ರೆ ನಮ್ಮದೊಂದು ಶರತ್ತು, ನೀನೊಬ್ಬಾಕೆಯೇ ಮನೆಯಲ್ಲಿರುವಾಗ ಒಳಬಂದು ಆತಿಥ್ಯ ಸ್ವೀಕರಿಸಲು ನಾವು ತಯಾರಿಲ್ಲ. ನಿನ್ನ ಗಂಡ, ಮಕ್ಳು ಎಲ್ಲಾ ಬರಲಿ; ನಮ್ಮನ್ನು ಒಳಗೆ ಕರೆಯಬಹುದೇ ಎಂದು ಅವರೊಂದಿಗೆ ಸಮಾಲೋಚಿಸು; ನಂತರ ಕರೆ!''



ಗೃಹಿಣಿಗೆ ಏನೋ ಅನುಮಾನ, ಸೋಜಿಗ, ಗಾಬರಿ ಒಟ್ಟೊಟ್ಟಿಗೇ ಉಂಟಾದವು. ಇರಲಿ; ಗಂಡ, ಮಗಳು ಬಂದ ಮೇಲೆಯೇ ಅತಿಥಿ ಸತ್ಕಾರಕ್ಕೆ ಅಣಿಮಾಡಿಕೊಳ್ಳುವಾ ಅಂತ ತನ್ನ ದಿನಚರಿಯಲ್ಲಿ ಮಗ್ನಳಾಗಿಬಿಟ್ಟಳು.

ಸಂಜೆ ಆರರ ಹೊತ್ತಿಗೆ ಗಂಡ ಆಫೀಸಿಂದ ಮರಳಿದ. ಹತ್ತು ನಿಮಿಷದ ತರುವಾಯ ಮಗಳೂ ಬಂದಳು. ಗೃಹಿಣಿ, ಅವರ ತಿಂಡಿ-ತೀರ್ಥ

ವಿಚಾರಿಸಿಕೊಂಡು, ಅವರಿಗೆ ಬೆಳಿಗ್ಗೆ ಜರುಗಿದ ವಿಲಕ್ಷಣ ಘಟನೆಯ ಕುರಿತು ಹೇಳಿದಳು. ಗಂಡ, "ಛೆ, ಅದಕ್ಕೇನು, ಕರಿ ಕರೀ, ಮೊದಲು ಅವರನ್ನು ಒಳಕ್ಕರೀ" ಅಂತ ಪೇಚಾಡಿಕೊಂಡ. ಮಗಳೂ ಸ್ನೇಹಮಯ ದೃಷ್ಟಿ ಬೀರಿ ಅಪ್ಪನನ್ನು ಅನುಮೋದಿಸಿದಳು.

"ಮಹನೀಯರೆ, ನನ್ನ ಪತಿ, ಮಗಳು ಮನೆಗೆ ಬಂದಿದ್ದಾರೆ, ಅವರ ಸಮ್ಮತಿ ಪಡೆದುಬಂದು ನಿಮ್ಮನ್ನು ಒಳಗೆ ಬನ್ನಿರೆಂದು ಕರೆಯುತ್ತಿದ್ದೇನೆ. ದಯಮಾಡಿಸಿ, ಈಗಲಾದರೂ ನಮ್ಮ ಆತಿಥ್ಯ ಸ್ವೀಕರಿಸಿ" ಎಂದು ಬಿನ್ನವಿಸಿಗೊಂಡಳು ಆಕೆ.

ಆಗ, ಆ ಮೂವರೂ, ತಮ್ಮ ಪರಿಚಯವನ್ನು ಹೀಗೆ ಹೇಳಿಕೊಂಡರು: "ನೋಡು ತಾಯಿ, ನಮ್ಮಲ್ಲಿ ನನ್ನ ಹೆಸರು ಸಂಪತ್ತು, ಆತನ ಹೆಸರು ಯಶಸ್ಸು, ಮೂರನೆಯಾತ ಪ್ರೀತಿ. ಈಗ ನೀನು, ಮೂರೂ ಜನರಲ್ಲಿ ಒಬ್ಬನನ್ನು ಮಾತ್ರ ಒಳಗೆ ಕರೆದು ಸತ್ಕರಿಸಬಲ್ಲೆ. ಏಕೆಂದರೆ ನಾವು ಮೂವರೂ ಒಟ್ಟಿಗೇ ಒಳಬರಲಾರೆವು ಬೇಸರಿಸಿಕೊಳ್ಳದೆ, ಇನ್ನೊಮ್ಮೆ ಒಳಹೋಗಿ, ನಿನ್ನ ಪತಿ ಮತ್ತು ಮಗಳೊಂದಿಗೆ ಮಾತನಾಡಿ ಬಾ. ಅವರೂ ತಮ್ಮ ಆಯ್ಕೆಯನ್ನು ಹೇಳಲಿ."

ಗೃಹಿಣಿ ಲಗುಬಗೆಯಿಂದ ಒಳಗೆ ಹೋಗಿ ವಿಷಯ ತಿಳಿಸಿದಳು. "ಸಂಪತ್ತು ಯಾರಿಗುಂಟು ಯಾರಿಗಿಲ್ಲ, ಆತನನ್ನೇ ಕರೆಯೋಣವೇನ್ರೀ" ಎಂದು ತನ್ನ ಮನದಿಂಗಿತ ಹೇಳಿಯೂಬಿಟ್ಟಳು. "ಛೆ, ಸಂಪತ್ತಿನಿಂದೇನು, ಜೀವನದಲ್ಲಿ ಯಶಸ್ಸು ಮುಖ್ಯ", ಜೀವನವನ್ನು ತನ್ನಿಷ್ಟದಂತೆ ರೂಪಿಸಿಕೊಂಡಿದ್ದ, ಶಿಸ್ತಿನ ಸಿಪಾಯಿಯಾದ ಮನೆಯ ಯಜಮಾನ ಹೇಳಿದ, ದೂರ ದೂರದಲ್ಲಿ ಕಣ್ಣೋಟ ಕೀಲಿಸಿ. "ಹೋಗು, ಯಶಸ್ಸನ್ನು ಕರೀ". ಅಪ್ಪನ ಆಜ್ಞೆಯನ್ನು ಮೃದುವಾದ ಆಕ್ಷೇಪಣೆಯಿಂದ ತಿರಸ್ಕರಿಸಿ, ಹಿಂದಿನಿಂದ ಆತನ ಕತ್ತನ್ನು ತನ್ನ ಎಳೆ ತೋಳುಗಳಿಂದ ಬಳಸಿ, ಮಗಳು ದುಂಬಾಲು ಬಿದ್ದಳು, "ಅಪ್ಪಾ, ಅಮ್ಮಾ, ನಾವು 'ಪ್ರೀತಿ'ಯನ್ನು ಒಳಗೆ ಕರೆದು ಸತ್ಕರಿಸೋಣ, ಆಗದೇ?"

ಇನ್ನಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. 'ಛೆ ನಮಗ್ಯಾಕೆ ಇದು ಹೊಳೆಯಲಿಲ್ಲ' ಎಂದು ಥಳಕು ಹೊಡೆಸಿಕೊಂಡವರಂತೆ ಗಂಡಹೆಂಡಿರಿಬ್ಬರೂ ಮುಂಬಾಗಿಲಿಗೆ ಧಾವಿಸಿ, ಆಗಂತುಕ ಅತಿಥಿಗಳಲ್ಲಿ 'ಪ್ರೀತಿ ಮಹಾಶಯ' ಒಳಗೆ ಬರಲಿ ಎಂದು ವಿನಂತಿಸಿಕೊಂಡರು.

ಏನಾಶ್ಚರ್ಯ, ಮೂವರೂ, ಬಾಗಿಲು ಹಿಡಿಸದ ಹಾಗೆ ಒಳಗೆ ನುಗ್ಗುತ್ತಿದ್ದಾರೆ!

ಮೂಕವಿಸ್ಮಿತರಾಗಿ ನಿಂತ ದಂಪತಿಗಳನ್ನು ನೋಡಿ ಸಂಪತ್ತು, ಯಶಸ್ಸು ಮೆಲ್ಲಗೆ ಬಾಯಿಬಿಟ್ಟರು, "ದಯವಿಟ್ಟು ಒಮ್ಮೆ ನಮ್ಮ ಕಡೆ ಸರಿಯಾಗಿ ನೋಡಿ; ನಾವಿಬ್ಬರೂ ಅಂಧರು ಎನ್ನುವುದು ಗೊತ್ತಾಗುತ್ತಿದೆ ತಾನೇ? ಆದರೆ ಪ್ರೀತಿ, ನಮ್ಮ ಸ್ನೇಹಿತ, ನಿಚ್ಚಳ ದೃಷ್ಟಿಯುಳ್ಳವನು. ಆತನೊಂದಿಗಿದ್ದರೆ, ನಮಗೆ ಯಾತರ ಭಯವೂ ಇಲ್ಲ. ನಮ್ಮನ್ನಾತ ಮುನ್ನಡೆಸುತ್ತಾನೆ. ಒಂದು ವೇಳೆ ನೀವು, ನಮ್ಮಿಬ್ಬರಲ್ಲಿ ಒಬ್ಬನನ್ನು ಕರೆದಿದ್ದರೂ ನಮಗೆ ಕಷ್ಟವಾಗುತ್ತಿತ್ತು. ಕುರುಡುಗಣ್ಣಟ್ಟುಕೊಂಡು ಎಲ್ಲಿ ಕಳೆದುಹೋಗುತ್ತಿದ್ದೆವೋ. 'ಪ್ರೀತಿ'ಯನ್ನು ಆರಿಸಿಕೊಂಡು ನೀವು ಎಂಥಾ ಒಳ್ಳೆಯ ಕೆಲಸ ಮಾಡಿದಿರಿ!..."

□ (ಇಂಟರ್‌ನೆಟ್)

ಮುಂಬಯಿ

ಜೆ.ಎಸ್. ಅರುಣ ಕುಮಾರಿ



ಡೇನಿಯಲ್ ಕಿಪ್ಲಿಂಗರ್

ಒಂದು ದಿನ, ಆಫೀಸಿನಿಂದ ಮರಳಿದ ಮೇಲೆ, ಎಂದಿನಂತೆ ಕಾಫಿ ಕುಡಿಯುತ್ತ, ಟಿ.ವಿ.ಯ ವಿವಿಧ ಛಾನಲ್‌ಗಳಲ್ಲಿ ಬರುವ ಕಾರ್ಯಕ್ರಮಗಳನ್ನು ನೋಡುತ್ತಿದ್ದೆ. ''ನ್ಯಾಶನಲ್ ಜಿಯಾಗ್ರಫಿಕ್'' ಛಾನಲ್‌ನಲ್ಲಿ, ಒಬ್ಬನು, ತಲೆಗೆ ಬ್ರಶ್ ಕಟ್ಟಿಕೊಂಡು ಚಿತ್ರ ರಚನೆ ಮಾಡುತ್ತಿದ್ದ. ಕುತೂಹಲದಿಂದ ಆ ಕಾರ್ಯಕ್ರಮವನ್ನು ನೋಡಲಾರಂಭಿಸಿದೆ. ನಿಧಾನವಾಗಿ ನನಗೆ ತಿಳಿಯಿತು-ಆತ ದೈಹಿಕವಾಗಿ ಮತ್ತು ಮಾನಸಿಕವಾಗಿ ಅಂಗವಿಕಲ ಎಂದು. ಅವನಿಗೆ ಕೈ ಕಾಲು ಸ್ವಾಧೀನವಿಲ್ಲ. ತಲೆಯನ್ನು ಸ್ಥಿರವಾಗಿರಿಸಿ ಮಾತನಾಡಲೂ ಆಗದು. ಗಾಲಿಕುರ್ಚಿಯ ಆಧಾರದಿಂದ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸುತ್ತಾನೆ. ಅವನು ಮೆಟ್ಟಲಿಳಿಯುವಾಗ, ತಿಂಡಿ ತಿನ್ನುವಾಗ, ಫೋನ್‌ನಲ್ಲಿ ಮಾತನಾಡುವಾಗ ಮಾಡುವ ದೈಹಿಕ ಚಲನೆಗಳನ್ನು ನೋಡಿದರೆ, ಎಂತಹ ಕಲ್ಲು ಮನಸ್ಸಿನವನಿಗೂ ಕರುಣೆ ಉಕ್ಕಿ ಬರಬಹುದು.

ಕಲಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿಯ ಮೊದಲ ದಿನದ ತರಗತಿಯಲ್ಲಿ ಅವನಿಗೆ ಶಿಕ್ಷಕರು, ''ನೀನು ಮಾಸ್ಟರ್ಸ್ ಡಿಗ್ರಿ ಪಡೆಯುವುದು ಅಸಾಧ್ಯ'' ಎಂದು ಮುಖದ ಮೇಲೆ ಹೊಡೆದಂತೆ ಹೇಳಿದರಂತೆ. ಅವನ ಹೆಸರು ಡೇನಿಯಲ್ ಕಿಪ್ಲಿಂಗರ್ (ಡ್ಯಾನ್).

ಡ್ಯಾನ್, ಸಹಾನುಭೂತಿಯುಳ್ಳ ಒಬ್ಬ ಪ್ರಾಧ್ಯಾಪಕನ ನೆರವಿನಿಂದ ಹೇಗೆ ತನ್ನ ಪಠ್ಯಕ್ರಮವನ್ನು ಅತೀವ ಶ್ರಮದಿಂದ ಪೂರೈಸುತ್ತಾನೆ, ಅಮೆರಿಕದಲ್ಲಿ ಅವನಿಗೆ ಹೇಗೆ ಸಹಕಾರ ಸಿಕ್ಕಿತು ಎಂದು ಆ ಕಾರ್ಯಕ್ರಮದಲ್ಲಿ ತೋರಿಸಲಾಯಿತು. ಪದವಿ ಪ್ರದಾನವಾದಾಗ ಡ್ಯಾನ್‌ನ, ಅವನ ಮಿತ್ರರ ಅತ್ಯಾನಂದ ವರ್ಣಿಸಲಾಗದಂತಹದ್ದು.

ಕೈ, ಕಾಲು, ನಾಲಿಗೆ ಹತೋಟಿಯಲ್ಲಿಲ್ಲದ ವ್ಯಕ್ತಿ ಯಾವುದೇ ರಿಯಾಯತಿ ಪಡೆಯದೆ ಪಠ್ಯಕ್ರಮ ಪೂರೈಸಿ ಪದವಿ ಪಡೆದರೆ, ಆರೋಗ್ಯವಂತರಾದ ನಾವು ಮಾಡಬಹುದಾದ ಸಾಧನೆ ಎಷ್ಟಿರಬೇಡ ಎಂದು ನನಗನ್ನಿಸಿತು. ನನ್ನ ಬದುಕಿನಲ್ಲಿ ಸಾಧ್ಯವಾದಷ್ಟು ಧನಾತ್ಮಕ (positive) ಕಾರ್ಯಗಳನ್ನು ಮಾಡಬೇಕೆಂದು ಅನ್ನಿಸಿತು.

ಅಂಗವಿಕಲರೂ ಸಹ ಶ್ರೇಷ್ಠ ಸಾಧನೆ ಮಾಡಬಲ್ಲರು. ಅತೀವ ಪ್ರತಿಭೆ, ಛಲವುಳ್ಳ ಡೇನಿಯಲ್ ಕಿಪ್ಲಿಂಗರ್ ನನ್ನ ಸ್ಫೂರ್ತಿದೇವತೆಗಳಲ್ಲಿ ಒಬ್ಬ. ಅವನ ಹೇಳಿಕೆ ಹೇಗಿದೆ ನೋಡಿ-''ಪ್ರತಿ ವ್ಯಕ್ತಿಗೂ ಒಂದು ದೌರ್ಬಲ್ಯ (Drawback) ಇರುತ್ತದೆ. ಆದರೆ ಬಹಳ ಕಡಿಮೆ ಮಂದಿ ಅದನ್ನು ಗೆಲ್ಲುತ್ತಾರೆ.''

ಶಿವನಿ

ಕೆ. ಸುನಿಲ್ ಪ್ರಭು



ಮಹಾಬಳೇಶ್ವರ ಸೈಲ್

ನೀನು ಮರಳಿ ಹೇಗೆ ಬಂದೆ?

ಕನ್ನಡಕ್ಕೆ : **ಆನಂದ ವರ್ಟಿ**

ಜಗಲಿಯ ಮೇಲೆ ಗೌರಿ ಪತ್ರಾವಳಿ ಚುಚ್ಚುತ್ತ ಕೂತಿದ್ದಳು. ಕೊಟ್ಟಿಗೆಯ ಮಳಿಗೆಯಲ್ಲಿ ಹುಲ್ಲು ತುಂಬಲು ಹೋದ ಮಗ ಜಯವಂತ ಇನ್ನೂ ಬಂದಿಲ್ಲವೆಂದು, ತವಕದಿಂದ, ಆಗೀಗ ಹೊರಗೆ ದೃಷ್ಟಿ ಹಾಯಿಸುತ್ತಿದ್ದಳು. ಮನಸ್ಸಿನಲ್ಲೇ ಆಕೆ ಚಟಪಟಿಸಿದಳು, 'ತಂದೆ ತೀರಿಕೊಂಡ ಮತ್ತು ಹೊಲತೋಟದ ಎಲ್ಲ ಉಸ್ತುವಾರು ಈ ಅರೆ ವಯಸ್ಸಿನ ಮಗುವಿನ ಮೇಲೆ ಬಿತ್ತು. ಕೈಕಾಲಿನಿಂದ ಕೊಬ್ಬಿದ್ದಾನೆ ಅಷ್ಟೆ, ವಯಸ್ಸೇನು? ಮೊನ್ನೆಯೇ ಬಂಡಿ ಹಬ್ಬಕ್ಕೆ ಹದಿನೆಂಟು ತುಂಬಿವೆ.'

ಕಾರವಾರದ ಸಂತೆಬಜಾರಿಗೆ ಹೋದ ಉತ್ತಮಬಾಬ ಹಿಂತಿರುಗಿ ಬಂದ. ತಲೆಯ ಮೇಲಿನ ಸಾಮಾನದ ಗಂಟನ್ನು ಹೊಸ್ತಿಲಿನಲ್ಲಿಯೇ ಇಟ್ಟು, 'ಹುಶ್ಶ' ಅನ್ನುತ್ತ ನಿಟ್ಟುಸಿರುಬಿಟ್ಟು, ತಲೆಯ ರುಮಾಲನ್ನು ಬಿಡಿಸಿ ಮುಖವನ್ನು ಒರೆಸಿದ.

ಮನೆಯ ಮುಂದಿನ ಸಂಪಿಗೆ ಗಿಡದ ಕೆಳಗೆ, ಕೇರಿಯ ನಿರುದ್ಯೋಗಿ ಹುಂಬರಾದ ರಾಮೂ ಮತ್ತು ಮಧೂ ಹರಟೆಕೊಚ್ಚುತ್ತ ಕುಳಿತಿದ್ದರು. ಅವರು ಕೇಳಲಿ ಎಂದೇ ಉತ್ತಮಬಾಬ ಗಟ್ಟಿಯಾಗಿ ಅಂದ, ''ಮಾಮಲೇದಾರ್ ಕಛೇರಿಯ ಮುಂದೆ ನೋಟಿಸು ಹಚ್ಚಿದ್ದಾರೆ. ಬರುವ ಇಪ್ಪತ್ತೊಂದು ತಾರೀಖಿಗೆ ಕಾರವಾರದಲ್ಲಿ ಭರತಿಯಾಗುವದಿದೆಯಂತೆ.''

ಮಧೂ ಮತ್ತು ರಾಮೂ, ಹಲ್ಲಿನ ಮಧ್ಯದಲ್ಲಿಟ್ಟ ಬೀಡಿ ಚೂರುಗಳನ್ನು ಲಗುಬಗೆಯಿಂದ ಉಗುಳಿಬಿಟ್ಟರು. ಉತ್ತಮಬಾಬನ ಬಳಿ ಬಂದು ವಿವರಗಳನ್ನು ಕೇಳಹತ್ತಿದರು.

ತನ್ನ ಜಗಲಿಯ ಮೇಲೆ ಪತ್ರಾವಳಿಯ ಎಲೆಗಳನ್ನು ಹಚ್ಚುತ್ತ ಕುಳಿತಿದ್ದ ಗೌರಿ, ಕಿವಿಗೊಟ್ಟು ಕೇಳುತ್ತಿದ್ದಳು. ಮನಸ್ಸಿನಲ್ಲಿಯೇ ಅಂದಳು, 'ಯಾಕೆ ಇವಾ ಇಂತಹ ಸುಡುಗಾಡು ವಾರ್ತೆಗಳನ್ನು ತಕ್ಕೊಂಡು ಬರುತ್ತಾನೆ? ಜಯವಂತ, ಮೊದಲೇ, ಮಿಲಿಟ್ರಿಗೆ ಹೋಗುವ ಹುಚ್ಚನ್ನು ತಲೆಯಲ್ಲಿ ತುಂಬಿಕೊಂಡು ಕೂತಿದ್ದಾನೆ.'

ಗೌರಿಗೆ ಈ ಮಿಲಿಟ್ರಿಯೆಂದರೇ ಗಾಬರಿ. ಮದುವೆಯಾಯಿತು ಮತ್ತು ಅಷ್ಟರಲ್ಲೇ ಗಂಡ ಮಿಲಿಟ್ರಿಗೆ ಹೋದ. ಎರಡನೆಯ ಮಹಾ ಯುದ್ಧದ ವೇಳೆಗೆ ಅವನು ಸರಿಯಾಗಿ ಆರು ವರ್ಷ ನಾಪತ್ತೆಯಾಗಿ ಇದ್ದ. ಈ ಆರು ವರ್ಷಗಳಲ್ಲಿ ಒಂದು ಬೊಟ್ಟಿನಷ್ಟು ಚೀಟಿ ಕೂಡ ಬರಲಿಲ್ಲ. ಅವಳ ಗಂಡ ಯುದ್ಧದಲ್ಲಿ ತೀರಿಕೊಂಡ ಎಂಬ ವದಂತಿ ಇತ್ತು. ಅವಳ ಬೆನ್ನಹಿಂದೆ ಜನರು ಪಿಸುಗುಟ್ಟುತ್ತಿದ್ದರು. ಆಕೆಗೆ ಎಲ್ಲವೂ ತಿಳಿಯುತ್ತಿತ್ತು. ಆದರೆ ಆಕೆ ಎಲ್ಲವನ್ನೂ ಗಟ್ಟಿ ಮನಸ್ಸಿನಿಂದ ಸಹಿಸಿದಳು. ಆಕೆಯ ಮನಸ್ಸಿನಲ್ಲಿ ಬಲವಾದ ಶ್ರದ್ಧೆಯಿತ್ತು, ಒಂದಾನೊಂದು ದಿನ ಅವನು ಹಿಂತಿರುಗಿ ಬರುವವನೇ ಎಂದು.

ಗಂಟಲಿನಲ್ಲಿಯ ಬಿಕ್ಕನ್ನು ನುಂಗುತ್ತ, ಒಂದು ದಿನ ಮಾವನವರೆಂದಿದ್ದರು, 'ಎಷ್ಟಂತ ಹಾದಿ ನೋಡುವದು? ಗೋಕರ್ಣಕ್ಕೆ ಹೋಗಿ ಸಿಂಗಾರವನ್ನು ಇಳಿಸಿಬಿಡೋಣ'. ಆದರೆ ಗೌರಿ ಅದಕ್ಕೆ ನಿಶ್ಚಯದಿಂದ ಪ್ರತಿಭಟಿಸಿದಳು. ಸರಕಾರ ದಿಂದ ಪ್ರತಿ ತಿಂಗಳು ತಪ್ಪದೆ ಸ್ವಲ್ಪ ಹಣ ಬರುತ್ತಿತ್ತು. ಆಕೆ ಹೆಬ್ಬೊಟ್ಟನ್ನು ಒತ್ತಿ, ಸೆರಿಗೆಯನ್ನು ಮುಂದೆ ಒಡ್ಡುತ್ತಿದ್ದಳು. ಪೋಸ್ಟಮನ್ ಸೆರಿಗೆಯಲ್ಲಿ ಹಣ ಇಟ್ಟು ಹೋಗುತ್ತಿದ್ದನು. ಮತ್ತು ಒಂದು ದಿನ ನಿಜವಾಗಿಯೂ ಅವನು ಬಂದಿದ್ದ!

ಇಪ್ಪತ್ತೊಂದನೇ ತಾರೀಖು ಸಮೀಪ ಬಂದ ಹಾಗೆ, ಗೌರಿಯ ಮನಸ್ಸಿನಲ್ಲಿ ಭಯ ಆವರಿಸ ತೊಡಗಿತು. 'ನನ್ನೊಂದಿಷ್ಟೂ ಕೇಳದೆ ಇವನು ಹೋಗಿಯೇ ಬಿಟ್ಟರೆ... ಹಾಗೆ ನೋಡಿದರೆ, ಅವನಲ್ಲಿ ಏನೂ ಊನಿಲ್ಲ. ಹೋಗಿ ಲೈನ್‌ದಲ್ಲಿ ನಿಂತರೆ ಅವನನ್ನು ಎಳೆದುಕೊಂಡು ಹೋದಾರು.'

ಆದರೆ ಅವನು ತಣ್ಣಗಿದ್ದಾನೆ. ಊರಿನಲ್ಲಿಯ ಇತರ ಹರೆಯದ ಮಕ್ಕಳು, ಉಜ್ಜಿ-ತಿಕ್ಕಿ ತಯಾರಿ ನಡೆಸಿದ್ದಾರೆ. ನಾಳೆಯ ಮಂಟಪದಲ್ಲಿ ತಾನೇ ಮದುಮಗ ಎನ್ನುವಂತೆ ಪ್ರತಿಯೊಬ್ಬನೂ ಭಾವಿಸಿದಂತಿದೆ.

ಜಯವಂತನಿಗೆ ಗೊತ್ತಿದೆ, ಪರಾಕಾಷ್ಠೆಯ ಯತ್ನ ಮಾಡಿದರೂ ಅಮ್ಮ ತನಗೆ ಹೋಗಲು ಬಿಡಲಾರಳು. ಆದರೆ ತನಗೆ ಹೋಗುವದಿದೆ. ತಾನು ಬರೀ ಎಂಟನೇ ಇಯತ್ತೆ ಪಾಸಾದ ಹುಡುಗ. ಅಷ್ಟಕ್ಕೆ ಯಾರು ನೌಕರಿ ಕೊಡುತ್ತಾರೆ? ಅದರಲ್ಲೂ ಮಿಲಿಟ್ರಿ ಬಹಳ ಒಳ್ಳೆಯದು.



ವರ್ಷದಲ್ಲೊಮ್ಮೆ ರಜೆಯ ಮೇಲೆ ಬರುವ ಮಾರುತಿ ಪವಾರ್, ಅವನ ಕಣ್ಮುಂದೆ ನಿಲ್ಲುತ್ತಾನೆ. ಠೀವಿಯಿಂದ ಪ್ಯಾಂಟ್ ತೊಟ್ಟು, ರಸ್ತೆಯ ಮೇಲಿಂದ ಕಟ್‌ಖಟ್ ಬೂಟು ಅಪ್ಪಳಿಸುತ್ತ ನಡೆಯುತ್ತಾನೆ. ಕೈಯಲ್ಲಿ ತುಬಾಕಿ ಹಿಡಿದು, ಶಿಕಾರಿಗಾಗಿ ಕಾಡು-ಗುಡ್ಡಗಳಲ್ಲಿ ಅಲೆಯುತ್ತಾನೆ. ಅಪ್ಪನಾದರೂ ಕಡಿಮೆಯೇ? ಯುದ್ಧದ ಕತೆಗಳನ್ನು ಅವನು ಹೇಳುವಾಗ, ಜಗಲಿ ಎಲ್ಲ ಜನರಿಂದ ಕಿಕ್ಕಿರಿದು ತುಂಬುತ್ತಿತ್ತು.

ಇಪ್ಪತ್ತೊಂದನೇ ತಾರೀಖು ಅವನು ಬೇಗನೇ ಏಳುತ್ತಾನೆ. ಆದರೆ ಎಳ್ಳಷ್ಟೂ ಅವಸರ ಇಲ್ಲದವನ ಹಾಗೆ ಮುಖ ತೊಳೆಯುತ್ತಾನೆ, ಚಹ ಕುಡಿಯುತ್ತಾನೆ. ಮತ್ತೆ, ಮೊದಲೇ ತಯಾರು ಮಾಡಿಟ್ಟ ಕಂಬಳಿಯ ಮಡಿಲನ್ನು ಹೆಗಲಮೇಲೆ ತೂರಿ, ಹೊರಬೀಳುತ್ತಾನೆ. ''ಅಮ್ಮಾ ಬರ್ತೇನೆ. ಕೊಟ್ಟಿಗೆಯಿಂದ ಎತ್ತುಗಳನ್ನು ತಕ್ಕೊಂಡು ಪಾಂಡವ ದಿನ್ನೆಯ ಮೇಲಿಂದ ಮೇಯಿಸಿಕೊಂಡು ತರ್ತೇನೆ.''

ಗೌರಿ ಮಮತೆಯಿಂದ, ಕೌತುಕದಿಂದ ಅವನೆಡೆ ನೋಡುತ್ತಾಳೆ. 'ಇವನು ಹೋಗುವ ಹಟ ಹಿಡಿದಿಲ್ಲ, ಹಾಗಾದರೆ.' ಆಕೆ ಅನ್ನುತ್ತಾಳೆ,


''ಬೇಗನೇ ಬಂದುಬಿಡಪ್ಪಾ. ಸುಮ್ಮನೇ ಗುಡ್ಡದಲ್ಲಿ ಅಲೆದಾಡುತ್ತಿರಬೇಡ.''

''ಆದರೆ ಸ್ವಲ್ಪ ತಡವೇ ಆಗುವದಮ್ಮಾ.''

ಅವನು ಹೊರಡುತ್ತಾನೆ. ಅಮ್ಮನ ನೋಟದಾಚೆಗೆ ತಲುಪುವ ತನಕ, ಅವನ ಹೆಜ್ಜೆಗಳು ಮಂದವಾಗಿರುತ್ತವೆ. ಆಮೇಲೆ ಮಾತ್ರ, ಕಾಲಿನ ಬುಡದಲ್ಲಿ ಚಕ್ರಗಳು ಚುರುಕಾಗುತ್ತವೆ.

ಮಧ್ಯಾಹ್ನದ ಕಾಲ ಇಳಿಯುತ್ತ ಹೋದರೂ ಜಯವಂತ ಹಿಂತಿರುಗಿ ಬರಲಿಲ್ಲ ಹೇಗೆ, ಎಂದು ಗೌರಿ ಕಾಳಜಿಯಿಂದ, ಗುಡ್ಡದ ಕಡೆಗೆ ಮೋರೆ ಮಾಡಿ, ಮಗನ ಹಾದಿ ಕಾಯುತ್ತಾಳೆ. ಹಾದಿ ನೋಡಿ, ನೋಡಿ ಅವಳ ಕಣ್ಣುಗಳು ದಣಿಯುತ್ತವೆ. ಮನಸ್ಸಿನ ಸ್ಥಿರತೆ ಕಳೆದುಕೊಂಡು ಆಕೆ, ಅಲ್ಲಿ-ಇಲ್ಲಿ ಓಡಾಡುತ್ತ ಇರುತ್ತಾಳೆ. ಆದರೆ ಮುಚ್ಚಂಜೆಯ ಹೊತ್ತಾದರೂ ಅವನು ಬರುವುದಿಲ್ಲ. ಈಗ ಅವಳ ಜೀವ ಒಟ್ಟಿಗೆ ಉರುಲಿಗೆ ಕಟ್ಟಿದಂತೆ. ಪಕ್ಕದ ಮನೆಯ ಬಾಬಲಿಗೆ, ಉತ್ತಮಬಾಬನಿಗೆ ಕರೆದು ಆಕೆ ಅನ್ನುತ್ತಾಳೆ, ''ದಯಮಾಡಿ ಹೋಗಿ ನೋಡಿರೋ, ಹುಡುಗ ಎಲ್ಲಿ ಹೋದ, ಸ್ವಲ್ಪ ಸುದ್ದಿಯಾದರೂ ತೆಗೆದುಕೊಂಡು ಬನ್ನಿರೋ''

ಇಷ್ಟರಲ್ಲಿ, ಮನೆಯ ಆಚೆಯ ರಸ್ತೆಯ ಮೇಲೆ ಬಸ್ ಬಂದು ನಿಂತ ಸದ್ದಾಯಿತು. ಬೆಳಿಗ್ಗೆ ಭರತಿಗೆಂದು ಹೋದ ಕೇರಿಯಲ್ಲಿಯ ಎಲ್ಲ ಹರೆಯದ ಹುಡುಗರು ಮರಳಿ ಬಂದಿದ್ದರು. ಅವರಲ್ಲಿ ಕೃಷ್ಣಾನಂದನೂ ಇದ್ದ. ಅವನು ಬಸ್ಸಿನಿಂದ ಇಳಿದವನೇ, ಓಡುತ್ತ ಗೌರಿಯ ಅಂಗಳಕ್ಕೆ ಬಂದ.



''ಗೌರಿ ದೊಡ್ಡಮ್ಮಾ, ಜಯವಂತ ಭರತಿಯಾದ, ಅವನೊಬ್ಬನನ್ನೇ ಆರಿಸಿಕೊಂಡರು, ನಮ್ಮೂರಿನ ಉಳಿದೆಲ್ಲ ಹುಡುಗರಲ್ಲಿ.''

ಗೌರಿಯ ಕಾಲ್ಕೆಳಗಿನ ಭೂಮಿ ಕ್ಷಣದಲ್ಲಿ ಸರಿದಂತಾಯಿತು. ಇಡಿಯ ಕೇರಿಯೇ ತನ್ನ ಸುತ್ತಲೂ ಸುಳಿಯಂತೆ ತಿರುಗುತ್ತಿದೆ ಮತ್ತು ತಾನು ಮೈಮರೆತು ಬೀಳುತ್ತಿದ್ದೇನೆ ಎಂದೆನಿಸಿ, ಅವಳು ಧಪ್ಪನೆ ಕೆಳಗೆ ಕೂತುಕೊಂಡಳು.

ಕೆಲಹೊತ್ತಿನ ಮೇಲೆ ಸಮಾಧಾನಚಿತ್ತಳಾದಂತೆ ಆಕೆ ಎದ್ದು ಮನೆಯೊಳಗೆ ಹೋದಳು. ಒಳಗೆ ಅಡ್ಡಗೋಲಿನ ಮೇಲೆ ನೋಡಿದರೆ, ಅವನ ಶರ್ಟು, ಚಡ್ಡಿ ಇಲ್ಲ. ಈಗ ಗೌರಿಯ ಧೈರ್ಯವೆಲ್ಲ ಕುಸಿಯಿತು. ಆಕೆ ಗಟ್ಟಿಯಾಗಿ ಚೀರಿದಳು,

"ಚಾಂಡಾಳ, ಮೋಸ ಮಾಡಿದ ನನಗೆ. ಕಂಬಳಿಯ ಮಡಿಕೆಯಲ್ಲಿ ಬಟ್ಟೆಗಳನ್ನು ಹಾಕಿ ಒಯ್ದು, ಅಡ್ಡಹಾದಿಗೆ ಹೋಗಿ ಬಸ್ ಸೇರಿದ. ನನ್ನಂತಹ ಪಾಪಿಗೆ ಸಂಶಯ ಕೂಡ ಬರಲಿಲ್ಲ. ಉತ್ತಮಬಾಬ, ಅವನನ್ನು ವಾಪಸ್ ತಕ್ಕೊಂಡು ಬನ್ನಿರೋ, ಇಲ್ಲದಿದ್ದರೆ ನಾನೇ ಬರ್ತೇನೆ ನಿಮ್ಮ ಸಂಗಡ."

"ಅತ್ತಿಗೆ, ಹೋದರೆ ಹೋಗಲಿ ಬಿಡಿ ಅವನು. ಈ ದರಿದ್ರದ ಊರಿನಲ್ಲಿ ಏನಿದೆ ಗಂಟು? ಬರಡು ಹೊಲದಲ್ಲಿ ದುಡಿದು, ದುಡಿದು ಸತ್ತರೂ ಹೊಟ್ಟೆ ಹೊರುವದೇ ಕಷ್ಟ."

"ಆದರೆ ಈ ಬೆಂಕಿಯಲ್ಲಿಯೇ ಜಿಗಿಯ ಬೇಕಾಗಿತ್ತೇ ಅವನಿಗೆ? ನಾವೆಷ್ಟು ಭೋಗಿಸಿದ್ದೇವೆ ಗೊತ್ತಿಲ್ಲವೇ ನಿನಗೆ?"

"ಜಯವಂತ ಅಂದರೆ ಸ್ವಲ್ಪ ತಲೆತಿರುಕನೇ. ಯಾರೇನು ಹೇಳಿದರೂ ಕೇಳಬೇಕಲ್ಲ ಅವನು."

"ಆದರೆ ಉತ್ತಮಬಾಬ, ಹೋಗುವ ಮುಂಚೆ ಮನೆಗಾದರೂ ಹೋಗಿಬರಲು ಅವನಿಗೆ ಬಿಡ ಬಹುದಲ್ಲವೇ ಅವರು?"

"ಭರತಿಯಾದ ಮೇಲೆ ಹೆಚ್ಚಾಗಿ ಮನೆಗೆ ಹೋಗಲು ಬಿಡುವುದಿಲ್ಲ, ಅತ್ತಿಗೆ."

ಬದಿಗೇ ರಾಮೂ ನಿಂತಿದ್ದ. ಅವನು ಬಳಿಗೆ ಬಂದು ಹೇಳಿದ, "ಬರುವ ಹೊತ್ತಿಗೆ ನಾನು ಜಯವಂತನಿಗೆ ಕೇಳಿದ್ದೆ, ನೀನೇನು ಮಾಡುತ್ತೀ ಅಂತ. ಹೇಳಿದ, ಬಹುಶಃ, ನಾಳೆ ಬೆಳಿಗ್ಗಿನ ಬಸ್ಸಿನಿಂದ ಹೋಗಬೇಕಾದೀತು. ಆಮೇಲೆ, ಅಲ್ಲಿಂದ ಮುಂದೆ, ರೇಲಿನಿಂದ. ತಾಲೂಕಿನಿಂದ ಎಲ್ಲರೂ ಕೂಡಿ ಹತ್ತು-ಹನ್ನೆರಡು ಜನರಿದ್ದಾರೆ. ಗೌರ ದೊಡ್ಡಮ್ಮಾ, ನಿನಗೆ, ಕಾಳಜಿ ಮಾಡಬೇಡ ಎಂದು ಹೇಳಿದ್ದಾನೆ ಅವ."

ಆದರೆ ಗೌರಿ, ಮಗನ ಕಾಳಜಿಯಿಂದ ಸವೆ ಯುತ್ತಿದ್ದಳು. ಅವನೊಮ್ಮೆ ದೃಷ್ಟಿಗೆ ಬೀಳಬೇಕೆಂದು ಲಾಲಿಸುತ್ತಿದ್ದಳು. ಜಯವಂತ, ಅಂದಿಂದೊಮ್ಮೆ ಚೀಟಿ ಬರೆಯುತ್ತಿದ್ದ. ಆದರೆ ಅಷ್ಟರಿಂದ ಆಕೆಗೆ ಸಮಾಧಾನವಾಗುತ್ತಿರಲಿಲ್ಲ.

ಜಯವಂತನು ಮಿಲಿಟರಿಯಲ್ಲಿ ಭರತಿ ಯಾಗಿ ಈಗ ನಾಲ್ಕು ತಿಂಗಳುಗಳು ಸಂದಿದ್ದವು. ಅವನು ಕವಾಯತಿಯಲ್ಲಿ, ಆಟದಲ್ಲಿ ನಿಪುಣ ನಾಗಿದ್ದ. ಎಲ್ಲವನ್ನೂ ಮನದಟ್ಟಾಗಿ ಕಲಿಯುತ್ತಿದ್ದ. ಈ ತರಬೇತಿ ಕೇಂದ್ರದಲ್ಲಿ ಒಂಭತ್ತು ತಿಂಗಳು, ಬಹಳೇ ಕಷ್ಟದ, ಕಟ್ಟುನಿಟ್ಟಾದ ಮಿಲಿಟರಿ ಶಿಕ್ಷಣ ಕೊಡುತ್ತಿದ್ದರು. ಅದರಿಂದ ಪಾರಾದ ಮೇಲೆ 'ಜವಾನ್' ಎಂಬ ಉಪಾಧಿ ಸಿಗುತ್ತಿತ್ತು. ಮಿಲಿಟರಿಯ ಹಸಿರು ಬಣ್ಣದ ಉಡುಪು ತೊಡಲು ದೊರಕುತ್ತಿತ್ತು.

ಒಂದು ದಿನ ಅವರ ಪ್ಲಾಟೂನು, ಕವಾಯ ತಿಯ ಮೈದಾನಕ್ಕೆ ಹೋಗಿತ್ತು. ಅವನು ಛಾವಣಿ ಯಲ್ಲಿಯೇ ಪಹರೆಯ ಮೇಲಿದ್ದ. ಪಹರೆಗೆ ನಿಲ್ಲುವ ಈ ಸರತಿ, ದಿನವೂ ಒಬ್ಬನಿಗಿರುತ್ತಿತ್ತು. ಛಾವಣಿಯಲ್ಲಿ ಹೆಚ್ಚಾಗಿ ಪೆಟ್ಟಿಗೆಗಳು, ಟ್ರಂಕುಗಳು ಬೀಗ ಇಲ್ಲದೆಯೇ ಇರುತ್ತಿದ್ದವು. ಆದರೆ ಇಲ್ಲಿಯ ಅನುಭವಿ ಶಿಕ್ಷಕರು ಹೇಳುತ್ತಿದ್ದರು, 'ಇತಿಹಾಸ ದಲ್ಲೇ, ಕಳವು ಎಂದು ಹೇಳುವಂತಹದೇನೂ ಇಲ್ಲಿ ಆಗಿಲ್ಲ' ಎಂದು.

ಮಧ್ಯಾಹ್ನ ಊಟದ ಹೊತ್ತಿಗೆ ಎಲ್ಲರೂ ಮೈದಾನದಿಂದ ಹಿಂತಿರುಗಿಬಂದರು. ಧನಂಜಯ ಎಂಬ ಹೆಸರಿನ ರಿಕ್ರೂಟ್ ತನ್ನ ಪೆಟ್ಟಿಗೆಯಿಂದ ತಟ್ಟೆ, ತಂಬಿಗೆ ತೆಗೆದ. ಸಹಜವಾಗಿ, ತನ್ನ ಫೌಜಿ ಚೀಲದಲ್ಲಿ ಕೈಹಾಕಿ ತಟ್ಟಿದ. ಆಗ ಅವನಿಗೆ ತನ್ನ ಹಣದ ಪಾಕೀಟು ಕೈಗೆ ತಾಗಲಿಲ್ಲ. ಅವನು ಎಲ್ಲ ವಸ್ತುಗಳನ್ನು ಹೊರಗೆ ತೆಗೆದು, ಮೇಲ್ಕೆಳಗೆ ಮಾಡಿ ಹುಡುಕಿದ. ಆದರೆ ಪಾಕೀಟು ಸಿಗಲಿಲ್ಲ.

ಧನಂಜಯ, ಹವಾಲದಾರ್ ರಾಮಸಿಂಗ್‌ನ ಬಳಿ ಹೋಗಿ ಹೇಳಿದ, "ಸರ್ ನನ್ನ ಪಾಕೀಟು..." ಹವಾಲದಾರ ಮಧ್ಯೆಯೇ ಗದರಿದ, "ಸಾಲಾ ರಿಕ್ರೂಟ್, ಸರಿಯಾಗಿ ನಿಂತು ಮಾತಾಡು."

ಧನಂಜಯನಿಗೆ ತನ್ನ ತಪ್ಪು ತಿಳಿಯಿತು. ಅವನು ತಟ್ಟನೆ ಅಟೆನ್ಶನ್‌ದಲ್ಲಿ ನಿಂತ.

"ಸರ್, ಪೆಟ್ಟಿಗೆಯಲ್ಲಿದ್ದ ನನ್ನ ಪಾಕೀಟು ಯಾರೋ ಕದ್ದಿದ್ದಾರೆ. ಇಪ್ಪತ್ತೈದು ರೂಪಾಯಿಗಳಿದ್ದವು."

"ಸರಿಯಾಗಿ ಹುಡುಕಿನೋಡಿದಿಯಾ?"


"ಹೌದು ಸರ್"

ಯಾವ ಪ್ರಸಂಗ ಎಂದೂ ಘಟಿಸಲಾರದು ಎಂದು ತಿಳಕೊಂಡಿದ್ದನೋ, ಅದೇ, ಅಕಸ್ಮಾತ್ತಾಗಿ ಕಿವಿಯ ಮೇಲೆ ಬಿದ್ದಿತ್ತು. ಅವನ ಪ್ಲಾಟೂನ್‌ದಲ್ಲಿ ಕಳವು ಆಗುವದೆಂದರೆ ಶಿಸ್ತು ಮುರಿದಂತೆ, ಹೆಸರು ಹಾಳಾದಂತೆ ಮತ್ತು ನೌಕರಿಗೆ ಕಲಂಕ ಹತ್ತಿದಂತೆ. ನಾಳೆ ಈ ಸುದ್ದಿ ಹಿರಿಯರ ಕಿವಿಯ ಮೇಲೆ ಬಿದ್ದರೆ, ಅವರೇನನ್ನುವರು? 'ರಾಮಸಿಂಗ್‌ನಿಂದ ಪ್ಲಾಟೂನಕ್ಕೆ ಶಿಸ್ತು ಹಚ್ಚಲಾಗಲಿಲ್ಲ, ಎಂದೇ ಹೀಗಾಗುತ್ತದೆ' ಅಂತಲೇ ಹೇಳುವರು. ಮತ್ತೆ ಕಳವು ಎಂದರೆ ಎಂತಹ ಹೀನ ಕರ್ಮ. ಇದು ಅಪ್ಪಟ ದುಶ್ಚಿಹ್ನ.

ಅವನು ಧನಂಜಯನಿಗೆ ಮತ್ತೊಮ್ಮೆ ಕೇಳಿದ, "ಬೆಳಿಗ್ಗೆ ಕವಾಯತಿಗೆ ಬರುವಾಗ ಪಾಕೀಟು ಇತ್ತೇ?"

"ಹೌದು ಸರ್, ಬೆಳಿಗ್ಗೆ ತಾನೇ ಹಾಫ್ ಪ್ಯಾಂಟಿನ ಕಿಸೆಯಿಂದ ತೆಗೆದಿಟ್ಟಿದ್ದೆ."

ಹವಾಲ್‌ದಾರ್ ರಾಮಸಿಂಗ್ ಕಡು ಶಿಸ್ತಿನ, ದೃಢ ಮನಸ್ಸಿನ ಮನುಷ್ಯ. ರಿಕ್ರೂಟರಿಂದ ಕವಾಯತನ್ನು ಮಾಡಿಸಿಕೊಂಡರೆ, ಬಿಡುವು



ಮಹಾಬಳೇಶ್ವರ ಸೈಲ್

ಜನನ: 14 ಎಪ್ರಿಲ್ 1945, ಉತ್ತರ ಕನ್ನಡ ಜಿಲ್ಲೆಯ ಉತ್ತರ ತುದಿಯಲ್ಲಿಯ ಮಾಜಾಳಿಯಲ್ಲಿ. ಶಿಕ್ಷಣ ಎಸ್.ಎಸ್.ಎಲ್.ಸಿ. ಮನೆಯ ಪ್ರತಿಕೂಲ ಪರಿಸ್ಥಿತಿಯಿಂದಾಗಿ ಮುಂದಿನ ಶಿಕ್ಷಣ ಸಾಧ್ಯವಾಗಲಿಲ್ಲ. ಹದಿನೇಳನೆಯ ವಯಸ್ಸಿನಲ್ಲಿ ಭಾರತೀಯ ಸೇನೆಯಲ್ಲಿ ದಾಖಲಾದರು. 1963-64ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ವತಿಯಿಂದ ಇಸ್ರಾಯಿಲ್-ಇಜಿಪ್ತ ಸಂಘರ್ಷದಲ್ಲಿ ಶಾಂತಿ ಸೈನಿಕರೆಂದು ಕೆಲಸ ಮಾಡಿದರು. 1965ರಲ್ಲಿ ಆದ ಭಾರತ-ಪಾಕಿಸ್ತಾನ ಯುದ್ಧದಲ್ಲಿ ಪಂಜಾಬದ ಹುಸೇನಿವಾಲಾ ಸೀಮೆಯ ಮೇಲೆ ಹಾಗೂ 1971ರಲ್ಲಿ ಗೋವಾ ಮುಕ್ತಿಯ ವೇಳೆಗೆ ಆದ ಸೈನ್ಯದ ದಾಳಿಯಲ್ಲಿ ಮಹತ್ವಪೂರ್ಣ ಸಹಭಾಗ. ಸೈನಿಕ ಜೀವನದಿಂದ ನಿವೃತ್ತರಾದ ಮೇಲೆ ಈಗ ಗೋವೆಯ ಕಾಣಕೋಣದಲ್ಲಿ ವಾಸ್ತವ್ಯ. ಅಂಚೆ ವಿಭಾಗದಲ್ಲಿ ಸೇವೆಗೈಯುತ್ತಿದ್ದಾರೆ.

ಕೊಂಕಣಿ ಸಾಹಿತ್ಯದಲ್ಲಿಯ ಇಂದಿನ ಅಗ್ರಗಣ್ಯ ಕತೆಗಾರರು, ಕಾದಂಬರಿಕಾರರು. 1993ರಲ್ಲಿ ಅವರ 'ತರಂಗಾ' ಕಥಾಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾದೆಮಿಯ ಪುರಸ್ಕಾರ. 'ಪಯಲತಡ ಚೆಂ ತಾರೂ', 'ತರಂಗಾ' ಈ ಕಥಾಸಂಗ್ರಹಗಳು, 'ಕಾಳಿ ಗಂಗಾ', 'ಅದೃಷ್ಟ', 'ಅರಣ್ಯಕಾಂಡ', 'ಕಾಳ ಭೋವಂಡಿ' ಈ ಕಾದಂಬರಿಗಳು ಪ್ರಕಟಿತ. 'ಕಾಳಿಗಂಗಾ' ಕಾದಂಬರಿಗೆ 1996ರಲ್ಲಿ ಕೊಂಕಣಿ ಭಾಷೆಯಲ್ಲಿಯ ಉತ್ಕೃಷ್ಟ ಪುಸ್ತಕವೆಂದು ಟಿ.ಎಮ್.ಎ. ಪೈ ಫೌಂಡೇಶನ್ ಪಾರಿತೋಷಕ.

ಈ ಕಥೆಯನ್ನು ಕನ್ನಡಕ್ಕೆ ತಂದಿರುವ **ಆನಂದವರ್ಟಿ**, ಮುಂಬಯಿಯಲ್ಲಿ 'ಕಾರ್ಪೊರೇಟ್ ಕಮ್ಯೂನಿಕೇಶನ್' ತಜ್ಞರು. ಕನ್ನಡ, ಮರಾಠಿ ಮತ್ತು ಕೊಂಕಣಿ- ಈ ಮೂರೂ ಭಾಷೆಗಳಲ್ಲಿ ಕತೆ, ಕಾವ್ಯ ಲೇಖನ ಬರೆದಿದ್ದಾರೆ. ಕನ್ನಡ, ಮರಾಠಿ ಮತ್ತು ಕೊಂಕಣಿ ಕೃತಿಗಳನ್ನು ಪರಸ್ಪರ ಅನುವಾದ ಮಾಡುವುದರಲ್ಲಿಯೂ ಆಸಕ್ತರು.

ಕೊಡದೆ ತರಾಟೆಗೆ ತೆಗೆದುಕೊಳ್ಳುತ್ತಿದ್ದ. ರಿಕ್ರೂಟರು ದಣಿದು ಬೆವರು ಸುರಿಸುತ್ತಿದ್ದರು. ಅವರಿಗೆ ಉಬ್ಬಸ ಹತ್ತುತ್ತಿತ್ತು. ಕೆಲವರಂತೂ, ದಣಿದು, ಭೂಮಿಗೇ ಕುಸಿದು ಬೀಳುತ್ತಿದ್ದರು.

ಅವನು ತಕ್ಷಣ ಜಯವಂತನನ್ನು ಕರೆಯಿಸಿಕೊಂಡ.

''ನೀನು ಆ ಹೊತ್ತು ಪಹರೆಯ ಮೇಲಿದ್ದೆಯಲ್ಲ?''

''ಹೌದು ಸರ್.''

''ಹಾಗಾದರೆ ಕಳವು ಹೇಗಾಯ್ತು?''

ಜಯವಂತನಿಗೆ ಏನು ಹೇಳಬೇಕೆಂಬುದೇ ತೋಚಲಿಲ್ಲ. ಅವನು ಸುಮ್ಮನಾಗಿಯೇ ಇದ್ದ. ರಾಮಸಿಂಗ್, ಅವನ ಮೇಲೆ ಪ್ರಶ್ನೆಗಳ ಮಳೆ ಸುರಿದು, ಅವನನ್ನು ಸಾಕುಬೇಕಾಗಿ ಮಾಡಿಬಿಟ್ಟ. ಜಯವಂತನ ಕಡೆಯಿಂದ ಏನೂ ಅಂದಾಜು ಸಿಗಲಿಲ್ಲಾದ್ದರಿಂದ ಅವನು ಮತ್ತಿಷ್ಟು ರೇಗಿದ. ಕೊನೆಗೆ ಅವನು ತೆಗೆದುಕೊಂಡ ನಿರ್ಣಯವೆಂದರೆ, ಜಯವಂತನು ಪಹರೆಯ ಮೇಲಿದ್ದಾಗ ಮತ್ತು ಅವನು ಒಬ್ಬನೇ ಇದ್ದಾಗ ಕಳವಾಗಿದೆ. ಅಂದರೆ, ಅವನೇ ಆ ಕಳವು ಮಾಡಿರಬೇಕು. ಇತರ ಎಲ್ಲರೂ ಪ್ಲಾಟೂನ್ ಮೈದಾನಿನ ಮೇಲಿದ್ದಾಗ, ಕಳವು ಮಾಡುವವರಾದರೂ ಯಾರು? ಅವನು ಸ್ಪಷ್ಟವಾಗಿ ಇದನ್ನು ಜಯವಂತನಿಗೆ ಹೇಳಿದ.

ಕೇಳಿ, ಜಯವಂತ ಥರಥರ ನಡುಗಿದ, ಗಡಬಡಿಸಿದ. ತನ್ನ ಮೇಲೆ ಸುಳ್ಳು ಆರೋಪ ಬಂತೆಂದು ತತ್ತರಿಸಿದ. ಕ್ಷಣದಲ್ಲಿ ಅವನು ತನ್ನ ಊರಿನ ಕುಲದೇವರ ಗರ್ಭಗುಡಿಯ ಮುಂದೆ ನಿಂತ. ಅಂಗಳದಲ್ಲಿಯ ತುಳಸಿಗೆ, ಬಲಬದಿಯಿಂದ ಪ್ರದಕ್ಷಿಣೆ ಹಾಕಿ ಬಂದ. ಬಹಳ ಕಷ್ಟದಿಂದ ಅವನು ಬಾಯಿಬಿಟ್ಟ. ''ನನ್ನ ತಾಯಿಯ ಆಣೆ ಸರ್, ನಾನು ಕಳವು ಮಾಡಿಲ್ಲ.''

ಆದರೆ ಮುತ್ಸಾಳ ಫೌಜಿ ಹವಾಲದಾರ್‌ನಿಗೆ ಅದು ಸತ್ಯವಿರಬಹುದೆಂದು ಅನಿಸಲಿಲ್ಲ. ಕಳವು ಮಾಡಿದ್ದೇನೆಂದು ಒಪ್ಪಿಸಿಕೊಳ್ಳಲು ಅವನು ಜಯವಂತನನ್ನು ಕಾಡಲಾರಂಭಿಸಿದ. ಮೈದಾನಿನ ಮೇಲಿನ ಅತ್ಯಂತ ಕಷ್ಟದ ಕೆಲಸಗಳನ್ನು, ಒಂದು ಕ್ಷಣದ ಬಿಡುವು ಕೊಡದೆ ಅವನಿಂದ ಮಾಡಿಸಿಕೊಳ್ಳಹತ್ತಿದ. ಅವನನ್ನು ವಿನಾಕಾರಣ ಮೈದಾನಿನ ಮೇಲೆ ಓಡಲು ಹಚ್ಚುತ್ತಿದ್ದ. ಸರಿಯಾಗಿ ಉಣ್ಣಲು ಕೊಡುತ್ತಿರಲಿಲ್ಲ, ಮಲಗಲು ಬಿಡುತ್ತಿರಲಿಲ್ಲ. ಅಷ್ಟಕ್ಕೇ ಇತರ ರಿಕ್ರೂಟರೂ ಅವನೆಡೆ ಸಂಶಯದಿಂದ ನೋಡಹತ್ತಿದ್ದರು.

ಮೂರನೇ ದಿನ ಮುಂಜಾನೆ, ಕವಾಯತಿಗೆ ಹೋಗಲು ಎಲ್ಲ ರಿಕ್ರೂಟರು ಮೈದಾನಿನ ಮೇಲೆ ಒಟ್ಟಾದರು. ರಾಮಸಿಂಗ್‌ನು ಎಲ್ಲ ರಿಕ್ರೂಟರನ್ನು ಎಣಿಸಿದ. ಒಬ್ಬ ರಿಕ್ರೂಟ್ ಕಡಿಮೆಯಾಗುತ್ತಿದ್ದ. ಥಟ್ಟನೆ ಅವನಿಗೆ ಹೊಳೆಯಿತು, ಜಯವಂತನಿಲ್ಲ!

ನಾಲ್ಕೂ ದಿಕ್ಕಿನಲ್ಲಿ ಓಡಾಟ ಮತ್ತು ಹುಡುಕಾಟಕ್ಕೆ ಆರಂಭವಾಯಿತು. ಛಾವಣಿಯಲ್ಲಿ ಎಲ್ಲ ಕಡೆಯಲ್ಲಿಯೂ ಈ ವಾರ್ತೆ ಪಸರಿಸಿತು. ಸ್ವತಃ ಕಮಾಂಡಿಂಗ್ ಆಫೀಸರ್, ಜೀಪಿನಲ್ಲಿ ಬಂದಿಳಿದ. ಆದರೆ ಜಯವಂತನೇನು ಸಿಗಲಿಲ್ಲ. ಛಾವಣಿಯಿಂದ ರಿಕ್ರೂಟ್ ಇಲ್ಲವೆ ಸೈನಿಕ ಓಡಿಹೋಗುವದೆಂದರೆ, ಬಹಳ ಗಂಭೀರ ಮಾತೆಂದು ತಿಳಿಯುತ್ತಿದ್ದರು. ಅದರಿಂದಾಗಿ ಛಾವಣಿಯ ಪ್ರತಿಷ್ಠೆಗೆ ಕುಂದು ಬರುತ್ತಿತ್ತು.

ಗೌರಿಯ ಮೈಯಲ್ಲಿ ಜ್ವರವಿತ್ತು. ಹಾಸಿಗೆಯ ಮೇಲೆ ಬಿದ್ದುಕೊಂಡ ಅವಳು ಕನವರಿಸುತ್ತಿದ್ದಳು. ಮಗನನ್ನು ನೆನಪಿಸಿಕೊಂಡು ಮಂಪರದಲ್ಲಿ ತೊದಲುತ್ತಿದ್ದಳು. ಉತ್ತಮಬಾಬ, ಕೈಯಲ್ಲಿ ಚಿಮಣಿ ಹಿಡಿದುಕೊಂಡು ಬಾಗಿಲಲ್ಲಿ ಬಂದ.

''ಗೌರ ಅತ್ತಿಗೆ, ಏನು ಊಟ ಆಯಿತೆ? ಅಲ್ಲ, ಹಾಗೆಯೇ ಉಪವಾಸ ಬಿದ್ದುಕೊಂಡಿಯ? ಒಂದಿಷ್ಟು ಸಾರು, ಅನ್ನ ತಂದುಕೊಡಲೇ?''

''ಬೇಡಪ್ಪ, ಬೇಯಿಸಿದ್ದು ಹಾಗೆಯೇ ಬಿದ್ದಿದೆ. ಈಗ ಉಂಡು, ತಿಂದು ನನಗೇನು ಕೋಡು ಬೆಳೆಯುವದಿದೆಯೇ? ಮಗ ಒಂದು ಸಾರೆ ಕಣ್ಣಿಗೆ ಬಿದ್ದರೆ, ಸಾಯಲು ಬಿಡುಗಡೆ ಸಿಗಬಹುದಿತ್ತು.''

''ಈಗೆಲ್ಲಿ ಅವನು ಬರುತ್ತಾನೆ! ಟ್ರೇನಿಂಗ್ ಮುಗಿಯಲು ಇನ್ನೂ ಮೂರು ತಿಂಗಳಾದರೂ ಇವೆ. ಆಮೇಲೆಯೇ ರಜೆ ಸಿಗುವದು.''

''ಹೌದು. ಅದರಿಂದಾಗಿಯೇ ಸಹಿಸಬೇಕು ಎಲ್ಲವನ್ನೂ. ನನ್ನದಂತೂ ಬಿಟ್ಟುಬಿಡು. ಅವನ ಭವಿಷ್ಯವಾದರೂ ನೋಡಬೇಕಲ್ಲ, ಹೋಗು, ನೀನೀಗ. ಹೋಗಿ ಮಲಗಿಕೋ. ಬಹಳೇ ರಾತ್ರಿಯಾದಂತೆ ಕಾಣುತ್ತದೆ.''

ಉತ್ತಮಬಾಬ ಹೆಚ್ಚು ಮಾತಾಡದೆ ತನ್ನ ಮನೆಗೆ ಹೋದ.


ಜಯವಂತ, ಆ ರಾತ್ರಿ ಛಾವಣಿಯಿಂದ ಪಲಾಯನ ಮಾಡಿದ. ರೈಲಿನಲ್ಲಿ ಕೂತುಕೊಂಡು, ಎರಡು ದಿನಗಳ ನಂತರ ಬೆಳಗಾವಿ ಮುಟ್ಟಿದ. ಬೆಳಗಾವಿಯಿಂದ ಬಸ್ಸು ಹಿಡಿದು ಕಾರವಾರಕ್ಕೆ ಬಂದ. ಕಾರವಾರಕ್ಕೆ ಸಂಜೆ ಏಳು ಗಂಟೆಗೆ ಬಂದಿಳಿದಾಗ, ಅವನ ಊರಿಗೆ ಹೋಗುವ ಕೊನೆಯ ಬಸ್ಸು ಹೊರಟುಹೋಗಿತ್ತು.

ಈಗೇನು ಮಾಡುವದು, ಎಲ್ಲಿ ಉಳಿಯುವದು? ಯಾರಾದರೂ ನೆಂಟರ ಮನೆಗೆ ಹೋಗುವದೆಂದರೆ ಮುಖ ತೋರಿಸುವದಕ್ಕೂ ನಾಚಿಕೆ. ಅದರಲ್ಲೂ ದಿಗಿಲು ಬೆನ್ನಟ್ಟಿಯೇ ಇತ್ತು. ಎಲ್ಲರ ಕಣ್ಣುಗಳು ತನ್ನನ್ನೇ ಹುಡುಕುತ್ತಿವೆ, ಜನರ ಎಲ್ಲ ಅವಸರ, ಓಡಾಟ ತನಗಾಗಿಯೇ ನಡೆದಿವೆ ಎಂದು ಅವನಿಗೆ ಅನಿಸುತ್ತಿತ್ತು. ಬಸ್‌ಸ್ಟ್ಯಾಂಡಿನಲ್ಲಿದ್ದ ಜನರ ಗೊಂದಲದಲ್ಲಿ ಅವನಿಗೆ ಉಸಿರು ಕಟ್ಟಿದಂತಾಯಿತು. ಅವನು ತನ್ನ ಊರಿನ ದಾರಿ ಹಿಡಿದ. ಹನ್ನೆರಡು ಮೈಲುಗಳ ಹಾದಿಯನ್ನು ನಡೆದೇ ಹೋಗಬೇಕಾಗಿತ್ತು.

ದಾರಿಯಲ್ಲಿ ನಡೆಯುವ ತ್ರಾಣವೇ ಇರಲಿಲ್ಲ. ಒಂದೆಡೆಗೆ ಸರಿಯಾಗಿ, ಒಂದೇ ಸಾಲಿನಲ್ಲಿ ನಿಂತಿರುವ ಗುಡ್ಡದಿನ್ನೆಗಳು, ಇನ್ನೊಂದೆಡೆಗೆ ಕಾಳಿ ನದಿಯ ಅಚ್ಚಕಪ್ಪು ನೀರಿನ ಧಾರೆ, ಕೆಲವು ಕಡೆ ಗುಡ್ಡ ಮುಂದೆ ಬಂದು ನದಿಯ ಮೇಲೆ ವಾಲಿಕೊಂಡು ನಿಂತಂತಿತ್ತು. ಅದರ ಮೇಲಿನ ದೊಡ್ಡ ದೊಡ್ಡ ಗಿಡಗಳು, ನದಿಯ ನೀರಿನಲ್ಲಿ, ತಮ್ಮ ಕಪ್ಪು ಮುಖವನ್ನು ಅವಲೋಕಿಸುತ್ತ ನಿಂತಿದ್ದವು. ಕೆಲವೆಡೆ, ನದಿಯ ತೀರದ ಮಣ್ಣಿನಲ್ಲಿ ಬಿದ್ದು ಕೊಳೆತ ಎಲೆಗಳ ನಾರುವ ವಾಸನೆ, ಕೆಲವೆಡೆ ಅರಳಿದ ಹೂಗಳ ಹಸಿಹಸಿ ಪರಿಮಳ ಮೂಗಿನಲ್ಲಿ ಘಮ್ಮನೆ ಸೇರುತ್ತಿದ್ದವು. ಮಧ್ಯದಲ್ಲೇ, ಮೀನು ಹಿಡಿಯುವ ಚಿಕ್ಕ ದೋಣಿಯೊಂದು, ಧಸ್‌ಧಸ್ಸೆಂದು ಹುಟ್ಟು ಹಾಕುತ್ತ, ನೀರಿನ ಧಾರೆಯನ್ನೇ ಕತ್ತರಿಸುತ್ತ ಮುಂದೆ ಸಾಗುತ್ತಿತ್ತು. ಕತ್ತಲೆಯಲ್ಲಿ ಕಣ್ಣಿಗೆ ಕಾಣುತ್ತಿರಲಿಲ್ಲ, ಕೇವಲ ಭಾಸವಾಗುತ್ತಿತ್ತು ಅಷ್ಟೇ.

ಹನ್ನೊಂದು ಗಂಟೆಯ ಸುಮಾರಿಗೆ ಅವನು, ಊರಿನ ಸೀಮೆಯ ಮೇಲೆ ಬಂದು ನಿಂತ. ಕತ್ತಲೆಯಲ್ಲಿ ಇಡಿಯಾಗಿ ಮುಳುಗಿದ ಊರಿನ ಒಂದು ಬೇರೆಯೇ ರೂಪ ಅವನ ಮುಂದಿತ್ತು. ಹದಿನೆಂಟು, ಇಪ್ಪತ್ತು ವರ್ಷಗಳನ್ನು ಅವನು ಈ ಊರಿನಲ್ಲಿ ಕಳೆದದ್ದು ಸರಿ, ಆದರೆ ಊರಿನ ಇಂತಹ ಭಯಾನಕ, ಬರಡು, ನೀರವ ರೂಪವನ್ನು ಅವನೆಂದಿಗೂ ಅನುಭವಿಸಿರಲಿಲ್ಲ. ಎಲ್ಲಿಯೂ ಒಂದು ದೀಪ ಸಹ ಮಿನುಗುತ್ತಿರಲಿಲ್ಲ. ಜನರ ಸುಳಿವೂ ಇರಲಿಲ್ಲ.

ಅವನು ಕಷ್ಟಪಟ್ಟು ಅಡ್ಡಗೋಲಿನ ಮೇಲಿಂದ ಜಿಗಿದು ಪಾಣಂದಿಯಲ್ಲಿ ಇಳಿದ. ಇನ್ನೂ ಸ್ವಲ್ಪ ನಡೆದು ತನ್ನ ಮನೆಯ ಮುಂದೆ ಬಂದು ನಿಂತಾಗ, ಅವನ ಎಲ್ಲ ಧೈರ್ಯ ಕುಸಿದುಬಿತ್ತು. ಅವನು ತೂಗಾಡುತ್ತ, ಅಂಗಳವನ್ನು ದಾಟಿ, ಮನೆಯ ಕೊನೆಯ ಮೆಟ್ಟಲಿನ ಮೇಲೆ ಕೂತುಕೊಂಡ. ಮನೆಯಲ್ಲಿ ಸಣ್ಣ ದೀಪವೊಂದು ಉರಿಯುತ್ತಿತ್ತು ಅದರ ನಸುಬೆಳಕು ಕಿಟಕಿಯಿಂದ ಹೊರಗೆ ಚೆಲ್ಲುತ್ತಿತ್ತು.



ಕೆಲ ಹೊತ್ತಿನ ಮೇಲೆ ಅವನಿಗೆ ತಾಯಿಯ ಕನವರಿಕೆ ಕೇಳಿ ಬರುತ್ತದೆ. ಏನು ಮಾತಾಡುತ್ತಿದ್ದಾಳೋ, ಬಡಬಡಿಸುತ್ತಿದ್ದಾಳೋ ಇಲ್ಲವೆ ಬರಿದೇ ಕನವರಿಸುತ್ತಿದ್ದಾಳೋ, ಏನೂ ತಿಳಿಯಲಿಲ್ಲ. ಅವನ ಎದೆಯಲ್ಲಿ ಝುಲ್ಲೆಂದಿತು. ತಾಯಿ ಸೌಖ್ಯವಿದ್ದಾಳೆ ತಾನೇ? ಅವನು ಎದ್ದು ಮೆಲ್ಲನೆ ಕದ ತಟ್ಟುತ್ತಾನೆ.

''ಯಾರು? ಉತ್ತಮಬಾಬನೇ? ಮತ್ತೆ ಏಕೆ ಬಂದೀ? ನಾನು ಸಾಯುವದಿಲ್ಲವೋ ಇಷ್ಟು ಬೇಗ. ಹೋಗು ನೀನು.''

''ಅಮ್ಮಾ, ಅಮ್ಮಾ ನಾನು ಬಂದಿದ್ದೇನೆ'', ಅವನು ದಬ್ಬಿದ ಸ್ವರದಲ್ಲಿ ಅಂದ.

ಒಳಗೆ, ಹಾಸಿಗೆಯ ಮೇಲೆ ಮಲಗಿದ ಗೌರಿ ಕಿವಿಯನ್ನರಳಿಸಿದಳು. ಕಣ್ಬಟ್ಟು, ಆ ನಸುಕಾದ ಬೆಳಕಿನಲ್ಲಿ, ಚಾಚಿದ ದೃಷ್ಟಿಯಿಂದ ಒಳಹೊರಗೆ ನೋಡುತ್ತ ಕುಳಿತಳು. ಇಂತಹ ಕನಸುಗಳನ್ನು ತಾನೆಷ್ಟು ಸಾರೆ ನೋಡಿಲ್ಲ. ಇದೂ ಕೂಡ ಒಂದು ಕನಸೇ ಇರಬಹುದೇನೋ. ಆದರೆ ನಾನು ಮಾತ್ರ, ಎಚ್ಚರದಲ್ಲೇ ಇದ್ದೇನಲ್ಲ!

''ಯಾರದು?... ಜಯವಂತ, ನೀನು ಬಂದಿದ್ದೀಯ?'' ''ಹೌದಮ್ಮಾ!''

ಗೌರಿ ಎದ್ದಳು. ಪ್ರತಿ ಹೆಜ್ಜೆಗೆ ತೂಗಾಡುತ್ತ, ದಡಬಡಿಸುತ್ತ ಅವಳು ಬಾಗಿಲಲ್ಲಿ ಬಂದಳು. ಬಾಗಿಲನ್ನು ತೆರೆದಳು. ಜಯವಂತ ಅಸ್ತವ್ಯಸ್ತದಿಗಿಲು ಗೊಂಬೆಯಂತೆ ಬಾಗಿಲಲ್ಲಿ ನಿಂತಿದ್ದ. ಅವನ ಮೈಮೇಲೆ ಬೆವರು ಮತ್ತೆ ಮತ್ತೆ ಬಂದು ಆರಿತ್ತು. ಕೂದಲು ಕೆದರಿದ್ದವು. ಮೈಮೇಲಿನ ಬಟ್ಟೆಗಳು ಮಾಸಿದ್ದವು. ಹಸಿವೆಯಿಂದ ಕಣ್ಣುಗಳು ಗುಳಿಯಲ್ಲಿ ಹೊಕ್ಕಿದ್ದವು.

''ಮಧ್ಯದಲ್ಲೇ ಹೇಗೆ ಬಂದಿ ಜಯವಂತ? ನಿನ್ನ ಸಾಮಾನೆಲ್ಲಿ? ಇಷ್ಟು ರಾತ್ರಿಯವರೆಗೆ ಎಲ್ಲಿದ್ದೀ?''

ಜಯವಂತ ಸುಮ್ಮನೇ ಇದ್ದ. ಅಮ್ಮನನ್ನು ನೋಡಿದ ಕೂಡಲೆ ತನಗೆ ಅಳು ಬರಬಹುದೆಂದು ಅವನಿಗನಿಸಿತ್ತು. ಆದರೆ ನಾಚಿಕೆಯಿಂದ, ಭಯದಿಂದ ಅವನು ಒಳಗೊಳಗೇ ಬತ್ತಿ ಹೋಗಿದ್ದ.

''ಏನಾಯಿತು ಜಯವಂತ? ಅರೇ, ನೀನು ಮಾತಾಡುವದಿಲ್ಲ ಏಕೆ? ಫೌಜಿನಿಂದ ಓಡಿಗೀಡಿ ಬಂದಿಲ್ಲವಲ್ಲ?''

ಅವನು ಗೋಣು ತಗ್ಗಿಸಿ ಹಾಗೆಯೇ ಪಿಟ್ಟೆನ್ನದೆ ನಿಂತಿದ್ದ.

''ಹೌದು, ಓಡಿಯೇ ಬಂದಿದ್ದಿ ನೀನು. ನಿಜವಾಗಿಯೂ ಓಡಿ ಬಂದಿದ್ದೀ!''

ಇದ್ದಕ್ಕಿದ್ದ ಹಾಗೆ, ಅವಳು ಸಿಟ್ಟಿನಿಂದ ಥರಥರ ನಡುಗತೊಡಗಿದಳು. ಎಲ್ಲ ಸಂತಾಪವನ್ನು ಕಾರುತ್ತ, ಅವಳು ಗದರಿದಳು, ''ನಿನ್ನ ತಂದೆ ದಿಕ್ಕಾಪಾಲಾಗಿ ಆರು ವರ್ಷ ವನವಾಸ ಭೋಗಿಸಿದ ಮತ್ತು ನಿನಗೆ ಇದಿಷ್ಟೇ ತ್ರಾಸ ಸಹಿಸಲಾಗಲಿಲ್ಲ? ಮನೆತನಕ್ಕೆ ಕಪ್ಪು ಹಚ್ಚಲು ವಾಪಸ್ ಬಂದಿದೀಯಾ? ನಾಳೆ ಜನರು ಬಾಯಲ್ಲಿ ಸಗಣಿ ಹಾಕುವರು. ಯಾರಾದರೂ ನೋಡುವ ಮುಂಚೆಯೇ, ಬಂದಹಾಗೆ ಹಿಂತಿರುಗಿ ಹೋಗು.''

ಜಯವಂತ, ಕೆಲವು ಕ್ಷಣ ತಲ್ಲಣಗೊಂಡು ಸುಮ್ಮನೆ ನೋಡುತ್ತ ನಿಂತ. ನಂತರ ಒಂದೊಂದೇ ಮೆಟ್ಟಲು ಇಳಿಯುತ್ತ ನಡೆದ. ಗೌರಿ, ದನಿಯಲ್ಲಿ ಮಿದುತನ ತರಿಸದೆ ಅಂದಳು, ''ನಿಲ್ಲು ಜಯವಂತ, ಅಲ್ಲಿ ಕಟ್ಟೆಯ ಮೇಲೆ ಕುಳಿತುಕೋ.''

ಹೊರಗೆ ಮೆಟ್ಟಲುಗಳ ಬದಿಯ ಕಟ್ಟೆಯ ಮೇಲೆ ಕುಳಿತುಕೊಂಡ. ಅವಳು ಒಳಗೆ ಹೋದಳು. ಮಡಕೆಯಲ್ಲಿಯ ಎಲ್ಲ ಅನ್ನವನ್ನು ತಟ್ಟೆಯಲ್ಲಿ

ಉರುಳಿಸಿದಳು. ಮೇಲೆ ಆಸೆಯನ್ನು ಸುರಿದಳು. ಒಂದು ತಂಬಿಗೆ ತುಂಬ ನೀರನ್ನು ತೆಗೆದುಕೊಂಡು ಹೊರಗೆ ಬಂದು, ಅದೆಲ್ಲವನ್ನೂ ಜಯವಂತನ ಮುಂದಿಟ್ಟಳು.

"ಊಟ ಮಾಡು ಮತ್ತು ಹೊರಗಿನಿಂದಲೇ ವಾಪಸ್ ಹೋಗು."

ಕದ ಮುಚ್ಚಿಕೊಂಡು ಗೌರಿ ಒಳಗೆ ಬಂದಳು. ಅವನು ಉಣ್ಣುವಾಗಿನ 'ಚ್ಯಾಕ್‌ಚ್ಯಾಕ್' ಸದ್ದು ಕಿವಿಯ ಮೇಲೆ ಬೀಳುತ್ತಿತ್ತು. ಕೆಲಹೊತ್ತು ಅವಳು ಅದನ್ನು ಕಿವಿಗೊಟ್ಟು ಕೇಳುತ್ತ ನಿಂತಳು. ಸಹಿಸಲು ಆಗಲಾರದೊಡನೆ ಹಾಸಿಗೆಯ ಮೇಲೆ ಒರಗಿದಳು.

ಜಯವಂತ ಹಿಂತಿರುಗಿ ಛಾವಣಿ ಮುಟ್ಟಿದಾಗ ಎಲ್ಲರೂ ಆಗಲೇ ಎದ್ದು ಕವಾಯತಿಗೆ ಹೋಗುವ ತಯಾರಿ ಮಾಡುತ್ತಿದ್ದರು. ಮುಗಿಲಿನ ಕಡೆ ಬಂದು ಆತಿದ್ದ ಸೂರ್ಯನ ಎಳೆಬಿಸಿಲಿನಲ್ಲಿ ದೂರದ ಫೈರಿಂಗ್ ರೇಂಜ್, ಮಧ್ಯದ ಕವಾಯತಿಯ ಮೈದಾನುಗಳು, ಬರಾಕಿಗಳು ಜಳಜಳ ಮೀಯುತ್ತಿದ್ದವು.

ಸರಿಯಾಗಿ ಐದು ದಿನಗಳ ನಂತರ ಜಯವಂತ ಮರಳುತ್ತಿದ್ದ. ಅವನನ್ನು ನೋಡಿದ ಕೂಡಲೆ ರವೀಂದ್ರ ಎಂಬ ಹೆಸರಿನ ರಿಕ್ರೂಟ್ ಲಗುಬಗೆಯಿಂದ ಬಳಿಗೆ ಬಂದ. ಅವನು ಹುಯಿಲೆಬ್ಬಿಸುತ್ತಲೇ ಅಂದ, "ಎಲ್ಲಿದ್ದೆಯೋ ಜಯವಂತ? ಧನಂಜಯನ ಪಾಕೀಟು ಸಿಕ್ಕಿತು."

"ಆಂ ss!"

"ಆ ಅಡಿಗೆಯವ, ರಾಮಚಂದ್ರನ್ ಇನ್ನೊಮ್ಮೆ ಕಳವು ಮಾಡುವಾಗ ಸಿಕ್ಕಿಬಿದ್ದ. ಅವನ ಕಡೆಗೆ ಧನಂಜಯನ ಪಾಕೀಟೂ ಸಿಕ್ಕಿತು. ಒಳ್ಳೇ ಥಳಿಸಿದ ಮೇಲೆ ಅವನು ಪಾಕೀಟನ್ನು ಹಣದೊಂದಿಗೆ ತಂದುಕೊಟ್ಟ."

ಕೇಳಿದೊಡನೆ ಜಯವಂತನಿಗೆ ಎದೆ ಬಿರಿದು, ನಗು ಪುಟಿಯಲಾರಂಭಿಸಿತು. ಇಷ್ಟರಲ್ಲಿ ಇಡಿಯ ಪ್ಲಾಟೂನು ಜಯವಂತನ ಸುತ್ತಲೂ ನೆರೆಯಿತು. ಹವಾಲದಾರ್ ರಾಮಸಿಂಗ್ ಎಲ್ಲಿಂದಲೋ ಓಡುತ್ತ ಬಂದ.

"ಏ ಮರಿ, ಬಂದಿಯಾ? ಒಳ್ಳೇದು ಮಾಡಿದಿ. ಆದರೆ ನಾನು ಪೀಡಿಸಿದ್ದರಿಂದ ನೀನು ಓಡಿಹೋಗಿದ್ದೀ ಅಂತ ಯಾರಿಗೂ ಹೇಳಲಿಲ್ಲ ತಾನೇ. ನನಗೆ ಕೋರ್ಟ್ ಮಾರ್ಶಲ್ ಆಗ ಬಹುದು. ಆ ಅಡಿಗೆಯವ, ಬಡ್ಡೀಮಗ, ಸಗಣಿ ತಿಂದ ಮತ್ತು ನಾನು ಸುಮ್ಮನೆ ನಿನ್ನ ಮೇಲೆ ಸಂಶಯ ತಕ್ಕೊಂಡೆ", ಅವನು ಜಯವಂತನಿಗೆ ವಿನಂತಿಸಹತ್ತಿದ.

ಜಯವಂತ ಹಿಂತಿರುಗಿ ಬಂದ ಸುದ್ದಿ ಕಮಾಂಡಿಂಗ್ ಆಫೀಸರನಿಗೆ ಬೇಗನೇ ಮುಟ್ಟಿತು. ಅವನು ಆರ್ಡರ್ ಕೊಟ್ಟ, "ಅವನನ್ನು ನೇರವಾಗಿ ನನ್ನ ಮುಂದೆ ತಂದು ನಿಲ್ಲಿಸಿರಿ."

ಓಡಿಹೋಗುವದೆಂದರೆ ಗಂಭೀರ ಅಪರಾಧ. ಅಂತಹವನಿಗೆ ಇಪ್ಪತ್ತೆಂಟು ದಿನಗಳ ಕ್ವಾರ್ಟರ್‌ಗಾರ್ಡ್ ಸೆರೆಮನೆಯ ಶಿಕ್ಷೆ ನಿಶ್ಚಿತ. ಅದರಲ್ಲೂ ಈ ಕಮಾಂಡಿಂಗ್ ಆಫೀಸರ್ ಕಟ್ಟುನಿಟ್ಟಾದ ಶಿಸ್ತಿನವ. ಕರ್ತವ್ಯವನ್ನು ನಿರ್ವಹಿಸುವಾಗ ಮನಸ್ಸಿನಲ್ಲಿ ಕಠೋರವಾಗಿರುವವ. ದಯೆದಾಕ್ಷಿಣ್ಯ ತೋರಿಸುವವನಲ್ಲ. ಒಂದೇ ಏಟಿನಲ್ಲಿ ಎರಡು ಹೋಳುಗಳು. ತಪ್ಪು ಮಾಡಿದರೆ ಶಿಕ್ಷೆಯಾಗಲೇಬೇಕು ಎಂಬ ಮತದವ. ಇಂದಿನತನಕ ಅವನ ಹಿಡಿತದಿಂದ ಪಾರಾದವರು ಯಾರೂ ಇಲ್ಲ. ಬೇಗನೇ ಒಬ್ಬ ಹೊಸ ಕೈದಿ ಬರುವವನಿದ್ದಾನೆ ಎಂಬ ವಾರ್ತೆ, ಯುನಿಟ್ ಕ್ವಾರ್ಟರ್ ಗಾರ್ಡ್‌ತನಕ ತಲುಪಿತು. ಅಲ್ಲಿಯ ಜನರು, ಹೊಸ ಕೈದಿಯ ಸಲುವಾಗಿ ಒಂದು ಜಾಗೆ ಖಾಲಿ ಮಾಡಿ ಇಟ್ಟರು.

ಮಧ್ಯಾಹ್ನ, ಪ್ಲಾಟೂನ್ ಕಮಾಂಡರ್ ಸುಭೇದಾರ್ ಮೋರೇ, ಜಯವಂತನನ್ನು ಸಂಗಡ ತೆಗೆದುಕೊಂಡು ಕಮಾಂಡಿಂಗ್ ಆಫೀಸರ್‌ನ ಬಳಿ ಹೋದ. ಜಯವಂತ ಒಳ್ಳೆಯ ಮಿಲಿಟರಿ ಉಡುಪನ್ನು ಧರಿಸಿದ್ದ.



ಫೌಜಿ ಶಿಸ್ತಿನಿಂದ ಮತ್ತು ಪದ್ಧತಿಯಿಂದ ಮೋರೇ, ಜಯವಂತನನ್ನು ಕಮಾಂಡಿಂಗ್ ಆಫೀಸರ್‌ನ ಮುಂದೆ ಮಾರ್ಚ್ ಮಾಡಿಸಿದ. ತಾನು ಆಫೀಸಿನ ಕದದ ಬಳಿ, ಹೊರಗೇ ನಿಂತ. ಚಾರ್ಜ್‌ಶೀಟ್, ಮೊದಲೇ, ಕಮಾಂಡಿಂಗ್ ಆಫೀಸರ್‌ನ ಮೇಜಿನ ಮೇಲೆ ತಲುಪಿತ್ತು.

ಅವನು ಜಯವಂತನ ಕಣ್ಣಿಗೆ ಕಣ್ಣು ತಾಗಿಸಿ ಗರ್ಜಿಸಿದ, ''ಓಡಿ ಏಕೆ ಹೋಗಿದ್ದಿಯೋ? ಹೋಗುವ ಕಾರಣ ಏನಿತ್ತು?''

ಜಯವಂತನಿಗೆ ಅರೆಕ್ಷಣ ಅನಿಸಿತು, ಹವಾಲದಾರ್ ರಾಮಸಿಂಗ್‌ನ ಹೆಸರು ಹೇಳಿ ಪಾರಾಗೋಣ ಎಂದು. ಆದರೆ ಅವನು ಸುಮ್ಮನೆ ನಿಂತ.

ಕಮಾಂಡಿಂಗ್ ಆಫೀಸರ್ ಅವನನ್ನು ಕೀಟಲೆ ಮಾಡುತ್ತ ಅಂದ, ''ಟ್ರೇನಿಂಗ್‌ನಲ್ಲಿಯ ಕಷ್ಟ ಸಹಿಸಲಾಗಲಿಲ್ಲ ಎಂದು ಕಾಣುತ್ತದೆ. ಫೌಜಿನಲ್ಲಿಯ ನೌಕರಿಯಲ್ಲಿ ಇಂತಹ ಪುಕ್ಕಲುತನ ನಡೆಯುವದಿಲ್ಲ ಕಣೋ.''

ಜಯವಂತ ಏನೂ ಮಾತಾಡಲಿಲ್ಲ.

''ಹಾಗಾದರೆ ಇಷ್ಟು ಬೇಗ ಮರಳಿ ಹೇಗೆ ಬಂದಿ?''

ಇಷ್ಟಾದರೂ ಅವನು ಬಾಯಿ ಬಿಡಲಿಲ್ಲ. ಕಮಾಂಡಿಂಗ್ ಆಫೀಸರ್ ರೇಗಿ, ಮೇಜಿನ ಮೇಲೆ ಮುಷ್ಟಿಯಿಂದ ಗುದ್ದಿ, ಒದರಿದ,

''ಮಾತಾಡೋ, ನಿನ್ನ ಬಾಯಿ ಬಿಗಿಯಾಗಿ ಬಿಟ್ಟಿದೆ ಏನೋ? ಮರಳಿ ಏಕೆ ಬಂದಿ ಹೇಳು.''

''ಅಮ್ಮ ಮನೆಯಲ್ಲಿ ತಕ್ಕೊಳ್ಳಲಿಲ್ಲ ಸಾಹೇಬರೇ.''

''ಏನು? ಏನಂದಿ ನೀನು?''

''ಓಡಿ ಬಂದಿದ್ದೇನೆ ಎಂದು ತಿಳಿದ ಕೂಡಲೇ ಅಮ್ಮ ಕದವನ್ನು ಮುಚ್ಚಿಕೊಂಡಳು.''

ಕಮಾಂಡಿಂಗ್ ಆಫೀಸರ್ ಕೆಲಹೊತ್ತು ಗೋಣು ಅಲ್ಲಾಡಿಸುತ್ತ ಕೂತ. ಮೇಜಿನ ಮೇಲಿನ ಶೋಭೆಯ ಕಲ್ಲನ್ನು ಕೈಯಲ್ಲಿ ತೆಗೆದುಕೊಂಡು ಗರಗರ ಆಡಿಸಿದ. ಆಮೇಲೆ ಎದ್ದು ನಿಂತು ಅವನು ಗದರಿದ, ''ಹೋಗು, ಹೋಗು. ಹೋಗಿಬಿಡು ಇಲ್ಲಿಂದ. ಹೊರಗೆ ಹೋಗು!''

ಜಯವಂತ ಸಲಾಮು ಹಾಕಿ ಹೊರಗೆ ಬಂದ. ಸಾಹೇಬರ ಗರ್ಜನೆಯನ್ನು ಕೇಳಿ, ಹೊರಗೆ ನಿಂತಿದ್ದ ಸುಭೇದಾರ್‌ನೂ ಹೆದರಿದ್ದ. ಅವನು, ಜಯವಂತ ಹೊರಗೆ ಬಂದ ಮೇಲೆ, ಅವನ ಸೊಂಟದ ಪಟ್ಟೆ ಮತ್ತು ಟೊಪ್ಪಿಗೆ ಇಳಿಸಿ, ಅವನನ್ನು ಕೈದಿ ಎಂದು ತೆಗೆದುಕೊಂಡು ಹೋಗುವ ತಯಾರಿ ನಡೆಸಿದ.

ಕಮಾಂಡಿಂಗ್ ಆಫೀಸರ್ ಹೊರಗೆ ಬಂದ. ಮಿದುವಾಗಿ ಹೇಳಿದ, ''ಸುಭೇದಾರ್ ಸಾಹೇಬರೇ, ಪಟ್ಟೆ ತೆಗೆಯಬೇಡಿ. ನಾನು ಅವನನ್ನು ನಿರ್ದೋಷಿ ಎಂದು ಬಿಟ್ಟಿದ್ದೇನೆ.''

ಸುಭೇದಾರ್‌ನು ಚಕಿತನಾಗಿ ಕಮಾಂಡಿಂಗ್ ಆಫೀಸರ್ ಕಡೆಗೆ ನೋಡಿದ. ಅಂದ, ''ಆದರೆ ಸಾಹೇಬರೇ, ಹಾಗೆ ಮಾಡಿದರೆ ಅವನು ಇನ್ನೊಮ್ಮೆ ಓಡಿಹೋಗಬಹುದಲ್ಲ.''

''ಇಲ್ಲ, ಇಲ್ಲ. ಸುಭೇದಾರ್ ಸಾಹೇಬರೇ, ಅವನು ಮತ್ತೆ ಓಡಿಹೋಗಲಾರ. ನಾನು ಹೇಳುತ್ತೇನೆ ನಿಮಗೆ. ಅವನು ಮತ್ತೆ ಎಂದಿಗೂ ಓಡಿಹೋಗಲು ಸಾಧ್ಯವಿಲ್ಲ!''

ತಿಂಗಳ ಮಾಯೆ

ಭಾವ ಬಿಂದು

ಆ ಹುಡುಗಿ ಆಶ್ರಮದ ಮಕ್ಕಳಲ್ಲಿ ಒಬ್ಬಳು. ಅವಳ ಹೆಸರು ಮಾಲಿನಿ. ನದಿಯದೇ ಹೆಸರು.

ಬಂದು ಸೇರಿದಾಗ ಎಂಟೊ ಹತ್ತು ವರ್ಷದ ಹುಡುಗಿಯಾಗಿದ್ದವಳು, ಮಾಲಿನಿ ದಿನ ಕಳೆದಂತೆ ಮೈತುಂಬಿ ಹಿರಿಯಳಾಗುತ್ತ ಬಂದಳು. ಆಗ ಆಶ್ರಮದಲ್ಲಿ ಅವಳಿಗೆ ಸರಿವಯಸ್ಸಿನ ಬೇರೆ ಹೆಣ್ಣು ಮಕ್ಕಳಿರಲಿಲ್ಲ. ಹೀಗಾಗಿ ಈ ಹುಡುಗಿ ಆಶ್ರಮಕ್ಕೆ ಬಂದ ಮೊದಲಿನಿಂದಲೂ ವಿಶೇಷವಾಗಿ ಗಂಡುಮಕ್ಕಳೊಂದಿಗೆ ಓಡಿಯಾಡಬೇಕಾಯಿತು. ಇವಳು ಹುಡುಗರೊಡನೆ ಕಲೆತು ಒಬ್ಬ ಹುಡುಗನಂತೆ ಆಗಿದ್ದಳು.

ಹೀಗೆ ಜೊತೆಯಾದ ಹುಡುಗರಲ್ಲಿ ಒಬ್ಬನು, ಭಾರದ್ವಾಜ ಹದಿನಾರು ಹದಿನೇಳು ವರ್ಷದ ತರುಣ. ಇನ್ನೊಬ್ಬ ದತ್ತ ಕಾಶ್ಯಪ, ಅವನಿಗಿಂತ ವರ್ಷ, ವರ್ಷ ಅರೆ ಕಿರಿಯ. ಇಬ್ಬರು ತರುಣರೂ ಕೂಡ ಇವಳನ್ನು ತಮ್ಮ ಜೊತೆಯ ಒಂದು ಗಂಡೆಂಬಂತೆ, ಇವಳೊಡನೆ ನಡೆಯುತ್ತ, ಇವಳು ಹಿರಿಯಳಾಗುತ್ತ ಬಂದರೂ ಯಾವ ಸಂಕೋಚವನ್ನೂ ಪಡದೆ ಇವಳೊಂದಿಗೆ ಸರಳವಾಗಿ, ಸಹಜವಾಗಿ ನಡೆದುಕೊಳ್ಳುತ್ತಿದ್ದರು.

ಹುಡುಗಿ ದೊಡ್ಡವಳಾಗಿ ತರುಣರೊಡನೆ ಹೀಗೆ ಆಡುತ್ತಾ ಇರುವಲ್ಲಿ, ಆಶ್ರಮದ ಮಂದಿ, ಎಂದೋ ಹಾಸ್ಯಕ್ಕೆ ಇವಳನ್ನು, ಆ ಇಬ್ಬರು ತರುಣರಲ್ಲಿ ಯಾರನ್ನು ಮದುವೆಯಾಗುತ್ತೀಯೆ, ಎಂದು ಕೇಳಿದರು. ಅವಳಿಗೆ ಅದುವರೆಗೆ ಈ ಯೋಚನೆ ತೋರಿರಲಿಲ್ಲ. ಆದರೆ ತಿರುಗಿ ಆ ತರುಣರ ಜೊತೆಗೆ ಹೋಗಿ ನಿಂತಾಗ ತಾನು ಇವರಿಬ್ಬರಲ್ಲಿ ಯಾರನ್ನು ಮದುವೆಯಾಗಬಹುದು ಎಂಬ ಯೋಚನೆ ಮೂಡಿತು. ಮನಸ್ಸು ಪ್ರಯತ್ನವಿಲ್ಲದೆ ಭಾರದ್ವಾಜನನ್ನು ಎಂದಿತು. ಭಾರದ್ವಾಜನಿಗೂ ಇವಳ ಕಡೆ ಮನಸ್ಸು ಒಲಿದಿರಬೇಕು. ಒಂದು ದಿನ ಇವರು ಹೊಳೆಯಲ್ಲಿ ಜೊತೆಯಾಗಿ ಈಸುತ್ತಿರುವಾಗ ಅವನು ಹುಡುಗಿಯನ್ನು, "ನಿನಗೆ ನನ್ನನ್ನು ಮದುವೆಯಾಗಲು ಇಷ್ಟವೇ?" ಎಂದು ಕೇಳಿದನು. ಹುಡುಗಿ ಹೂಗುಟ್ಟಿದಳು. ದಡ ಸೇರಿದ ಮೇಲೆ ಇವರು ಈ ಮಾತನ್ನು ದತ್ತನಿಗೆ ತಿಳಿಸಿದರು.

ಮದುವೆ ಆಗುವವರೆಂದು ಇವರು ಒಬ್ಬರಿಗೊಬ್ಬರು ಗೊತ್ತು ಆದರೇ ಹೊರತು ಭಾರದ್ವಾಜನೂ ತರುಣಿಯೂ ಎಂದಿನಂತೆಯೇ ಇರುತ್ತಿದ್ದರು. ಇವರ ಬಾಳರೀತಿಯಲ್ಲಿ ಆದ ಸ್ವಲ್ಪವೇ ವ್ಯತ್ಯಾಸವೆಂದರೆ ಎಲ್ಲಿಗಾದರೂ ಒಮ್ಮೊಮ್ಮೆ ಇವರು ದತ್ತನಿಗೆಂದು ಕಾಯದೆ ತಾವಿಬ್ಬರೇ ಹೋಗುವರು. ಸ್ವಲ್ಪ ದಿನ ಕಳೆದಿರಲು ಇವರು ಬೆಳದಿಂಗಳಲ್ಲಿ ಇಬ್ಬರೇ ಜೊತೆಯಾಗಿ ನಡೆಯುವರು. ಮಾಲಿನಿಗೆ ಬೆಳದಿಂಗಳೆಂದರೆ ತುಂಬ ಆಸೆ. ನಟ್ಟಿರುಳ ತಿಂಗಳಲ್ಲಿ ವನವನ್ನೆಲ್ಲ ನೋಡಬೇಕೆಂದು ಅವಳ ಮನಸ್ಸು ಬಯಸುವುದು. ಲೋಕ, ಸೂರ್ಯನ ಬೆಳಕಲ್ಲಿ ಒಂದು ರೀತಿಯ ವಸ್ತ್ರವನ್ನುಟ್ಟಂತೆ, ತಿಂಗಳ ಬೆಳಕಿನಲ್ಲಿ ಬೇರೊಂದು ವಸ್ತ್ರವನ್ನುಡುವುದೆಂದು ಅವಳಿಗೆ ತೋರುವುದು. ಗಿಡ, ಮರ, ಬಳ್ಳಿ, ಹೂತದ್ದು, ಹೂವದ್ದು, ಯಾವುದೊ ತಿಂಗಳಲ್ಲಿ ಯಾವುದೋ ಮಾಯೆಯಿಂದ ಮಿರುಗುವುದೆಂದು ಅವಳ ಅನುಭವ.

ತಿಂಗಳ ಬೆಳಕಿನಲ್ಲಿ ಏನೊ ಮಾಯೆಯಿದೆ. ಅದಕ್ಕೆ ಸಿಕ್ಕಿದವರು ಅದನ್ನು ಬಲ್ಲರು. ಹುಡುಗಿ ಅದಕ್ಕೆ ಸಿಕ್ಕಿದಳು; ಅದರಿಂದ ಮರುಳಾಗಿದ್ದಳು. ಇವಳೊಂದಿಗೆ ನಡೆದು ಭಾರದ್ವಾಜನೂ ತಿಂಗಳ ಮಾಯೆಗೆ ಸಿಕ್ಕಿದನು; ಮರುಳಾದನು; ಅವನಿಗೆ ಹುಡುಗಿ ತುಂಬ ಬೇಕೆನ್ನಿಸಿದಳು. ಅವನು ತಿಂಗಳ ಬೆಳಕಿನಲ್ಲಿ ಸುಮ್ಮನೆ ಅವಳನ್ನು ನೋಡುತ್ತ ನಿಲ್ಲುವನು. ಇವಳಿಗೆ ತಿಂಗಳು ಲೋಕಕ್ಕೆ ವಸ್ತ್ರವಾಗಿ ಕಂಡಂತೆ ಅವನಿಗೆ ಅದು ಇವಳ ಒಂದು ವಸ್ತ್ರ ಎಂದು ಕಂಡಿತು. ಪ್ರಣಯದ ಪ್ರಚೋದಕ ಶಕ್ತಿಯೆ ತಿಂಗಳನ್ನು ಮೇಲೆ ಹೊದೆದು ತನ್ನೆದುರಿಗೆ ನಿಂತಿದೆಯೆಂದು ಅವನಿಗೆ ಅನುಭವವಾಗುವುದು.

ವರ್ಷಾಕಾಲ ಬಂದಿತು. ಮಾಲಿನಿ ಹೊಸ ನೀರಿನಿಂದ ತುಂಬಿಹರಿಯುತ್ತದೆ. ವರ್ಷಂಪ್ರತಿ, ಶ್ರಾವಣದ ತುಂಬು ಹೊಳೆಯಲ್ಲಿ ನದಿಯನ್ನು ಈಸಿ ದಾಟುವುದು ಭಾರದ್ವಾಜನದು ಒಂದು ಆಟ. ಆ ಸಲ ಪ್ರವಾಹ ಬಂದಾಗ ಒಂದು ದಿನ ಹೊಳೆಯನ್ನು ಈಸಿ ದಾಟಬೇಕೆಂದು ಭಾರದ್ವಾಜನು ಮಾತೆತ್ತಿದನು.

ಪೂರ್ಣಿಮೆಯ ಹಿಂದಿನ ದಿನ ಮೋಡ ಎಲ್ಲೋ ಸ್ವಲ್ಪ ತೆರಪಾಗಿರುವ ವೇಳೆ ಇವರಿಬ್ಬರೂ ಹೊಳೆಯ ಸಹಕಾರ ವೃಕ್ಷದ ಬಳಿಗೆ ಹೋದರು. ತಿಂಗಳ ಬೆಳಕಿನಲ್ಲಿ ಒಂದು ಕಲ್ಲಿನ ಮೇಲೆ ಕುಳಿತು ತುಂಬಿದ ಹೊಳೆಯನ್ನು ನೋಡುತ್ತ ಎಷ್ಟೋ ಮಾತನಾಡುತ್ತ ಹೊತ್ತು ಕಳೆದರು. ಭಾರದ್ವಾಜನು ಮಾಲಿನಿಯನ್ನು ಅದುವರೆಗೂ ಪ್ರಣಯ ಭಾವದಿಂದ ಮುಟ್ಟಿರಲಿಲ್ಲ. ಆ ರಾತ್ರಿ ಹಠಾತ್ ಅವಳ ಮುಖವನ್ನು ತನ್ನ ಕೈಯಲ್ಲಿ ಹಿಡಿದು ಅವಳನ್ನು ಮುತ್ತಿಟ್ಟನು. ಹುಡುಗಿಗೆ ಇದು ಹೇಗೋ ಆಯಿತು. ಹೊಳೆಯ ಪ್ರವಾಹ ಕಾಡುಮರಗಳನ್ನು ಹೊಡೆದು ಕೊಂಡು ಹೋಗುವಂತೆ ಭಾರದ್ವಾಜನ ಪ್ರೇಮ ಇವಳ ಸಂಕೋಚವನ್ನೆಲ್ಲ ಕೊಚ್ಚಿಕೊಂಡು ಹೋಯಿತು.


ಪ್ರತಿಭಾ

ಮರುದಿವಸ ಉದಯವಾದ ನಾಲ್ಕು ಗಳಿಗೆಯ ವೇಳೆಗೆ ತರುಣರಿಬ್ಬರ ಈಸುವ ಆಟ. ತರುಣರಿಬ್ಬರೂ ನೀರಿಗೆ ಹಾರಿದರು. ಹೊಳೆ ತುಂಬಿ ಹರಿಯುತ್ತಿತ್ತು.ಆ ದಿನ ಭಾರದ್ವಾಜನು ಬಂಡೆಯ ಮೇಲೆ ಹಾಯುವ ಪ್ರಯತ್ನದಲ್ಲಿ ಸ್ವಲ್ಪ ಸೋತನೆಂದು ಕಾಣುತ್ತದೆ. ಸಾಲದ್ದಕ್ಕೆ ಇವರು ಹೊಳೆಯಲ್ಲಿ ಆ ಸ್ಥಳಕ್ಕೆ ಬರುವ ವೇಳೆಗೆ ಮೇಲಿನಿಂದ ಮರವೊಂದು ಹೊಳೆಯಲ್ಲಿ ತೇಲಿಬಂದಿತು. ಏನಾಯಿತೋ ಯಾರೂ ಹೇಳುವಂತಿಲ್ಲ. ಮರ ಒಂದು ಕೋಡುಗಲ್ಲಿಗೆ ಆತುಕೊಂಡಿತು. ತರುಣ, ಮರದ ಕೊಂಬೆಗಳ ಮಧ್ಯೆ, ಮರಕ್ಕೆ ಕಲ್ಲಿಗೆ ನಡುವೆ ನೀರಿನೊಳಕ್ಕೆ ಸಿಕ್ಕಿಕೊಂಡನು. ದತ್ತನು ಹುಚ್ಚನಂತೆ ತನ್ನ ಜೀವನವನ್ನು ಮೂರು ಸಲ ಸಾವಿಗೆ ಒತ್ತೆಮಾಡಿ ಭಾರದ್ವಾಜನ ದೇಹವನ್ನು ಕಲ್ಲಿನ ಮೇಲಕ್ಕೆ ಸೆಳೆದು ತಂದಿದ್ದನು.

ಮಾಲಿನಿ ನಿಜವಾಗಿಯೂ ಒಬ್ಬೊಂಟಿಯಾದಳು. ಮೊದಲು ಕೆಲವು ಕಾಲ ಹುಡುಗಿ ಹಗಲೆನ್ನದೆ ಇರುಳೆನ್ನದೆ ಭಾರದ್ವಾಜನನ್ನು ನೆನೆಯುತ್ತ ಇದ್ದಳು. ಅವನ ಎದೆ ಹರವು, ಆ ಕಣ್ಣ ಹೊಳಪು, ಧೀರವಾದ ಅವನ ನಡೆ, ಆ ನಡುವಿನ ಅಂದ, ಇವು ಅವಳ ಕಣ್ಣ ಮುಂದೆ ತಿರುತಿರುಗಿ ಹಾಯ್ದವು. ಕೊನೆಯ ಸಲ ತಾವು ಜೊತೆಯಾಗಿ ಕುಳಿತಿದ್ದ ಸಂದರ್ಭವನ್ನು ಮತ್ತೆ ನಿಜವೆಂಬಂತೆ ನೆನೆನೆನೆದು ಅವಳು ಸವೆದಳು. ಹೆಣ್ಣ ಕಿವಿಗೆ ಗಂಡ ದನಿ ಎಂದಾದರೂ ಸವಿಯೆ ಸರಿ. ಆದರೆ ಅದರಲ್ಲಿ ಒಲುಮೆ ಬೆರತಾಗ ಆ ಸವಿಗೆ ಹೊಸ ಒಂದು ಪಾಕ ಬರುತ್ತದೆ. ಅಂದಿನ ಅವನ ಮಾತಿನ ಆ ಪಾಕವನ್ನು ಅವಳು ನೆನೆದಳು. ದೂರದಲ್ಲಿ ನೀರಮೇಲೆ ಕಾಣುತ್ತಿದ್ದ ಅವನ ಮುಖದಲ್ಲಿ ಅವನ ಕಣ್ಣೆರಡು ಹೊಳೆಯುತ್ತಿದ್ದುದನ್ನು, ಕರೆಯಲ್ಲಿ ನಿಂತಿದ್ದ ತನ್ನಲ್ಲಿ ನೆಟ್ಟಿದ್ದುದನ್ನು, ತಾನು ಕಂಡೆನೆಂದು ಅವಳು ಭಾವಿಸಿದಳು. ಪ್ರಣಯ ಅಮರವೆನ್ನುವುದು ಬರಿಯ ಅಲಂಕಾರವಲ್ಲ. ನಿಜವಾದ ಮಾತು. ಆದರೆ ಆ ಪ್ರೇಮ ನಿಜವಾದಷ್ಟೂ ಅದರ ನಷ್ಟವೂ ನಿಜವಾಗಿತ್ತು. ಅಷ್ಟು ನಿಜವಾದ ಪ್ರೇಮ ಇಷ್ಟು ಸುಳ್ಳಾಯಿತಲ್ಲ ಎಂದು ಆ ತರುಣಿ, ಮಾಲಿನಿ ತೀರ ಹುಚ್ಚಳಂತಾದಳು. ತಪದ ನೆಲೆಯಲ್ಲಿ ಇಂಥ ಹುಚ್ಚು ಸರಿಯಲ್ಲ. ಆದರೆ ತಪದ ನೆಲ ಹುಚ್ಚು ಹಿಡಿಯದಂತೆ ಏಕೆ ತಡೆಯಲಿಲ್ಲ?

ಮಾಸ್ತಿಯವರ 'ಗೌತಮಿ ಹೇಳಿದ ಕತೆ'ಯಿಂದ

☐ ಸಂಘಮಿತ್ರ



ಸುದರ್ಶನ ಕೆ. ದೇಸಾಯಿ

ಕಳ್ಳನ ಜೀವ ಹುಳ್ಳುಳ್ಳಗೆ...

''ಮಿಸ್ಟರ್ ಅಧೋಕ್ಷಜ?''

''ಎಸ್... ಸ್ಪೀಕಿಂಗ್.''

''ಸರ್...ನಿಮಗೆ ದೂರವಾಣಿ ಕರೆಯಿದೆ.''

ಸ್ವಾಗತಕಕ್ಷದಿಂದ ಬಂದ ದೂರವಾಣಿ ಸಂದೇಶ.

ನನಗೋ ಅಚ್ಚರಿ... ನಾನು ಬೆಂಗಳೂರಿಗೆ ಬಂದು ಅರ್ಧಗಂಟೆ ಕಳೆದಿಲ್ಲ. ನಾನು ಬಂದ ವಿಷಯ... ಬರುತ್ತಿರುವ ವಿಷಯ ಗುಟ್ಟಾಗಿಟ್ಟಿದ್ದೆ... ಆದರೂ....

''ಸರ್'' ಆ ಕಡೆಯಿಂದ ಎಚ್ಚರಿಸಿದರು... ಯೋಚನಾ ಲಹರಿಯಿಂದ ಹೊರಬಂದೆ.

''ಎಸ್..ಕೊಡಿ''

ಮುಂದೆ... ಒಂದೈದಾರು ಕ್ಷಣಗಳು-ಅಷ್ಟೇ... ಗಡುಸಾದ ಅಷ್ಟೇ ದರ್ಪದ ವಾಣಿ.

''ಅಧೋಕ್ಷಜ?''

''ಹೇಳಿ ನಾನೇ''

''ನಮಸ್ಕಾರ-ಕ್ಷಮಿಸಿ, ನಿಮಗೆ ತೊಂದರೆ ಕೊಡುತ್ತಿರುವೆ.''

''ತಾವು ಯಾರೆಂದು ತಿಳಿಯಲಿಲ್ಲ...''

''ಸಾರಿ... ಸಾರಿ... ನಾನು ಶ್ಯಾಮಸುಂದರ್... ಡಿ.ಐ.ಜಿ. ಕ್ರೈಂ ಬ್ರ್ಯಾಂಚ್...''

''ಸಂತೋಷ... ಹೇಳಿ ನನ್ನಿಂದೇನಾಗ ಬೇಕು?''

''ನನಗೊಂದರ್ಧ ಗಂಟೆ ಸಮಯ ಕೊಡಿ ಮಾತಾಡಬೇಕಿದೆ.''

''ನಾನೊಂದು ಕೆಲಸದ ಮೇಲೆ ಬಂದಿದ್ದೇನೆ... ಅದು ಮೊದಲು... ನಂತರ... ಕ್ಷಮಿಸಿ''

''ಅಧೋಕ್ಷಜ... ವಿಷಯ ತುಂಬಾ ಮಹತ್ವದ್ದು... ಅಷ್ಟೇ ಸೂಕ್ಷ್ಮವಾಗಿದೆ... ಹೀಗಾಗಿ...'' ಅವರ ಮಾತಿನ ಅರ್ಥ ನನಗಾಗಿತ್ತು...

''ಸರಿ. ಅರ್ಧಗಂಟೆ ಬಿಟ್ಟು ಬನ್ನಿ''

''ಥ್ಯಾಂಕ್ಸ್... ನಾ ಬರುವೆ''

ರಿಸೀವರ್ ಯಥಾಸ್ಥಾನದಲ್ಲಿರಿಸಿ ಬಾತ್ ರೂಮಿಗೆ ನುಗ್ಗಿದೆ. ಅವರು ಬರುವಷ್ಟರಲ್ಲಿ ನಾನು ಸಿದ್ಧನಾಗಬೇಕಿತ್ತು... ಅಯಾಚಿತವಾಗಿ ಚಟುವಟಿಕೆಯಲ್ಲಿ ತೊಡಗಿದೆ. ಆದರೂ ಮಿದುಳಲ್ಲಿ ಒಂದೇ ಕೊರೆತ. ಶ್ಯಾಮಸುಂದರ್ ಪರಿಚಯವಿಲ್ಲದ ವ್ಯಕ್ತಿ... ನನ್ನ ಬಳಿ ಏನು ಕೆಲಸ ಇರಬಹುದು? ಅದರಲ್ಲೂ ಪೊಲೀಸ್ ಡಿ.ಐ.ಜಿ.

ಇಪ್ಪತ್ತು ನಿಮಿಷಗಳಲ್ಲಿ ಸಿದ್ಧವಾಗಿದ್ದೆ.... ಟಿಫಿನ್‌ಗೆ ಆರ್ಡರ್ ಸಹ ನೀಡಿದ್ದೆ. ಇಬ್ಬರಿಗಾಗಿ... ಶ್ಯಾಮಸುಂದರ್ ಸರಿಯಾದ ಸಮಯಕ್ಕೆ ಆಗಮಿಸಿದರು. ಆರು ಪಾಯಿಂಟ್ ಒಂದಿಂಚು ಎತ್ತರ. ಮುಖದ ತುಂಬ ಬೆಳೆದ ದಪ್ಪನಾದ ಮೀಸೆ. ಕೆಂಪು ಕಣ್ಣು, ಜಿಗಿದ ತುಟಿಗಳು. ಸ್ವಲ್ಪ ಮೊಂಡಮೂಗು. ಟೊಮೆಟೊ ಬಣ್ಣ. ಇಲಾಖೆಗೆ ತಕ್ಕ ವ್ಯಕ್ತಿತ್ವ. ನಾನವರ ಕೈ ಕುಲುಕಿದೆ. ಮತ್ತೊಮ್ಮೆ ಪರಿಚಯದ ಮಾತು ಕತೆಗಳು ನಡೆದವು ಮಾತನಾಡುತ್ತ, ಉಪಾಹಾರ ಸೇವಿಸಿದ್ದೂ ಆಯಿತು. ಅವರೂ ಸಂಕೋಚಪಡದೆ ನನ್ನೊಂದಿಗೆ ತಿಂಡಿ ತಿಂದರು. ಕಾಫಿ ಕುಡಿದು, ನ್ಯಾಪಕಿನ್‌ದಿಂದ ತುಟಿ ಮೇಲೆ ಸವರಿಕೊಂಡು ಅವರೆಡೆ ನೋಡಿದೆ. ಅವರೂ ಸಿದ್ಧರಾಗಿಯೇ ಇದ್ದರು.


ಶಶಿಧರ್

''ಅಧೋಕ್ಷಜ, ವರದಕ್ಷಿಣೆ ಅತ್ಯಾಚಾರ, ಸಾವು, ಆತ್ಮಹತ್ಯೆ ಮುಂತಾದವುಗಳ ವಿಚಾರಣೆಗಳ ಮುಖ್ಯಸ್ಥ ನಾನು... ಎರಡು ವರ್ಷಗಳಿಂದ ಈ ಹುದ್ದೆಯಲ್ಲಿರುವೆ.''

''ಹೂಂ''... ನಾನವರ ಮಾತಿಗೆ ಪುಟ ನೀಡಿದೆ.

''ಈಗ ನಾನೇ ವರದಕ್ಷಿಣೆ ಕೊಲೆ ಸಂಚಿನಲ್ಲಿ ಸಿಕ್ಕಿಹಾಕಿಕೊಂಡಿರುವೆ''

ನಾನು ಬೆಚ್ಚಿದೆ. ವಿಷಯವೇ ಹಾಗಿತ್ತು. ಅವರ ಮುಖ ಇಳಿದಿತ್ತು.

''ಅಧೋಕ್ಷಜ... ಈಗೆಂಟು ತಿಂಗಳ ಹಿಂದೆ ನನ್ನ ಮಗನ ಮದುವೆ ಆಯಿತು. ಸೊಸೆ ಎಲ್ಲ ರೀತಿಯಿಂದಲೂ ಅನುರೂಪಳು. ನಮ್ಮಲ್ಲಿ ಯಾವುದೇ ರೀತಿಯ ತಂಟೆ... ಜಗಳ ಮುಂತಾದವು ಇರಲಿಲ್ಲ. ಅನ್ಯೋನ್ಯವಾಗಿಯೇ ಇದ್ದೆವು. ಒಂದು ಗಂಟೆ ಹಿಂದೆ, ನನ್ನ ಮನೆಯಿಂದ ಫೋನು ಬಂದಿತು...'' ನಾನವರ ಮುಖ ನೋಡುತ್ತಿದ್ದೆ. ಮೌನವಾಗಿ ಅವರಿಗೆ ಮಾತನಾಡಲು ಸಹಕರಿಸುತ್ತಿದ್ದೆ. ಅವರಿಗೂ ಅದು ತಿಳಿದಿತ್ತು. ತಮಗೇ ಮಾತನಾಡಲು ಹೆಚ್ಚು ಅವಕಾಶ ನೀಡುತ್ತಿರುವೆನೆಂದು. ಮುಂದುವರೆಸಿದರು.

''ನನ್ನ ಸೊಸೆ... ಮೃದುಲಾಳ ಸುಟ್ಟು ಕರಕಾದ ಶವ, ಅಡುಗೆ ಮನೆಯಲ್ಲಿ ದೊರೆತಿದೆಯಂತೆ... ಈಗಾಗಲೇ ಸ್ಥಳೀಯ ಪೊಲೀಸರು ಆಗಮಿಸಿದ್ದಾರೆ, ಕೂಡಲೇ ಹೊರಟುಬನ್ನಿ ಎಂದು.''

''ಫೋನು ಮಾಡಿದವರಾರು?''

''ನನ್ನ ಪತ್ನಿ ಅನುಪಮಾ.''

''ರಾತ್ರಿನಡೆದ ದುರ್ಘಟನೆ ಬಗ್ಗೆ ಅವರಿಗೆ ತಿಳಿದಿಲ್ಲವೆ?''

''ಇಲ್ಲ. ಅವರ ಬೆಡ್‌ರೂಮು ಮೇಲಿದೆ. ಸೊಸೆಯದು ಕೆಳಗಿದೆ. ಕಿಚನ್ ಸಹ, ಹೀಗಾಗಿ...''

''ಅತ್ತೆ-ಸೊಸೆ... ಗಂಡ-ಹೆಂಡತಿ ಅಥವಾ ಇನ್ನಾರೊಂದಿಗೋ ವೈಮನಸ್ಸು... ಜಗಳ... ಮುಂತಾದ....''

''ನೋ.. ನೋ... ಅಂತಹದೇನೂ ಇರಲೇ ಇಲ್ಲ ಅಂತ ಮೊದಲೇ ಹೇಳಿರುವೆ... ಹಾಂ, ಒಂದು ವಿಷಯ''

''ಏನದು?''

''ನನ್ನ ಸೊಸೆ ಮೃದುಲಾ ಮೇಲಿಂದ ಮೇಲೆ ತವರು ಮನೆಗೆ ಹೋಗುತ್ತಿದ್ದಳು... ಪಾಪ! ಇದೇ ತಾನೆ ಮದುವೆಯಾಗಿದೆ ಎಂದು ಯೋಚಿಸಿದ ನಾವು ಸುಮ್ಮನಿದ್ದೆವು''

''ಮತ್ತೆ ನಿಮ್ಮ ಮಗ... ಅವರ ಹೆಸರೇನು?''

''ಸಂಜಯ... ಆತ ಕಂಪ್ಯೂಟರ್ ಇಂಜಿನೀಯರ್.''

''ಹಾಂ. ಅವರೂ ಹೆಂಡತಿ ಜೊತೆ ಹೋಗುತ್ತಿದ್ದರಾ?''

''ಇಲ್ಲ... ಅವನಿಗೆ ಕೆಲಸವಿದೆ ನೋಡಿ... ಬಹಳವೆಂದರೆ ಒಂದೆಂಟು ಬಾರಿ ಹೋಗಿರ ಬಹುದು.''

''ಸರಿ.... ನನ್ನಿಂದೇನಾಗಬೇಕು?''

''ನನ್ನ ಸೊಸೆ ಸತ್ತದ್ದೂ ನಿಜ... ಅಗ್ನಿ ಅನಾಹುತ ನಡೆದದ್ದೂ ಸಹ ಸತ್ಯ. ನಮ್ಮನ್ನು ಉದ್ದೇಶಪೂರ್ವಕವಾಗಿ ಇದರಲ್ಲಿ ಸಿಕ್ಕಿಸಲಾಗಿದೆ... ಏನೋ ಸಂಚು! ಯಾವುದೋ ಷಡ್‌ಯಂತ್ರ ಎಂಬ ಭಾವನೆ ನನ್ನದು. ನೀವಿದರ ಪರಿಶೋಧನೆ ಮಾಡಬೇಕು. ನಿಮ್ಮೆಲ್ಲ ನಿಬಂಧನೆಗಳಿಗೆ ನನ್ನ ಒಪ್ಪಿಗೆ ಇದೆ.''

ಒಂದೆರಡು ನಿಮಿಷ ನಾನು ಯೋಚಿಸಿದೆ... ನಂತರ ಉತ್ತರಿಸಿದೆ.

''ನೀವೀಗ ಹೊರಟುಬಿಡಿ... ಸಾಯಂಕಾಲದವರೆಗೂ ನನ್ನ ಕೆಲಸ ಮುಗಿಯುತ್ತದೆ. ಇಂದೇ ರಾತ್ರಿ,... ತಪ್ಪಿದರೆ ನಾಳೆ ಬೆಳಗ್ಗೆ ನಾನು ತಮ್ಮಲ್ಲಿಗೆ ಬರುತ್ತೇನೆ.''

ಅವರು ಎದ್ದು ನಿಂತರು... ಪ್ಯಾಂಟಿನ ಜೇಬಿಗೆ ಕೈಹಾಕಿ ಪಾಕೀಟು ತೆರೆದರು. ತಮ್ಮ ಹೆಸರು, ವಿಳಾಸದ ಕಾರ್ಡು, ಸಹಿ ಮಾಡಿದ ಐವತ್ತು ಸಾವಿರ ರೂಪಾಯಿಗಳ ಚೆಕ್ಕೊಂದನ್ನು ತೆಗೆದು ಮುಂದಿರಿಸಿದರು. ನಾನು ಕಣ್ಣಲ್ಲೇ ಸಮ್ಮತಿಸಿದೆ.

ಭಾರವಾದ ಹೆಜ್ಜೆಗಳನ್ನಿಡುತ್ತ ಅವರು ಹೊರಟು ಹೋದರು.

ನಾನು ಶ್ಯಾಮಸುಂದರ್ ಅವರನ್ನು ಮರೆತು ನನ್ನ ಕೆಲಸದಲ್ಲಿ ಮನತೊಡಗಿಸಿದೆ.

2

ರಾತ್ರಿ ಹನ್ನೊಂದು ಗಂಟೆಯಾಗಿತ್ತು.

ಶ್ಯಾಮಸುಂದರ್ ಅವರ ಮನೆಮುಂದೆ ಟ್ಯಾಕ್ಸಿಯಿಂದಿಳಿದೆ. ಗೇಟಿಗೇ ಕಾವಲಿದ್ದ ಕಾನಸ್ಟೇಬಲ್. ಆತ ನನ್ನೆಡೆ ನೋಡುತ್ತಿದ್ದ. ಅದರರ್ಥ ತಿಳಿದುಕೊಂಡೆ ನಾನು. ನನ್ನ ಐಡೆಂಟಿಟಿ ಕಾರ್ಡ್ ಅವನ ಕಡೆ ತೋರಿಸಿ 'ಅಧೋಕ್ಷಜ-ಪ್ರೈವೇಟ್ ಡಿಟೆಕ್ಟಿವ್' ಎಂದೆ. ಬಹುಶಃ ಅವನ ಮುಂದೆ ನನ್ನ ಹೆಸರಿನ ಪ್ರಸ್ತಾಪವಾಗಿರಬೇಕು. ತಟಕ್ಕನೆ ನುಡಿದ ನಾತ,

''ಓಹ್ ಬನ್ನಿ ಸರ್. ಸಾಹೇಬರು ತಮ್ಮನ್ನೇ ನಿರೀಕ್ಷಿಸುತ್ತಿದ್ದಾರೆ''

ನಾನವನನ್ನು ಹಿಂಬಾಲಿಸಿದೆ... ನಿಜವಾಗಿಯೂ ನನ್ನ ನಿರೀಕ್ಷೆಯಲ್ಲಿಯೇ ಇದ್ದರು ಅವರೆಲ್ಲ. ಕೇವಲ ಶ್ಯಾಮಸುಂದರ್ ಮಾತ್ರವಲ್ಲ ಇನ್ನೂ ಅನೇಕರಿದ್ದರು.

''ಓಹ್... ಅಧೋಕ್ಷಜ... ಬನ್ನಿ''

ಸೋಫಾದಿಂದ ಎದ್ದು ಬಂದು ಕೈ ಕುಲುಕಿದರು. ನನ್ನ ಕೈಯಲ್ಲಿಯ ಸೂಟ್‌ಕೇಸು ಆಳೊಬ್ಬನ ಕೈ ಸೇರಿತು.

''ದುರ್ಘಟನೆ ನಡೆದದ್ದೆಲ್ಲಿ?''

ಅವರು ನನ್ನನ್ನು ಕಿಚನ್‌ಗೆ ಕರೆದೊಯ್ದರು. ಬಾಗಿಲು ಮುಚ್ಚೆ, ಬೀಗ ಹಾಕಿ ಸೀಲ್ ಮಾಡಿದ್ದರು. ಅಲ್ಲೊಬ್ಬ ಆಫೀಸರ್ ಕಾಯುತ್ತಿದ್ದ, ನಮಗಾಗಿ. ನಾವಲ್ಲಿಗೆ ಹೋಗುತ್ತಲೂ ಎದ್ದು ನಿಂತ ಆತ, ತಾನೇ ತಾನಾಗಿ ಸೀಲ್ ಒಡೆದು ಬೀಗ ತೆರೆದ. ಶ್ಯಾಮಸುಂದರ್ ಮೊದಲು, ನಂತರ ನಾನು ಕಿಚನ್ ಬಳಿಗೆ ನಡೆದೆವು.

ಹನ್ನೆರಡು... ಹತ್ತರ ಕೋಣೆ... ಸುತ್ತಲೂ ಕಟ್ಟೆ... ಗೋಡೆಯೊಳಗೆ ಶೆಲ್ಫ್. ಎಲ್ಲಾ ಬಗೆಯ ಪಾತ್ರೆಗಳು... ಒಂದೆಡೆ ಸಿಂಕು. ಸುಂದರವಾದ ಸುಸಜ್ಜಿತ ಕಿಚನ್ ಅದಾಗಿದ್ದಿತು ಎಂಬುದರಲ್ಲಿ ಸಂಶಯವಿರಲಿಲ್ಲ. ಆದರೆ ಈಗ ಒಂದು ಬಗೆಯ ಭೀಭತ್ಸ ದೃಶ್ಯ ಅಲ್ಲಿತ್ತು. ಶೆಲ್ಫುಗಳು ತಲೆಕೆಳಗಾಗಿ ಬಿದ್ದಿದ್ದವು. ಒಂದೆರಡು ಸುಟ್ಟು ಕರಕಾಗಿದ್ದವು. ಪಾತ್ರೆಗಳೆಲ್ಲಾ ಎಲ್ಲೆಂದರಲ್ಲಿ ಹರಡಿದ್ದವು. ಬಾಗಿಲ ಒಳಭಾಗ ಅರ್ಧಕ್ಕಿಂತ ಹೆಚ್ಚು ಸುಟ್ಟಿತ್ತು. ಒಂದು ಬಾರಿ ಜೋರಾಗಿ ಒದ್ದರೆ ಮುರಿದುಬೀಳುವಂತಾಗಿತ್ತು. ಉಳಿದ ಕಡೆ ಗೋಡೆಗಳೆಲ್ಲ ಕಪ್ಪಾಗಿರಲಿಲ್ಲ. ಮೇಲ್ಗಡೆ ಸ್ವಲ್ಪ ಕಪ್ಪು ಕಾಡಿಗೆ. ಮೃದುಲಾಳ ಶವ ಬಿದ್ದ ಕಡೆ ಬಿಳಿ ಸುಣ್ಣದಿಂದ ಗುರುತು ಹಾಕಿದ್ದರು. ಮತ್ತೊಂದು ಬಾರಿ ಸೂಕ್ಷ್ಮವಾಗಿ ಅವಲೋಕಿಸಿದೆ.

ನಾವು ಹೊರಬರುತ್ತಲೂ, ಆಫೀಸರ್ ಮತ್ತೆ ಕಿಚನ್ ಬಾಗಿಲು ಮುಚ್ಚಿ ಸೀಲ್ ಮಾಡಿದ. ಅಷ್ಟರಲ್ಲಿ ಚಹ ಬಂದಿತು. ಚಹ ಕುಡಿಯುತ್ತಿದ್ದಂತೆ ನಮ್ಮ ಬಳಿ ಮೂರು ನಾಲ್ಕು ಜನ ಬಂದರು. ಅದರಲ್ಲಿ ಒಬ್ಬಳು ಮಧ್ಯ ವಯಸ್ಸಿನವಳು. ಅತ್ತು ಅತ್ತು ಅವರ ಕಣ್ಣುಗಳು ಕೆಂಪಾಗಿದ್ದವು ಶೋಕವಿನ್ನೂ ತಗ್ಗಿರಲಿಲ್ಲ. ಅವರಿಗಿಂತ ಹೆಚ್ಚು ವಯಸ್ಸಾದ ಪುರುಷರು, ಅವರ ಮುಖ ಸಹ ಶೋಕತಪ್ತವಾಗಿತ್ತು. ಬಹುಶಃ ಅವರು ಮೃದುಲಾಳ ತಂದೆ ತಾಯಿ ಇರಬೇಕು ಎಂದುಕೊಂಡೆ. ನನ್ನ ಊಹೆ ನಿಜವಾಗಿತ್ತು. ಶ್ಯಾಮಸುಂದರ್ ಪರಿಚಯಿಸಿದರು.

''ಇವರು ಮೃದುಲಾಳ ತಂದೆ ತಾಯಿ. ಲಕ್ಷ್ಮೀಪತಿ... ಶ್ರೀದೇವಿ... ದುಃಖದ ಕಟ್ಟೆ ಒಡೆದಿತ್ತು. ಇಬ್ಬರೂ ಭೋರೆಂದು ಅತ್ತರು. ಅವರ ಜೊತೆಗಿದ್ದವರು ಸಮಾಧಾನಪಡಿಸಿದರು. ನನಗೆ ಇವೆಲ್ಲಾ ಸಾಮಾನ್ಯ, ನಾಲ್ಕಾರು ನಿಮಿಷಗಳಲ್ಲಿ ಅವರು ಮೊದಲಿನಂತಾದರು. ನಾನು ಲಕ್ಷ್ಮೀಪತಿಯವರ ಕಡೆ ನೋಡುತ್ತ ಕೇಳಿದೆ,

''ಈ ದುರ್ಘಟನೆ ಬಗ್ಗೆ ನಿಮ್ಮ ವಿಚಾರ ವೇನು? ಲಕ್ಷ್ಮೀಪತಿಯವರೆ?''

ಅವರು ಒಮ್ಮೆಲೇ ಉತ್ತರಿಸಲಿಲ್ಲ. ಹೆಂಡತಿ ಕಡೆ ನೋಡಿದರು.. ಮುಖ ಉಗ್ರವಾಯಿತು.

''ನಂತರ ಏಕಾಂತದಲ್ಲಿ ಮಾತನಾಡುತ್ತೇನೆ''


ಶ್ಯಾಮಸುಂದರ್ ಅವರಿಗೆ 'ಶಾಕ್' ನೀಡಿತು ಅವರ ಮಾತು. ಅವರು ಬೆಚ್ಚಿಬಿದ್ದರು.

''ರಾಯರೆ, ಏನೆಂಬುದನ್ನು ಈಗಲೇ ಹೇಳಿಬಿಡಿ''

''ಎಲ್ಲವನ್ನು ಎಲ್ಲಿ ಬೇಕೋ ಅಲ್ಲಿ ಹೇಳುವಂತಿಲ್ಲ, ಸಾಹೇಬರೆ... ನಾನು ನಂತರ ಅವರ ಜೊತೆ ವಿವರವಾಗಿ ಮಾತನಾಡುತ್ತೇನೆ''

ಸಮಸ್ಯೆ ಜಟಿಲಗೊಂಡಿತು. ನಾನು ತಿಳಿದಂತೆ ಸರಳವಾಗಿರಲಿಲ್ಲ.

ಶ್ಯಾಮಸುಂದರ ಅವರಂತೂ ಹೌಹಾರಿ ಹೋಗಿದ್ದರು. ತಮ್ಮ ಬಗ್ಗೆ ಬೀಗರು ಈ ರೀತಿ ಸಂಶಯ ವ್ಯಕ್ತಪಡಿಸುತ್ತಾರೆಂದು ಕನಸಲ್ಲೂ ನಂಬಿರಲಿಲ್ಲ. ನಾನೇ ನುಡಿದೆ, ''ಸಾಹೇಬರೆ, ಈಗ ರಾತ್ರಿ ಹನ್ನೆರಡೂವರೆಯಾಗಿದೆ. ಒತ್ತಾಯಿಸಬೇಡಿ. ನಾಳೆ ಬೆಳಿಗ್ಗೆ ನಿಧಾನವಾಗಿ ಮಾತನಾಡೋಣ''



ಮುಂದೆ ಮಾತು ಬೆಳೆಯಲಿಲ್ಲ.

ನನಗಾಗಿ ಕಾದಿರಿಸಿದ ಕೋಣೆಗೆ ಬಂದೆ... ಶ್ಯಾಮಸುಂದರ್ ಅವರೂ ಬಂದರು. ಒಂದು ತಟ್ಟೆಯಲ್ಲಿ ಸ್ವೀಟು, ಬಾಳೆಹಣ್ಣು, ಬಿಸ್ಕತ್ತು ಹಾಗೂ ಹಾಲಿನ ಲೋಟಾ; ನನಗೂ ಹಸಿವೆಯಾಗಿತ್ತು. ತಿಂದು, ಹಾಲು ಕುಡಿದೆ.

ಅಲ್ಲಿಯವರೆಗೂ ಮೌನವಾಗಿದ್ದ ಅವರು ಅಸಮಾಧಾನ ವ್ಯಕ್ತಪಡಿಸಿದರು, ''ನಮ್ಮ ಬೀಗರು ಮೊದಲು ಹೀಗಿರಲಿಲ್ಲ, ತುಂಬಾ ಬದಲಾಯಿಸಿದ್ದಾರೆ.''

''ಮಗಳ ಸಾವು... ಸಾಮಾನ್ಯವಲ್ಲ... ಇರಲಿ... ವಿಷಯ ವಿವರವಾಗಿ ಹೇಳಿ.''

''ಹೇಳುವುದೇನೂ ಇಲ್ಲ. ಇದ್ದದ್ದನ್ನು ಆಗಲೇ ಹೇಳಿರುವೆ. ನಾನಂತೂ ಮೂರು ದಿನಗಳಿಂದ ಟೂರ್ ಮೇಲಿದ್ದೆ... ಮನೆಯಿಂದ ಫೋನು ಬಂದಾಗಲೇ ತಿಳಿದದ್ದು.''

''ಮತ್ತೆ... ನಿಮ್ಮ ಮನೆಯ ಜನಕ್ಕೆ ಈ ವಿಷಯ ಏಕೆ ತಿಳಿಯಲಿಲ್ಲ? ಒಂದು ಜೀವಿಗೆ ಬೆಂಕಿ ತಗಲಿದಾಗ ಚೀರಾಡುತ್ತದೆ, ಒದ್ದಾಡುತ್ತದೆ, ಇದು ಏನೂ ಕೇಳಿಸಲಿಲ್ಲವೆ?

''ಅವರಿಗೇನೂ ತಿಳಿಯದು ಅನ್ನುತ್ತಾರೆ.''

''ಆಶ್ಚರ್ಯವಾಗಿದೆಯಲ್ಲ? ಅದೆಂಥ ನಿದ್ರೆ ಮನೆಮಂದಿಗೆಲ್ಲ?''

''ಹಾಂ, ಇನ್ನೊಂದು ವಿಷಯ. ಮನೆಯಲ್ಲಿದ್ದವರು ಮೂರು ಜನ. ನನ್ನ ಪತ್ನಿ ಮಗ... ಮತ್ತು ಅಡುಗೆ ಕೆಲಸ ಮಾಡುವ ಸೀತಮ್ಮ. ಅವರೆಲ್ಲ ಪ್ರತಿದಿನ ಬೆಳಿಗ್ಗೆ ಆರು ಗಂಟೆಗೇ ಏಳುವುದು. ಇಂದು ಎಂಟಾದರೂ ಎಚ್ಚರವಾಗಿರಲಿಲ್ಲ. ಎಚ್ಚರವಾದರೂ ತಲೆಯೆಲ್ಲಾ ಭಾರ. ಕಣ್ಣು ಉರಿತ...''

''ಹೂಂ... ನಾನು ಮುಗುಳ್ನಕ್ಕೆ. ಅದನ್ನು ಅವರು ಗಮನಿಸಿದರು.''

''ಅಧೋಕ್ಷಜ, ನನಗೂ ಸಹ ಡೌಟ್. ಆ ಮೂವರಿಗೂ ಕ್ಲೋರೋಫಾರ್ಮ್ ನೀಡಿ ಮೂರ್ಛೆ ತಪ್ಪಿಸಿದ್ದಾರೆ. ಮೃದುಲಾಳಿಗೂ ಕೂಡ... ನಂತರ ಎತ್ತಿ ಒಯ್ದು, ಕಿಚನ್‌ನಲ್ಲಿ ಕೆಡವಿ ಬೇರೆ ಇಟ್ಟಿದ್ದಾರೆ...''

ಮನದಲ್ಲಿ ಸಂಶಯ ಹೆಡೆಯಾಡಿತು.

ಕಿಚನ್ ನೋಡಿದ ಮೇಲೆ ನಾನೂ ಸಹ ಇದೇ ನಿರ್ಣಯಕ್ಕೆ ಬಂದಿದ್ದೆ. ಮೈ ಎಲ್ಲಾ ಹತ್ತಿ ಉರಿಯುತ್ತಿರುವಾಗ ಆಕೆ ಚೀರಲಿಲ್ಲ? ಚೀರಿದರೂ ಮನೆಯಲ್ಲಿದ್ದವರಿಗೆ, ಪಕ್ಕದಲ್ಲಿದ್ದವರಿಗೆ, ಕೇಳಿಸಲಿಲ್ಲ ವೆಂದರೆ ಖಂಡಿತವಾಗಿ ಅಲ್ಲಿ ನಿದ್ದೆ ಮಾತ್ರೆ ಅಥವಾ ಕ್ಲೋರೋಫಾರ್ಮ್ ಉಪಯೋಗಿಸಿದ್ದಾರೆ. ಮೃದುಲಾಗೂ ಸಹ ಸಂಪೂರ್ಣ ಸ್ಮೃತಿ ತಪ್ಪಿಸಿ ಕಿಚನ್‌ಗೆ ಒಯ್ದು ಚೆಲ್ಲಿದ್ದಾರೆ. ಬಾಗಿಲು ಭದ್ರವಾಗಿ ಮುಚ್ಚಿ, ಅವರ ದೇಹದ ಮೇಲೆ ಸೀಮೆಎಣ್ಣೆ ಸುರುವಿದ್ದಾರೆ. ಕಿಚನ್‌ನಲ್ಲಿಯ ಸಾಮಾನುಗಳೂ ಸಹ ಬೇಕಂತಲೇ ಚೆಲ್ಲಾಡಿದಂತೆ ಅನಿಸುತ್ತಿತ್ತು. ಅವರ ದೇಹಕ್ಕೆ ಬೆಂಕಿ ಇಡುವ ಮುನ್ನ ಸಾಮಾನೆಲ್ಲ ಚೆಲ್ಲಾಡಿ, ಒಂದೆರಡು ಶೆಲ್ಫ್ ಸಹ ದೇಹದ ಬಳಿ ಒಗೆದು, ಬೆಂಕಿಯಿಟ್ಟು, ಹೊರಗೆ ಬಂದು ಬಾಗಿಲು ಮುಚ್ಚಿಕೊಂಡಿದ್ದಾರೆ.

ಹೀಗಾಗಿ ಮೃದುಲಾ ಚೀರಿಕೊಳ್ಳುವ ಪ್ರಶ್ನೆಯೇ ಇಲ್ಲ.

ಅವಳ ದೇಹ ಬಾಗಿಲ ಬಳಿ ಇದ್ದುದರಿಂದ ಕೇವಲ ಅದಷ್ಟೆ ಸುಟ್ಟಿದೆ. ಅಲ್ಲಿ ಒಂದೆಡೆ ಮಾತ್ರ ಕಪ್ಪು ಕಾಡಿಗೆ ಹರಡಿದೆ. ಮಿಕ್ಕೆಲ್ಲ ಕಡೆ ಗೋಡೆಗಳು ಶುಭ್ರವಾಗಿವೆ...

ಈ ವಿಷಯ ಶ್ಯಾಮಸುಂದರ್ ಅವರೂ ಸಹ ನುಡಿಯುತ್ತಿದ್ದಾರೆಂದರೆ... ಈ ವಿಷಯ ಅವರಿಗೆ ಮೊದಲೇ ತಿಳಿದಿತ್ತು... ಅಥವಾ ಅವರ ಕಣ್ಮುಂದೆಯೇ ನಡೆಯಿತು. ಇಲ್ಲವೇ... ಇಲ್ಲವೇ... ಓಹ್ ಗಾಡ್, ಈ ಕೃತ್ಯ ಅವರೇ ಏಕೆ ಮಾಡಿರಬಾರದು?

ಮೈ ಜುಂ ಎಂತು, ಇದೆಂಥ ಷಡ್‌ಯಂತ್ರ?

ಅವರೊಬ್ಬ ನುರಿತ ಅನುಭವಿ ಪೊಲೀಸ್ ಅಧಿಕಾರಿ. ಇಂಥ ನೂರಾರು ಹತ್ಯೆ, ದುರ್ಘಟನೆ ನೋಡಿದ್ದಾರೆ, ಪರಿಶೀಲಿಸಿದ್ದಾರೆ... ಮೊಕದ್ದಮೆ ನಡೆಸಿದ್ದಾರೆ, ಅಪರಾಧಿಗಳಿಗೆ ಶಿಕ್ಷೆ ಕೊಡಿಸಿದ್ದಾರೆ.

ಆ ಅನುಭವದ ಸದುಪಯೋಗ ಇಲ್ಲಿ ಏಕೆ ತೆಗೆದುಕೊಂಡಿರಬಾರದು?

ನನ್ನನ್ನವರು ಅಲುಗಿಸಿದರು. ನಾನು ಯೋಚನಾ ಲಹರಿಯಿಂದ ಹೊರಬಂದೆ.

''ಏಕೆ? ಏನಾಯ್ತು?''

''ಏನಿಲ್ಲ... ನೀವು ಹೇಳಿದ್ದನ್ನೇ ಆಲೋಚಿಸುತ್ತಿದ್ದೆ. ಅದಿರಲಿ.. ಈ ಘಟನೆ ನಡೆದ ದಿವಸ ನೀವೆಲ್ಲಿದ್ದಿರಿ?''

''ನಾನೆ?....''

''ಹೌದು...ನೀವೇ.''

''ಏಕೆ? ನನ್ನ ಮೇಲೇನಾದರೂ?''

''ನೋ...ನೋ... ವಿಷಯ ತಿಳಿದುಕೊಳ್ಳಬೇಡವೆ?''

''ಓಹ್ ಹಾಗೋ... ಒಂದು ಕ್ಷಣ ನಾನು ಹೆದರಿಕೊಂಡಿದ್ದೆ.''

''ನಿಮ್ಮಂಥ ಗಂಡೆದೆಯ ಪೊಲೀಸ್ ಅಧಿಕಾರಿಗಳು ಈ ರೀತಿ ಹೆದರಿಕೊಳ್ಳುವುದೇ?''

''ಯಾಕಾಗಬಾರದು?''

''ನೀವು ಹೆದರಿಕೊಂಡದ್ದು ನೋಡಿ ನನಗೊಂದು ಮಾತು ನೆನಪಾಯಿತು...''

''ಯಾವುದದು?... ಹೇಳಿ.''

''ಕುಂಬಳಕಾಯಿ ಕಳ್ಳ ಅಂದರೆ... ಹೆಗಲು ಮುಟ್ಟಿಕೊಂಡು ನೋಡಿದರಂತೆ.''

ಅವರು ಭಡಕ್ಕನೆ ಎದ್ದುನಿಂತರು. ಅವರ ಮುಖ ಕಪ್ಪಿಟ್ಟಿತ್ತು.

''ರಾತ್ರಿ ಬಹಳವಾಯಿತು... ಮಲಗಿಕೊಳ್ಳಿ... ಗುಡ್‌ನೈಟ್.'' ಅವರು ಬಾಗಿಲತ್ತ ನಡೆದರು.

''ಮಿಸ್ಟರ್ ಶ್ಯಾಮಸುಂದರ್, ನನ್ನ ಪ್ರಶ್ನೆಗೆ ನೀವು ಉತ್ತರಿಸಲಿಲ್ಲ.''

ಬಾಗಿಲವರೆಗೂ ಸಾಗಿದ್ದ ಅವರು, ಮರಳಿ ಬಂದು ನನ್ನ ಬಳಿ ಕುಳಿತುಕೊಂಡರು.

''ನಾನು ಸಾಯಂಕಾಲವೇ ರೂಮಿಗೆ ಬಂದೆ. ಮೂರು ದಿನಗಳಿಂದ ಹೊರಗಡೆ ಸುತ್ತುತ್ತಿದ್ದರಿಂದ ದಣಿವೆನಿಸಿತ್ತು. ಅಂದು ಪೂರ್ಣ ವಿಶ್ರಾಂತಿ ಪಡೆಯಬೇಕು ಎಂದುಕೊಂಡು ರೂಮಿನಲ್ಲೇ ಉಳಿದೆ. ಹೊರಗೆ ಬಂದೇ ಇಲ್ಲ. ಊಟ ಸಹ ರೂಮಿಗೇ ತರಿಸಿಕೊಂಡೆ... ಮುಂಜಾನೆ ಫೋನು ಬಂದಾಗ ರೂಮಿನಲ್ಲೇ ಇದ್ದೆ. ವಿಷಯ ತಿಳಿದು ಗಾಬರಿಯಾಯಿತು. ಬಂದು ಬಾಲ್ಕನಿಯಲ್ಲಿ ನಿಂತೆ. ನೀವು ಪೋರ್ಟಿಕೋದತ್ತ ಕಾರಿನಿಂದಿಳಿದು ಬರುತ್ತಿರುವುದು ಕಾಣಿಸಿತು. ಎರಡು ಮೂರು ಬಾರಿ ದೂರದರ್ಶನದಲ್ಲಿ ನಿಮ್ಮನ್ನು ನೋಡಿದ್ದು ನೆನಪಾಯಿತು. ಸರಿ, ಹಾಗಾದರೆ ಈ ಸಂಕಷ್ಟಕಾಲದಲ್ಲಿ ನಿಮ್ಮ ಸಹಾಯ ಪಡೆದರಾಯಿತೆಂದುಕೊಂಡು ನಿಮ್ಮನ್ನು ಸಂಪರ್ಕಿಸಿದೆ.''

ಅವರ ಸ್ಪಷ್ಟೀಕರಣ ಹೋಮ್‌ವರ್ಕ್ ಮಾಡಿ ಒಪ್ಪಿಸಿದಂತಿತ್ತು. ನನ್ನ ಮೌನ ಅವರಿಗೆ ಧೈರ್ಯ ನೀಡಿರಬೇಕು. ಮೆಲ್ಲನೆ ಎದ್ದುನಿಂತರು.

''ನಿಮಗೆ ನನ್ನ ಮಾತು ಸಮಾಧಾನ ನೀಡಿದೆ ಅನಿಸುತ್ತಿದೆ... ನಾನಿನ್ನು ಬರುತ್ತೇನೆ.''

ನನ್ನ ಉತ್ತರಕ್ಕೂ ಕಾಯದೇ ಅವರು ಹೊರಗೆ ನಡೆದರು. ಒಂದೆರಡು ನಿಮಿಷ ನಾನಲ್ಲೇ ಕುಳಿತಿದ್ದೆ. ಒಂದೆರಡು ಆಕಳಿಕೆಗಳೂ ಬಂದವು. ಸರಿ ನಿದ್ದೆ ಮಾಡಿದರಾಯಿತು ಎಂದು ನಿರ್ಧರಿಸಿ ಬಾಗಿಲಿಗೆ ಬಂದೆ... ಮುಚ್ಚಿ, ಕೊಂಡಿ ಹಾಕಲು... ಲಕ್ಷ್ಮೀಪತಿಯವರು ಭರಭರನೇ ಒಳನುಗ್ಗಿ ಬಂದು, ತಾವೇ ಬಾಗಿಲು ಮುಚ್ಚಿ, ಕೊಂಡಿ ಹಾಕಿದರು.

''ಕ್ಷಮಿಸಿ, ನಿಮ್ಮೊಂದಿಗೆ ಮಾತನಾಡಲು ಇದೇ ಸರಿಯಾದ ಸಮಯ ಅಂದುಕೊಂಡು ಬಂದೆ... ತಮ್ಮ ಒಪ್ಪಿಗೆಯಿದ್ದರೆ...''

ದಯನೀಯವಾಗಿ ಅವರು ನನ್ನತ್ತ ನೋಡಿ ನುಡಿದಾಗ ಅಯ್ಯೋ ಪಾಪ! ಎನಿಸದಿರಲಿಲ್ಲ... ಮೌನವಾಗಿ ಸಮ್ಮತಿಸಿದೆ. ಅವರು ಮಂಚದ ಮೇಲೆ ಕುಳಿತುಕೊಂಡರು.

''ಸಾಹೇಬರು ಮೊದಲು ಹೀಗಿರಲಿಲ್ಲ. ಇತ್ತೀಚೆಗೆ ಬಹಳಷ್ಟು ಬದಲಾಯಿಸಿದ್ದಾರೆ'', ಅವರಿಂದ ತಾಳಿಕೊಳ್ಳಲಾಗದೇ ಉದ್ಗರಿಸಿದರು ಅಂತ ಕಾಣುತ್ತದೆ.

''ನೋಡಿ ಲಕ್ಷ್ಮೀಪತಿಯವರೆ, ನಿಮ್ಮ ಮನದಲ್ಲಿದ್ದುದನ್ನು ಹೇಳಿಬಿಡಿ.''

''ಹೇಳಲಿಕ್ಕೇ ಬಂದೆ.... ನನ್ನ ಮಗಳನ್ನು ಇವರೆಲ್ಲ ಮೆಚ್ಚಿಕೊಂಡು ಸೊಸೆಯನ್ನಾಗಿಸಿಕೊಂಡವರು, ವರದಕ್ಷಿಣೆಗಾಗಲೀ, ಇನ್ನಿತರ ಬೇರೆ ವಿಷಯಗಳಿಗಾಗಲೀ ಎಂದೂ ಒತ್ತಾಯಿಸಿದವರಲ್ಲ... ಆದರೂ... ಹೀಗೇಕಾಯಿತು ಎಂದು ತಿಳಿಯುತ್ತಿಲ್ಲ.''

''ನಿಮ್ಮ ಮಗಳು ಎಂದಾದರೂ ಕಂಪ್ಲೇನ್ ಮಾಡಿದ್ದಳೆ?''

''ಯಾವ ವಿಷಯಕ್ಕೆ?''

''ಅವಳಿಗೆ ಯಾವುದೇ ರೀತಿಯ ಕಿರುಕುಳ, ಹಿಂಸೆ-ಬೆದರಿಕೆ -ಮುಂತಾದ...''

''ಇಲ್ಲ... ಇಲ್ಲ.. ಎಂದೆಂದೂ ಇಲ್ಲ.''

''ನಿಮ್ಮ ಮಗಳನ್ನವರು ಹೇಗೆ ನೋಡಿಕೊಳ್ಳುತ್ತಿದ್ದರು?''

''ನಮಗಿಂತ ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದು ಮೃದುಲಾನೇ ಹೇಳಿದ್ದಳು.''

''ಇಷ್ಟೆಲ್ಲ ತಿಳಿದ ಮೇಲೆ ಬೀಗರ ಮೇಲೆ ಸಂಶಯ ಮಾಡುವುದು ಸರಿಯೆ?''

ಒಂದು ನಿಮಿಷ ಮೌನ ತಾಳಿದರವರು. ನಾನವರ ಮುಖ ದಿಟ್ಟಿಸುತ್ತಿದ್ದೆ. ಲಕ್ಷ್ಮೀಪತಿಯವರು ಸಂದಿಗ್ಧ ಸ್ಥಿತಿಯಲ್ಲಿದ್ದಾರೆ. ಏನೋ ಹೇಳಬೇಕೆಂದುಕೊಳ್ಳುತ್ತಾರೆ, ಬೇಡವೆನಿಸುತ್ತಿದೆ. ಅದೇ ತೊಳಲಾಟ, ನಾ ಮುಗುಳ್ನಕ್ಕು ಕೇಳಿದೆ,

''ಸಂಕೋಚಬೇಡಿ, ಸ್ಪಷ್ಟವಾಗಿ ಮಾತನಾಡಿ...''

ಅವರು ಅನುಮಾನಿಸುತ್ತ, ಜೇಬಿನಿಂದ ಎರಡು ಮೂರು ಪತ್ರ, ತೆಗೆದು ನನ್ನ ಕೈಗಿಟ್ಟರು.

''ಕಳೆದ ಎರಡು ತಿಂಗಳಲ್ಲಿ ಬಂದವು ಇವು. ಇವನ್ನು ಓದಿ... ಪ್ಲೀಜ್.''

ನಾನು ಓದಿದೆ. ಸಂಕ್ಷಿಪ್ತವಾಗಿ ಬರೆದವು, ಮೃದುಲಾಗೆ ಅವಳ ಅತ್ತೆ-ಮಾವ ಗಂಡ ತುಂಬಾ ಹಿಂಸೆ ನೀಡುತ್ತಿದ್ದಾರೆ. ಆಕೆ ಗಂಡಾಂತರದಲ್ಲಿ ದ್ದಾರೆ ಯಾವಾಗ, ಏನು ಆಗುತ್ತದೆಯೋ ಹೇಳುವಂತಿಲ್ಲ-ಈಗಲೇ ಎಚ್ಚರಗೊಳ್ಳಿ....

''ನೀವು ಇದರ ಬಗ್ಗೆ ಬೀಗರೊಂದಿಗೆ ವಿಚಾರಿಸಿದಿರಾ?''

''ಹಾಂ, ಪತ್ರದ ಬಗ್ಗೆ ಉಲ್ಲೇಖಿಸಲಿಲ್ಲ... ಅಷ್ಟೇ...''

''ಮತ್ತೆ ಮೃದುಲಾ?''

''ಅವಳನ್ನ ಸ್ಪಷ್ಟವಾಗಿ ಕೇಳಿದೆ. ಪತ್ರ ಸಹ ತೋರಿಸಿದೆ. ಅವಳು ನಕ್ಕುಬಿಟ್ಟಳು.''

''ಇಷ್ಟೆಲ್ಲ ಆದರೂ ನಿಮ್ಮ ಮನಸ್ಸಿನಲ್ಲಿ ಸಂಶಯವಿದೆಯೆ?''

''ಏನು ಮಾಡಲಿಕ್ಕೆ ಆಗುತ್ತದೆ? ಎಷ್ಟೆಂದರೂ ಹಡೆದ ತಂದೆ ನೋಡಿ, ನನ್ನ ಬೀಗರು... ಹೆಸರಾಂತ ಅನುಭವಿ ಪೊಲೀಸ್ ಅಧಿಕಾರಿಗಳು, ಅದಕ್ಕೇ ಸಂಶಯದ ದೃಷ್ಟಿಯಿಂದ ನೋಡಬೇಕಾಗಿದೆ.''

ನಾನು ಯೋಚಿಸುತ್ತಿದ್ದುದನ್ನೇ ಅವರು ನುಡಿದಿದ್ದರು...

''ಮತ್ತೇನಾದರೂ ಹೇಳುವುದಿದೆಯೆ?'' ಇನ್ನು ಹೊರಡಿ ಎಂಬುದನ್ನು ಸೂಚ್ಯವಾಗಿ ನುಡಿದೆ.

''ಇಲ್ಲ... ಏನೂ ಇಲ್ಲ... ಒಂದೇ ಒಂದು ವಿನಂತಿ'', ಎದ್ದು ನಿಲ್ಲುತ್ತಲೂ ಕೈಮುಗಿದು ಕೇಳಿಕೊಂಡರು.

''ಏನು ಹೇಳಿ.''

''ದಯವಿಟ್ಟು... ವಿಚಾರಣೆ ಪ್ರಾಮಾಣಿಕವಾಗಿ ಮಾಡಿ... ನನಗೆ ನ್ಯಾಯ ಕೊಡಿ... ಅಷ್ಟೇ''

''ನನ್ನ ಹೆಸರು ಈ ಮೊದಲು ನೀವು ಕೇಳಿಲ್ಲ ಅಂತ ಅನಿಸುತ್ತಿದೆ.''

''ಹಾಗೇನಿಲ್ಲ... ಬಹಳಷ್ಟು ಬಾರಿ ಕೇಳಿದ್ದೇನೆ, ಓದಿದ್ದೇನೆ.''

''ಹಾಗಿದ್ದರೆ... ಈ ಪ್ರಶ್ನೆ... ಈ ಮಾತು ನಿಮ್ಮಿಂದ ಬರುತ್ತಿರಲಿಲ್ಲ...''

''ದಯವಿಟ್ಟು ಕ್ಷಮಿಸಿ... ನೀವು ನಮ್ಮವರು ಅಂತ ತಿಳಿದು...''

''ಹಾಗನ್ನಬೇಡಿ... ನಾನು ಯಾರವನೂ ಅಲ್ಲ... ನನ್ನ ಪ್ರಾಶಸ್ತ್ಯ ಸತ್ಯದ ಕಡೆ ತಿಳಿಯಿತೇ? ನಿಮ್ಮವನಂತೂ ಅಲ್ಲವೇ ಅಲ್ಲ... ದಯವಿಟ್ಟು ಇನ್ನು ಹೊರಡಿ... ವೇಳೆ ಬಹಳವಾಗಿದೆ...''

ಸ್ವಲ್ಪ ತಬ್ಬಿಬ್ಬಾದಂತೆ ಕಂಡ ಅವರು ಹೊರ ನಡೆದರು.

ಅವರು ನನ್ನ ಕೈಗೆ ಕೊಟ್ಟ ಪತ್ರಗಳು ನನ್ನ ಬಳಿಯೇ ಉಳಿದವು. ನಾನವುಗಳಲ್ಲಿ ಚೆನ್ನಾಗಿ, ಸ್ಪಷ್ಟಾಗಿ, ಮೂಡಿದ ಅಂಚೆಮುದ್ರೆ ಗಮನಿಸಿದೆ. ಎಲ್ಲಾ ಇದೇ ಊರಿನಿಂದ ಬಂದಂಥವು... ಹಸ್ತಲಿಪಿ ಸಹ ಒಂದೇ ಬಗೆ... ಆದರೂ ಕೆಲವೆಡೆ ಕೆಡಿಸಿದಂತೆ... ಬೇಕೆಂತಲೇ ಅಂಕುಡೊಂಕಾಗಿ ಬರೆದಂತೆ ಅನಿಸಿತು. ಬಹುಶಃ ಬರೆದವರಿಗೆ ಭಯವಿರಬೇಕು... ತಮ್ಮ ಹಸ್ತಾಕ್ಷರದಿಂದ ಗುರುತು ಹಿಡಿದರೆ ಎಂಬ ಭೀತಿ ಅವರಿಗೆ ಇದ್ದಂತೆ ಕಂಡಿತು. ಪತ್ರಗಳನ್ನು ನನ್ನ ಬ್ರೀಫ್‌ಕೇಸಿಗೆ ಸೇರಿಸಿ, ಬಾಗಿಲು ಮುಚ್ಚಿ, ಮಂಚದ ಬಳಿಬಂದಾಗ ರಾತ್ರಿ ಎರಡು ಗಂಟೆ.

3

ಮುಂಜಾನೆ ಎಂಟುಗಂಟೆಗೆ ನಾನು ಸಿದ್ಧನಾಗಿದ್ದೆ. ಅದೇ ವೇಳೆಗೆ ಇನ್‌ಸ್ಪೆಕ್ಟರ್ ಚಂದ್ರು ಸಹ ಬಂದರು. ಕಾಫಿ ಕುಡಿಯುತ್ತ, ಮೃದುಲಾ ಕೇಸಿನ ಬಗ್ಗೆ ಚರ್ಚಿಸಿದೆ. ''ಶವದ ಪಂಚನಾಮೆ, ಪೋಸ್ಟ್‌ಮಾರ್ಟಂ ಎಲ್ಲಾ ನಿನ್ನೆ ಸಂಜೆಯೇ ಮುಗಿದಿತ್ತು. ಶವವನ್ನು ತೆಗೆದುಕೊಂಡು ಹೋಗುವಂತೆ ನಾನು ಸಾಹೇಬರಿಗೆ ಹೇಳಿದ್ದೆ. ಅವರು, ಅವಸರ ಬೇಡ ಇಂದು ರಾತ್ರಿ ಅಧೋಕ್ಷಜ ಬರುತ್ತಾರೆ. ಅವರೊಂದು ಸಾರೆ ಪರೀಕ್ಷಿಸಿದ ಮೇಲೆ ಶವಸಂಸ್ಕಾರ ನಡೆಸುತ್ತೇನೆ ಎಂದು ತಿಳಿಸಿದಾಗ ನಾನೊಂದು ಕ್ಷಣ ಯೋಚಿಸಬೇಕಾಯಿತು'', ಎಂದರು ಚಂದ್ರು.

ಅಂದು ಮಧ್ಯಾಹ್ನದವರೆಗೂ ನಾನು ತುಂಬಾ ವ್ಯಸ್ತನಾಗಿದ್ದೆ. ಮೊತ್ತಮೊದಲು ನಾನು ಮಾಡಿದ

ಕೆಲಸ, ಮೃದುಲಾಳ ಶವ ಪರೀಕ್ಷಿಸಿದ್ದು. ನೂರಕ್ಕೆ ತೊಂಭತ್ತರಷ್ಟು ಸುಟ್ಟುಹೋಗಿತ್ತು. ಅಲ್ಲೋ ಇಲ್ಲೋ ಒಂದು ಅಂಗುಲ, ಎರಡು ಅಂಗುಲ ದಷ್ಟು ದೇಹದ ಭಾಗ ಮಾತ್ರ ಶಾಖದಿಂದ ಜರ್ಜರಿತವಾದಂತೆ ಕಂಡರೂ ಒಳಭಾಗದವರೆಗೆ ಸುಟ್ಟು ಬೆಂದಿರಲಿಲ್ಲ. ನಾನು ಪೋಲೀಸ್, ಡಾಕ್ಟರ್ ಜೊತೆ ಮಾತಾಡಿ ನನಗೆ ಬೇಕಾದ ವಿಷಯಗಳ ಬಗ್ಗೆ ಮಾಹಿತಿ ಕೊಡುವಂತೆ ವಿನಂತಿಸಿಕೊಂಡೆ. ಅದಕ್ಕಾಗಿ ಎರಡು ಮೂರು ಗಂಟೆ ಕಾಲ ಕಾಯ ಬೇಕಾಯಿತು.

ವರದಿ ನನ್ನ ಕೈಗೆ ಬಂದಿತು. ಚೆನ್ನಾಗಿ ಓದಿದೆ.

ನನ್ನ ಊಹೆ ನಿಜವಾಗಿತ್ತು. ಮೃದುಲಾಳ ದೇಹದಲ್ಲಿ ಬಹಳಷ್ಟು ಪ್ರಮಾಣದ ನಿದ್ದೆ ಬರಿಸುವ ಔಷಧಿ ಕಂಡುಬಂದಿತು. ಅದರ ಅರ್ಥ, ಮೊದಲು ಅವಳಿಗೆ ನಿದ್ದೆಬರಿಸುವ ಮದ್ದು ಸೇವಿಸಲು ನೀಡಲಾಯಿತು, ಆಕೆ ಸಂಪೂರ್ಣವಾಗಿ ಎಚ್ಚರ ಕಳೆದುಕೊಂಡಮೇಲೆ, ಎತ್ತಿ ಕಿಚನ್‌ಗೆ ಒಯ್ದು, ಬಾಗಿಲ ಬಳಿ ಚೆಲ್ಲಿ, ಸೀಮೆಎಣ್ಣೆ ಸುರಿದು, ಬೆಂಕಿ ಹಚ್ಚಲಾಯಿತು. ಇದರಿಂದಾಗಿ ಆಕೆ ಚೀರಿಕೊಳ್ಳ ಲಿಲ್ಲ... ನರಳಲಿಲ್ಲ... ಕೂಗಲಿಲ್ಲ.... ಅಗ್ನಿಯ ಹೆಚ್ಚು ಭಾಗ ಬಾಗಿಲಿಗೆ ತಗಲಿದ್ದರಿಂದ ಅದು ಸುಟ್ಟು ಕರಕಾಗಿತ್ತು. ಉಳಿದ ಕಡೆ ಬೆಂಕಿ ವ್ಯಾಪಿ ಸುವ ಪ್ರಶ್ನೆಯೇ ಉದ್ಭವಿಸಲಾರದು. ಅವಳ ಶರೀರಕ್ಕೆ ಅಗ್ನಿಸ್ಪರ್ಶ ಮಾಡುವ ಮೊದಲು, ಬೇಕೆಂತಲೇ ಅಡುಗೆ ಮನೆಯಲ್ಲಿದ್ದ ಸಾಮಾನು ಗಳನ್ನು ಅತ್ತಿತ್ತ ಒಗೆದು, ಒಂದೆರಡು ಶೆಲ್ಫುಗಳನ್ನು ಬೆಂಕಿ ತಗಲುವಂತೆ ಸನಿಹದಲ್ಲಿ ಇಡಲಾಗಿತ್ತು ಎಂದು ಊಹಿಸಿದೆ.

ಸಾಯಂಕಾಲ ನಾಲ್ಕು ಗಂಟೆ ಸುಮಾರಿಗೆ ಮೃದುಲಾಳ ಅಂತ್ಯಸಂಸ್ಕಾರ ನೆರವೇರಿತು. ಒಂದರ್ಧ ಗಂಟೆ ಬಿಟ್ಟು, ಯಾರಿಗೂ ಸೂಚನೆ ನೀಡದೇ ನಾನು, ಚಂದ್ರ, ಅವರೊಂದಿಗೆ ಬೆಂಗಳೂರಿಗೆ ಬಂದೆ. ಶ್ಯಾಮಸುಂದರ ಸಾಹೇಬರು ಇಳಿದು ಕೊಂಡಿದ್ದ ಕೊಠಡಿಗೆ ಸೇವೆ ನೀಡಿದವರನ್ನು ಸಂಪರ್ಕಿಸಿದೆ. ಮೂರೂ ದಿನ ಅವರು ಅಲ್ಲಿದ್ದು ದಕ್ಕೆ... ರಾತ್ರಿ ಸಹ ಅವರು ರೂಮಿನಲ್ಲಿದ್ದ ಬಗ್ಗೆ ಸ್ಪಷ್ಟೀಕರಣ ದೊರೆಯಿತು. ಹೊರಗೆ ಬಂದೆ... ಗೇಟಿಗೆ ಕಾವಲಿದ್ದವನನ್ನು ಮಾತಿಗೆಳೆದೆ. ಅವನೂ ಸಹ ಸಾಹೇಬರು ಮೂರೂ ದಿನ ರಾತ್ರಿ ಹೋಟೇಲಿನಲ್ಲೇ ಇದ್ದುದನ್ನು ದೃಢೀಕರಿಸಿದ... ನಾನು ಹೊರಳುತ್ತಿದ್ದಂತೆ ಆತ ನೀಡಿದ ಒಂದು ವಿಷಯ ನನಗೆ ಬಹಳ ಮಹತ್ವದ್ದೆನಿಸಿತು... ಮೊನ್ನೆ ರಾತ್ರಿ, ಅಂದರೆ ಮೃದುಲಾಳ ಸಾವಿನ ರಾತ್ರಿ, ಹನ್ನೊಂದು ಗಂಟೆ ಸುಮಾರಿಗೆ, ಸಾಹೇಬರ ಕಾರು ಹೊರಗಡೆ ಹೋಗುತ್ತ, ನಸುಕು ಆರು ಗಂಟೆಗೆ ಮತ್ತೆ ವಾಪಸಾಯಿತು. ಕಾರಿನಲ್ಲಿ ಯಾರು ಯಾರು ಇದ್ದರು ಎಂಬುದು ಮಾತ್ರ ಕಾಣಿಸಲಿಲ್ಲ.

ಇದೊಂದು ಮಹತ್ವದ ಸಂಗತಿಯಾಗಿತ್ತು. ಬೆಂಗಳೂರಿನಿಂದ ಮೂರು ಗಂಟೆಗಳ ದಾರಿ. ರಾತ್ರಿ ಹನ್ನೊಂದಕ್ಕೆ ಬೆಂಗಳೂರು ಬಿಟ್ಟಿದ್ದರೆ, ಎರಡು ಗಂಟೆಗೆ ಸಾಹೇಬರು ಮನೆ.... ಅಲ್ಲಿ ಒಂದು ಗಂಟೆ ಕೆಲಸ. ಮೃದುಲಾಳ ಕತೆ ಮುಗಿಸಿ, ಮರಳಿದ್ದು ಐದು ಐದೂವರೆ ಅಥವಾ ಆರು....

ಮತ್ತೆ ಸಾಹೇಬರು ಸಂದಿಗ್ಧ ವ್ಯಕ್ತಿಗಳಾದರು.

ಎಲ್ಲಾ ಪೂರ್ವನಿಯೋಜಿತ ಸಂಚು. ತಮ್ಮ ಮೇಲೆ ಸಂಶಯ ಬರಬಾರದೆಂದು ನನ್ನ ಸೇವೆ ಪಡೆದಿರುವ ಸಾಧ್ಯತೆ ಇತ್ತು. ಹಾಗೇ ಸಮೀಪದ ಒಂದೆರಡು ಪೆಟ್ರೋಲ್ ಬಂಕುಗಳಲ್ಲಿ ವಿಚಾರಿ ಸಿದೆ. ಸಾಹೇಬರ ಕಾರಿಗೆ ಡೀಸೆಲ್ ತುಂಬಿಸಿದ ಮಾಹಿತಿ ದೊರೆಯಿತು. ರಸೀದಿಯ ಪ್ರತಿಲಿಪಿ ಪಡೆದೆ. ಅಂದು ಐವತ್ತು ಲೀಟರ್ ಡೀಸೆಲ್ ಹಾಕಿಸಲಾಗಿತ್ತು. ಅಷ್ಟು, ಊರಿಗೆ ಹೋಗಿ, ಮರಳಿಬರಲು ಸಾಕಾಗಿತ್ತು.

ಮೃದುಲಾಳ ಸಾವು ಒಂದು ಕೊಲೆ ಎಂಬುದ ರಲ್ಲಿ ಯಾವ ಸಂಶಯವೂ ಉಳಿಯಲಿಲ್ಲ. ಕೊಲೆ ಮಾಡಿ ಆತ್ಮಹತ್ಯೆಯ ರೂಪ ನೀಡಲಾಗಿತ್ತು... ಚಂದ್ರು, ಅವರೊಂದಿಗೆ ಸಮಾಲೋಚನೆ ಮಾಡಿ, ಮತ್ತೆ ಸಾಹೇಬರ ಮನೆಯತ್ತ ನಡೆದೆ. ಊರು

ತಲುಪಿದಾಗ ರಾತ್ರಿ ಹನ್ನೆರಡು ಸಮೀಪಿಸಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ಶ್ಯಾಮ ಸುಂದರ ಎದ್ದುಬಂದು ಬಾಗಿಲು ತೆರೆದರು. ನಾನು ಬಂದ ಕೆಲಸವಾಯಿತು, ಊರಿಗೆ ಹೊರ ಟಿದ್ದೇನೆ ಒಂದೆರಡು ದಿನಗಳಲ್ಲಿ ವಿವರವಾದ ವರದಿ ಕೊಡುವೆ ಎಂದು ಹೇಳಿದೆ.

ಶ್ಯಾಮಸುಂದರ್ ಅವರು ತಮ್ಮ ಡ್ರೈವರ್ ಡೇವಿಡ್‌ನನ್ನು ಎಬ್ಬಿಸಿದರು. ಅಷ್ಟರಲ್ಲಿ ನಾನು ನನ್ನ ಸೂಟ್‌ಕೇಸ್‌ನೊಂದಿಗೆ ಸಿದ್ಧನಾಗಿದ್ದೆ... ನನ್ನನ್ನು ಕಳಿಸಲು ಸಾಹೇಬರೂ ಬಸ್‌ಸ್ಟಾಂಡ್‌ಗೆ ಬಂದರು. ತಟಕ್ಕನೆ ನನಗೊಂದು ವಿಷಯ ನೆನಪಾಯಿತು.

''ಸಾಹೇಬರೆ ನನ್ನಿಂದ ಒಂದು ಚಿಕ್ಕ ಪ್ರಮಾದ ನಡೆಯಿತು''

''ಏನದು ಹೇಳಿ?''

''ಕಿಚನ್‌ನಲ್ಲಿ ಒಂದು ಬೆಂಕಿಪೊಟ್ಟಣ ನೋಡಿದೆ. ಅದರ ಮೇಲೆ ಬಹುಶಃ ಅಪರಾಧಿಯ ಬೆರಳ ಗುರುತುಗಳು ಮೂಡಿರಬಹುದು. ಬೆಳಗಾಗು ತ್ತಲೂ, ಇನ್‌ಸ್ಪೆಕ್ಟರ್ ಚಂದ್ರಶೇಖರ ಅವರನ್ನು ಕರೆಸಿ, ಅವರಿಗೆ ಅದನ್ನು ಮರೆಯದೆ ತೆಗೆದು ಕೊಳ್ಳುವಂತೆ ನೆನಪು ಮಾಡಿ'' ಎಂದೆ. ಅವರು ತಲೆಯಾಡಿಸಿದರು. ಬಸ್ಸು ಹೊರಟಿತು. ನಾನವರ ಕಡೆ ಕೈಬೀಸಿದೆ. ಅವರೊಂದಿಗೆ ಡೇವಿಡ್ ಸಹ ಕೈಬೀಸಿದ.

4

ನಸುಕಿನ ನಾಲ್ಕುವರೆ.... ಸೈಕಲ್‌ಗೆ ಹಾಲು ಪ್ಯಾಕೆಟ್ ಇದ್ದ ಚೀಲಗಳನ್ನು ನೇತುಹಾಕಿದ್ದ ಹಾಲಿನವ ಸಾಹೇಬರ ಮನೆ ಹತ್ತಿರ ಬಂದ. ಕತ್ತಲಲ್ಲಿ ಸೈಕಲ್ಲು ನಿಲ್ಲಿಸಿ, ಅತ್ತಿತ್ತ ನೋಡಿ, ಕಾಂಪೌಂಡ್ ನೆಗೆದು, ಕಿಚನ್ ಹಿಂಭಾಗಕ್ಕೆ ಬಂದ. ಹೀಗಾಗುತ್ತದೆ ಅಂತ ಮೊದಲೇ ಊಹಿಸಿದ್ದ ನಾನು, ಮರದ ಹಿಂದೆ ಕಾಯುತ್ತ ಕುಳಿತಿದ್ದೆ. ಅವನನ್ನು ಹಿಂಬಾಲಿಸಿದೆ. ಕಿಚನ್ ಹಿಂಭಾಗದಲ್ಲಿ ಒಂದು ಕಿಟಕಿ, ಅದರ ಬಳಿ ಏಣಿ ಸಿದ್ಧವಾಗಿ ನಿಂತಿತ್ತು. ಆ ವ್ಯಕ್ತಿ, ಏಣಿ ಸಹಾಯ ದಿಂದ ಮೇಲೇರಿತು. ಒಂದೆರಡು ನಿಮಿಷಗಳಲ್ಲಿ, ಸರಳುಗಳು ಒಂದೊಂದಾಗಿ ಕಿತ್ತಿ ಹೊರಬಂದವು. ಆ ವ್ಯಕ್ತಿ ಕಿಟಕಿಯೊಳಗೆ ಮರೆಯಾಯಿತು.

ನಾನು ಮೆಲ್ಲನೆ ಏಣಿ ಏರಿ ಒಳಗೆ ಇಣುಕಿದೆ.

ಪೆನ್‌ಟಾರ್ಚ್ ಬೆಳಕಿನಲ್ಲಿ ಆ ವ್ಯಕ್ತಿ ಏನೋ ಹುಡುಕುತ್ತಿರುವುದನ್ನು ಕಂಡು ನನ್ನ ತುಟಿಗಳು ಓರೆಯಾದವು. ಒಂದೆರಡು ನಿಮಿಷ ಕಳೆದವು.

''ಎಲ್ಲಿ ಹೋಯಿತು ಬೆಂಕಿಪೊಟ್ಟಣ?'', ಆತ ಅಸಹನೆಯಿಂದ ವಟಗುಟ್ಟಿದ.


''ಅದಿದ್ದರೆ ತಾನೇ?'' ನಾನು ತಟಕ್ಕನೆ ಕೇಳಿದೆ.

''ಆಂ?'' ಆ ವ್ಯಕ್ತಿ ಗಾಬರಿಯಾಗಿ ತತ್ತರಿಸು ತ್ತಿದ್ದಂತೆ ನಾನು ''ವ್ಹಿಸಲ್'' ಊದಿದೆ, ಆ ಕಡೆ... ಕಿಚನ್ ಬಾಗಿಲ ಬಳಿ ಕಾದಿದ್ದ ಇನ್‌ಸ್ಪೆಕ್ಟರ್ ಚಂದ್ರ ಶೇಖರ ಬಾಗಿಲು ತೆಗೆದು ಒಳಬಂದು, ದೀಪ ಉರಿಸಿದರು.

ದೀಪದ ಬೆಳಕಿನಲ್ಲಿ ನಡುಗುತ್ತ ನಿಂತಿದ್ದ ಡೇವಿಡ್.

ಸಾಹೇಬರ ಗಾಡಿಯ ಡ್ರೈವರ್ ಡೇವಿಡ್

ನಾನು ಕಿಟಕಿಯಿಂದ ಕೆಳಗಿಳಿದೆ.



''ಡೇವಿಡ್, ನಾ ಹೆಣೆದ ಬಲೆಯಲ್ಲಿ ನೀನು ಬಿದ್ದೆ. ನಿಜವಾಗಿಯೂ ನಿನ್ನದು ಫೂಲ್‌ಪ್ರೂಫ್ ಪ್ಲಾನ್. ನೀನು ಮೃದುಲಾಳ ಮೂರ್ಛಿತ ದೇಹಕ್ಕೆ ಸೀಮೆಎಣ್ಣೆ ಸುರುವಿ ಬೆಂಕಿ ಇಟ್ಟದ್ದು ಲೈಟರ್‌ನಿಂದ ಅಲ್ಲವೆ?''

''ಹೌದು''

''ಮತ್ತೇಕೆ ಬೆಂಕಿಪೊಟ್ಟಣ ಹುಡುಕುತ್ತಿದ್ದೆ... ಕಳ್ಳನ ಜೀವ ಹುಳ್ಳುಳಗೆ ಎಂದು ಹೇಳಿದ್ದನ್ನು ನೀನು ಸತ್ಯಮಾಡಿದೆ ನೋಡು.''

ಮುಂದೆ ಯಾವುದಕ್ಕೂ ತಡವಾಗಲಿಲ್ಲ, ಆತ ಬಾಯಿಬಿಟ್ಟ:

ಹತ್ತು ಹನ್ನೆರಡು ವರ್ಷಗಳ ಹಿಂದೆ ಡೇವಿಡ್‌ನ ತಂಗಿ ರೀಟಾಳನ್ನು ಅವಳ ಗಂಡ, ಅತ್ತೆ, ಮೈದುನ ಕೂಡಿಕೊಂಡು ಜೀವಂತ ಸುಟ್ಟುಕೊಂದರು. ಆ ಕೇಸು ಸಾಹೇಬರ ಕಡೆ ಬಂದಿತ್ತು. ಆಗ ಸಾಹೇಬರು ಕೇವಲ ಇನ್‌ಸ್ಪೆಕ್ಟರ್ ಆಗಿದ್ದರು. ಡೇವಿಡ್ ಬಡವ... ಆದರೆ ತಂಗಿಯ ಗಂಡ ಶ್ರೀಮಂತ... ಆತ ಐದು ಲಕ್ಷ ನೀಡಿದ. ಸಾಹೇಬರು 'ಬುಕ್' ಆದರು. 'ಅದೊಂದು ಆಕಸ್ಮಿಕ ಘಟನೆ... ಅದರಿಂದಾಗಿ ಆಕೆ ಸತ್ತಳು' ಎಂದು ರಿಪೋರ್ಟ್ ನೀಡಿದರು.

ಡೇವಿಡ್ ಎದೆಯಲ್ಲಿ ಸೇಡು ಪ್ರಜ್ವಲಿಸಿತು. ಒಂದೆರಡು ವರ್ಷಗಳಲ್ಲಿ ಸಾಹೇಬರು ಡಿ.ಎಸ್.ಪಿ. ಆದರು. ಡೇವಿಡ್ ಅವರ ಡ್ರೈವರ್ ಆಗಿ ವಿಶ್ವಾಸ ಗಳಿಸಿದ... ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಅಂಥ ಅವಕಾಶ ದೊರೆಯಲು.

ಅಂದು ರಾತ್ರಿ ಕಾರಿಗೆ ಡೀಸೆಲ್ ಹಾಕಿಸಿಕೊಂಡು ಊರಿಗೆ ಬಂದ. ತನ್ನ ಬಳಿಯಿದ್ದ ಬೀಗದಿಂದ ಬಾಗಿಲು ತೆರೆದು ಎಲ್ಲರನ್ನು ಕ್ಲೋರೊಫಾರ್ಮ್‌ನಿಂದ ಮೂರ್ಛೆಗೊಳಿಸಿದ. ಮೃದುಲಾಗೆ, 'ಕೋಮಾ'ದಲ್ಲಿ ಹೋಗುವಂತೆ ಚುಚ್ಚುಮದ್ದು ನೀಡಿ, ಎತ್ತಿ ತಂದು ಕಿಚನ್ ಬಾಗಿಲ ಬಳಿ ಮಲಗಿಸಿದ. ಒಂದೆರಡು ಶೆಲ್ಫ್ ಎತ್ತಿ ಚೆಲ್ಲಿದ. ನಂತರ ಸೀಮೆಎಣ್ಣೆ ಸುರಿದು ಲೈಟರ್‌ನಿಂದ ಅಗ್ನಿಸ್ಪರ್ಶಮಾಡಿ, ಸರಕ್ಕನೆ ಕಿಚನ್‌ಬಾಗಿಲು ಮುಚ್ಚಿ ಹೊರಬಂದ.

ಮತ್ತೆ ಬಾಗಿಲಿಗೆ ಬೀಗ ಹಾಕಿ, ಕಾರಿನಲ್ಲಿ ಬೆಂಗಳೂರಿಗೆ ಬಂದ. ಗ್ಯಾರೇಜ್‌ನಲ್ಲಿ ಮಲಗಿದ ನಾಟಕ ಮಾಡಿದ... ಕಾರು ಧೂಳು ಮಯವಾಗಿತ್ತು, ಸ್ವಚ್ಛ ಮಾಡಲು ಸಮಯವಿರಲಿಲ್ಲ...

ನಾನು ಸಾಹೇಬರತ್ತ ನೋಡಿದೆ ಅವರು ತಲೆತಗ್ಗಿಸಿದರು...

ನನ್ನ ಕೆಲಸ ಮುಗಿದಿತ್ತು... ಚಂದ್ರುವಿಗೆ ಹೇಳಿ ಹೊರಬಂದೆ... ಬೆಳಕು ಹರಿದಿತ್ತು.

ನನ್ನ ತಾಯಿಗೆ ಕತೆ ಎಂದರೆ ತುಂಬಾ ಇಷ್ಟವಿತ್ತು. ನಾನು ಚಿಕ್ಕವನಿದ್ದಾಗ
[illegible]
ಇಂದಿಗೂ ನೆನಪಿದೆ.



ಒಂದಾಣೆ ಮಾಲೆ

ನಾವೇರನ ಉಪದೇಶ


ಎಂ.ಆರ್. ಭಟ್

'ನಾವೇರ'ನೆಂಬ ಒಬ್ಬ ಅರಬ ಸಜ್ಜನನೊಡನೆ, ಒಂದು ಉತ್ತಮ ಕುದುರೆಯಿತ್ತು. 'ದಾಹರ'ನೆಂಬ ಒಬ್ಬ ಮನುಷ್ಯನು ಕೆಲವು ಒಂಟೆಗಳನ್ನು ಕೊಟ್ಟು, ಬದಲು ಆ ಕುದುರೆಯನ್ನು ತೆಗೆದುಕೊಳ್ಳಲು ಇಚ್ಛಿಸಿದನು. ಆದರೆ, ನಾವೇರನಿಗೆ ಆ ಕುದುರೆಯು ಬಹುಪ್ರಿಯವಾಗಿತ್ತು. ಆದ್ದರಿಂದ ಅವನು ಅದನ್ನು ಕೊಡಲೊಪ್ಪಲಿಲ್ಲ. ದಾಹರನ ಮನಸ್ಸೂ ಆ ಕುದುರೆಯಲ್ಲಿ ಬಹು ಆಕರ್ಷಿತವಾಗಿತ್ತು. ಇದರಿಂದ ಅವನು ಕುದುರೆಯನ್ನು ಹಸ್ತಗತ ಮಾಡುವ ಇನ್ನೊಂದು ಉಪಾಯವನ್ನು ಹುಡುಕಿ ತೆಗೆದನು.

ಒಂದು ದಿನ ನಾವೇರನು, ಆ ಕುದುರೆಯ ಸವಾರಿ ಮಾಡಿ, ಎಲ್ಲಿಗೋ ಹೊರಗೆ ಹೋಗುವವನಿದ್ದನು. ಇದನ್ನು ಮುಂಚಿತವಾಗಿಯೇ ಗೊತ್ತುಮಾಡಿ, ದಾಹರನು ಮೋಸತಂತ್ರದಿಂದ ತನ್ನ ಮುಖಚರ್ಯೆಯನ್ನು ಬದಲಾಯಿಸಿ, ಜೀರ್ಣ ಚಿಂದಿಗಳನ್ನುಟ್ಟು, ಅದೇ ಮಾರ್ಗದ ಒಂದು ಕಡೆಯಲ್ಲಿ ಕುಳಿತುಕೊಂಡು, ಕೆಟ್ಟ ರೀತಿಯಿಂದ ಕೆಮ್ಮಿ ಕೇಕರಿಸಿದನು. ನಾವೇರನು ಅಲ್ಲಿಗೆ ತಲುಪುವಾಗ, ಕೆಮ್ಮುವ ಬಡವನನ್ನು ಕಂಡು, ಅವನಿಗೆ ದಯೆಯು ಬಂತು. ಮುಂದಿನ ಹಳ್ಳಿಯ ತನಕ ಮುಟ್ಟಿಸಲು ಅವನನ್ನು ಕುದುರೆಯ ಮೇಲೆ ಸವಾರಿ ಮಾಡಿಸಿ, ಕೆಳಗಿನಿಂದ ಸ್ವತಃ ನಾವೇರನು ನಡೆದುಕೊಂಡು ಹೋಗಹತ್ತಿದನು.

ಕುದುರೆಯನ್ನೇರಿ ಸವಾರಿ ಆರಂಭಿಸುತ್ತಲೇ, ದಾಹರನು ಚಬುಕು ಹೊಡೆದು ಕುದುರೆಯನ್ನು ವೇಗದಿಂದ ಹೊರಡಿಸಿದನು. ಮತ್ತೆ, ತನ್ನ ಸಹಜ ಸ್ವರದಿಂದ ನೈಜರೂಪವನ್ನು ಬಯಲುಪಡಿಸಿ ಹೇಳಿದನು, ''ನಾವೇರ! ನೀನು ನನಗೆ ಸರಳ ವಿಧದಿಂದ ಕುದುರೆಯನ್ನು ಕೊಡಲಿಲ್ಲ; ಅದಕ್ಕಾಗಿ ನಾನು ಮೋಸದಿಂದ ಇದನ್ನು ಪಡೆದೆನು.'' ನಾವೇರನು, ದಾಹರನನ್ನು ಕರೆದು, ಹೀಗೆಂದನು: ''ಬಂಧು! ಭಗವಂತನ ಇಚ್ಛೆಯಿಂದ ನೀನು ನನ್ನ ಮುದ್ದು ಕುದುರೆಯನ್ನು ತೆಗೆದುಕೊಂಡಿರುವಿ. ಆಗಲಿ. ಈ ಕುದುರೆಯನ್ನು ಬಹಳ ಒಳ್ಳೇ ರೀತಿಯಿಂದ ಸಾಕಿಕೊಂಡಿರು. ಆದರೆ, ಜಾಗರೂಕನಾಗಿರು! ನಿನ್ನ ಈ ವಂಚನೆಯನ್ನು ಅನ್ಯರಿಗೆ ಹೇಳಬೇಡ. ಅನ್ಯಥಾ, ದೀನದುಃಖಿಗಳ ಹಾಗೂ ದರಿದ್ರ, ಅಸಹಾಯಕರ ಮೇಲೆ ದಯೆಯನ್ನು ತೋರಿಸುವ ಜನರು ಸಂಶಯಗ್ರಸ್ಥರಾಗುವರು. ಇದರಿಂದಾಗಿ, ಅನೇಕ ದರಿದ್ರರು ಸಹಾಯದಿಂದ ವಂಚಿತರಾಗಬಹುದು.''

ನಾವೇರನ ಈ ಮಾತುಗಳಿಂದ ದಾಹರನು ಬಹು ನಾಚಿದನು. ಮತ್ತು ಅವನು ಅದೇ ಕ್ಷಣದಲ್ಲಿ ಹಿಂದೆ ಬಂದು, ಕುದುರೆಯನ್ನು ನಾವೇರನಿಗೆ ಒಪ್ಪಿಸಿ, ಅಂದಿನಿಂದ ಅವನೊಡನೆ ಸದಾ ಮಿತ್ರಭಾವದಿಂದ ಇರುತ್ತಿದ್ದನು.



ಪಿ.ವಿ. ಶಾಸ್ತ್ರಿಕಬ್ಬಳ್ಳಿ

ಸಾಯುತ್ತಿರುವ ಪ್ರಶ್ನೆಗಳು

ಏಳನೆಯ ಈಯತ್ತೆಯನ್ನು ಪ್ರಾಮಾಣಿಕವಾಗಿ ಪಾಸಾಗದ ಆತ ಮಂತ್ರಿಯಾದ; ಆದರೆ ಯಾರಿಗೂ ಆಶ್ಚರ್ಯವಾಗಲಿಲ್ಲ. ಏಳನೆಯ ದಶಕದಲ್ಲಿ ಪಕ್ಷಾಂತರ ಪಿಡುಗು ಹರಡಿತ್ತು. ಈ ದೊಂಬರಾಟದಲ್ಲಿ ತೋರಿದ ಜಾಣ್ಮೆಗಾಗಿ ಮಂತ್ರಿಪದ ದೊರಕಿತ್ತು. ಮೈಗಳ್ಳ ಗೂಂಡಾಗಳ ಹಿಂಸಾತ್ಮಕ ಬಲವಂತ, ಆತನಿಗೆ ಗಟ್ಟಿ ನೆಲಗಟ್ಟನ್ನು ಒದಗಿಸಿತ್ತು.

ಅವನಿಗೆ ಶಿಕ್ಷಣ ಖಾತೆಯನ್ನು ಕೊಟ್ಟದ್ದು ಮಾತ್ರ ಸ್ವಲ್ಪ ಗಡಿಬಿಡಿಗಿಟ್ಟುಕೊಂಡಿತು. 'ರ' 'ಠ' 'ಈ' 'ಕ' ಗಳನ್ನು ರೊಟ್ಟಿ ದೊಣ್ಣೆಗಳ ಸಹಾಯ



ರಾಮಕೃಷ್ಣ ಸಿದ್ರಪಾಲ್

ದಿಂದಲೂ ಅರ್ಥಮಾಡಿಕೊಳ್ಳಲಾಗದ ಆತ, ಶಿಕ್ಷಣ ಶಾಲೆಯನ್ನು ಏನೆಂದು ಭಾವಿಸಿಬಿಡುತ್ತಾನೋ ಎಂಬ ಗಾಬರಿ ಕೆಲವರಿಗೆ. ಶಾಲೆಗಳನ್ನು ಆತ ಗೋದಾಮಗಳನ್ನಾಗಿ ಪರಿವರ್ತಿಸಿದರೆ? ಬಾರುಗಳನ್ನಾಗಿ ಮಾರ್ಪಡಿಸಿದರೆ? ಮಾಸ್ತರರನ್ನು ಮಾರವಾಡಿಗಳನ್ನಾಗಿಸಿದರೆ?

ಶಿಕ್ಷಣ ಸಂಸ್ಥೆಯ ಸ್ಥಾಪನೆಯನ್ನು ಒಂದು ಉತ್ಪಾದಕ ಉದ್ಯಮವೆಂದು ಗಣಿಸಿದರೆ!-ಎಂಬ ಭಯ, ಅಲ್ಪಸಂಖ್ಯಾತರಲ್ಲಿ ಹುಟ್ಟಿತು. ಆದರೆ ಅವನಷ್ಟೇ ಬುದ್ಧಿವಂತರು, ಪಕ್ಷದ ಕಟ್ಟಾ ಅನುಯಾಯಿಗಳು, ರಾಜಕೀಯ ಉದ್ಯಮಿಗಳು 'ಪ್ರಜಾ ಪ್ರಭುತ್ವ' ಶಬ್ದವನ್ನು ತಿರುತಿರುಗಿ ಉಚ್ಚರಿಸಿದರು. ಅವನ ವಿರುದ್ಧ ಮಾತನಾಡುವವರು ಬಹುಸಂಖ್ಯಾತರ ವಿರೋಧಿಗಳು ಎಂದೂ, ಭಾರತದ ಬಹುಸಂಖ್ಯ ಅಶಿಕ್ಷಿತರ ಅಪ್ಪಟ ಪ್ರತಿನಿಧಿ ಅವನು ಮಾತ್ರ ಆಗಬಲ್ಲನೆಂದು ಗುಲ್ಲೆಬ್ಬಿಸಿದರು. ನಡೆದ ಪ್ರಚಾರ ತಕ್ಕಮಟ್ಟಿಗೆ ಯಶಸ್ವಿಯಾಯಿತು.

ಆತನ ವಯಸ್ಸು, ಬರೋಬರಿ ಮೂವತ್ತು. ಸ್ವಾತಂತ್ರ್ಯೋತ್ತರ ಪ್ರಜೆ. ತಾರುಣ್ಯಕ್ಕೆ ಮುಖಂಡತ್ವ ಸದ್ಯದ ಆದ್ಯ ಅವಶ್ಯಕತೆ, ಏನಾದರೂ ಮಾಡಬೇಕು ಎಂಬ ಆದಷ್ಟು ಬೇಗ ಮಾಡಬೇಕು; ಆಮೇಲೆ ಕಾಯ್ದೆ ಪಾಸು ಮಾಡಬೇಕೆಂಬ ಉತ್ಸಾಹ, ಆರ್ಭಟ, ಅಸಹನೆ, ಪ್ರಸಕ್ತ ಬೇಡಿಕೆ. ವಯಸ್ಸಿಗೆ ತಕ್ಕ ಅವಿವೇಕ; ಆಳುತನ, ದೊಡ್ಡ ಕೆಂಪು ಕಣ್ಣ ಬೇಳೆಗಳು, ಹಣೆಯನ್ನು ಆಕ್ರಮಿಸಿದ ಅಸ್ತವ್ಯಸ್ತ ಹುಬ್ಬುಗಳು, ಕೆನ್ನೆಯನ್ನೂ ಮೀರಿ ಬೆಳೆದ ಒರಟು ಮೀಸೆ, ಇಕ್ಕೇರಿ ಬಸವನ ಮೈಬಣ್ಣ. ಗಡ್ಡದಲ್ಲಿ ಕಾಣೆಯಾದ ಉದ್ದ ಕೂದಲಿನಲ್ಲಿ, ಒಮ್ಮೊಮ್ಮೆ ಕಾಣಸಿಕೊಳ್ಳುವ ಕಿರಿ ಕಿವಿಗಳು, ಮುದ್ದೆಯಾದ ಮೂಗು. ಒದ್ದೆಯಾದ ದೊಡ್ಡ ತುಟಿಗಳು. ಆತನನ್ನು ಪೈಲವಾನನೆಂದು ಗುರುತಿಸುವಷ್ಟು ಸುಲಭವಾಗಿ ರಾಜಕಾರಣಿಯೆಂದು ಭಾವಿಸುವುದು ಸಾಧ್ಯವಿರಲಿಲ್ಲ.

ಎಲ್ಲೆಂದರಲ್ಲಿ, ಸ್ವಕ್ಷೇತ್ರದವರನ್ನು ವಿರೋಧಿಗಳನ್ನಾಗಿಸಿಕೊಂಡು ಬಗ್ಗುಬಡಿಯುವ ಅವನ ಹುಂಜ ಸ್ವಭಾವ, ರಾಜಕೀಯ ಗತ್ತಾಗಿ ಗೆಲವು ಪಡೆದಿತ್ತು. ಜಿಲ್ಲೆಯ ಎಕ್ಸೈಜ್ ಕಂಟ್ರಾಕ್ಟು ಲಕ್ಷ್ಮಿಯನ್ನು ಒಲಿಸಿಕೊಟ್ಟಿತು. ಊರಿನ ಸಂಭಾವಿತ ಗಾಂಧಿ ಅನುಯಾಯಿಗಳೂ, ಸಮಾಜವಾದಿಗಳೂ ಸಹ ಅವನ ಹತ್ತಿರ, ಒಂದಲ್ಲ ಒಂದು ಕಾರ್ಯಕ್ಕೆ ದೇಣಿಗೆಯನ್ನು ಕೇಳಿದವರೇ. ಒಂದೆರಡು ಬಾರಿ, 'ಕನ್ನಡ ಸಾಹಿತ್ಯ ಪರಿಷತ್ತಿನ' ಸಾಹಿತ್ಯ ಸಮ್ಮೇಳನಗಳಿಗೆ ಭಾರೀ ದೇಣಿಗೆಯಿತ್ತ ಕಾರಣ, ಕವಿ ಸಮ್ಮೇಳನದ ಅಧ್ಯಕ್ಷತೆಯೂ ದೊರಕಿತ್ತು. ಸ್ಥಳೀಯ ಪತ್ರಿಕೆಯೊಂದಕ್ಕೆ ಆರ್ಥಿಕ ಬೆನ್ನೆಲುಬಾದ ಕಾರಣ ಪತ್ರಿಕೋದ್ಯಮಿಯೆಂಬ ಗೌರವವೂ ಸಂದಿತ್ತು. ಹೀಗೆ ಗೂಂಡಾಗಳಿಂದ ಕವಿಗಳವರೆಗೆ ಅವನ ಪ್ರಭಾವವಲಯ ಹರಡಿದ್ದ ಕಾರಣ, ಚುನಾವಣೆ ಅವನಿಗೆ ಲಾಭವನ್ನು ತಂದಿತ್ತು.

ಸಾರ್ವಜನಿಕ ಸೇವಾ ಆಯೋಗದಿಂದ ಆಕೆ ಆಯ್ಕೆ ಆದಳು; ಪ್ರಾಧ್ಯಾಪಕ ಹುದ್ದೆ ದೊರಕಿತು. ಮಂತ್ರಿಯ ಕೈವಾಡ ಇದರ ಹಿಂದೆ ಇದ್ದೇ ಇದೆಯೆಂದು ಎಲ್ಲರೂ ನಂಬಿಕೊಂಡರು.

ಆಕೆಗೆ ಅಪ್ಪನಿರಲಿಲ್ಲ. ವಯಸ್ಸಾದ ತಾಯಿ, ಗಂಡ ಸತ್ತ ಮೇಲೆಯೂ ಸಾವಿತ್ರಿಯಾಗಿರಲಿಲ್ಲ. ಊರಿನ ಗಣ್ಯ ಶ್ರೀಮಂತರು ಬಂದು ಹೋಗುವ ಮನೆ ಆಯಿತು. ತಾಯಿ ಮುದುಕಿಯಾದಳು. ಗಂಡಸರ ತಾರುಣ್ಯ ಮಾಸಿಲ್ಲ. ಅವರ ಕಣ್ಣು ಮಗಳ ಮೇಲೆ ತೆವಳಿತು. ಮಧ್ಯವಯಸ್ಸನ್ನು ದಾಟಿ ಎಷ್ಟೋ ದೂರ ನಡೆದ ಶ್ರೀಮಂತರು, ಅಪ್ರಸ್ತುತ ಪ್ರಸಂಗಗಳಲ್ಲಿ ಬಂದು ಹೋಗತೊಡಗಿದರು.

ಮಂತ್ರಿಯಾಗುವುದಕ್ಕಿಂತ ಮುಂಚೆಯೂ, ಆತ, ಮುದುಕಿಯ ಯೋಗಕ್ಷೇಮವನ್ನು ವಿಚಾರಿಸಲು ಬಂದದ್ದುಂಟು. ಕಾನ್ವೆಂಟ್ ಸ್ಕೂಲಿನಲ್ಲಿ ನೂರೈವತ್ತು ರೂಪಾಯಿಗೆ ದುಡಿಯುವ ಆಕೆಗೆ, ಒಂದು ಒಳ್ಳೆಯ ನೌಕರಿ ಸಿಗಬೇಕೆಂಬ ಹಿತೈಷಿಗಳ ಸಾಲಿನಲ್ಲಿ ಆತನೂ ಇದ್ದ. ಮಂತ್ರಿಯಾದ. ಒಂದು ಬಡಕುಟುಂಬವನ್ನು ಉದ್ಧರಿಸಿದ.

ಆಕೆ ಮತ್ತು ಕಾರಕೂನ ಬಹಳ ಕಾಲದಿಂದ ಪ್ರೀತಿಸಿದ್ದರು. ಮಂತ್ರಿ ಆ ಪ್ರೇಮಕ್ಕೆ ಬೆಳಕಾದ.

ಆ ಕಾನ್ವೆಂಟ್ ಸ್ಕೂಲು ಮತ್ತು ಎ.ಸಿ. ಆಫೀಸು ಹತ್ತಿರವಿರುವುದೇ ಅವರು ಪ್ರೀತಿಸುವುದಕ್ಕೆ ಕಾರಣವಾಯಿತು.


ಆಕೆ ಅವನಿಗಿಂತ ಒಂದೆರಡಿಂಚು ಎತ್ತರವಿದ್ದಳು. ಆತ ಹುಡುಗಿಯಷ್ಟೇ ಬೆಳ್ಳಗಿದ್ದ. ಆಕೆ ಹುಡುಗನಷ್ಟೇ ಕಪ್ಪಿದ್ದಳು. ಅವನದು ಬೇಬಿ ಫೇಸು. ಆಕೆಯದು ಮೋಡ ತುಂಬಿದ ಮುಖ. ಅವನಿಗೆ ಕಂದು ಬಣ್ಣದ ಹದವಾಗಿ ಚಿಗುರಿದ ಗಡ್ಡವಿತ್ತು. ತೆಳ್ಳನ ಚಪಲ ತುಟಿಗಳು; ಬೆಕ್ಕಿನ ಕಣ್ಣು. ಅವನು ಎಳೆಹುಡುಗನಂತೆ ಕಾಣುತ್ತಿದ್ದ. ಆಕೆ ಬೆಳೆದವಳಂತಿದ್ದಳು. ಅವರನ್ನು ಅಕ್ಕ, ತಮ್ಮ ಎಂದೇ ಭಾವಿಸುವುದು ಜನರಿಗೆ ಅನುಕೂಲವಾಗಿತ್ತು. ಪ್ರಿಯ ಪ್ರೇಯಸಿಯರೆನ್ನಲು ಜನರ ಮನಸ್ಸು ಏಕೋ ಹಿಂದೇಟು ಹಾಕುತಿತ್ತು. ಮಂತ್ರಿ, ಮತ್ತು ಆಕೆಯ ಹೆಸರುಗಳು ಒಟ್ಟಾಗಿ ಮೆರೆಯುತ್ತಿದ್ದುದು, ಕಾರಕೂನನಿಗೆ ಹೆಮ್ಮೆಯ ವಿಷಯವೆಂದೆನಿಸಿತು. ಕಾರಕೂನನೆಂದರೆ, ದೊಡ್ಡವರ ಹಿಂದೆ ಏನೂ ಅರಿಯದಂತೆ ನಡೆವ ಕಬಂಧಕುಲ. ಇದ್ದಕ್ಕಿದ್ದಂತೆ ತನ್ನ ಅಂತಸ್ತು ಮೇಲೇರಿತೆಂದು ಆತನಿಗೆ ಭಾಸವಾಯಿತು. ಮಂತ್ರಿ ಮತ್ತು ಮಗಳ ಸಂಬಂಧದ ಸುದ್ದಿ ತಾಯಿಗೆ ಸಂತಸ ತರಲಿಲ್ಲ. ಆಕೆ, ಆದಷ್ಟು ಬೇಗ ಮಗಳ ಮದುವೆ ಮಾಡಬೇಕೆಂದು ಮಾಡಿದಳು. ಮಂತ್ರಿಯನ್ನು ಆಕೆ ನಂಬಲಿಲ್ಲ. ಮುದುಕಿ, ವ್ಯವಹಾರ ಮಾಡಿದವಳು, ವ್ಯವಹಾರಸ್ಥಳು. ಮಂತ್ರಿಯನ್ನು ಆಕೆ ಬಿಡಲಿಲ್ಲ. ಹೆಸರಿಗಾದರೂ ಒಂದು ಗಂಡನಿದ್ದರೆ ಸಮಾಜದ ಬಾಯಿ ಬಂದಾದಂತೆ ಎಂದು ಅವಳಿಗೆ ಗೊತ್ತು. ಒಮ್ಮೆ ಕಾರಕೂನ ಮನೆಗೆ ಬಂದಾಗ, ಮದುವೆಯ ಪ್ರಸ್ತಾಪ ಮಾಡಿದಳು.

ಮದುವೆಯಾಗಬೇಕೆಂದೇ ಹುಡುಗ ಹುಡುಗಿ ಪ್ರೀತಿಸುತ್ತಾರೆ. ಅವರ ಮದುವೆ ಅಷ್ಟು ಸುಲಭವಾದರೆ ಪ್ರೀತಿಗೆ ಬಂದ ಲಾಭವೇನು? ಅವನು ಕೊಂಚ ಅನುಮಾನ ಮಾಡುತ್ತಾನೆ. ತನ್ನ ಪ್ರೀತಿಯನ್ನು ಬದಿಗಿಡುತ್ತಾನೆ. ವ್ಯವಹಾರ ಮುಂದೆ ತರುತ್ತಾನೆ. ತಕ್ಕಡಿ ಮದುವೆ ಕಡೆ ವಾಲುತ್ತದೆ.

ಅವರಿಬ್ಬರ ಸಂಬಂಧ ನಾಲ್ಕೈದು ವರುಷಗಳಿಂದ ಬಂದಿದ್ದರೂ, ಅವರು, ಪ್ರೇಮ, ವಿರಹ, ತ್ಯಾಗ, ಬಲಿದಾನ ಮುಂತಾದ ಶಬ್ದಗಳಿಂದ ಬದುಕನ್ನು ತೊಡಕಿನಲ್ಲಿ ಸಿಗಿಸಿಕೊಂಡಿರಲಿಲ್ಲ. ಸುಖವಾಗಿ, ಸರಳವಾಗಿ ನಡೆದಿದ್ದರು. ಸಿನೇಮಾ ಪ್ರೇಮದಲ್ಲಿ ಮುಕ್ತಾಯವಾಗುವ ಯಾವುದೇ ಸಂಭವವೂ ಅಲ್ಲಿ ತೋರಲಿಲ್ಲ. ಭಾವಗೊಂದಲವಿರಲಿಲ್ಲ. ನಗೆಯಿತ್ತು; ಸಪ್ಪಳವಿರಲಿಲ್ಲ, ನಯವಿತ್ತು, ನಾಚಿಕೆಯಿರಲಿಲ್ಲ. ಸ್ವಭಾವಗಳ ಆರ್ಭಟವಿರಲಿಲ್ಲ; ಆದರೆ ಚಟುವಟಿಕೆಯಿತ್ತು. ಅಡವಿಯಲ್ಲಿ ಒಂದಕ್ಕೊಂದು ಹೆಣೆದುಕೊಂಡ ಮರಗಳಂತೆ ಎಷ್ಟೋ ದಿನಗಳಿಂದ ಏನೂ ಸದ್ದಿಲ್ಲದೇ ಇದ್ದರು. ಅವರು ಬೆರೆಯುತ್ತಿದ್ದರು, ಬೇರೆಯಾಗುತ್ತಿದ್ದರು. ಅವರು ಗುಬ್ಬಿಯಷ್ಟೂ ಗದ್ದಲ ಮಾಡಲಿಲ್ಲ. ಅವರಿಗೂ ಕೇಳದಷ್ಟು ನಿಶ್ಯಬ್ದವಾಗಿ ಅವರ ಸಂಬಂಧ ಸಾಗಿತ್ತು. ಅವರ ಮದುವೆಗೆ ಮಂತ್ರಿ, ಸ್ಟೇಟ್ ಕಾರಿನಲ್ಲಿ ಬಂದಿದ್ದ. ಆತ ಬಂದಿದ್ದಕ್ಕಾಗಿ

ಡಿ.ಸಿ.ನೂ ಬಂದಿದ್ದ. ಎಸ್.ಪಿ.ನೂ ಬಂದಿದ್ದ. ಪಂಚಾಯಿತ ಛೇರ್ಮನ್‌ರೂ, ಟಿ.ಡಿ.ಬಿ. ಪ್ರೆಸಿಡೆಂಟರೂ, ಲ್ಯಾಂಡ್ ಟ್ರಿಬ್ಯೂನಲ್‌ದ ಮೆಂಬರರೂ ಬಂದಿದ್ದರು. ಮದುವೆ ಯಾವುದೋ ಅಧಿವೇಶನದಂತೆ ಕಾಣುವ ಸಾಧ್ಯತೆ ನೂರಕ್ಕೆ ನೂರಿತ್ತು. ಆದರೆ ಹೆಂಗಸರೂ ಮಕ್ಕಳಿಂದಾಗಿ, ಮದುವೆ ಸಮಾರಂಭ ಕೆಲ ಲಕ್ಷಣಗಳನ್ನುಳಿಸಿ ಕೊಂಡಿತ್ತು. ಮದುಮಗ ಭಾರೀ ವ್ಹಿ.ಆಯ್.ಪಿ. ಆದ. ಅವನು ಕೆಲಸಮಾಡುವ ಕಚೇರಿಯ ಎಲ್ಲ ಜನವೂ ಬಂದಿತ್ತು. ಆಫೀಸು ಅನಧಿಕೃತವಾಗಿ ಮುಚ್ಚಿಕೊಂಡಿತ್ತು. ಅಸಿಸ್ಟಂಟ್ ಕಮೀಶನರ್, ಸ್ವತಃ, ಎಲ್ಲರಿಗೂ ಪಾಯಸ ಬಡಿಸಿದ.

ಮದುವೆಯ ಅಧಿವೇಶನದಲ್ಲಿಯೇ, ಆ ಕಾರಕನೂನಿಗೆ, ಜಿಲ್ಲಾ ಎನ್.ಜಿ.ಓ.ದ ಪ್ರತ್ಯೇಕ ಘಟಕವನ್ನು ಸ್ಥಾಪಿಸಲು ಅನುಮತಿಯೂ, ಆಶೀರ್ವಾದವೂ ದೊರಕಿತು. ಮತ್ತೊಮ್ಮೆ ಬಂದಾಗ, ತಾನೇ ಉದ್ಘಾಟನಾ ಕಾರ್ಯವನ್ನು ಏರ್ಪಡಿಸಿಕೊಡುವುದಾಗಿ, ಹರ್ಷೋದ್ಗಾರಗಳ ಮಧ್ಯೆ, ಮಂತ್ರಿ ಆಶ್ವಾಸನೆಯಿತ್ತ.



ಅದೇ ದಿನ ಸಾಯಂಕಾಲ, ಮಂತ್ರಿ, ರಾಜ್ಯದ ರಾಜ್ಯಧಾನಿಗೆ ಹೋಗುವಾಗ, ಅವರಿಬ್ಬರೂ ತನಗೆ ತೀರಾ ಹತ್ತಿರದವರೆಂಬ ಅನಿಸಿಕೆಯನ್ನು ಪ್ರದರ್ಶಿಸಿ, ಕಾರಕೂನನಿಗೆ, ಮೊದಲಿನ ಚಿಕ್ಕ ಬಾಡಿಗೆ ಮನೆಯನ್ನು ಬಿಡುವಂತೆಯೂ, ಸ್ಟೇಷನ್ ರೋಡಿನಲ್ಲಿರುವ ಬಂಗ್ಲೆಯಲ್ಲಿ ಬಂದಿರುವಂತೆಯೂ, ಒತ್ತಾಯಪೂರ್ವಕವಾಗಿ ವಿನಂತಿಸಿದ. ತಾನು ಹೇಗೂ ಬೆಂಗಳೂರಿನಲ್ಲಿಯೇ ಇರಬೇಕಾದುದರಿಂದಲೂ, ಅಷ್ಟು ಒಳ್ಳೆಯ ಮನೆಯನ್ನು ಬಾಡಿಗೆಗೆ ಕೊಟ್ಟು ಹಾಳು ಮಾಡುವುದು ಸರಿಯಾಗುವುದಿಲ್ಲವೆಂತಲೂ, ಎಲ್ಲರೆದುರಿಗೆ ದೊಡ್ಡದಾಗಿ ಹೇಳಿದ. ಆ ಮನೆಯನ್ನು ಖಾಲಿ ಇಡುವುದಕ್ಕಿಂತ, ಈ ಜನವನ್ನು ಅದರ ದೇಖರೇಖ ನೋಡಿಕೊಳ್ಳುವಂತೆ ಇಟ್ಟು ಹೋಗುವುದು ಅಸ್ವಾಭಾವಿಕವಲ್ಲವೆಂಬ ವಿಷಯದ ಮಂಡನೆ ಮಾಡಿದ್ದ.

ಕಾರಕೂನ, ತನ್ನ ಹಳೇ ಕುರ್ಚಿಗಳನ್ನು, ಮಂಚಗಳನ್ನು, ಮತ್ತಿತರ ಸಾಮಾನು ಸಲಕರಣೆಗಳನ್ನು ಆ ಬಂಗ್ಲೆಗೆ ತೆಗೆದುಕೊಂಡು ಹೋಗುವಂತಿರಲಿಲ್ಲ. ಆ ಬಂಗ್ಲೆ ಸುಸಜ್ಜಿತವಾಗಿದ್ದುದ್ದರಿಂದ, ಆ ಮುದುಕಿಯೊಂದಿಗೆ, ದಂಪತಿಗಳು ಎರಡೇ ದಿನಗಳಲ್ಲಿ ಅಲ್ಲಿಗೆ ಹೋಗಿ ಇಳಿದರು.

ಬಂಗ್ಲೆಯ ಎರಡನೆ ಅಂತಸ್ತಿನ ಬಲಗಡೆ ಕೋಣೆಯ ಹೊರಗಡೆ ಜಿಲ್ಲಾ ಎನ್.ಜಿ.ಓ. ಸಂಘದ ಬೋರ್ಡು ನೇತುಬಿದ್ದಿತು. ದಿನದಿಂದ ದಿನಕ್ಕೆ, ಆ ಕೋಣೆಗೆ ಬರಹೋಗುವವರ ಸಂಖ್ಯೆ ಬೆಳೆಯಿತು. ಒಂದೆರಡು ವಾರಗಳಲ್ಲಿ, ಎಡಗಡೆ ಕೋಣೆಯ ಗೋಡೆಯ ಮೇಲೆ, ಹಿಂದುಳಿದವರ ಪ್ರತ್ಯೇಕ ಸೆಲ್ ಎಂಬ ಬೋರ್ಡು ಮೂಡಿತು. ಕಾರಕೂನ, ಆಫೀಸಿಗೆ ಆಗೀಗ ಹೋಗುತ್ತಿದ್ದನಾದರೂ, ಅವನೆಂದೂ, ಮದುವೆಯಾದ ಮೇಲೆ ತನ್ನ ಕುರ್ಚಿಯ ಮೇಲೆ ಕೂಡ್ರಲಿಲ್ಲ. ಆಫೀಸಿಗೆ ಹೋದವನೇ, ನೇರವಾಗಿ ಅಸಿಸ್ಟಂಟ್ ಕಮೀಶನರ್ ಛೇಂಬರಿಗೆ ಹೋಗಿ, ಮಂತ್ರಿಗಳು

ಈಗ ಬರುತ್ತಾರೆ, ಆಗ ಬರುತ್ತಾರೆ, ಅವರ ಕಾರ್ಯಕ್ರಮಗಳೇನು? ತಮ್ಮನ್ನು, ತಮ್ಮ ಹುಟ್ಟೂರಾದ ಮಂಡ್ಯಕ್ಕೆ ವರ್ಗಮಾಡುವ ಮಾತನ್ನು ಈ ಸಾರಿ ಎತ್ತುತ್ತೇನೆ ಎಂಬಂಥ ಮಾತುಗಳನ್ನಾಡಿ, ಅಲ್ಲಿಗೆ ಕಾಫಿ ತರಿಸಿ ಕುಡಿದು, ಆಫೀಸಿನ ಹೊರಬಿದ್ದುಬಿಡುತ್ತಿದ್ದ.

ಆತನ ಬದುಕಿನ ಸ್ಟೈಲ್, ಮಾತಿನ ಧಾಟಿ, ವೇಷಭೂಷಣ, ನಡಿಗೆಯ ರೀತಿಗಳೆಲ್ಲ ಬದಲಾದವು. ನಮ್ಮ ಮಂತ್ರಿಗಳು, ನಮ್ಮ ಮಂತ್ರಿಗಳು ಎಂಬ ಮಂತ್ರ, ಈ ನಿಮ್ಮ ಕೆಲಸ ಆದ ಹಾಗೆಯೇ, ಈ ಸಾರೆ ಬಂದಾಗ ಎಲ್ಲಾ ಮಾಡಿಸಿಬಿಡ್ತೇನಿ-ಎಂಬ ಅಭಯ, ವಚನಗಳು, ಧಾರಾಳವಾಗಿ ಅವನ ಬಾಯಿಯಿಂದ ಜೊಲ್ಲಿನಂತೆ ಸುರಿಯುತ್ತಿದ್ದವು. ಕಾರಕೂನನಿಗೆ ಹೊಟ್ಟೆಯೂ ಬರತೊಡಗಿತ್ತು. ಮುಖದಲ್ಲಿ ಕಳೆ ಮಿಂಚುತ್ತಿತ್ತು. ದಿವಸ, ಒಂದಲ್ಲ ಒಂದು ಪಾರ್ಟಿ ಅವನಿಗಾಗಿ ನಡೆದೇ ಇರುತ್ತಿತ್ತು.

ರಾಜ್ಯದ ಪ್ರತಿಯೊಬ್ಬ ಮಂತ್ರಿಗೆ, ಒಂದೊಂದು ಜಿಲ್ಲೆಯನ್ನು ನೋಡಿಕೊಳ್ಳುವುದಕ್ಕಾಗಿ ದತ್ತಕ್ಕೆ ಕೊಡಲಾಗಿತ್ತು. ಆ ಪ್ರಕಾರ, ಆತನಿಗೆ, ಅವನ ಜಿಲ್ಲೆಯನ್ನು ದತ್ತಕ್ಕೆ ಕೊಟ್ಟಿದ್ದರು. ತಿಂಗಳಿಗೆ ಒಂದೆರಡು ಬಾರಿ, ಜಿಲ್ಲೆಯಲ್ಲಿ ಸರ್ಕಾರದ ಕಾರ್ಯಕ್ರಮಗಳು ಎಷ್ಟರ ಮಟ್ಟಿಗೆ ಜನ ಸಾಮಾನ್ಯರಿಗೆ ಮುಟ್ಟಿವೆಯೆನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ, ಆತ ಬರುವುದು ಅನಿವಾರ್ಯವಾಯಿತು. ಆತ ಬಂದಾಗಲೆಲ್ಲ, ಬೇರೆ ಬೇರೆ ಅವಕಾಶ ಹುಡುಕಿ, ಕಾರಕೂನ, ಸಮಾರಂಭಗಳನ್ನು ಏರ್ಪಡಿಸುತ್ತಿದ್ದ. ಒಮ್ಮೆ ಬಂದಾಗ, ಮಾತಿನ ಮಧ್ಯದಲ್ಲಿ, ತನಗೆ ಸ್ಟೇಟ್ ಕಾರ್ ಇರುವುದರಿಂದ ತನ್ನ 76ನೇ ಮಾಡಲ್ಲಿನ ಅಂಬಾಸಡರನ್ನು ಕಾರಕೂನನ ಉಪಯೋಗಕ್ಕೆ ಬಿಡುವುದಾಗಿ ಹೇಳಿದ, ಕಾರಕೂನನ ಕಾರ್ಯಬಾಹುಳ್ಯವನ್ನು ಗಣನೆಗೆ ತೆಗೆದುಕೊಂಡು. ಮಂತ್ರಿಯನ್ನು ಅಷ್ಟೊಂದು ಹಚ್ಚಿಕೊಂಡಿರುವಾಗ



ಕಾರನ್ನು ಕೊಡುವುದರಲ್ಲಿ ಯಾವ ತಪ್ಪೂ ಕಾಣಲಿಲ್ಲ.

ಈಗ ಅಸ್ತಿತ್ವದಲ್ಲಿರುವ ರಾಜ್ಯಮಟ್ಟದ ಎನ್.ಜಿ.ಓ. ಸಂಘ, ನೌಕರ ಹಿತಾಸಕ್ತಿಗಳ ಬಗ್ಗೆ ಹೋರಾಡುವುದರಲ್ಲಿ ವಿಫಲವಾದ್ದರಿಂದ ಅದರ ಪುನಾರಚನೆ ಅವಶ್ಯವೆಂಬ ಮಂತ್ರಿಯ ಸೂಚನೆಯನ್ನು ಕೈಗೆತ್ತಿಕೊಂಡು, ಕಾರಕೂನ, ರಾಜ್ಯಮಟ್ಟದ ನೌಕರರ ಅಧಿವೇಶನವೊಂದನ್ನು ಕರೆದ. ಅಸಂಖ್ಯಾತವಾದ ಗ್ರೇಡುಗಳ ವ್ಯವಸ್ಥಿತ ವರ್ಗೀಕರಣ, ಹತ್ತು ವರ್ಷಕ್ಕೆ ನಿಗದಿಮಾಡಿದ ಪ್ರಮೋಶನ್, ಬೆಲೆಸೂಚಿಗನುಗುಣವಾಗಿ ಡಿ.ಎ., ಒಂದು ತಿಂಗಳೊಳಗಾಗಿ ಸಾಧಿಸಿ ಕೊಡುವ ಭರವಸೆಗಳನ್ನು ಪ್ರಕಟಪಡಿಸಿದ. ಉದ್ಘಾಟನೆಗೆ ಮುಖ್ಯಮಂತ್ರಿಗಳನ್ನು, ಅಧ್ಯಕ್ಷತೆಗೆ ಶಿಕ್ಷಣ ಮಂತ್ರಿಗಳನ್ನು, ಮುಖ್ಯ ಅತಿಥಿಗಳಾಗಿ ಹಣಕಾಸಿನ ಸಚಿವರನ್ನು ಆಮಂತ್ರಿಸುವ

ಮಂತ್ರಿಯ ಆಪ್ತ ಸೂಚನೆಯ ಮೇರೆಗೆ, ರಾತ್ರಿ, ಬಂಗ್ಲೆಯಲ್ಲಿ, ಐದುಲಕ್ಷ ರೂಪಾಯಿಗಳನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಿ, ಎನ್.ಜಿ.ಓ. ಬೇಡಿಕೆಗಳಿಗೂ ಒಪ್ಪಿಗೆಯನ್ನು ಪಡೆದುಕೊಂಡ ಮರುದಿನ, ದಿನಪತ್ರಿಕೆಗಳಲ್ಲಿ, ಹದಿನೆಂಟು ಪಾಯಿಂಟುಗಳಲ್ಲಿ, ಎನ್.ಜಿ.ಓ. ಎಲ್ಲಾ ಬೇಡಿಕೆಗಳನ್ನು ಮುಖ್ಯಮಂತ್ರಿಗಳು ಒಪ್ಪಿದ್ದಾಗಿಯೂ, ಹೊಸಗ್ರೇಡು, ಪ್ರಮೋಶನ್, ಸ್ಕೇಲುಗಳನ್ನು ಪರಿಶೀಲಿಸಲು ಏಕ ಸದಸ್ಯ ಆಯೋಗ ನಿಯಮಿಸಿದ್ದಾಗಿಯೂ, ತಾತ್ಕಾಲಿಕ ಪರಿಹಾರವಾಗಿ ಪ್ರತಿಯೊಬ್ಬ ನೌಕರನಿಗೆ ಕನಿಷ್ಠ 75ರಿಂದ 80 ರೂಪಾಯಿಗಳನ್ನು ಅದೇ ತಿಂಗಳಿಂದ ಜಾರಿ ಮಾಡಿದ್ದಾಗಿ ಪ್ರಕಟವಾಗಿತ್ತು. ಪತ್ರಿಕೆಯ ಬೇರೆ ಬೇರೆ ಕಾಲಂಗಳಲ್ಲಿ, ಕಾರಕೂನ, ಮುಖ್ಯಮಂತ್ರಿ, ಶಿಕ್ಷಣ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಸಲ್ಲಿಸಿದ ಸುದ್ದಿಯೂ ಪ್ರಕಟವಾಗಿತ್ತು. ಮುಖ್ಯಮಂತ್ರಿಗೆ ಅರ್ಪಿಸಿದ ಐದು ಲಕ್ಷದ ರೂಪಾಯಿ ಕೂಡಿಸಿಕೊಟ್ಟ ಛೇಂಬರ್ ಆಫ್ ಕಾಮರ್ಸ್ ಸದಸ್ಯರಿಗೆ, ಒಂದು ಡಿನ್ನರ್ ಪಾರ್ಟಿಯನ್ನು ಕಾರಕೂನ ಸಂಜೆ ಏರ್ಪಡಿಸಿ, ಅವರನ್ನೆಲ್ಲ ಸಂತೋಷಪಡಿಸಿದ್ದನಷ್ಟೇ ಅಲ್ಲ, ಮಾರ್ಕೆಟಿಂಗ್ ಮಂತ್ರಿಯೊಂದಿಗೆ ತಮ್ಮೆಲ್ಲರ ಪರವಾಗಿ ಮಾತನಾಡುವುದಾಗಿಯೂ ಭರವಸೆ ಕೊಟ್ಟ.

ಕಾರಕೂನನ ಚಟುವಟಿಕೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋದ ಕಾರಣ, ಅವನು ಆಕೆಯನ್ನು ಭೇಟಿಯಾಗುವುದು ಲೈಟು ಆರಿಸಿದ ಮೇಲೆ, ಕತ್ತಲೆಯ ಹಾಸಿಗೆಯಲ್ಲಿಯೇ ಆಗಿತ್ತು. ಎಷ್ಟೋ ಬಾರಿ, ಮಧ್ಯರಾತ್ರಿ ಕಳೆದ ಮೇಲೆ ಕೋಣೆಗೆ ಮರಳಿದ ಕಾರಕೂನ, ಬದಿಯ ಮಂಚದ ಮೇಲೆ ಆಕೆ ಮಲಗಿದ್ದಾಳೆಂದು ಭಾವಿಸಿಕೊಂಡು ನಿದ್ರೆ ಹೋಗಿದ್ದೂ ಉಂಟು. ಎಷ್ಟೋ ಪ್ರಸಂಗಗಳಲ್ಲಿ, ಅವಳು, ಬೆಳಗಿನ ಜಾವದಲ್ಲಿ ತನ್ನ ಕೋಣೆಗೆ ಬಂದು ಮಲಗಿದ್ದೂ ಉಂಟು. ಕಾರಕೂನ, ಬೆಳಗಾದ ಮೇಲೆ ತಂದು ಕೊಟ್ಟ ಚಹ ಕುಡಿದು, ಕಾಲು ಅಗಲಿಸಿಕೊಂಡು, ಅಂಗಾತ ಮಲಗಿ, ಗೊರಕೆ ಹೊಡೆಯುತ್ತಿರುವ ಹೆಂಡತಿಯನ್ನು ನೋಡಿದ ಹಾಗೆ ಮಾಡಿ, ಜನಸೇವೆ, ಸಮಾಜ ಸೇವೆ, ಸಂಘ ಸೇವೆ, ವಗೈರೆಯ ಫೈಲುಗಳನ್ನು ಕೈಗೆತ್ತಿಕೊಂಡು ಮನೆಯ ಆಳನ್ನು ಕರೆದು, 'ಅಮ್ಮನವರು ಕಾಲೇಜಿಗೆ ಬರುವುದಿಲ್ಲವೆಂದು ಪ್ರಿನ್ಸಿಪಾಲರಿಗೆ ತಿಳಿಸಿ ಬಾ' ಎನ್ನುತ್ತ ಕಾರು ಹತ್ತುತ್ತಿದ್ದ.

ಅವರ ಮದುವೆಯಾಗಿ ಎರಡು ವರುಷಗಳಾಗುತ್ತ ಬಂದರೂ ಅವಳು ಬಸಿರಾಗಿರಲಿಲ್ಲ. ಮಕ್ಕಳಾಗದೇ ಇರುವ ಅವಕಾಶವನ್ನು, ಕಾರಕೂನ, ತನ್ನನ್ನು ಸನ್ಮಾನಿಸಿದ ಅನೇಕ ಸಭೆಗಳಲ್ಲಿ ಪ್ರಸ್ತಾಪ ಮಾಡಿ, ದೇಶದ ಅಭಿವೃದ್ಧಿಯ ಬೀಜ, ಕುಟುಂಬ ಯೋಜನೆಯಲ್ಲಿದೆಯೆಂದು ಸಾರಿ ಹೇಳುತ್ತಿದ್ದ. ಗಂಡ ಹೆಂಡತಿ ಮನೆಯಲ್ಲಿಲ್ಲದಾಗ, ಆಳು ಮಕ್ಕಳು, ಹತ್ತು ಮಂದಿ ತಿರುಗಾಡಿದರೆ, ಹಾದಿಯಲ್ಲಿ ಹ್ಯಾಗೆ ಹುಲ್ಲು ಬೆಳೆಯಬೇಕು ಏನ್ನುತ್ತಾ ಮಜಾ ಮಾಡುತ್ತಿದ್ದರೂ, ಕಾರಕೂನ ತನ್ನ ಸಂಸಾರ ಎಂಥ ಮಾದರಿಯದೆಂದು ತಿಳಿದುಕೊಳ್ಳುವ ಗೋಜಿಗೆ ಹೋಗಲಿಲ್ಲ. ತನಗೆ ಸಮಾಜದಲ್ಲಿ ಸಿಗುತ್ತಿರುವ ಗೌರವವನ್ನು ಲೆಕ್ಕಕ್ಕೆ ತೆಗೆದುಕೊಂಡು, ತಾನೊಬ್ಬ ಸಮಾಜಕ್ಕೆ ಅನಿವಾರ್ಯನಾದ ಗಣ್ಯ ವ್ಯಕ್ತಿಯೆಂದು ನಂಬಿಕೊಂಡಿದ್ದ. ಪ್ರತಿ ದಿವಸ, ಕನಿಷ್ಠ ನೂರಾರು ಜನ, ಒಂದಲ್ಲ ಒಂದು ಸಹಾಯಕ್ಕಾಗಿ ತನ್ನನ್ನು ಭೇಟಿಯಾಗುತ್ತಿರುವಾಗ, ತನಗೊಂದು ವೈಯಕ್ತಿಕ ಬದುಕು ಇದೆಯೆನ್ನುವುದನ್ನು ಆತ ಸುಲಭವಾಗಿ ಮರೆತುಬಿಟ್ಟಿದ್ದ. ತಾನು ಮಾಡಿದ ಸಹಾಯದಿಂದಾಗಿ, ಸಾವಿರಾರು ಕುಟುಂಬಗಳು ತನ್ನ ಹೆಸರು ಹೇಳಿಯೇ ಊಟ ಮಾಡುತ್ತಿದ್ದಾವೆಂದು ಅವನು ತಿಳಿದುಕೊಂಡಿದ್ದ.

ಒಮ್ಮೊಮ್ಮೆ, ಸೇವೆಯ ಈ ಪಿತ್ಥ ಇಳಿದಾಗ, ಕುಡಿದ ಅಮಲು ಏನಾದರೂ ಮಧ್ಯರಾತ್ರಿಯಲ್ಲಿ ಇಳಿದು ಎಚ್ಚರವಾಗಿಬಿಟ್ಟರೆ, ಕೆಲವೊಂದು ಪ್ರಶ್ನೆ

ಗಳು ಅಸ್ಪಷ್ಟವಾಗಿ ಮೂಡುತ್ತಿದ್ದವು. ಮದುವೆಯಾದ ಮೊದಲ ರಾತ್ರಿಯೇ, ಔದಾರ್ಯ ಮತ್ತು ಆದರದಿಂದಾಗಿ ಆ ಪ್ರಶ್ನೆಗಳು ಅಸಾಂದರ್ಭಿಕವಾಗಿ ತೋರಿದ್ದವು. ಪ್ರಶ್ನೆಗಳನ್ನೇ ಪ್ರತ್ಯೇಕವಾಗಿ ನೋಡಿದರೆ ಪ್ರಾಮಾಣಿಕವಾಗಿ ತೋರುತ್ತಿದ್ದವು. ಆದರೆ ತನ್ನ ದಿನನಿತ್ಯದ ವ್ಯವಹಾರಗಳ ಮಧ್ಯದಲ್ಲಿ, ಅವುಗಳ ಉಚ್ಚಾರಣೆಯು ಅಪ್ರಾಸಂಗಿಕ ರೂಪವನ್ನು ತಾಳಿಬಿಡುತ್ತಿದ್ದವು. ತಡೆಯಲಾಗದೇ, ತುಂಬಾ ನಾಜೂಕಾಗಿ, ಹೌದೋ ಅಲ್ಲವೋ ಎನ್ನುವ ರೂಪದಲ್ಲಿ ಆಕೆಯು ಎದುರು ಈ ಪ್ರಶ್ನೆಗಳನ್ನು ಎತ್ತಿದ್ದ. ಆದರೆ, ಆ ಬೆಳಗು, ಆ ಪ್ರಶ್ನೆಗಳಿಗೆ ಸ್ಥಾನವಿರದಷ್ಟು ಸುಖಪ್ರದವೂ ವೈಭವಪೂರ್ಣವೂ ಆಗಿಬಿಟ್ಟಿತ್ತು. ಒಂದೊಂದು ದಿನವೂ, ಪ್ರಶ್ನೆಗಳನ್ನು ಹಿಂದೊತ್ತಿ ಸಾಗಿದ ಮೇಲೆ, ಕಾರಕೂನನಿಗೆ ಬದುಕು ತೀರಾ ಸರಳವಾಗಿಬಿಟ್ಟಿತ್ತು. ತನ್ನ ದಿನದ ವ್ಯವಹಾರದ ಎದುರು ನಿಲ್ಲದ ಯಾವುದನ್ನಾದರೂ ಕುರಿತು, ಯಾಕೆ ವಿಚಾರಿಸಬೇಕೆನ್ನುವುದೇ ತಿಳಿಯದಾಗಿ ಬದುಕನ್ನು ಸುಲಭ ಪರಿಹಾರವನ್ನಾಗಿ ಸ್ವೀಕರಿಸಿಬಿಟ್ಟಿದ್ದ.

ಮಂತ್ರಿಯೊಡನೆ ಆಕೆ ಮಾತನಾಡಿದರೆ, ತನ್ನಂತೆ ಮಾತನಾಡಿದಳು, ಮಂತ್ರಿಯ ಸಂಗಡ ಊಟ ಮಾಡಿದರೆ, ತನ್ನಂತೆ ಕಂಪನಿ ಕೊಟ್ಟಳು, ಮಂತ್ರಿಯೊಡನೆ ಬಂಗ್ಲೆಗೆ ಹೋದರೆ, ತನ್ನ ಹಾಗೆಯೇ ಹೋಗಿದ್ದಾಳೆ, ಮಧ್ಯರಾತ್ರಿಯಾದರೂ ಬಂಗ್ಲೆಯಿಂದ ಬರದೇ ಹೋದರೆ, ತನ್ನಂತೆ ನೂರೆಂಟು ರಾಜಕೀಯ, ಸಾಮಾಜಿಕ ವ್ಯವಹಾರಗಳನ್ನು ಕುರಿತು ಚರ್ಚಿಸುತ್ತಾಳೆ-ಹೀಗೆ ಅವನ ವೈಯಕ್ತಿಕ ಬದುಕಿನ ಪ್ರಶ್ನೆಗಳೆಲ್ಲ, ಅವನ ವರ್ತಮಾನದ ಪರಿಸರದಲ್ಲಿ ತೀರಾ ಕ್ಷುಲ್ಲಕ ಮತ್ತು ಅವಾಸ್ತವವಾಗಿ ಕಂಡವು. ಆದರೂ, ಗಂಭೀರವಾಗಿಯಲ್ಲ, ಹುಡುಗಾಟಿಕೆಗಾದರೂ ಆಕೆಗೆ ಈ ಪ್ರಶ್ನೆಗಳನ್ನು ಕೇಳಬೇಕೆಂದು ಮಾಡಿಕೊಂಡ.

ಆ ದಿನ, ಮಂತ್ರಿ ಊರಿಗೆ ಬಂದಿದ್ದ. ಕಾರಕೂನನೊಂದಿಗೆ ಆಕೆಯೂ ಬಂಗ್ಲೆಗೆ ಹೋಗಿದ್ದಳು. ಎನ್.ಜಿ.ಓ. ಸಂಘದ ಚಟುವಟಿಕೆ, ಹಿಂದುಳಿದವರ ಸೆಲ್ಲಿನ ವಿಷಯಗಳು ಮುಗಿದವು. ಅಂದು, ಮುಖ್ಯವಾಗಿ, ಸದ್ಯದಲ್ಲಿಯೇ ಬರುವ ಸ್ಥಾನಿಕ ಸಂಸ್ಥೆಯ ಚುನಾವಣೆಗೆ ಸಂಬಂಧಿಸಿದ ಸ್ಟ್ರೇಟಜಿಯನ್ನು ರೂಪಿಸಬೇಕಾಗಿತ್ತು. ಮುಸ್ಲಿಂ ಮತಗಳನ್ನು ಹೇಗೆ ಕ್ಯಾಚ್ ಮಾಡಬೇಕು, ಬ್ರಾಹ್ಮಣರು, ಲಿಂಗಾಯತರು ಆಳುವ ಪಕ್ಷದಿಂದ ದೂರವಿದ್ದಾರೆ, ಅವರ ಮತಗಳನ್ನು ಹೇಗೆ ದೊರಕಿಸಿಕೊಳ್ಳುವುದು ಎಂಬ ವಿಷಯವನ್ನು ಕುರಿತು ಮಂತ್ರಿ, ಕಾರಕೂನರು ಬಹಳ ಮಾತನಾಡಿದರು. ಮುಜರಾಯಿ ಶಾಖೆಯಿಂದ, ಊರಿನ ಹೊರಗಿನ ಹಾಳುಬಿದ್ದ ಆಂಜನೇಯ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡಿಸುತ್ತೇವೆಂದು ಮಂತ್ರಿ ಹೇಳಿದ. ಕುದುರೆ ಹತ್ತಿದ ಬಸವಣ್ಣನ ಮೂರ್ತಿಯೊಂದನ್ನು, ಸಂತೆಪೇಟೆ ಮಧ್ಯ ನಿಲ್ಲಿಸುವ ಭರವಸೆಯನ್ನು ಲಿಂಗಾಯತರಿಗೆ



ಕೊಡುವುದು ಎಂದು ತಿಳಿಸಿದ. ವಾರ್ಡ್‌ದಿಂದ ದರ್ಗಾ ರಿಪೇರಿಗಾಗಿ ಇಪ್ಪತ್ತೈದು ಸಾವಿರ ವಾಗ್ದಾನ ಮಾಡಬಹುದೆಂದು ಕಾರಕೂನನಿಗೆ ಮಂತ್ರಿ ತಿಳಿಸಿ ಹೇಳಿದ. ಈ ಜಾತಿಯ ಮುಖಂಡ ರನ್ನು ಭೇಟಿಯಾಗಿ, ಅವರಿಂದ, ಇವುಗಳ ಬಗ್ಗೆ ತನಗೆ ವಿನಂತಿ ಮಾಡಿಕೊಳ್ಳುವ ಅರ್ಜಿಗಳನ್ನು, ನಾಳೆ ಮಧ್ಯಾಹ್ನದೊಳಗೆ ತಂದು ಮುಟ್ಟಿಸ ಬೇಕೆಂದು ಪ್ರೀತಿಯಿಂದ ಆಜ್ಞಾಪಿಸಿದ. ಊಟ ಮುಗಿದರೂ ಅವರಿಬ್ಬರೂ ಕುಡಿಯುವುದನ್ನು ಮುಗಿಸಲಿಲ್ಲ. ಆಗಲೇ ಬಹಳ ಹೊತ್ತಾಗಿತ್ತು. ಈಗ ಅವರಿಬ್ಬರೂ ಸಮಾನಸ್ಕಂದರಾಗಿದ್ದರು. ಅವರಿಬ್ಬರ ಮಧ್ಯದ ಅಂತರ ಪೂರ್ಣ ತೊಳೆದುಹೋಗಿತ್ತು. ಆಕೆ ಮಾತ್ರ, ಪೃಥ್ವಿಯಷ್ಟು ತಣ್ಣಗಿದ್ದಳು. ಆಗೀಗ ಬೇಸಿಗೆಯ ಗಾಳಿಯಂತೆ ಎದ್ದು, ಎಲ್ಲಿಗೋ ಹೋಗಿ ಬರುತ್ತಿದ್ದಳು. ಬಹುತೇಕ ಟಾಯ್ಲೆಟ್ಟಿಗಿರಬೇಕು. ಮಧ್ಯದಲ್ಲಿ ಅವರಿಬ್ಬರೂ, ಅವಳು ಮಾತ್ರ ಮೂರನೆ ಯವಳೆಂಬಂತೆ, ಅವಳ ದೇಹವನ್ನು ಕುರಿತು ವಲ್ಗರ್ ಆಗಿ ಮಾತನಾಡುತ್ತಿದ್ದರು. ಇಬ್ಬರಿಗೂ ಒಮ್ಮೆಲೇ ಮನಸ್ಸು ಬಂದಿದ್ದರೆ, ಅವಳನ್ನು ಒಂದೇ ಮಂಚದ ಮೇಲೆ ಹಂಚಿಕೊಳ್ಳುತ್ತಿದ್ದರು. ಹಾಗೆ ಆಗಲಿಲ್ಲ. ಆಕೆ ಮಾತ್ರ, ಏನೂ ತಟ್ಟದಂತೆ, ತನ್ನ ಕೆಲಸವೆಲ್ಲ ಮುಂದೆ ಇರುವುದೆಂಬಂತೆ ಕುಳಿತಿದ್ದಳು. ಅವಳ ದೇಹ ಕುಳಿತಿತ್ತು. ಮನಸ್ಸು ಮಲಗಿತ್ತು.

ಮಂತ್ರಿ ಡ್ರೈವರ್‌ನನ್ನು ಕರೆದು, ಕಾರಕೂನನನ್ನು ಮನೆಗೆ ಬಿಟ್ಟು ಬರುವಂತೆ ಹೇಳಿದ. ಕಾರಕೂನ ತಾನೊಬ್ಬನೇ ಅಲ್ಲಿಗೆ ಬಂದಿದ್ದೆಂದು ತಿಳಿದುಕೊಂಡವನಂತೆ, ನಮಸ್ಕಾರ ಹಾಕಿ, ತಕ್ಷಣ ಕಾರಿನಲ್ಲಿ ಕುಳಿತು ನಡೆದ.

ಕಾರಕೂನ, ಅರ್ಧನಿದ್ರೆಯಲ್ಲಿ, ಏನಾಯಿತೋ ಏನೋ ಎದ್ದು ಕುಳಿತ. ಎದ್ದು ನಿಂತು ಲೈಟು ಹಾಕಿದ. ಬದಿಯ ಮಂಚ ಖಾಲಿಯಿತ್ತು. ಗಡಿಯಾರ ನೋಡಿದ. ನಾಲ್ಕರ ಹತ್ತಿರ ಮುಳ್ಳು ಹರಿಯುತ್ತಿತ್ತು. ಬಾಥ್‌ರೂಮಿಗೆ ಹೋಗಿ ಬಂದ. ಬೇಸನ್ನಿನಲ್ಲಿ ಕಣ್ಣು ಮೂಗು ಆದಿಯಾಗಿ, ಮುಖವನ್ನು ಝುಳ ಝುಳ ತೊಳೆದುಕೊಂಡ. ಆಕೆ ಇನ್ನೂ ಯಾಕೆ ಬರಲಿಲ್ಲ ಎಂಬ ಪ್ರಶ್ನೆ, ಗರಗರ ತಲೆಯಲ್ಲಿ ತಿರುಗತೊಡಗಿತ್ತು. ಬಂಗ್ಲೆಯಲ್ಲಿ, ಮಂತ್ರಿಯ ಮಂಚದ ಮೇಲೆ ಮಲಗಿರುವ ದೃಶ್ಯ ಸ್ಪಷ್ಟವಾಗಿ ಕಂಡಿತು. ಇದೆಲ್ಲ ಮೊದಲ ಬಾರಿಗೆ ಎನ್ನುವಷ್ಟು ಗಾಬರಿಯಾದ. ಆತಂಕಪಟ್ಟ. ನಾಚಿಕೆಯೆನಿಸಿತು. ಜನ ಏನೆಂದುಕೊಂಡಾರು? ಮುಖ ಹೇಗೆ ತೋರಿಸುವುದು? ಎಂದೆಲ್ಲ ಅನಿಸತೊಡಗಿತು. ಹೊರಗಡೆ ಕಾರು ಸಪ್ಪಳ ಮಾಡಿತು. ವಾಚ್‌ಮನ್ ಬಾಗಿಲು ತೆರೆದ ಸಪ್ಪಳ ಕೇಳಿತು. ಆಕೆ ಒಳಬಂದಳು. ಬಂದವಳೇ, ಬಾಥ್‌ರೂಮಿಗೆ ಹೋಗಿ, ಶೋವರ್ ಶುರು ಮಾಡಿದಳು. ಈತ ಮಂಚದ ಮೇಲೆ ಕುಳಿತೇ ಇದ್ದ. ಬಾಥ್‌ರೂಮಿನ ಬೋಲ್ಟ್ ಒಳಗಿನಿಂದ ಹಾಕಿರಲಿಲ್ಲ. ಒಳಗೆ ಹೋಗಬಹುದು ಎಂದು ಕೊಂಡ. ಕುಳಿತೇ ಇದ್ದ. ಆಕೆ ಟವೆಲ್ಲಿನಿಂದ ಮೈ ಒರೆಸಿಕೊಳ್ಳುತ್ತ ಸ್ವಿಚ್‌ನ ಹತ್ತಿರ ಬಂದಳು. ಅವಳ ಮೈ ಮೇಲೆ ಏನೂ ಇರಲಿಲ್ಲ. ಮೈ ಇತ್ತು. ಬಂಗ್ಲೆಯಿಂದ ಬಂದರೂ ಮೈ ಫ್ರೆಶ್ಶಾಗಿತ್ತು. ಮಂತ್ರಿಯ ಮೈಯ ವಾಸನೆ ಅದಕ್ಕೆ ಇನ್ನೂ ಅಂಟಿಕೊಂಡಿತ್ತು. ಸ್ವಿಚ್ ಆರಿಸಿದಳು. ತಾನು ಎಚ್ಚರವಾಗಿ ಕುಳಿತದ್ದನ್ನು ಆಕೆ ಗಮನಿಸಲು ಸಿದ್ಧಳಿಲ್ಲವೆನ್ನುವುದು ಸ್ಪಷ್ಟವಾಗಿತ್ತು. ಆತ ಛಾದರ ಹೊದ್ದು ಮಲಗಿದ. ಆಕೆ ತನ್ನ ಮಂಚದ ಮೇಲೆ ಮತ್ತೆ ಅಂಗಾತ ಮಲಗಿದ್ದಳು. ಅದು ಮುಖ್ಯವಲ್ಲ. ಕತ್ತಲೆಯಲ್ಲಿ ಆ ನೀತಿ, ಅನೀತಿ, ಪಾತಿವ್ರತ್ಯ, ವ್ಯಭಿಚಾರ, ಗಂಡ, ದೇವರು ಎಂಬಂಥ ಪ್ರಶ್ನೆಗಳು ಕೆಂಪು ಬಲ್ಬುಗಳನ್ನು ಹಚ್ಚಿಕೊಂಡು ಗಿರಕಿ ಹೊಡೆಯತೊಡಗಿದವು. ಆತ ಎದ್ದು ಕುಳಿತ. 'ಏ' ಎಂದ. ಧ್ವನಿ ಅಪರಿಚಿತವಾಗಿ ತೋರಿತು. ತಾನು ಆಕೆಯನ್ನು ಏನೆಂದು ಸಂಬೋಧಿಸುತ್ತಿದ್ದೆಯೆನ್ನುವುದು ನೆನಪು ಮಾಡಿಕೊಳ್ಳಲು ಪ್ರಯತ್ನಪಟ್ಟ. ನೆನಪಾಗಲಿಲ್ಲ.

ಆದುದರಿಂದ ನೇರವಾಗಿ ಕೇಳಿದರಾಯಿತೆಂದು ಪ್ರಶ್ನೆಗಳನ್ನು ಹುಡುಕಾಡತೊಡಗಿದ. ಯಾವ ಪ್ರಶ್ನೆಯೂ ಖಚಿತ ಆಕಾರ ತಳೆದು ಅವನ ಬಾಯಿಯಿಂದ ಬರಲು ಸಿದ್ಧವಾಗುತ್ತಿರಲಿಲ್ಲ. ಮಲಗಿದ. ಮತ್ತೆ ಎದ್ದು ಕುಳಿತ. ಮಂಚದ ಸಪ್ಪಳ ಪದೇ ಪದೇ ಆಗುತ್ತಿರುವುದನ್ನು ಸೂಕ್ಷ್ಮದಲ್ಲಿ ಗಮನಿಸಿದವಳಂತೆ, ಕೇಳಿದಳು ಆಕೆ, 'ನಿದ್ರೆ ಬರಲಿಲ್ವಾ!' ಎಂದು.

"ಇಲ್ಲ" ಎಂದ ತಕ್ಷಣ.


"ಸುಮ್ಮನೆ" ಎಂದ ನಿರುತ್ಸಾಹದಿಂದ.

"ಮಂಚಕ್ಕೆ ಬರಬೇಕಾ?" ಎಂದಳು ಸಮಾಧಾನದಿಂದ.

ಉತ್ತರ ಸಿಗಲಿಲ್ಲ. ಮಲಗಿದ. ನಿಜವಾಗಿಯೂ ಮಲಗಿದ.

ಆಕೆ ಎದ್ದು ಕುಳಿತಳು. ಮಂಚವಿಳಿದಳು. ಆತನ ಬದಿಯಿಂದಲೇ ಕೋಣೆಯ ಹೊರ ಬಿದ್ದಳು. ಅವಳು ಬಟ್ಟೆಯಿಲ್ಲದೆ ಅಟ್ಟದ ಮೆಟ್ಟಿಲುಗಳನ್ನು ಹತ್ತುವುದರ ಸಪ್ಪಳ, ಎಲ್ಲರೂ ನಿದ್ರಿಸಿದ ಮನೆಯಲ್ಲಿ ಮೆಲ್ಲಗೆ ಕೇಳುತ್ತಿತ್ತು.

ಕಾರಕೂನ ಈಗ ಎದ್ದಾಗ, ದೊಡ್ಡ ಬೆಳಗೇ ಆಗಿತ್ತು. ಗಡಬಡಿಸಿ ಒಂದು ಕಪ್ಪು ಚಹ ಕುಡಿದು, ಟೇಬಲ್ ಬಳಿ ಕುರ್ಚಿ ಎಳೆದು, ಕುಳಿತ. ಆಯಾ ಜಾತಿಯ ಮುಖಂಡರು ಮಂತ್ರಿಗೆ ಬರೆದು ಕೊಡಬೇಕಾದ ವಿನಂತಿಗಳನ್ನು ಬರೆಯಲು ಪ್ರಾರಂಭಿಸಿದ.





ಜನಪದ

ನಾಗಪ್ಪ ರಾಮ ಮರಾಟಸಿದ್ದೀರ
ಸಂಗ್ರಹ: ಎಲ್.ಆರ್. ಹೆಗಡೆ



ರಾಗ ಮಲ್ಲಿಗೆ

ವಂದಲ್ಲಾ ವಂದೂರಲ್ಲಿ ಅಣ್ಣ-ತಂಗಿ ಇದ್ದಿದ್ರಂತೆ. ಅಣ್ಣ-ತಂಗಿ ಅಗ್ದೀ ಪ್ರೀತಿಂದ ಇದ್ದಿದ್ರಂತೆ. ಇದ್ದಾಗ, ಅಕಸ್ಮಾತ್ರ ಅವರ ತಾಯಿ ತೀರ್ ಹೋಯ್ತುಂತೆ. ಆಮೇಲವ್ರು ವಂದು ದೊಡ್ಡ ಊರಿಗ್ ಹೋಗಿ ಗೆಯ್ಯುದು. ಗೈದು, ಜೀವನ ಸಾಗಿಸತಾ ಉಳದ್ರು.

ಹೀಗೇ ಇರಬೇಕಿದ್ರೆ ತಂಗಿಗೆ ಹೂವಿನ ಮೇಲೆ ಭಯಂಕರ ಆಸೆಯಾಯ್ತುಂತೆ. ಆಗ ಅದು 'ಅಣ್ಣಾ, ನನಗೆ ರಾಗಮಲ್ಲಿಯ ಹೂ ತಂದು ಕೊಡು' ಅಂತ ಹೇಳ್ತು. 'ಅದು ಎಲ್ ಅದೆ?' ಅಂತ ಅಣ್ಣ ಕೇಳ್ತಾನೆ.

'ದೊಡ್ಡ ಅಡವ್ಯಲ್ಲಿ ಅದು ಅದೆ' ಅಂತ ತಂಗಿ ಹೇಳತಾಳೆ. ಆಗ 'ನಾನು ಅದ್ನ ತಕೊಂಬರ್ತೇನೆ' ಅಂತ ಅವ ಅಡವಿಗೆ ಹೋಗತಾನೆ. ಯೆರಡು ಹೂಗು ತರ್ತಾನೆ. ತಂದಮೇಲೆ ಅಣ್ಣ-ತಂಗಿ ನೆಂಟ್ರಮನಿಗ್ ಹೋದ್ರು.

ಆಗ ತಂಗಿ ವಂದ್ ಹೂಗು ಮುಡಕೊಳ್ತಾಳೆ. ಅಣ್ಣ ತನಗೆ ಬೇಡ ಅಂತಾನೆ ಹೂಗು. ತಂಗಿ ಅಣ್ಣನಿಗೆ ಬೇಡಾಂದ್ರೂ ಮುಡಿಸ್ತಾಳೆ. ಆಗ ಯೋಳ ಹೆಡೆಯ ಮಾಸೇಸನಾಗಿ ಹುತ್ತಿನೊಳಗೆ ಹೊಕ್ತಾನೆ ಅಣ್ಣ. ತಂಗಿ ಆ ಹುತ್ತಿನ ಹತ್ರ ತೀಡತೇ ಕೂತಕಳ್ತಾಳೆ.

ಆಗ ಅಡವಿಗೆ ಬೇಟೆ ಆಡ್ಲಿಕ್ ಹೋದವ್ರು ಅಲ್ ಬಂದ್ ನೋಡ್ತಾರೆ. ದೂರಿಂದ 'ಇದು ಕರಡಿಯೊ ಮನುಷ್ಯನೋ?' ಅಂತ ನೋಡ್ತಾರೆ. ಕಡಿಗ್ ಅವ್ರು ಮುಂದ ಬಂದು, ಅವಳ್ನ ನೆಕ್ಕಂಡ್ ಮನಿಗ್ ತಕ್ಕೊಂಡ ಹೋಗಿ, ಅವಳಿಗೆ ಲಗ್ನ ಮಾಡ್ತಾರೆ. ಲಗ್ನ ಆಗುವರಿಗೆ ಅದ್ ಮಾತಾಡು ದಿಲ್ಲ. ಅಣ್ಣ ಹುತ್ತಿನಲ್ ಹೊಕ್ಕಿದ್ದಾ ಅಂತ ದುಕ್ಕದಿಂದ ಮಾತೇ ಆಡುದಿಲ್ಲ. ಆಗ ಗಂಡ ಆಲೋಚ್ನೆ ಮಾಡ್ ಮಾಡ್ ಮಾಡ್ ಕೈ ಕೊರೆದ್ ಹೋಗ್ತದೆ ಅವಂದು. ಆದ್ರೂ ಮಾತಾಡುದಿಲ್ಲ ಅವ್ಳು.

ಅಷ್ಟಾದ್ ನಂತ್ರ ರಾತ್ರಿ ಹುತ್ತಿನ ಹತ್ರ ಅವ್ಳು ಹೋಗ್ತಾಳೆ. ಅವ ನಿದ್ರೆ ಮಾಡುದಿಲ್ಲ. ಕೈ ಕೊರೆದ ಉರಿಗೆ ಅವ್ನಿಗೆ ವರ್ಕವೇ ಬರುದಿಲ್ಲ. ಅದು ಹುತ್ತಿನ ಕೂಡೆ ಹೋಗ್ತಾಳೆ. ಅದ್ರ ಬೆನ್ನಿಗೆ ಗಂಡ ಹೋಗ್ತಾನೆ. ಹೋಗಿ ಅದರ ಕೈ ಹಿಡಿತಾನೆ.

ಕೈ ಹಿಡ್ದಾಗ ಆಗ್ ಅವ್ಳು ಹೇಳ್ತಾಳೆ. 'ನಾವು ಅಣ್ಣ-ತಂಗಿ ಬಾಳ ಪ್ರೀತಿಂದ ಇದ್ದಾಗಿತ್ತು. ರಾಗಮಲ್ಲಿ ಹೂವ್ನ ದಂಡೆ ಮುಡ್ಸದ್ ಕೂಡ್ಲೆ ಮಾಸೇಸನಾಗಿ ಹುತ್ತಿನೊಳಗೆ ಹೋದ. ಮಾಸೇಸ್ನ ತಲೆಮೇಲೆ ದಂಡೆ ಅದೆ. ಆ ತಲೆಮೇಲ್ನ ದಂಡೆ ತೆಗದ್ರೆ ಅವ ಮತ್ತೆ ಮನಶನಾಗ್ತಾನೆ' ಅಂತ ಹೇಳ್ತಾಳೆ. ಅದ್ಕೆ ಉಪಾಯ ಯಾವ್ದು?


'ತೆಗೆಲಿಕ್ಕೇ ಬೇಕು. ಇಲ್ಲಾದ್ರ ನನ್ನ ಜೀವ ಇರಲಿಕ್ಕಿಲ್ಲ' ಅಂತ ಗಂಡ್ನ ಹತ್ರ ಹೇಳ್ತಾಳೆ.

ಆಗ ಅವ್ರು ಯೇಳ ಜನ ಇದ್ರು. ಯೇಳೂ ಜನ ಬಂದ್ರು. ಹುತ್ತ ಪೂರಾ ಅಗದ್ರು. ಈಗ ಮಾಸೇಸ ಎದ್ದು ಹೆಡೆ ತೆಗದು ಬೀಸ್ಕಂತ ಬರ್ತಾನೆ ಹೇಳಾಯ್ತು. ಅವಳು ಯಾವಾಗ್ಲು ಅಳತಾಳೆ.

ಅವಳು ತೀಡಬೇಕಿದ್ರೆ, ಅವ್ರೆಲ್ಲಾ ಮಾಸೇಸ್ನ ನೋಡಿ ಹೆದ್ರಿ, ವೋಡಹೋದ್ರು. ಆಗ ಅವ್ಳು ಹೆಡೆಗೆ ಕೈ ಹಚ್ಚೇಕು ನೋಡ್ತಾಳೆ. ಆದ್ರೂ ಧೈರ್ಯ ಬರೂದಿಲ್ಲ ಅವ್ಳಿಗೆ.

ಕಡೇಗೆ ಆ ರಾಗಮಲ್ಲಿ ಹೂಗ್ನದಂಡೆ ತೆಗಿತಾಳೆ. ಕಡೆಗೆ ಅವ ಮನಶನಾದ. ರಾಜನ ಮನೆಗೆ ಕರಕೊಂಡ್ ಹೋಗಿ ಅವನಿಗೆ ಮದ್ವೆ, ಸೋಬನ ಮಾಡಿ ಸುಕದಲ್ಲಿ ಇದ್ರಂತೆ ಅವ್ರು.

ಶಬ್ದತೀರ



''ಅನುಭಾವ''-ಎಂದರೆ ಯಾವ ಅಕ್ಕನ ಗಂಡ?

ಈ ಪ್ರಶ್ನೆ ಕೇಳುವುದೂ ಕಷ್ಟವೆ! ಏಕೆಂದರೆ ಬಲ್ಲವರು, 'ಚೆನ್ನಮಲ್ಲಿಕಾರ್ಜುನ'-ಎಂದು ಉತ್ತರಿಸಿ, ನಮ್ಮ ವಿಕೆಟ್ ತಗೊಂಡುಬಿಟ್ಟಾರು. ಈಚೆಗೆ ಸಾಲುಸಾಲಾಗಿ ಹೊರಬರುತ್ತಿರುವ ನಮ್ಮ 'ಭಾಷಾವಲಂಬಿ ಅನುಭಾವ'ದ ನೂರಾರು ಸಾಲುಗಳನ್ನು ನೋಡಿದಾಗ, ಜೀವಸಖ್ಯದ ಒಂದು ಕನಸನ್ನು ನಾವು ಭಾಷೆಯಲ್ಲಿ ಎಷ್ಟು ಜಡಗೊಳಿಸುತ್ತಿದ್ದೇವೆ ಎಂಬ ಆತಂಕವಾಗುತ್ತದೆ.

ಬೆಡಗೆಂಬೋ ಬೆಡಗು... ಬೆಳಗೆಂಬೋ ಬೆಳಗು... ಶಬ್ದವೆಂಬೋ ಶಬ್ದ... ಕತ್ತಲೆಂಬೋ ಕತ್ತಲು...

ಸರಿಯಪ್ಪ, ಮುಂದೇನು? ಅಂದರೆ, ಆತ ಅಕ್ಷರಶಃ, ಸರಿದೇಬಿಟ್ಟಿರುತ್ತಾನೆ ಆ ಕತ್ತಲಲ್ಲಿ. ನೀಲಿ, ಹಕ್ಕಿ, ಬೆಳದಿಂಗಳು, ನವಿಲು, ನಾದ, ನದಿ ಅಂತ ಬರೀ ಚಕಮಕಿ ಕಲ್ಲಿನಂತೆ ಶಬ್ದಗಳನ್ನು ಉಜ್ಜುವಾಟವೇ ಕಾವ್ಯವೆ? ಅದು ಕಿಂಚಿತ್ತಾದರೂ ಅನುಭವದಿಂದ ತೊಮ್ಮಬೇಡವೆ? ನಮ್ಮ ದಿನನಿತ್ಯದ ಒಂದಾದರೂ ವಿವರ ಅಲ್ಲಿ ಮೈದೋರಬಾರದೆ? ಇಂಥಲ್ಲಿ ''ಆಧುನಿಕ ಮತ್ತು ಎಚ್ಚರದ ಸ್ಥಿತಿಯಲ್ಲಿ ಕಾವ್ಯ ಇರಬೇಕು''-ಎಂಬ ಲಂಕೇಶ್‌ರ ಮಾತನ್ನು ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಕಾವ್ಯ, ಕೊನೆಗೂ, ಒಂದು ಅನುಭವವನ್ನು ಮೂಡಿಸುವ ಏಕಾಂಗಿ ಪ್ರಯತ್ನ. ಶಬ್ದಗಳ ಸದ್ದು, ಲಯ, ಚಿತ್ರಗಳು, ರೂಪಕಗಳು, ಉಪಮೆಗಳು, ಪ್ರತಿಮೆಗಳು-ಇವೆಲ್ಲ 'ದಾರಿ' (means) ಅಷ್ಟೆ ಹೊರತು ಇವೇ 'ಗುರಿ' (end) ಅಲ್ಲ. ಇವೆಲ್ಲವುಗಳ ಮೂಲಕ ಮೂಡಿಬರುವ ಅನುಭವ, ಪರಿಣಾಮ ಕಾವ್ಯವೇ ಹೊರತು, ಇವುಗಳ ಶರೀರವಲ್ಲ. ಈ 'ಪರಿಣಾಮ' ಅನ್ನೋದು ಒಂದು ಚಂಚಲ ಅದೃಷ್ಟದ ಆಟ ಎನ್ನುವುದನ್ನೂ ಮರೆಯುವಂತಿಲ್ಲ. ಇದನ್ನೇ, ಕೈ ಬೆರಳಿಗಂಟಿದ ಪಾತರಗಿತ್ತಿ ಪಕ್ಕದ ಧೂಳು-ಎಂದು ತಿರುಮಲೇಶ್ ಹೇಳಿದರೆ, ಮಗುವಿನ ಬೊಗಸೆಯಲ್ಲಿ ಉಳಿದಂತೆ ತಾಯ ಸೆರಗಿನ ನೂಲು-ಎನ್ನುತ್ತಾರೆ ಬೇಂದ್ರೆ. ಕವಿ, ಕಾಲಾತೀತದಲ್ಲಿ ಗಾಳ ಹಾಕಿ ಕೂತ ಬೆಸ್ತ-ಎಂದರು ರಾಮಾನುಜನ್. ಅಳಿಸಲಾಗದ ಲಿಪಿಯ ಬರೆಯಬಾರದು- ಎಂದರು ಅಲ್ಲಮಪ್ರಭು. ಕೊನೆಗೂ, ನಮ್ಮ ಅಳವಿಗೆ ಸುಲಭಕ್ಕೆ ದಕ್ಕದ ಏನೋ ಒಂದನ್ನು ಹಿಡಿಯುವ ತಾತ್ಪೂರ್ತಿಕ ಪ್ರಯತ್ನ ಇದು, ಎನ್ನುವುದು ಸ್ಪಷ್ಟ.

ಹೀಗಿರುವಾಗ, ನಮ್ಮ ಸಲಕರಣೆಗಳೇ ನಮ್ಮ ಗುರಿಯಾಗಿಬಿಟ್ಟರೆ ಕಷ್ಟ. ಅದು, ಬಸ್ಸಿನಲ್ಲಿ ಕೂತುಬಿಟ್ಟರೆ ಸಾಕು, ಎಲ್ಲೂ ಹೋಗಬೇಕಾಗಿಲ್ಲ ಎಂಬಂಥ ಪೆದ್ದುತನ. ಭಾರೀ ವಿಮಾನದಲ್ಲಿ ಕೂತು ಊರಲ್ಲೇ ಓಡಾಡಿದಂತೆ.

ತನ್ನ ಸದ್ದಿಗೆ ತಾನೇ ಮಾರುಹೋಗುವಾಗ, ಕವಿತೆ ಅಸುನೀಗುತ್ತದೆ. ಆತ್ಮವಿಮುಖವಾದಷ್ಟೂ ಕವಿತೆಯಲ್ಲಿ ಅಸಂಖ್ಯ ಕಿಟಕಿ, ಬಾಗಿಲುಗಳು ತೆರೆದುಕೊಳ್ಳುತ್ತವೆ. ಹೆಸರಿನ ಹಂಗಿಲ್ಲದ ದಾಯಿಯಂತೆ

ಅದು ಹೊಸ ಅನುಭವದ ಕೂಸನ್ನು ಧರೆಗೆ ತರುತ್ತದೆ. ಮತ್ತು ಯಾರೋ ಅಂದಂತೆ-poetry is never completed, it is abandoned. ಒಂದು ಕವಿತೆಯನ್ನು, ಹಸಿಬಿಸಿ ತ್ಯಜಿಸಿ, ಮುಂದೆ ಸಾಗಬೇಕಾಗುತ್ತದೆ.

ಮಾಯಾವಾಸ್ತವ, ಸ್ವಪ್ನವಾಸ್ತವ, ಪಾರಭೌತಿಕ, ವಿಲಕ್ಷಣ, ಅನುಭಾವಿಕ - ಇಂಥ ಶಬ್ದಗಳಲ್ಲೇ ಅವುಗಳ ಮಿತಿ, ಸಂಕಟ ಇದೆ. ಇವು ಸಂಗೀತಗಾರನು ಕಾಗದದ ಮೇಲೆ ಬರೆದ ಸಂಗೀತದ ಸ್ವರಮಾಲಿಕೆಗಳ ನೋಟೇಶನ್‌ಗಳಂತೆ. ಸಂಗೀತ ಹುಟ್ಟುವುದು, ಕೊರಳೊಂದು ಅದನ್ನು ಕಾಗದದಿಂದ ಬಿಡುಗಡೆ ಮಾಡಿದಾಗ. ಈ ಬಿಡುಗಡೆಯಲ್ಲೇ ಹೊಸತರ ಆವಾಹನೆ ಇದೆ. ಬರೆವಣಿಗೆಯಲ್ಲೂ ಹಾಗೆ.

'ಗೊತ್ತಿರುವ' ಅರೆಬರೆ ಸಂಗತಿಗಳ, ನೆಳಲು ಬೆಳಕಿನ 'ರನ್‌ವೇ' ಮೇಲೆ ಓಡುವ ಬರೆವಣಿಗೆಯ ವಿಮಾನ, ಯಾವುದೋ ಒಂದು ಕ್ಷಣದಲ್ಲಿ ಇವೆಲ್ಲವನ್ನೂ ತೊರೆದೇ ಹಾರಬೇಕು. ಭಾಷಾವಲಂಬಿಯಾಗಿಯೂ ಭಾಷಾತೀತವಾಗುವ ಕ್ಷಣ ಅದು. ಭಾಷೆಯಲ್ಲೇ ನಡೆಯುತ್ತಿರುವಾಗಲೂ ಭಾಷೆಯ ಹಂಗು ತೊರೆಯುವ ಕ್ಷಣ. ಇದ್ದಲ್ಲೆ ರೆಕ್ಕೆ ಬಿಚ್ಚಿ, ಫಕ್ಕನೆ ಹೊಸಬರಾಗುವ ಕ್ಷಣ. ಇಲ್ಲಿ ಹಗುರಾದಷ್ಟೂ ನೆಗೆತ ಜಾಸ್ತಿ. ಮೇಲೆ ಹೋದಷ್ಟೂ ನೋಟದ ವ್ಯಾಪ್ತಿ ಜಾಸ್ತಿ. ಮತ್ತು ಮಜಾ ಎಂದರೆ ದೂರ ಹೋದಷ್ಟು, ಸಾಮಿಪ್ಯ ಜಾಸ್ತಿ!

ಇದನ್ನು ಅನುಭವ ಎನ್ನಿ, ಅನುಭಾವ ಅನ್ನಿ, ಭಾವಮೈದುನ ಅನ್ನಿ... ಇದೊಂದು ಸಕಲರಿಗೂ ಇದ್ದಲ್ಲೇ ಎಟುಕಬಹುದಾದ ಸಹಜ ಮಾನವೀಯ ಸ್ಥಿತಿ. ಹೊರತು, ಗುಡ್ಡಗಾಡು ಹತ್ತಿ, ಗಡ್ಡಗಿಡ್ಡ ಬೆಳೆಸಿ, ಸ್ನಾನಗೀನ ಮಾಡದೆ, ನಗುಗಿಗು ಆಡದೆ, ಜೋಳಿಗೆ ಜೋತಾಡಿಸಿ ಸಂತೆಯಿಂದ ದೂರ ನಿಂತವನ ಭಾಗ್ಯ ವಿಶೇಷವಲ್ಲ.

ಮೆಜೆಸ್ಟಿಕ್ ಬಸ್‌ಸ್ಟ್ಯಾಂಡಿನ ಗಿಜಿಬಿಜಿಯಲ್ಲೂ, ತೇರು ಜಾತ್ರೆಯ ಶರಬತ್ತಿನ ಅಂಗಡಿಯಲ್ಲೂ, ಮೃತ್ಯುಗೋಲದಲ್ಲಿ ರೊಂಯೆಂದು ಮೋಟಾರ್‌ಸೈಕಲ್ ಹಾಯಿಸುವವನ ಎರಡು ಟ್ರಂಕು-ಕೈಗೂಸಿನ ಡೇರೆ ಬಿಡಾರದಲ್ಲೂ, ಆಸ್ಪತ್ರೆಗಳ ಓ.ಪಿ.ಡಿ. ಕ್ಯೂನಲ್ಲೂ, in touch with oneself ಆಗಿ ನಿಂತಿರುವ ಸಾರ್ವಜನಿಕ ಮೂತ್ರಿಯಲ್ಲೂ, 'ಅನುಭಾವಿಕ' ಕ್ಷಣಗಳು ಶಕ್ಯ. ಗ್ರಹಿಸುವ ನಿಶ್ಚಿತ ಕ್ರಮವನ್ನು ಅಳಿಸುತ್ತ, ಆ ಮೂಲಕ ಸಮಯವನ್ನೇ ಮುರಿಯುವ ಈ ಕ್ಷಣಗಳು ಅಹಂಕಾರವಿಲ್ಲದ್ದರಿಂದಲೇ ಹಗುರಾಗಿರುತ್ತವೆ. ಹಾಗೆ ನೋಡಿದರೆ, ಎರಡೂವರೆ ಪೆಗ್ಗಿನ ನಂತರ ಎಲ್ಲರೂ ಬಹುತೇಕ ಅನುಭಾವಿಗಳೇ!

ಹೊರಗಿನದೇನೂ ಕಾಣದ ದಪ್ಪ ಗಾಜಿನ ಕಿಟಕಿಗಳ, ಭಾರೀ ವಿಮಾನದಲ್ಲಿ ಕೂತು, ಕಿವಿಗಡಚಿಕ್ಕುವ ಸಪ್ಪಳಮಾಡುತ್ತ, ಒಂದಿನಿತೂ ಚಲಿಸದೇ ಕೂರುವುದೋ? ಅಥವಾ ಸೈಕಲ್ ಬಿಟ್ಟುಕೊಂಡು, ಹಗುರಾಗಿ, ಸಂತೆ, ಬೀದಿ, ಊರು, ಕೇರಿ, ಕೊಳ್ಳ, ಕಾಡು, ಕಣಿವೆ, ಗದ್ದೆ ಬಯಲು ಅಂತ ಲೈಟಾಗಿ ದಾಟುತ್ತ, ನದಿಯಂತೆ ಇದ್ದಲ್ಲೆ ಹೊಸಬರಾಗುವುದೋ?

ಜಯಂತ ಕಾಯ್ಕಿಣಿ

ಆಯ್ಕೆ ಕವಿಗೆ ಬಿಟ್ಟಿದ್ದು.
ಅದೃಷ್ಟ ಓದುಗರದು.





ವರ್ಣತೀರಗಳತ್ತ ಚಲಿಸುವ ಸ್ವಪ್ನನಾವಿಕ

ಕೆ.ಎನ್. ರಾಮಚಂದ್ರನ್



ನೂರಿನ್ನೂರು ಅಡಿ ಎತ್ತರದ ರಾಜಕುಮಾರ್, ಜಯಲಲಿತಾ, ಅಮಿತಾಬ್‌ರ ಕಟೌಟ್‌ಗಳನ್ನು ನೋಡಿದ್ದೇವೆ. ಇಡೀ ಊರನ್ನೇ ಪದತಲದಲ್ಲಿ ಮೆಟ್ಟಿ ನಿಂತಿರುವ ಇಂಥ ಬೃಹತ್ ಪೋಸ್ಟರುಗಳ ಹಿಂದೆ ಎಂತೆಂಥ ಅದ್ಭುತ ಕಲಾವಿದರಿದ್ದಾರೆ ಎಂಬುದು ನಮ್ಮ ಅರಿವಿಗೆ ಎಟಕುವುದಿಲ್ಲ. 'ಬ್ಯಾನರ್ ಪೇಂಟರ್' ಎಂದರೆ ಸಾಕು, ಅಸಡ್ಡೆಯಿಂದ ಮೂಗು ಮುರಿಯುವವರಿದ್ದಾರೆ. ಅಂಥವರ ಮುಖದ ಮೇಲೆ ಹೊಡೆಯುವಂತೆ, ಸತತ ಪರಿಶ್ರಮ, ಶ್ರದ್ಧೆಯಿಂದ ಬ್ಯಾನರ್ ಕಲೆಗೊಂದು ಹೊಸ ಘನತೆಯನ್ನು ತಂದುಕೊಟ್ಟವರು, ಕೆ.ಎನ್. ರಾಮಚಂದ್ರನ್. ಅಷ್ಟೇ ಅಲ್ಲ, ಅವರು ನಾಡಿನ ಅಂಗ್ರಪಂಕ್ತಿಯ ಕಲಾವಿದರಲ್ಲೂ ಒಬ್ಬರು.


ತಮಿಳುನಾಡಿನ ಕಡಲತೀರದ ಪಟ್ಟುಕೊಟ್ಟೈನಲ್ಲಿ ಮೇ 1, 1937ರಲ್ಲಿ ಜನಿಸಿದ ರಾಮಚಂದ್ರನ್‌ಗೆ ಬಾಲ್ಯದಿಂದಲೇ ದೋಣಿಗಳ ಹುಚ್ಚು. ಶಾಲೆಯ ನೋಟ್‌ಪುಸ್ತಕದಲ್ಲಿ ಬಗೆ ಬಗೆಯ ದೋಣಿಗಳನ್ನು ಬಿಡಿಸುತ್ತಿದ್ದ ಈ ಹುಡುಗನ ಕಲೆಯನ್ನು ಗಮನಿಸಿದ ಶಿಕ್ಷಕರು, ತಂದೆಯ ಬಳಿ, ''ಇವನೊಬ್ಬ ಕಲಾವಿದನಾಗುತ್ತಾನೆ'' ಎಂದರು. ಸ್ವತಃ ಸಂಗೀತಗಾರರಾಗಿದ್ದ ತಂದೆಗೆ ಖುಷಿಯೇ ಆಯಿತು. ಅಕ್ಕನೂ ಚಂದದ ಮಣ್ಣಿನ ಬೊಂಬೆಗಳನ್ನು ಮಾಡುತ್ತಿದ್ದಳು. ಹೀಗೆ ಕರಾವಳಿಯ ಕಾರ್ಗಾಲದ ಪ್ರತಿಮೆಗಳನ್ನು, ಕೊಳದಲ್ಲಿಯ ಮರದ ಬಿಂಬಗಳನ್ನು ತಲೆಯಲ್ಲಿ ತುಂಬಿಕೊಂಡು ಹದಿಹರೆಯದ ರಾಮಚಂದ್ರನ್ ಕುಂಭಕೋಣಂನ ಕಲಾಶಾಲೆಗೆ ಹೋದಾಗ, ಅಲ್ಲಿ ಮಾನವಾಕೃತಿಯ ಪ್ರಮಾಣಬದ್ಧ ಸಂಯೋಜನೆಯ ದೀಕ್ಷೆ ಅವರಿಗಾಗಿ ಕಾಯುತ್ತಿತ್ತು. ಎಸ್.ಎಂ. ಪಂಡಿತರ ಕಲೆಗೆ ಮಾರುಹೋದ ಈ ಕಲಾವಿದನ ಕುಂಚದಿಂದ, ಪರಿಪಕ್ವ ಕಡಲಕರೆಯ ಚಿತ್ರಗಳು ಸ್ವಪ್ನದಂತೆ ಮೂಡಿಬರತೊಡಗಿದವು. 'ಕಲೆಯಿಂದಲೇ ಅನ್ನ ಸಂಪಾದಿಸಬೇಕು' ಎಂಬ ವಾಂಛೆಯಿಂದ ರಾಮಚಂದ್ರನ್, 1953ರಲ್ಲೇ ಎವಿಎಂ ಸ್ಟುಡಿಯೋದ ಕಲಾ ವಿಭಾಗದಲ್ಲಿ, ಫಿಲ್ಮ್ ಬ್ಯಾನರುಗಳ ಕಲಾವಿದರಾಗಿ ಸೇರಿಕೊಂಡರು.


ವಿಶಿಷ್ಟ 'ಬ್ಯಾನರ್ ಆರ್ಟ್'

''ಹತ್ತಿರದಿಂದ ನೋಡಿದರೆ ಹೆಬ್ಬಾವಿನಂತೆ ತೋರುವ ವಸ್ತು, ದೂರದಿಂದ ಶ್ರೀದೇವಿಯ ಮೂಗಾಗಿರುತ್ತದೆ. ಒಂದು ಕಣ್ಣೇ ಹತ್ತಡಿ ಇರುತ್ತದೆ. ಈ ಬ್ಯಾನರ್ ಆರ್ಟ್‌ಗೇ ವಿಶಿಷ್ಟವಾದ ಪ್ರತಿಭೆ ಬೇಕು. ಹತ್ತಾರು ಜನ ಸೇರಿ, ತಿಂಗಳುಗಟ್ಟಲೆ ದುಡಿದ ಕಟೌಟು, ಆ ವ್ಯಕ್ತಿಯ ಥರ ಕಾಣದೇ ಹೋದರೆ ? ನಿಖರತೆ ಮತ್ತು 'ಅಕ್ಷರಶಃ ದೂರಗಾಮಿತ್ವ'-ಇಲ್ಲಿ ಮುಖ್ಯ'' ಎನ್ನುವ ರಾಮಚಂದ್ರನ್ 1960ರಲ್ಲಿ ಇದೇ ವೃತ್ತಿಯ ಬೆನ್ನತ್ತಿ ಬೆಂಗಳೂರಿಗೆ ಬಂದರು. 'ಸತ್ಯ ಹರಿಶ್ಚಂದ್ರ'ದಂಥ ಚಿತ್ರಕ್ಕೆ ಅಹೋರಾತ್ರಿ ದುಡಿದು ಅವರು ನಿಲ್ಲಿಸಿದ ಪೋಸ್ಟರುಗಳು ಇನ್ನೂ ಜನರ ನೆನಪಿಂದ ಮಾಸಿಲ್ಲ. ಅವರು ಚಿತ್ರಿಸಿದ ಅತಿ ಎತ್ತರದ ಕಟೌಟು-168 ಫೀಟಿನದು. ಡ್ರಮ್‌ಗಳಲ್ಲಿ ಕಲರ್ ತುಂಬಿ, ಕಸಬರಿಗೆಯನ್ನೇ ಬ್ರಶ್ ಮಾಡಿ ಬಳಸುತ್ತಿದ್ದರು.

ಹೀರೋ, ಹೀರೋಯಿನ್‌ಗಳ ಮುಖ ದೊಡ್ಡದಾಗಿ ಹಾಕಿ, ಕೆಳಗೆ ಸಾಲಾಗಿ, ಉಳಿದ ಪಾತ್ರಗಳ ಫೋಟೋ ಹಾಕುತ್ತಿದ್ದ ಪೋಸ್ಟರುಗಳ ಸವಕಲು ಜಾಡು ಬಿಟ್ಟು, ಟೆಕ್ಸ್ಚರ್, ಸಂಯೋಜನೆಗಳಲ್ಲಿ ಹೊಸ ವಿನ್ಯಾಸಗಳನ್ನು ರಾಮಚಂದ್ರನ್ ಕೈಗೊಂಡರು. ಚೂರಿ ಬಳಸಿ, ಸ್ಪಾಂಜ್ ಬಳಸಿ,

ನಿಸರ್ಗ ಚಿತ್ರಗಳು






ವಿಶಿಷ್ಟ ಏಕವರ್ಣದಲ್ಲಿ ಅವರು ಚಿತ್ರಿಸಿದ 'ಒಂದಾನೊಂದು ಕಾಲದಲ್ಲಿ' ಚಿತ್ರದ ಪೋಸ್ಟರು ತುಂಬಾ ಮೆಚ್ಚುಗೆ ಗಳಿಸಿತು.

ಕಡಲ ಕರೆಯ ದೋಣಿ ಸಾಲು

ಅವರೊಳಗಿನ ಕಲಾವಿದ ಇಷ್ಟಕ್ಕೇ ತೃಪ್ತನಾಗಲಿಲ್ಲ. ಬ್ಯಾನರ್ ಚಿತ್ರಗಳನ್ನು ವೃತ್ತಿಯಾಗಿಟ್ಟುಕೊಂಡೂ, ನಿಸರ್ಗಚಿತ್ರಗಳನ್ನು, ವ್ಯಕ್ತಿಚಿತ್ರಗಳನ್ನು ಮಾಡತೊಡಗಿದರು. "**ಛಾಯಾಗ್ರಹಣ ಇದ್ದುದನ್ನು ಇದ್ದ ಹಾಗೆ ತೋರಿಸುತ್ತದೆ. ಆದರೆ ಲ್ಯಾಂಡ್‌ಸ್ಕೇಪ್ ಚಿತ್ರಣದಲ್ಲಿ ನಾನು ಪ್ರಕೃತಿಯನ್ನೇ ಹಿಂದೆ ಮುಂದೆ ಮಾಡಬಹುದು**" ಎಂದು ಕಣ್ಣುಮಿಟುಕಿಸುವ ಈ ಕಲಾವಿದ, ಇಲ್ಲಿಯತನಕ 'ದೋಣಿ' ಸರಣಿಯಲ್ಲಿ 2000ಕ್ಕೂ ಮಿಕ್ಕಿ ಚಿತ್ರಗಳನ್ನು ಮಾಡಿದ್ದಾರೆ. ಕರಾವಳಿಯನ್ನು ಎಲ್ಲ ಋತುಗಳಲ್ಲಿ ಹಿಡಿಯುವ ಪ್ರಯತ್ನ ಅವರ ಈ ಸರಣಿ ಚಿತ್ರಗಳಲ್ಲಿದೆ.

ಲ್ಯಾಂಡ್‌ಸ್ಕೇಪ್ ಅಂದಾಕ್ಷಣ ಮನುಷ್ಯರಿಲ್ಲದ ಗುಡ್ಡ, ಬೆಟ್ಟ, ಕಾಡುಗಳೇ ನಮ್ಮ ಮನಸ್ಸಿಗೆ ಬರಬೇಕಾಗಿಲ್ಲ. ಮನುಷ್ಯರಿಂದ ತುಂಬಿ ತುಳುಕುವ ಪೇಟೆ, ಅಂಗಡಿ, ಬೀದಿಗಳೂ 'ನಿಸರ್ಗ' ಚಿತ್ರಗಳೇ. ರಾಮಚಂದ್ರನ್‌ರ ಇತ್ತೀಚಿನ ಕಲಾಕೃತಿಗಳು ಈ ಬಗೆಯವು. ದುಡಿಮೆಯ



ಸೆಲ್ಫ್ ಕ್ಯಾರಿಕೇಚರ್ (ಸ್ವಯಂ ಚಿತ್ರ)

ಜೀವಗಳ ಈ ಕಲಾಕೃತಿಗಳು ಕರುಣೆಯಿಂದ ಕಂಗೊಳಿಸುತ್ತವೆ. ಈ ತನಕ ಮೂರು ಏಕವ್ಯಕ್ತಿ ಪ್ರದರ್ಶನ ನೀಡಿರುವ ರಾಮಚಂದ್ರನ್‌ರ ಕಲಾಕೃತಿಗಳು, ಮ್ಯೂರಲ್‌ಗಳು ದೇಶ ವಿದೇಶಗಳ ಕಲಾಸಂಗ್ರಹಕಾರರ ಬಳಿ ಇವೆ.

ಬ್ಯಾನರ್ ಕಲಾವಿದರಿಗೆ ಉಗ್ರ ವರ್ಣ ಮತ್ತು ಕಾಂಟ್ರಾಸ್ಟ್ (ವೈರುಧ್ಯ)ಗಳ ವ್ಯಾಮೋಹ ಜಾಸ್ತಿ. ಆದರೆ ಇದನ್ನೇ ಸಂಯಮದಿಂದ ಬಳಸಿದರೆ ಫಲಕಾರಿಯಾಗಬಹುದು ಎನ್ನುವುದಕ್ಕೆ



ಜಲವರ್ಣ ಚಿತ್ರ



ದುಡಿಮೆಯ ಜೀವಗಳು





ದೋಣಿ ಸರಣಿ ಚಿತ್ರಗಳು



ರಾಮಚಂದ್ರನ್‌ರ ವ್ಯಕ್ತಿಚಿತ್ರಗಳು (ಕೆ.ಕೆ. ಹೆಬ್ಬಾರ್, ನಂಜುಂಡರಾವ್) ಸಾಕ್ಷಿಯಾಗಿವೆ.

"ನಾನೊಬ್ಬ ಕನಸುಗಾರ. ನನ್ನ ಸ್ವಪ್ನಗಳಿಂದ ಸ್ಫೂರ್ತಿ ಪಡೆಯುತ್ತೇನೆ. ನೆನಪಿನಲ್ಲಿಟ್ಟುಕೊಂಡು ಆ ಅನುಭವವನ್ನು ಬಣ್ಣದಲ್ಲಿ ಹಿಡಿಯಲು ಯತ್ನಿಸುತ್ತೇನೆ. ಒಮ್ಮೆ ನಾನು, ಮಗುವಾಗಿ, ಬಣ್ಣಗಳ ಆಕಾಶದಲ್ಲಿ ತೇಲಿ ಹೋಗುವ ಕನಸು ಕಂಡೆ, ಅದೇ ಈ ಪೇಂಟಿಂಗ್"-ಎಂದು ತಮ್ಮ ಹಿಂದಿರುವ ಮಕ್ಕಳಿಂದಾವೃತ ದೇವಕನ್ನಿಕೆಯ ಕಲಾಕೃತಿಯನ್ನು ತೋರಿಸುತ್ತಾರೆ.


ಸಂಸಾರ ನೌಕೆ

ಇಂತಹ ಕನಸುಗಾರ ಕಲಾವಿದನ ವ್ಯಾವಹಾರಿಕ ಜೀವನ ಸುಸೂತ್ರವಾಗಿ ನಡೆಯುವಂತೆ ನೋಡಿಕೊಂಡವರು, ಅವರ ಪತ್ನಿ ಜಯಲಕ್ಷ್ಮಿ. "ನನಗೆ ವ್ಯವಹಾರ ಜ್ಞಾನ ಏನೇನೂ ಇಲ್ಲ... ಪತ್ನಿ ಜಯಲಕ್ಷ್ಮಿಯೇ ನನ್ನ ಮತ್ತು ಮನೆಯ ಉಸ್ತುವಾರಿ ನೋಡಿ ಕೊಳುತ್ತಾಳೆ" ಎಂದವರು ಮುಕ್ತ ನಗೆ ಚೆಲ್ಲುತ್ತಾರೆ. ಗಂಡುಮಕ್ಕಳಿಬ್ಬರೂ ಜಾಹೀರಾತು ಕ್ಷೇತ್ರದಲ್ಲಿ ಉನ್ನತ ಕೆಲಸದಲ್ಲಿದ್ದಾರೆ. ಹಿರಿಯ ಮಗಳು ತಂಜಾವೂರು ಶೈಲಿಯ ಕಲಾವಿದೆ. ಎರಡನೆ



ಒಲೆ ಎದುರು





ಕೆ.ಕೆ. ಹೆಬ್ಬಾರ್ ವ್ಯಕ್ತಿಚಿತ್ರ

ಮಗಳೂ ಕಮರ್ಶಿಯಲ್ ಕಲಾವಿದೆ. ಇವರು ಮಕ್ಕಳಿಗೆ ಇಟ್ಟಿರುವ ಹೆಸರುಗಳೂ ವಿಶಿಷ್ಟ- ಓವಿಯ ಸೆಲ್ವನ್, ವೆಟ್ರೀ ಸೆಲ್ವಿ!

ತನ್ನ ಪ್ರತಿಭೆಯನ್ನು ಇತರರೊಂದಿಗೆ ಹಂಚಿಕೊಳ್ಳುವಲ್ಲಿ ರಾಮಚಂದ್ರನ್ ಸದಾ ಮುಂದು. ಕರ್ನಾಟಕದ ಬಹುತೇಕ ಎಲ್ಲ ಕಲಾಶಿಬಿರಗಳಲ್ಲಿ ತಪ್ಪದೇ ಭಾಗವಹಿಸುವ ಇವರು ಶಿಬಿರಾರ್ಥಿಗಳಿಗೆ ಅಚ್ಚುಮೆಚ್ಚು.

1990ರ ತನಕವೂ ತಮ್ಮ ಬ್ಯಾನರ್ ವೃತ್ತಿಯಲ್ಲಿ ನಿರತರಾಗಿದ್ದ ಅವರು ಈಗ ನೆಮ್ಮದಿಯಾಗಿ ಪೇಂಟಿಂಗ್ ಮಾಡಿಕೊಂಡಿದ್ದಾರೆ. ಕವಿ ಅಣ್ಣನಂತೆ ಅವರಿಗೂ ಆಗಾಗ ತಮಿಳು ಭಾವಗೀತೆ ಬರೆಯುವ ಚಟವಿದೆ. ರಾತ್ರಿ ನಿದ್ರೆ ಬರದಿದ್ದರೆ ಎದ್ದು ಸುಮ್ಮನೆ ಸ್ಕೆಚ್ ಮಾಡುವ ಖಯಾಲು. ಹಗಲಲ್ಲಿ ಕಪ್‌ಗಟ್ಟಲೇ ಚಹಾ ಕುಡಿಯುವ ಉಮೇದು.


''ಪ್ರಪಂಚದ ಎಲ್ಲಾ ಬಣ್ಣಗಳನ್ನು ನಿರ್ಮಿಸಿದ ಆ ದೇವರಲ್ಲಿ ಭಕ್ತಿ ಇದೆ. ಹಾಗಂತ ಅವನನ್ನು ನಂಬಿಕೊಂಡು ಕೂತವನಲ್ಲ'' ಎನ್ನುವ ರಾಮಚಂದ್ರನ್, ''ನನ್ನ ಕಲಾಕೃತಿಗಳು, ನನ್ನ ಮಕ್ಕಳಂತೆ. ಅವುಗಳನ್ನು ದೂರ ಕಳಿಸುವುದು ಕಷ್ಟ. ಹೀಗಾಗಿ ನನ್ನ ಅತ್ಯಂತ ಮೆಚ್ಚಿನ ಕಲಾಕೃತಿಗಳನ್ನು ನಾನು ಮಾರುವುದಿಲ್ಲ'' ಎನ್ನುತ್ತಾರೆ.

'ಕಲೆ ಹಂಚಿದಷ್ಟೂ ಬೆಳೀತದೆ'

ಬಸವೇಶ್ವರ ನಗರದಲ್ಲಿ, ತಾವೇ ವಿನ್ಯಾಸಗೊಳಿಸಿರುವ ಸುಂದರ ಬೆಚ್ಚನೆ ಮನೆಯಲ್ಲಿ ನೆಲೆಸಿರುವ ಅವರಲ್ಲಿ, ಅರುವತ್ತು ದಾಟಿದರೂ ಎಳೆ ಹುಡುಗನ ಹುರುಪಿದೆ. ಮೇಲ್ಮಾಳಿಗೆಯ ತಮ್ಮ ಪುಟ್ಟ ಸ್ಟುಡಿಯೋದ ಎಲ್ಲಾ ಕಲಾಕೃತಿಗಳನ್ನು ತೋರಿಸುತ್ತಾ ''ಬಾವಿ ಅಗೆದಷ್ಟೂ ನೀರು ಬರುವಂತೆ, ಕಲೆ ಹಂಚಿಕೊಂಡಷ್ಟೂ ಬೆಳೀತದೆ'' ಅನ್ನುತ್ತಾರೆ.

''**ದೂರದ ಸಾಗರದೆಡೆ ಹರಿವ ಸಣ್ಣ ನದಿಯಂತೆ ನಾನು**'' ಎನ್ನುವ ಈ ಕಲಾವಿದನ ಜೀವನ ಈ ಹರಿವಿನಿಂದಾಗಿಯೇ ತಿಳಿಯಾಗಿದೆ, ಪ್ರಶಾಂತವಾಗಿದೆ. ನಿಮ್ಮ ಬಾಳಿನ ಅತ್ಯಂತ ಸಿಹಿ ಮತ್ತು ಕಹಿ ಪ್ರಸಂಗಗಳ್ಯಾವುವು ಅಂತ ಕೇಳಿದರೆ ಚೆಂದವಾಗಿ ನಗುತ್ತ ಹೇಳುತ್ತಾರೆ, ''**ಮರೆವು ನನಗೆ ವರ. ನೋವು, ಸುಖ ಎರಡನ್ನೂ ಸುಲಭವಾಗಿ ಮರೆತುಬಿಡಬಲ್ಲೆ.**''

■




ಯೊಆವೊ ಗಿಮಾರೇಸ್ ರೋಸ

ನದಿಯ ಮೂರನೇ ದಂಡೆ

ಕನ್ನಡಕ್ಕೆ: ಎಸ್. ದಿವಾಕರ್

ನಮ್ಮಪ್ಪ ಮೈಗಳ್ಳನಲ್ಲದ ಕೆಲಸಗಾರ; ಒಳ್ಳೆ ನಡತೆಯ ಸಾಫಸೀದಾ ಮನುಷ್ಯ. ಅನೇಕ ಮಂದಿ ನಂಬಲರ್ಹ ಜನರು ನನಗೆ ಹೇಳಿದಂತೆ ಈ ಗುಣಗಳೆಲ್ಲ ತಾರುಣ್ಯದಿಂದ, ಅಷ್ಟೇಕೆ ಬಾಲ್ಯದಿಂದಲೂ ಅವನಲ್ಲಿದ್ದುವು. ನನ್ನ ನೆನಪನ್ನೇ ನೆಚ್ಚಿಕೊಂಡು ಹೇಳುವುದಾದರೆ, ನಮಗೆ ಗೊತ್ತಿದ್ದ ಇತರ ಜನರಿಗಿಂತ ಅವನೇನೂ ಹೆಚ್ಚು ಖುಷಿಯಾಗಿಯೂ ಇರಲಿಲ್ಲ, ಖಿನ್ನನಾಗಿಯೂ ಇರಲಿಲ್ಲ; ಬಹುಶಃ ತುಸು ಹೆಚ್ಚೇ ಎನ್ನಬಹುದಾದಷ್ಟು ಶಾಂತಿಯಿಂದಿದ್ದ. ಮನೆಯ ಯಜಮಾನ ಅಪ್ಪನಲ್ಲ, ಅಮ್ಮ. ಅವಳು ದಿನವೂ ನಮ್ಮನ್ನು-ನಾನು, ನನ್ನ ತಂಗಿ, ತಮ್ಮ-ಬಯ್ಯುತ್ತಿದ್ದಳು. ಒಂದು ದಿನ ಏನಾಯಿತೆಂದರೆ ನಮ್ಮಪ್ಪ ಒಂದು ದೋಣಿಗಾಗಿ ಆರ್ಡರ್ ಕೊಟ್ಟ.

ದೋಣಿಯನ್ನು ಅವನು ತುಂಬ ಗಂಭೀರವಾಗಿ ತೆಗೆದುಕೊಂಡಿದ್ದವನು. ಅದನ್ನು ಅವನಿಗೆಂದೇ ವಿಶೇಷವಾಗಿ ಮಿಮೋಸಾ ಮರದಿಂದ ತಯಾರಿಸಬೇಕಾಗಿತ್ತು. ಸುಮಾರು ಇಪ್ಪತ್ತು-ಮೂವತ್ತು ವರ್ಷ ಬಾಳಿಕೆ ಬರಬೇಕಾಗಿದ್ದ ದೋಣಿ, ಒಬ್ಬನು ಕೂತುಕೊಳ್ಳುವಷ್ಟು ದೊಡ್ಡದಾಗಿದ್ದರೆ ಸಾಕಾಗಿತ್ತು. ಅಮ್ಮ ಆ ದೋಣಿಯ ಬಗೆಗೆ ಸಾಕಷ್ಟು ಪಿರಿ ಪಿರಿ ಮಾಡಿದಳು. ತನ್ನ ಗಂಡನೇನು ಇದ್ದಕ್ಕಿದ್ದಂತೆ ಬೆಸ್ತನಾಗಲು



ಹೊರಟಿದ್ದಾನಾ? ಅಥವಾ ಬೇಡನಾಗುತ್ತಾನೊ? ಅಪ್ಪ ಏನೂ ಹೇಳಲಿಲ್ಲ. ನಮ್ಮ ಮನೆ, ನದಿಯಿಂದ ಒಂದು ಮೈಲಿಯಷ್ಟೂ ದೂರದಲ್ಲಿರಲಿಲ್ಲ. ಸಾಕಷ್ಟು ಆಳವಾಗಿದ್ದು, ಶಾಂತವಾಗಿದ್ದ ಆ ನದಿ, ಅದೆಷ್ಟು ಅಗಲವಾಗಿತ್ತೆಂದರೆ ನಮಗೆ ಅದರ ಆಚೆಯ ದಡವೇ ಕಾಣಿಸುತ್ತಿರಲಿಲ್ಲ.

ನಮ್ಮ ಮನೆಗೆ ಆ ಹುಟ್ಟು-ದೋಣಿ ಬಂದ ದಿನವನ್ನು ಮಾತ್ರ ನಾನು ಮರೆಯಲಾರೆ. ಅದನ್ನು ನೋಡಿ ಅಪ್ಪ, ತುಂಬ ಸಂತೋಷದಿಂದೇನೂ ಬೀಗಲಿಲ್ಲ; ಬೇರೆ ಯಾವುದೇ ಭಾವನೆಯನ್ನೂ ತೋರಿಸಲಿಲ್ಲ. ಎಂದಿನಂತೆ, ತನ್ನ ಹ್ಯಾಟನ್ನು ತಲೆಯ ಮೇಲಿಟ್ಟುಕೊಂಡವನೇ ನಮಗೆಲ್ಲ ಗುಡ್ ಬೈ ಹೇಳಿದ. ಅವನು ತನ್ನ ಜೊತೆ ಊಟವನ್ನಾಗಲೀ, ಬೇರೆ ಯಾವುದಾದರೂ ಗಂಟನ್ನಾಗಲೀ ಕೊಂಡೊಯ್ಯಲಿಲ್ಲ. ನಮ್ಮಮ್ಮ ಕೂಗಿ, ಕಿರಿಚಿ ಮಾಡುತ್ತಾಳೆಂದುಕೊಂಡೆವು. ಆದರೆ ಅವಳೇನೂ ಹಾಗೆ ಮಾಡಲಿಲ್ಲ. ತೀರ ಬಿಳಿಚಿಕೊಂಡಂತೆ ಕಾಣಿಸಿದ ಅವಳು, ತುಟಿಯನ್ನು ಕಚ್ಚುತ್ತಾ ಹೇಳಿದ್ದಿಷ್ಟೆ: ''ನೀನು ಹೋಗುವುದೇ ಆದರೆ ಹೋದಲ್ಲೇ ಇದ್ದುಬಿಡು. ಎಂದೂ ವಾಪಸು ಬರಬೇಡ!''



ಅಪ್ಪ ಏನೂ ಉತ್ತರ ಕೊಡಲಿಲ್ಲ. ಸೌಮ್ಯವಾಗಿ ನನ್ನ ಕಡೆ ನೋಡಿದ್ದೇ, ಜೊತೆಗೆ ಬರುವಂತೆ ಸನ್ನೆ ಮಾಡಿದ. ಅಮ್ಮ ಕೆಂಡವಾದಾಳೆಂದು ಭಯವಾದರೂ ಅವನ ಕರೆಗೆ ಓಗೊಟ್ಟೆ. ಇಬ್ಬರೂ ನದಿಯ ಕಡೆ ಹೊರಟೆವು. ನನಗೆ ಧೈರ್ಯ ಬಂದಿತ್ತು, ಸಂಭ್ರಮವಾಗಿತ್ತು. ''ಅಪ್ಪಾ, ಬೋಟಲ್ಲಿ ನನ್ನನ್ನೂ ಕರಕೊಂಡು ಹೋಗ್ತೀಯಾ?'' ಎಂದು ಕೇಳಿಬಿಟ್ಟೆ.

ಅವನು ಸುಮ್ಮನೆ ನನ್ನನ್ನು ನೋಡಿದ, ಹರಸಿದ. ವಾಪಸು ಹೊರಟು ಹೋಗು ಎನ್ನುವಂತೆ ನನಗೆ ಸಂಜ್ಞೆ ಮಾಡಿದ. ಹಾಗೇ ಮಾಡುವೆನೆಂಬಂತೆ ಹಿಂತಿರುಗಿದ ನಾನು, ಅವನ ಬೆನ್ನು

ಕಾಣಿಸಿದ್ದೇ, ಕೆಲವು ಪೊದೆಗಳ ಹಿಂದೆ ಅವಿತುಕೊಂಡು, ಅವನನ್ನೇ ಗಮನಿಸತೊಡಗಿದೆ. ಅಪ್ಪ, ದೋಣಿಯೊಳಗೆ ಕುಳಿತುಕೊಂಡು, ಹುಟ್ಟು ಹಾಕುತ್ತಾ, ಮುಂದೆ ಮುಂದೆ ಹೋದ. ಆ ದೋಣಿಯ ನೆರಳು, ಒಂದು ಮೊಸಳೆಯಂತೆ, ಉದ್ದುದ್ದವಾಗಿ, ಶಾಂತವಾಗಿ ನುಸುಳುತ್ತಿತ್ತು.

ಅಪ್ಪ ಹಿಂತಿರುಗಿ ಬರಲೇ ಇಲ್ಲ. ಹಾಗೆಂದು ಅವನು ಎಲ್ಲಿಗಾದರೂ ಹೋಗಲೂ ಇಲ್ಲ. ನದಿಯಲ್ಲೇ ಸುಮ್ಮನೆ ಹುಟ್ಟು ಹಾಕುತ್ತ, ತೇಲುತ್ತ ಸುತ್ತಿ ಸುತ್ತಿ ಬರುತ್ತಿದ್ದ. ಎಲ್ಲರೂ ಗಾಬರಿಗೊಂಡರು. ಹಿಂದೆಂದೂ ನಡೆಯದ್ದು, ಮುಂದೆಂದೂ ನಡೆಯಲಾಗದ್ದು ನಡೆಯುತ್ತಿತ್ತು. ಆ ಬಗೆಗೆ ಮಾತನಾಡಲೆಂದೇ ನಮ್ಮ ನೆಂಟರಿಷ್ಟರು, ನೆರೆಹೊರೆಯವರು, ಸ್ನೇಹಿತರು ಬಂದು ನೆರೆದರು.


ಅಮ್ಮನಿಗೆ, ಅವಮಾನದಿಂದ ಮುಖ ಮುಚ್ಚಿಕೊಳ್ಳುವಂತಾಗಿತ್ತು. ಅವಳು ಹೆಚ್ಚೇನೂ ಮಾತಾಡದೆ ತುಂಬ ಗಂಭೀರವಾಗಿದ್ದಳು. ಇದರ ಪರಿಣಾಮವಾಗಿ, ಹೆಚ್ಚು ಕಡಿಮೆ ಎಲ್ಲರಿಗೂ, ಅಪ್ಪನಿಗೆ ಹುಚ್ಚು ಹಿಡಿದಿದೆ ಎನ್ನಿಸಿತು. (ಯಾರೂ ಹಾಗೆಂದು ಬಾಯಿಬಿಟ್ಟು ಹೇಳಲಿಲ್ಲ ಅಷ್ಟೆ.) ಆದರೆ, ಕೆಲವರು, ಅವನು ಯಾವುದೋ ದೇವರಿಗೋ, ಸಂತನಿಗೋ ಹೇಳಿಕೊಂಡ ಹರಕೆಯನ್ನು ಸಲ್ಲಿಸುತ್ತಿರಬೇಕು ಅಥವಾ ಅವನಿಗೆ ಕುಷ್ಠ ರೋಗದಂತಹ ಯಾವುದೋ ವ್ಯಾಧಿ ಇರಬೇಕು ಎಂದು ಹೇಳಿ, ಬಹುಶಃ ಕುಟುಂಬದ ಹಿತಕ್ಕಾಗಿಯೇ ಅವನು ಮನೆ ಬಿಟ್ಟುಹೋಗಿರಬೇಕು ಮತ್ತು ಅದೇ ಸಮಯಕ್ಕೆ ಹತ್ತಿರದಲ್ಲೂ ಇರಲು ಆಶಿಸಿರಬೇಕೆಂದು ಸೂಚಿಸಿದರು.

ನದಿಯ ಗುಂಟ ಹೋಗುತ್ತಿದ್ದ ಪ್ರಯಾಣಿಕರು ಹಾಗೂ ನದಿಯ ಒಂದು ಬದಿಯಲ್ಲೋ, ಇನ್ನೊಂದು ಬದಿಯಲ್ಲೋ ವಾಸಿಸುತ್ತಿದ್ದ ಜನರು, ಅಪ್ಪ, ಹಗಲಾಗಲೀ ರಾತ್ರಿಯಾಗಲೀ ನೆಲದ ಮೇಲೆ ಕಾಲಿಟ್ಟದ್ದೇ ಇಲ್ಲ ಎಂದು ವರದಿ ಮಾಡಿದರು. ಅವನು ನದಿಯ ಮೇಲೆ, ಗೊತ್ತುಗುರಿಯಿಲ್ಲದೆ, ಒಬ್ಬೊಂಟಿಯಾಗಿ, ತ್ಯಕ್ತನಂತೆ ಚಲಿಸುತ್ತಿದ್ದನಷ್ಟೆ. ದೋಣಿಯಲ್ಲಿ, ನಿಸ್ಸಂದೇಹವಾಗಿ, ಅವನು ಅಡಗಿಸಿಟ್ಟುಕೊಂಡಿರುವ ಆಹಾರ ಪದಾರ್ಥ ಬಹುಬೇಗ ಮುಗಿದೇ ತೀರಬೇಕು. ಹಾಗೆ ಮುಗಿದುಹೋದ ಮೇಲೆ ಅವನು ಬೇರೆಲ್ಲಿಗಾದರೂ ಹೋಗಬೇಕು, (ಹಾಗಾದರೆ ಕಿಂಚಿತ್ ಗೌರವವಾದರೂ ಉಳಿದೀತು) ಅಥವಾ ಪಶ್ಚಾತ್ತಾಪಪಟ್ಟು ಮನೆಗೆ ಹಿಂತಿರುಗಬೇಕು ಎಂದು ನಮ್ಮಮ್ಮ ಮತ್ತು ಬಂಧುಬಳಗ ಮಾತಾಡಿಕೊಂಡರು.

ಅವರೆಲ್ಲ ಸತ್ಯಕ್ಕೆ ಎಷ್ಟು ದೂರದಲ್ಲಿದ್ದವರು! ಅಪ್ಪನಿಗೆ ಆಹಾರ ಪದಾರ್ಥ ಸರಬರಾಜಾಗುವ ಒಂದು ರಹಸ್ಯ ಮೂಲವಿತ್ತು. ನಾನೇ ಆ ಮೂಲ. ಪ್ರತಿದಿನವೂ ನಾನು, ತಿಂಡಿ ತಿನಿಸುಗಳನ್ನು ಕದ್ದುಕೊಂಡು ಹೋಗಿ ಅವನಿಗೆ ಕೊಡುತ್ತಿದ್ದೆ. ಅವನು ಮನೆ ಬಿಟ್ಟು ಹೋದ ಮೊದಲ ರಾತ್ರಿ, ನಾವು ದಡದ ಮೇಲೆ ಬೆಂಕಿ ಹಚ್ಚಿಕೊಂಡು ಪ್ರಾರ್ಥಿಸಿದೆವು, ಅವನನ್ನು ಕೂಗಿ ಕರೆದೆವು. ತುಂಬ ಸಂಕಟಪಡುತ್ತಿದ್ದ ನನಗೆ, ಅದಕ್ಕಿಂತ ಹೆಚ್ಚಿನದೇನನ್ನಾದರೂ ಮಾಡಬೇಕೆನ್ನಿಸಿತು. ಮಾರನೆಯ ದಿನ, ಒಂದು ತುಂಡು ಬ್ರೆಡ್ಡು, ಒಂದು ಚಿಪ್ಪು ಬಾಳೆಯ ಹಣ್ಣು, ಒಂದೆರಡು ಚಕ್ಕೆ ಕೆಂಪು ಕಲ್ಲು ಸಕ್ಕರೆ ತೆಗೆದುಕೊಂಡು ನದಿಯ ಕಡೆ ತೆರಳಿದೆ. ಅಲ್ಲಿ ತುಂಬಾ ಹೊತ್ತಿನವರೆಗೆ ಅಸಹನೆಯಿಂದ ಕಾದದ್ದಾಯಿತು. ಆಮೇಲೆ, ಸಪಾಟಾಗಿ ಹರಿಯುತ್ತಿದ್ದ ನದಿಯ ಮೇಲೆ ಕಂಡೂ ಕಾಣದಂತೆ ದೂರದಲ್ಲಿ ತೇಲುತ್ತಿದ್ದ ದೋಣಿ ಕಾಣಿಸಿತು. ಅಪ್ಪ ದೋಣಿಯ ತಳದಲ್ಲಿ ಕೂತಿದ್ದ. ಅವನು ನನ್ನನ್ನು ನೋಡಿದರೂ, ನನ್ನ ಕಡೆ ಹುಟ್ಟುಹಾಕುತ್ತ ಬರಲಿಲ್ಲ ಅಥವಾ ಯಾವುದೇ ಸಂಜ್ಞೆಯನ್ನೂ ಮಾಡಲಿಲ್ಲ. ನಾನು ತಂದಿದ್ದ ತಿನಿಸನ್ನು ಅವನಿಗೆ ತೋರಿಸಿ, ನದಿಯ ದಡದಲ್ಲಿದ್ದ ಒಂದು

ಬಂಡೆಯ ಬಿರುಕಿನೊಳಗಿರಿಸಿದೆ. ಅಲ್ಲಿ ಅದು, ಪ್ರಾಣಿಗಳಿಂದ, ಮಳೆ ಇಬ್ಬನಿಗಳಿಂದ ಸುರಕ್ಷಿತವಾಗಿರುತ್ತಿತ್ತು. ಇದೇ ರೀತಿ ನಾನು ದಿನ ದಿನವೂ ಮಾಡುತ್ತಿದ್ದೆ, ಹಾಗೆ ಮಾಡುತ್ತಲೇ ಹೋದೆ. ಆಮೇಲೆ ನಾನು ಮಾಡುತ್ತಿದ್ದದ್ದು ಅಮ್ಮನಿಗೂ ಗೊತ್ತಿತ್ತೆಂದೂ, ನಾನು ಸುಲಭವಾಗಿ ಕದಿಯಲು ಅನುಕೂಲವಾಗುವಂಥ ಜಾಗಗಳಲ್ಲೇ ಅವಳು ತಿಂಡಿ ತಿನಿಸುಗಳನ್ನು ಇಡುತ್ತಿದ್ದಳೆಂದೂ ತಿಳಿದು ನನಗೆ ಆಶ್ಚರ್ಯವಾಯಿತು. ಅವಳಿಗೆ ಅನುಕಂಪ ಸೂಸುವಂತಹ ಭಾವನೆಗಳಿದ್ದುವು; ಅವುಗಳನ್ನು ಹೊರಗೆ ಮಾತ್ರ ತೋರಿಸುತ್ತಿರಲಿಲ್ಲ.

ನಮ್ಮಮ್ಮ, ಹೊಲ ತೋಟಗಳನ್ನೂ, ಇತರ ವ್ಯಾಪಾರ ವಹಿವಾಟನ್ನೂ ನೋಡಿಕೊಳ್ಳುವುದಕ್ಕಾಗಿ ತನ್ನ ತಮ್ಮನನ್ನು ಕರೆಸಿಕೊಂಡಳು. ನಾವು ಶಾಲೆಗೆ ಹಾಜರಾಗದೆ ಕಳೆದುಕೊಂಡಿದ್ದ ಪಾಠ ಪ್ರವಚನವನ್ನು ಹೇಳಿಕೊಡುವುದಕ್ಕಾಗಿ ಶಾಲೆಯ ಮೇಷ್ಟರನ್ನು ಬರಮಾಡಿಕೊಂಡಳು. ಅವಳ ಕೋರಿಕೆಯ ಮೇರೆಗೆ, ಪಾದ್ರಿ, ಒಂದು ದಿನ ತಮ್ಮ ಪೋಷಾಕು ಧರಿಸಿ, ನದೀ ತೀರಕ್ಕೆ ಹೋಗಿ, ನಮ್ಮಪ್ಪನಿಗೆ ಹಿಡಿದಿದ್ದಿರಬಹುದಾದ ದೆವ್ವ ಬಿಡಿಸಲು ಪ್ರಯತ್ನಿಸಿದರು. ಇಂಥ ಅಪವಿತ್ರ ಹಟಮಾರಿತನ ಬಿಟ್ಟುಬಿಡಬೇಕೆಂದು ಅವರು ಅಪ್ಪನಿಗೆ ಕೂಗಿ ಹೇಳಿದರು. ಮತ್ತೊಂದು ದಿನ ಅಮ್ಮ, ಇಬ್ಬರು ಸೈನಿಕರನ್ನು ಕರೆಸಿ, ಅಪ್ಪನನ್ನು ಹೆದರಿಸಲು ನೋಡಿದಳು. ಯಾವುದರಿಂದಲೂ ಏನೂ ಪ್ರಯೋಜನವಾಗಲಿಲ್ಲ. ಅಪ್ಪ, ದೂರ ದೂರ, ಕೆಲವೊಮ್ಮೆ ಎಷ್ಟು ದೂರ ಹೋಗಿಬಿಟ್ಟಿರುತ್ತಿದ್ದನೆಂದರೆ ಅವನನ್ನು ಬರಿಗಣ್ಣಿನಿಂದ ನೋಡುವುದಂತೂ ಸುಲಭವಾಗಿರಲಿಲ್ಲ. ಯಾರ ಮಾತಿಗೂ ಅವನು ಉತ್ತರ ಕೊಟ್ಟದ್ದಿಲ್ಲ, ಯಾರಾದರೂ ಅವನ ಹತ್ತಿರಕ್ಕೆ ಹೋದದ್ದು ಇಲ್ಲ. ಕೆಲವು ಪತ್ರಿಕೆಯವರು, ಅವನ ಫೋಟೋ ತೆಗೆಯುವುದಕ್ಕೆಂದು ಒಂದು ಸಣ್ಣ ಹಡಗಿನಲ್ಲಿ ಹೋದಾಗ, ಅವನು ತನ್ನ ದೋಣಿಯನ್ನು ನದಿಯ ಇನ್ನೊಂದು ದಿಕ್ಕಿಗೆ ತಿರುಗಿಸಿ, ಜೌಗು ಪ್ರದೇಶದೊಳಗೆ ನುಸುಳಿಕೊಂಡ. ಯಾರಾದರೂ ಒಳಗೆ ಹೋದದ್ದೇ ದಾರಿ ತಪ್ಪಿಬಿಡುತ್ತಿದ್ದ ಆ ಜೌಗು ಪ್ರದೇಶ, ಅವನಿಗೆ, ಅವನ ಅಂಗೈಯಷ್ಟೇ ಚಿರಪರಿಚಿತವಾಗಿತ್ತು. ಮೈಲಿಗಟ್ಟಲೆ ಪ್ರದೇಶದಲ್ಲಿ ಹರಡಿಕೊಂಡಿದ್ದ, ಮೇಲೆ



ದಟ್ಟವಾಗಿ ಮರದೆಲೆಗಳು ಕವಿದಿದ್ದ, ಸುತ್ತ ಮುತ್ತ ಜೊಂಡು ಬೆಳೆದಿದ್ದ ಆ ಖಾಸಗಿ ಚಕ್ರವ್ಯೂಹದಲ್ಲಿ, ಅವನು ಸುರಕ್ಷಿತವಾಗಿದ್ದನೆಂದೇ ಹೇಳಬೇಕು.

ಅಪ್ಪ ನದಿಯ ಮೇಲೇ ಇರುವ ವಿಚಾರಕ್ಕೆ ನಾವು ಹೊಂದಿಕೊಳ್ಳಬೇಕಾಗಿತ್ತು. ಹೊಂದಿಕೊಳ್ಳಲೇಬೇಕಾಗಿತ್ತು, ಆದರೆ ಆಗಲಿಲ್ಲ, ಎಂದಿಗೂ ನಮ್ಮಿಂದ ಸಾಧ್ಯವಾಗಲಿಲ್ಲ. ನನಗೊಬ್ಬನಿಗೆ ಮಾತ್ರ, ಅಪ್ಪನಿಗೆ ಏನು ಬೇಕಾಗಿತ್ತು, ಏನು ಬೇಡ ಎಂದೆಲ್ಲ ಸ್ವಲ್ಪ ಮಟ್ಟಿಗೆ ಅರ್ಥವಾಗಿತ್ತೇನೋ. ನನಗೆ ಅರ್ಥವೇ ಆಗದ ವಿಚಾರವೆಂದರೆ, ಅವನು ಆ ಕಷ್ಟವನ್ನೆಲ್ಲ ಹೇಗೆ ತಾನೆ ಸಹಿಸುತ್ತಿದ್ದ ಎಂಬುದು. ಹಗಲು ರಾತ್ರಿ, ಬಿಸಿಲು ಮಳೆಯಲ್ಲಿ, ವಿಪರೀತ ಸೆಕೆಯಲ್ಲಿ ಹಾಗೂ ನಡು ವರ್ಷದ ಚಳಿಯಲ್ಲಿ, ತಲೆಯ ಮೇಲೆ ತನ್ನ ಹಳೆಯದಾದ ಹ್ಯಾಟು ಇಟ್ಟುಕೊಂಡು, ಅಂಥ ಬಟ್ಟೆ ಬರೆಯೂ ಇಲ್ಲದೆ, ವಾರ ವಾರ, ತಿಂಗಳು ತಿಂಗಳು, ವರ್ಷ ವರ್ಷ ತನ್ನ ಬದುಕನ್ನು ಆವರಿಸುತ್ತಿರುವ ಶೂನ್ಯದ ಪರಿವೆಯೂ ಇಲ್ಲದೆ ಹೇಗೆ ಇರುತ್ತಿದ್ದನೋ ಅವನು! ನೆಲದ ಮೇಲಾಗಲೀ, ಹುಲ್ಲಿನ ಮೇಲಾಗಲೀ, ನಡುಗಡ್ಡೆಯ ಮೇಲಾಗಲೀ ಅವನು ಕಾಲಿಟ್ಟದ್ದೇ ಇಲ್ಲ. ಒಮ್ಮೊಮ್ಮೆ, ತುಸು ನಿದ್ದೆ ಮಾಡುವುದಕ್ಕಾಗಿ, ತನ್ನ ದೋಣಿಯನ್ನು ಒಂದು ರಹಸ್ಯ ಜಾಗದಲ್ಲಿ, ಬಹುಶಃ ಯಾವುದೋ ಒಂದು ನಡುಗಡ್ಡೆಯ ತುದಿಯಲ್ಲಿ, ಕಟ್ಟಿ ನಿಲ್ಲಿಸುತ್ತಿದ್ದ, ಹೌದು. ಆದರೆ ಅವನೆಂದೂ ಬೆಂಕಿ ಹೊತ್ತಿಸಲಿಲ್ಲ, ಕಡ್ಡಿ ಗೀರಲಿಲ್ಲ. ಅವನಲ್ಲಿ ಟಾರ್ಚೂ ಇರಲಿಲ್ಲ. ಬಂಡೆಯ ಬಿರುಕಿನೊಳಗೆ ನಾನು ಇಡುತ್ತಿದ್ದ ತಿಂಡಿ ತಿನಿಸುಗಳಲ್ಲಿ ಒಂದು ಚೂರನ್ನು ಮಾತ್ರ ತೆಗೆದುಕೊಳ್ಳುತ್ತಿದ್ದ. ಬದುಕಿ ಉಳಿಯುವುದಕ್ಕೆ ಅದು ಏನೇನೂ ಸಾಲದೆಂದು ನನಗೆ ಅನಿಸುತ್ತಿತ್ತು. ಅವನ ಆರೋಗ್ಯ ಸ್ಥಿತಿ ಹೇಗಿತ್ತು? ದೋಣಿಯನ್ನು ನಿಯಂತ್ರಿಸುವುದಕ್ಕಾಗಿ, ಹುಟ್ಟುಗಳನ್ನು ಸದಾ ಹಿಂದೆ-ಮುಂದೆ ಆಡಿಸುತ್ತಿರುವವನ ಶಕ್ತಿ ಕುಂದುತ್ತಿತ್ತೆ? ಅವನ ಪುಟ್ಟ ದೋಣಿಗೆ ಇದ್ದಕ್ಕಿದ್ದಂತೆ ಅಪ್ಪಳಿಸಬಹುದಾದ ಬಗೆ ಬಗೆಯ ಅಪಾಯಕಾರಿ ವಸ್ತುಗಳ ಜೊತೆ-ಮರದ ಕೊಂಬೆಗಳು, ಸತ್ತ ಪ್ರಾಣಿಗಳು, ಇತ್ಯಾದಿ- ವರ್ಷೇ ವರ್ಷೇ ಬರುವ ನದಿಯ ಪ್ರವಾಹವನ್ನು ಅದು ಹೇಗೆ ತಾನೆ ಅವನು ಎದುರಿಸಿ ಇನ್ನೂ ಬದುಕಿರಬಹುದು?

ಬದುಕಿರುವ ಒಂದು ನರಪಿಳ್ಳೆಯ ಜೊತೆಯೂ ಅವನು ಮಾತಾಡಿದ್ದಿಲ್ಲ. ನಾವೂ ಅವನ ಬಗೆಗೆ ಮಾತಾಡಿಕೊಳ್ಳಲಿಲ್ಲ. ಸುಮ್ಮನೆ ಯೋಚಿಸುತ್ತಿದ್ದೆವು, ಅಷ್ಟೆ. ಇಲ್ಲ, ಅಪ್ಪನನ್ನು ನಮ್ಮ ಮನಸ್ಸಿನಿಂದ ಹೊರಹಾಕುವಂತೆಯೇ ಇರಲಿಲ್ಲ. ಸ್ವಲ್ಪ ಕಾಲ ಮರೆತಂತೆ ಕಂಡರೂ ಮರುಕ್ಷಣ ಅವನ ಭಯಾನಕ ಪರಿಸ್ಥಿತಿ ಅರಿವಿಗೆ ಬಂದದ್ದೇ ಬೆಚ್ಚಿಬಿದ್ದು ಎಚ್ಚರಗೊಳ್ಳುತ್ತಿದ್ದೆವು.

ನನ್ನ ತಂಗಿಗೆ ಮದುವೆಯಾಯಿತು. ಅಮ್ಮನಿಗೆ, ಮದುವೆಯ ನಿಮಿತ್ತ, ಒಂದು ಪಾರ್ಟಿ ಏರ್ಪಡಿಸುವುದು ಬೇಕಿರಲಿಲ್ಲ. ಒಂದು ವೇಳೆ ಏರ್ಪಡಿಸಿದ್ದರೂ, ಅದು ದುಃಖದಲ್ಲೇ ಪರ್ಯವಸಾನವಾಗುತ್ತಿತ್ತು. ಯಾಕೆಂದರೆ ರುಚಿ ರುಚಿಯಾದ ತಿನಿಸನ್ನು ತಿನ್ನುವಾಗಲೆಲ್ಲ ನಮಗೆ ಅಪ್ಪನ ನೆನಪಾಗುತ್ತಿತ್ತು. ಗಾಳಿ-ಮಳೆಗಳ, ಚಳಿ ರಾತ್ರಿಗಳಲ್ಲಿ, ಬೆಚ್ಚಗಿನ ಹಾಸಿಗೆಯಲ್ಲಿ ಮಲಗಿಕೊಂಡು ನಾವು ಅವನ ಬಗ್ಗೆ ಯೋಚಿಸುತ್ತಿದ್ದರೆ, ಅವನೋ, ಒಬ್ಬನೇ ನಿರಾಶ್ರಿತನಂತೆ, ತನ್ನ ಕೈಯಿಗಳಿಂದಷ್ಟೇ ದೋಣಿಯನ್ನು ಮುನ್ನಡೆಸಲು ಹೆಣಗಾಡುತ್ತಿದ್ದ. ಆಗಾಗ, ಯಾರಾದರೊಬ್ಬರು, ನಾನು ನಮ್ಮಪ್ಪನಂತೆಯೇ ಕಾಣಿಸತೊಡಗಿದ್ದೇನೆಂದು ಹೇಳುತ್ತಿದ್ದರು. ಆದರೆ, ಆ ಹೊತ್ತಿಗೆ, ಅವನ ಕೂದಲು, ಗಡ್ಡ ಬೊಂತೆಗಟ್ಟಿರಬೇಕೆಂದೂ, ಅವನ ಉಗುರುಗಳು ಉದ್ದುದ್ದ ಬೆಳೆದಿರಬಹುದೆಂದೂ ನನಗೆ ಅನ್ನಿಸುತ್ತಿತ್ತು. ಜ್ವರ ಹಿಡಿದು ನರಪೇತಲನಾಗಿರುವಂತೆ, ಬಿಸಿಲಿನಿಂದ ಅವನ ಮುಖ ಕಪ್ಪಾಗಿರುವಂತೆ, ಆಗಾಗ ನಾನು ಬಂಡೆಯ ಬಿರುಕಿನಲ್ಲಿ ಬಟ್ಟೆ ಬರೆ ಇಡುತ್ತಿದ್ದರೂ,

ಹೆಚ್ಚು ಕಡಿಮೆ ಬೆತ್ತಲೆಯಾಗಿಯೇ ಇರುವಂತೆ ನಾನವನನ್ನು ಕಲ್ಪಿಸಿಕೊಳ್ಳುತ್ತಿದ್ದೆ.

ಅವನಿಗಂತೂ ನಮ್ಮ ಬಗೆಗೆ ಏನೇನೂ ಕಾಳಜಿಯಿದ್ದಂತಿರಲಿಲ್ಲ. ಆದರೆ ಅವನ ಬಗ್ಗೆ ನನಗೆ ಮಮತೆ, ಗೌರವ. ಜನ ನಾನೇನಾದರೂ ಒಳ್ಳೆಯದು ಮಾಡಿದ್ದನ್ನು ಕಂಡು ಹೊಗಳಿದಾಗ ಲೆಲ್ಲ ನಾನು, ''ಹೀಗೆ ಮಾಡುವಂತೆ ನಮ್ಮಪ್ಪನೇ ನನಗೆ ಕಲಿಸಿದ್ದು'' ಎನ್ನುತ್ತಿದ್ದೆ.

ನಿಜಕ್ಕೂ ಅದೇನೂ ಸರಿಯಾದ ಮಾತಲ್ಲ; ಸತ್ಯವೆಂದೇ ತೋರಬಹುದಾದ ಸುಳ್ಳಷ್ಟೆ. ಮೊದಲೇ ಹೇಳಿದಂತೆ, ನಮ್ಮಪ್ಪನಿಗೆ, ನಮ್ಮ ಬಗೆಗೆ ಕಾಳಜಿಯಿದ್ದಂತೇನೂ ತೋರುತ್ತಿರಲಿಲ್ಲ. ಹಾಗಾದರೆ ಅವನೇಕೆ ನಮಗೆ ಕಾಣಿಸುವಷ್ಟು ದೂರದಲ್ಲೇ ಇರುತ್ತಿದ್ದ? ಯಾಕೆ ನದಿಯ ಮೇಲೆ, ನಮ್ಮನ್ನು ನೋಡಲಾಗದಷ್ಟು ಅಥವಾ ನಮಗೆ ಅವನು ಕಾಣಿಸಲಾರದಷ್ಟು ದೂರ ಹೋಗುತ್ತಿರಲಿಲ್ಲ? ಉತ್ತರ ಅವನೊಬ್ಬನಿಗೇ ಗೊತ್ತಿತ್ತು.


ನನ್ನ ತಂಗಿ ಒಂದು ಗಂಡು ಮಗುವನ್ನು ಹೆತ್ತಳು. ಅವಳು, ಆ ಮಗುವನ್ನು ಅಪ್ಪನಿಗೆ ತೋರಿಸಲೇಬೇಕೆಂದು ಪಟ್ಟುಹಿಡಿದಳು. ಒಂದು ಸುಂದರವಾದ ದಿನ, ನಾವೆಲ್ಲರೂ ನದೀ ದಂಡೆಗೆ ಹೋದೆವು. ನನ್ನ ತಂಗಿ, ತನ್ನ ಮದುವೆಯ ಬಿಳೀ ಡ್ರೆಸ್ ತೊಟ್ಟುಕೊಂಡು, ಮಗುವನ್ನು ಮೇಲೆತ್ತಿ ಹಿಡಿದುಕೊಂಡು ನಿಂತಳು. ಆಕೆಯ ಗಂಡ, ಅದರ ಮೇಲೊಂದು ಕೊಡೆ ಹಿಡಿದ. ನಾವು ಅಪ್ಪನನ್ನು ಕೂಗಿ ಕರೆಯುತ್ತಾ, ತುಂಬಾ ಹೊತ್ತು ಕಾದಿದ್ದೆವು. ಅವನು ಕಾಣಿಸಿಕೊಳ್ಳಲೇ ಇಲ್ಲ. ನನ್ನ ತಂಗಿಗೆ ಅಳುತಡೆಯಲಾಗಲಿಲ್ಲ; ನಾವೆಲ್ಲರೂ ಕೂಡ, ಒಬ್ಬರನ್ನೊಬ್ಬರು ತಬ್ಬಿಕೊಂಡು ಗಳಗಳನೆ ಅತ್ತುಬಿಟ್ಟೆವು.

ನನ್ನ ತಂಗಿ ಮತ್ತು ಅವಳ ಗಂಡ ದೂರದೂರಿಗೆ ಹೊರಟುಹೋದರು. ನನ್ನ ತಮ್ಮ ನಗರದಲ್ಲಿ ವಾಸಮಾಡುವುದಕ್ಕಾಗಿ ಹೊರಟು ಹೋದ. ಕಾಲ, ಎಂದಿನಂತೆ ಗ್ರಹಿಕೆಗೆ ಸಿಕ್ಕದ

ಯೊಆವ್ರೊ ಗಿಮಾರೇಸ್ ರೋಸಾ: (1908-1967)

ಶ್ರೇಷ್ಠ ಬ್ರೆಜಿಲಿಯನ್ ಸಾಹಿತಿ ಯೊಆವ್ರೊ ಗಿಮಾರೊಸ್ ರೋಸಾ (Joao Guimaraes Rosa) ಬ್ರೆಜಿಲ್ ನಗರದ ಮಿನಾಸ್ ಗೆರಾಯ್ಸ್‌ನಲ್ಲಿ ಹುಟ್ಟಿದ. ವೈದ್ಯನಾಗಿ ತರಬೇತಿ ಹೊಂದಿದ ಮೇಲೆ ಹಳ್ಳಿಗಾಡಿನ ಪ್ರದೇಶವೊಂದಕ್ಕೆ ಹೋಗಿ ವೃತ್ತಿ ಆರಂಭಿಸಿದ. ಡಾಕ್ಟರ್ ಕೆಲಸ ಮಾಡುತ್ತಲೇ ಆಯಾ ಪ್ರದೇಶದ ಜನಪದ ಕತೆಗಳನ್ನು ಸಂಗ್ರಹಿಸುವ ಅಪರೂಪದ ಹವ್ಯಾಸ ಬೆಳೆಸಿಕೊಂಡ. ಪ್ರಸಿದ್ಧಿಗೆ ಬಂದ ತರುವಾಯ, ರೋಸಾ, ಬ್ರೆಜಿಲ್‌ನ ರಾಯಭಾರಿಯಾಗಿಯೂ ನಂತರದ ವರ್ಷಗಳಲ್ಲಿ ಸೇವೆ ಸಲ್ಲಿಸಿದ. ಈತನ ಪ್ರಸಿದ್ಧ ಕಾದಂಬರಿ ಇಂಗ್ಲಿಷಿನಲ್ಲಿ ಪ್ರಕಟಗೊಂಡ The Devil to pay in the Back lands. ಬದುಕಿಗೆ ವಿಮುಖವಾಗಿ, ಮಣ್ಣಕಣ್ಣುಗಳಿಗೆ ಅದೃಶ್ಯವಾದ 'ಮೂರನೇ ದಂಡೆ' ಕುರಿತು ಹೊರಡುವ ಪಯಣ, ಸಾಹಿತ್ಯ ಜಗತ್ತಿನ ಒಂದು ಆದಿಪ್ರತಿಮೆ. ಬೈಬಲ್‌ನಲ್ಲಿ ಬರುವ 'ನೋಹಾ' ಈ ಜಾಗೆಗೆ ಹೊರಡಲು ಉದ್ಯುಕ್ತನಾದ ಪ್ರಪ್ರಥಮ ನಾವಿಕ. ರೋಸಾನ ಈ ಕತೆಯಲ್ಲಿ, ಸ್ವಪ್ನ-ವಾಸ್ತವ, ಸಂಭವ-ಅಸಂಭವಗಳ ಹದವಾದ ಪಾಕದಲ್ಲಿ ಹುಟ್ಟುವ ಒಂದು ಹೊಸ ಅನುಭವ ಇದೆ.

ಈ ಕತೆಯನ್ನು ಕನ್ನಡಕ್ಕೆ ತಂದಿರುವ ಎಸ್. ದಿವಾಕರ್ ಚೆನ್ನೈನಲ್ಲಿ ನೆಲೆಸಿರುವ ಕನ್ನಡದ ಅತ್ಯುತ್ತಮ ಕತೆಗಾರ, ಕವಿ ಮತ್ತು ಸಂಗೀತಜ್ಞ. ಪ್ರಪಂಚದ ಬಹುತೇಕ ಎಲ್ಲ ಕತೆಗಾರರನ್ನು ಪ್ರೀತಿಯಿಂದ ಓದಿರುವ ದಿವಾಕರ್‌ರನ್ನು ''ಚಲಿಸುವ ವಿಶ್ವಕಥಾಕೋಶ'' ಎಂದರೂ ತಪ್ಪಿಲ್ಲ.



ವೇಗದಲ್ಲಿ ಮುಂದೆ ಮುಂದೆ ಸರಿಯುತ್ತಿತ್ತು. ಕಡೆಗೆ, ಸಾಕಷ್ಟು ವಯಸ್ಸಾಗಿದ್ದ ಅಮ್ಮನೂ ಹೊರಟುಬಿಟ್ಟಳು-ತನ್ನ ಮಗಳ ಜೊತೆ ಇರುವುದಕ್ಕೆ. ನಾನೊಬ್ಬನೇ ಉಳಿದೆ, ನನ್ನ ಬದುಕಿನ ಹೊರೆ ಹೊತ್ತುಕೊಂಡು. ನದಿಯಲ್ಲಿ ಒಬ್ಬೊಂಟಿಯಾಗಿ, ಅನಾಥನಂತೆ ಅಲೆದಾಡು ತ್ತಿದ್ದ ಅಪ್ಪನಿಗೆ ನಾನು ಬೇಕಾಗಿತ್ತು. ಅವನೇಕೆ ಹಾಗೆ ಮಾಡುತ್ತಿದ್ದಾನೆಂದು ಹೇಳದಿದ್ದರೂ, ಅವನಿಗೆ ನಾನು ಬೇಕೇ ಬೇಕೆಂದು ನನಗೆ ಗೊತ್ತಿತ್ತು. ಅಪ್ಪ ಯಾಕೆ ಹಾಗೆ ಮಾಡುತ್ತಿ ದ್ದಾನೆಂದು ನಾನು ಜನರನ್ನು ನೇರವಾಗಿಯೇ ಕೇಳಿದೆ. ಅವರೆಲ್ಲರೂ, ಅಪ್ಪ ಆ ಬಗ್ಗೆ ದೋಣಿಯನ್ನು ನಿರ್ಮಿಸಿದವನಿಗೆ ವಿವರಿಸಿರು ವಂತೆ ತಾವು ಕೇಳಿರುವುದಾಗಿ ಹೇಳಿದರು. ಆದರೆ ಈಗ ಆ ದೋಣಿ ತಯಾರಿಸಿದವನು ಬದುಕಿಲ್ಲ. ಯಾರೊಬ್ಬರಿಗೂ ಏನೂ ಗೊತ್ತಿಲ್ಲ, ನೆನಪಿಲ್ಲ. ಒಮ್ಮೆ ಸಿಕ್ಕಾಪಟ್ಟೆ ಮಳೆ ಸುರಿಯುತ್ತಿದ್ದಾಗ ಕೆಲವರು ಹುಚ್ಚುಚ್ಚಾಗಿ ಮಾತಾಡಿದ್ದುಂಟು: ಅಪ್ಪ, ನೋಹನ ಹಾಗೆ ವಿವೇಕಿಯಾಗಿದ್ದರಿಂದಲೇ, ಮುಂದೆ ಪ್ರಳಯವಾಗಬಹುದೆಂದು, ಒಂದು ದೋಣಿಯನ್ನು ನಿರ್ಮಿಸಿಕೊಂಡ ಅಂತ. ಜನ ಹೀಗೆ ಮಾತಾಡಿದಂತೆ ಮಸಕು ಮಸಕಾದ ನೆನಪು. ಅದು ಹೇಗೇ ಇರಲಿ, ಅಪ್ಪ ಹಾಗೆ ಮಾಡುತ್ತಿದ್ದಾನೆಂದು ನಾನಂತೂ ಅವನನ್ನು ದೂಷಿಸುವಂತಿರಲಿಲ್ಲ. ನನ್ನ ತಲೆಗೂದಲು ನರೆಯತೊಡಗಿತ್ತು.

ಹೌದು, ನನ್ನಲ್ಲಿರುವುದೆಲ್ಲ ನೋವಿನ ಸಂಗತಿಗಳೇ. ನಾನೇನು ತಪ್ಪು ಮಾಡಿದ್ದೆ? ನನ್ನ ಅಪರಾಧವಾದರೂ ಏನು? ಅಪ್ಪ ಯಾವಾ ಗಲೂ ಹೊರಗೆ, ನದಿಯಲ್ಲಿ; ಅವನ ಗೈರು ಹಾಜರಿಯೇ ಸದಾ ನನ್ನ ಜೊತೆಗೆ. ಇನ್ನು ಆ ನದಿ; ನಿರಂತರವಾಗಿ ಹೊಸದಾಗುತ್ತಿದ್ದ ನದಿ; ಯಾವಾಗಲೂ ನದಿಯೇ. ನನಗೆ ವೃದ್ಧಾಪ್ಯದ ನೋವುಗಳು ಕಾಡತೊಡಗಿದ್ದುವು. ವೃದ್ಧಾಪ್ಯದಲ್ಲಿ ಜೀವನವೆನ್ನುವುದು ಒಂದು ಯಾತನೆಯೇ. ನನಗೆ ಆಗಾಗ ಹುಶಾರು ತಪ್ಪುತ್ತಿತ್ತು, ಕಳವಳ ವಾಗುತ್ತಿತ್ತು. ಸಾಲದ್ದಕ್ಕೆ ಸಂಧಿವಾತ ಬೇರೆ. ಇನ್ನು ಅಪ್ಪ? ಯಾಕವನು ಹಾಗೆ ಮಾಡುತ್ತಿದ್ದ? ಅವನಿಗೂ ತುಂಬಾ ಯಾತನೆಯಾಗುತ್ತಿರಬೇಕು. ಸಾಕಷ್ಟು ವಯಸ್ಸೂ ಆಗಿಬಿಟ್ಟಿದೆ. ಒಂದು ದಿನ, ಅಂಥ ಬಲವೂ ಇಲ್ಲದೆ, ತನ್ನ ದೋಣಿಯನ್ನೇ ಮುಳುಗಿಸಿಬಿಡಬಹುದು; ಅಥವಾ ನದಿಯ ಪ್ರವಾಹ, ಆ ದೋಣಿಯನ್ನು ದೂರ ದೂರ ತೇಲಿಸಿಕೊಂಡು ಹೋಗಿ, ಕೊನೆಗೆ ಜಲ ಪಾತವೊಂದಕ್ಕೆ ಸಿಕ್ಕಿಸಿ, ಪಾತಾಳಕ್ಕೆ ತಳ್ಳಿಬಿಡ ಬಹುದು. ಅಂಥ ಯೋಚನೆಯಿಂದಲೇ ನನ್ನ ಎದೆ ಭಾರವಾಯಿತು. ಅವನು ಹೊರಗೆ ನದಿಯಲ್ಲಿ; ನನಗೋ ಸದಾ ಶಾಂತಿಯಿಲ್ಲದ ಸ್ಥಿತಿ. ನನಗೆ ಗೊತ್ತಿರದ ಯಾವುದೋ ಅಪರಾಧ ನನ್ನಿಂದ ಘಟಿಸಿಬಿಟ್ಟಿರುವಂತೆ; ನನ್ನ ನೋವು, ನನ್ನೊಳಗಿನ ತೆರೆದ ಗಾಯದಂತೆ. ಬಹುಶಃ ಬೇರೆ ಸಂದರ್ಭವಾಗಿದ್ದಿದ್ದರೆ ನನಗೆ ಅರ್ಥ ವಾಗುತ್ತಿತ್ತೋ ಏನೊ. ಏನು ತಪ್ಪಾಯಿತು ಎಂದು ಯೋಚಿಸತೊಡಗಿದೆ.

ಎಂಥ ಯೋಚನೆ! ನನಗೇನು ಹುಚ್ಚು ಹಿಡಿಯಿತೆ? ಇಲ್ಲ, ನಮ್ಮ ಮನೆಯಲ್ಲಿ ಯಾರೂ ಆ ಮಾತನ್ನು ಆಡಿದ್ದಿಲ್ಲ. ಎಂದೂ ಆಡಿಲ್ಲ. ಯಾರೂ ಯಾರನ್ನೂ ಹುಚ್ಚ ಎಂದಿಲ್ಲ. ಯಾಕೆಂದರೆ ಯಾರೂ ಹುಚ್ಚರಲ್ಲ. ಅಥವಾ ಎಲ್ಲರೂ ಹುಚ್ಚರೇ ಏನೊ. ನಾನು ಮಾಡಿದ್ದಿಷ್ಟೆ: ನದೀ ದಂಡೆಗೆ ಹೋಗಿ, ಅವನಿಗೆ ಕಾಣಿಸ ಬಹುದೆಂದು, ನನ್ನ ಕರ್ಚೀಫನ್ನು ಬೀಸಿದೆ. ನನ್ನ ಮನಸ್ಸು ಸಂಪೂರ್ಣವಾಗಿ ಸ್ವಾಧೀನದಲ್ಲಿತ್ತು. ಕಾದೆ, ಕಡೆಗೆ ದೂರದಲ್ಲಿ, ಅಲ್ಲಿ, ಉಹೂಂ ಅಲ್ಲಿ, ದೋಣಿಯ ಹಿಂದುಗಡೆ ಕುಳಿತ ಒಂದು ಮಸಕು ಮಸಕಾದ ರೂಪದಂತೆ ಅವನು ಕಾಣಿಸಿಕೊಂಡ. ತುಂಬ ಸಲ ಅವನನ್ನು ಕೂಗಿದೆ. ಅವನಿಗೆ ಹೇಳಬೇಕೆಂದಿದ್ದುದನ್ನು ಔಪಚಾರಿಕವಾಗಿ, ಭಾಷೆ


ಕೊಡುವಂತೆ ಹೇಳಿದೆ. ಅದನ್ನು ಎಷ್ಟು ಸಾಧ್ಯವೋ ಅಷ್ಟೂ ಗಟ್ಟಿಯಾಗಿ ಹೇಳಿದೆ.

“ಅಪ್ಪಾ, ನೀನಲ್ಲಿ ತುಂಬಾ ದಿನಗಳಿಂದ ಇದ್ದೀಯ. ನಿಂಗೆ ವಯಸ್ಸಾಯಿತು... ಬಾ, ಇನ್ನು ಮೇಲೆ ನೀನು ಹಾಗೆ ಮಾಡುವ ಅಗತ್ಯವಿಲ್ಲ... ಬಂದುಬಿಡು. ನಿನ್ನ ಬದಲಿಗೆ ನಾನಲ್ಲಿಗೆ ಹೋಗುತ್ತೇನೆ. ಬೇಕಾದರೆ ಈಗಲೇ ಹೋಗುತ್ತೇನೆ. ಯಾವಾಗ ಬೇಕಾದರೂ ದೋಣಿಯನ್ನು ಹತ್ತಿ ನಿನ್ನ ಜಾಗದಲ್ಲಿ ಕೂತುಕೊಳ್ಳುತ್ತೇನೆ.”

ಹೀಗೆಲ್ಲಾ ನಾನು ಹೇಳುತ್ತಿರುವಾಗ, ನನ್ನ ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು.

ಅವನಿಗೆ ನನ್ನ ಮಾತು ಕೇಳಿಸಿತು. ಮೇಲೆದ್ದು ನಿಂತ. ಹುಟ್ಟುಗಳಿಂದ ದೋಣಿಯನ್ನು ತಿರುಗಿಸಿ, ನನ್ನ ಕಡೆ ಬರತೊಡಗಿದ. ಹೌದು, ಅವನು ನನ್ನ ಕರೆಗೆ ಓಗೊಟ್ಟಿದ್ದ. ಇದ್ದಕ್ಕಿದ್ದಂತೆ, ನನ್ನ ಮೈಯೆಲ್ಲ ನಡುಗಿಬಿಟ್ಟಿತು. ಯಾಕೆಂದರೆ ಅವನು, ಎಷ್ಟೋ, ಎಷ್ಟೋ ವರ್ಷಗಳ ನಂತರ ಮೊಟ್ಟ ಮೊದಲ ಬಾರಿಗೆ, ಕೈಯೆತ್ತಿ ಆಡಿಸಿದ. ನನಗೆ ತಡೆಯಲಾಗಲಿಲ್ಲ... ಭಯಭೀತಿಯಿಂದ ನನ್ನ ಮೈಯೆಲ್ಲ ಮುಳ್ಳುಗಳೆದ್ದುವು. ಓಡಿದೆ, ಓಡಿದೆ, ಹುಚ್ಚನಂತೆ ಓಡಿದೆ. ಯಾಕೆಂದರೆ ಅವನು ಪರಲೋಕದಿಂದ ಬರುತ್ತಿರುವ ಹಾಗೆ ಕಾಣಿಸಿತು. ಈಗಲೂ ಅವನ ಕ್ಷಮೆಗಾಗಿ ಬೇಳಾಡುತ್ತಿದ್ದೇನೆ, ಅಂಗಲಾಚುತ್ತಿದ್ದೇನೆ.

ವಿಪರೀತ ಭೀತಿಯಿಂದ ನನ್ನ ಮೈಯೆಲ್ಲ ತಣ್ಣಗಾದಂತಾಯಿತು. ನಾನು ಅಸ್ವಸ್ಥನಾದೆ. ಆಮೇಲೆ, ಅವನನ್ನು ನೋಡಿದವರಾಗಲೀ, ಅವನ ಬಗ್ಗೆ ಕೇಳಿದವರಾಗಲೀ ಒಬ್ಬರೂ ಇಲ್ಲ. ಅಂಥ ಸೋಲು ಅನುಭವಿಸಿದ ಮೇಲೆ, ನಾನೇನು ಮನುಷ್ಯನೆ? ನಾನು ಹೇಗೆ ಆಗಬಾರದಿತ್ತೋ ಹಾಗೆ ಆಗಿದ್ದೇನೆ. ನಾನು ಮೌನವಾಗಿರಬೇಕಾಗಿತ್ತು. ಈಗ ತುಂಬ ತಡವಾಯಿತೆಂದು ಕೂಡ ಗೊತ್ತು. ನನ್ನ ಬದುಕಿನ ಮರಳುಗಾಡುಗಳಲ್ಲಿ, ಸರಹದ್ದುಗಳಿಲ್ಲದ ಬಯಲು ಸೀಮೆಯಲ್ಲಿ ನಾನು ಬದುಕಿರಬೇಕು. ಮತ್ತೆ ನನ್ನ ಬದುಕನ್ನು ಮೊಟಕು ಮಾಡಿಕೊಳ್ಳುವ ಭಯವೂ ಉಂಟು. ಆದರೆ, ನನಗೆ ಸಾವು ಬಂದಾಗ, ಜನರು ನನ್ನನ್ನು ಕರೆದುಕೊಂಡು ಹೋಗಿ, ಬಹುದೀರ್ಘವಾದ ದಂಡೆಗಳ ನಡುವಣ ಈ ಶಾಶ್ವತ ಜಲರಾಶಿಯಲ್ಲಿ ತೇಲಿಬಿಡಬೇಕು, ಒಂದು ಪುಟ್ಟ ದೋಣಿಯಲ್ಲಿಟ್ಟು. ಮತ್ತೆ ನಾನು ನದಿಯ ಮೇಲೆ, ನದಿಯಲ್ಲಿ ಕಳೆದು ಹೋಗಿ, ನದಿಯೊಳಗೆ.... ನದಿಯ...



ಅಮಾವಾಸ್ಯೆಯ ಕಿರಣ- 'ವಿಡಂಬಾರಿ'


ದೇವದಾಸಿಯ ಮಗನಾಗಿ ಹುಟ್ಟಿ, ಸಾಕುಮಗನಾಗಿ ಬೆಳೆದು, ಉತ್ತರ ಕನ್ನಡದ ಶರಾವತೀ ತೀರದ ಕುಗ್ರಾಮಗಳಲ್ಲಿ ಅಂಚೆಯಣ್ಣನಾಗಿ ಅಲೆದಾಡಿ, 'ವಿಡಂಬಾರಿ' ಹೆಸರಿನಲ್ಲಿ ಸಾವಿರಾರು ವಿಡಂಬನಾತ್ಮಕ ಚುಟುಕುಗಳನ್ನು ಬರೆದಿರುವ ವಿಷ್ಣು ಗಜಾನನ ಭಂಡಾರಿ, ಇವರ 'ಆತ್ಮಕಥನ'ದಿಂದ ಆಯ್ದ ಕೆಲ ಭಾಗಗಳನ್ನಿಲ್ಲಿ ಕೊಡುತ್ತಿದ್ದೇವೆ.

ಹಣ್ಣಾದ ಜೀವದ ಅಂತರಂಗದಿಂದ ಹೊಮ್ಮಿರುವ ಈ ಸರಳ ಬರಹದ ಮಾನವೀಯ ಘನತೆ ಅಪರೂಪದ್ದಾಗಿದೆ.

ಕೆಲವರು ಹೇಳಿದ್ದಕ್ಕೆಲ್ಲಾ ನಮ್ಮವರು, 'ಹೌದ್ರಾ ಒಡ್ಯಾ' ಅನ್ನುವ ಒಂದು ಕಾಲವಿತ್ತು. ಒಂದೊಮ್ಮೆ 'ಆಗುದಿಲ್ರಾ, ಒಡ್ಯಾ' ಅಂದುಬಿಟ್ಟರೆ ಎಲ್ಲಿ ಶಾಪ ಕೊಟ್ಟುಬಿಡುತ್ತಾರೋ ಅನ್ನುವ ಭಯ ಬೇರೆ. 'ಇಲ್ರಾ, ಒಡ್ಯಾ' ಅನ್ನುವುದಕ್ಕೂ ಅವಕಾಶವೇನೋ ಇತ್ತು. ಆದರೆ 'ಊಟ ಆಯ್ತಾ ವೆಂಕಪ್ಪಾ' ಎಂದು ಅವರು ಕೇಳುತ್ತಲೇ ಇರಲಿಲ್ಲ. ಹೀಗಾಗಿ ಆ ಪ್ರಶ್ನೆಯೇ ಉದ್ಭವ ಆಗುತ್ತಿರಲಿಲ್ಲ.

'ದೇವರಿಗೆ ಮನಸ್ಸಾಗಿದೆ'

ಯಾರ್‍ಯಾರಿಗೋ ಬೇಕಾಗಿ, ದೇವರ ಹೆಸರಿನಲ್ಲಿ ಸೂಳೆ ಬಿಡುವ ಪದ್ಧತಿ ಇದ್ದ ಕಾಲವದು. ಅಂಥ ಒಂದು ಕಾಲದಲ್ಲಿ ದೇವಸ್ಥಾನಕ್ಕೆ ಸಂಬಂಧಪಟ್ಟವರೊಬ್ಬರು, ದೇವಸ್ಥಾನದ ದೇವರೆಂಬ ಮೂರ್ತಿಯ ಎದುರು ನನ್ನ ತಾಯಿಯ ತಂದೆಯವರನ್ನು ಕರೆತಂದು ನಿಲ್ಲಿಸಿ, 'ನೋಡು, ನಿನ್ನ ಹಿರಿಯ ಮಗಳ ಮೇಲೆ ನಮ್ಮ



ಕಮಲಾಕ್ಷ ಶೆಣೈ

ದೇವರಿಗೆ ಮನಸ್ಸಾಗಿದೆ. ಕಾರಣ, ನಿನ್ನ ಮಗಳನ್ನು ನಾಳೆಯೇ ದೇವರ ಹೆಸರಿನಲ್ಲಿ ಬಿಡದಿದ್ದರೆ ನಿನ್ನ ಕುಲವೇ ನಾಶವಾದೀತೆಂದು' ಹೇಳಿದರಂತೆ. ಆಗ ನನ್ನ ತಾಯಿಯ ತಂದೆಯಾದ ವೆಂಕಪ್ಪ ಭಂಡಾರಿ, 'ಹೌದ್ರ ಒಡ್ಯಾ, ಆಗ್ಲಿ ಒಡ್ಯಾ' ಅಂದರಂತೆ.

ಹೀಗಾಗಿ, ವೆಂಕಪ್ಪ ಭಂಡಾರಿಯವರ ಮುಗ್ಧತನ ಮತ್ತು ದೇವಸ್ಥಾನಕ್ಕೆ ಸಂಬಂಧಪಟ್ಟವರ ಸ್ವಾರ್ಥಕ್ಕೆ ಬಲಿಯಾಗಿ ನನ್ನ ತಾಯಿಯಾದ ಗಣಪಿ ದೇವರ ಹೆಸರಿನಲ್ಲಿ ಸೂಳೆ ಆದಳಂತೆ.

ನನ್ನ ತಾಯಿಯ ತಂದೆ ಬದುಕಿರುವತನಕ ಮತ್ತು ಪ್ರಾಯ ಇರುವತನಕ ನನ್ನ ತಾಯಿ ಸುಖವಾಗಿಯೇ ಇದ್ದಳಂತೆ. ನಂತರ ದೇವಸ್ಥಾನಕ್ಕೆ ಸಂಬಂಧಪಟ್ಟವರಾಗಲಿ, ದೇವರಾಗಲಿ, ನನ್ನ ತಾಯಿಯ ಸಹೋದರರಾಗಲಿ ಯಾರೂ ರಕ್ಷಣೆಗೆ ಬರಲಿಲ್ಲ. ಮೂರು ಹೆಣ್ಣು, ಎರಡು ಗಂಡುಮಕ್ಕಳನ್ನು ಹಡೆದ ನನ್ನ ತಾಯಿ ಬೇರೆಯೇ ಒಂದು ಗುಡಿಸಲಿನಲ್ಲಿ ಇದ್ದು, ಮಕ್ಕಳ ಪೋಷಣೆಗಾಗಿ ಕೂಲಿಯ ಕೆಲಸಕ್ಕಿಳಿಯಬೇಕಾಯಿತು. ಈ ಸ್ಥಿತಿಗೆ ಕಾರಣರಾದವರು ತಾಯಿಯವರಿಗೆ 'ಊಟ ಆಯಿತೇ?' ಎಂದು ಕೂಡಾ ಕೇಳಲಿಲ್ಲ. ಯಾಕೆಂದರೆ ನನ್ನ ತಾಯಿ ಆಗ ಗಾಣಕ್ಕೆ ಸಿಕ್ಕಿದ ಕಬ್ಬಿನಂತಾಗಿದ್ದಳು.

ನಾನು ಹೊನ್ನಾವರ ತಾಲೂಕಿನ ಮೇಲಿನ ಇಡಗುಂಜಿಯಲ್ಲಿ, ದಿನಾಂಕ 21-2-1938 ರವಿವಾರ, ಅಮವಾಸ್ಯೆಯ ದಿವಸ, ನನ್ನ ತಾಯಿಗೆ ಮೂರನೆಯವನಾಗಿ ಜನಿಸಿದೆನಂತೆ. ಈ ನಡುವೆ ನನ್ನ ತಾಯಿಗೆ ಆರು ಗರ್ಭಪಾತಗಳು ಕೂಡಾ ಆಗಿದ್ದವಂತೆ. ಆ ಕಾಲದಲ್ಲಿ ಅಮವಾಸ್ಯೆಯ ದಿವಸ ಹುಟ್ಟಿದ ಮಗುವನ್ನು ಬೇರೆಯವರಿಗೆ ಕೊಟ್ಟುಬಿಡುವ ಪದ್ಧತಿ ಇತ್ತು. ಈಗೂ ಕೆಲವೆಡೆ ಹಾಗೇ ಇದೆ.

ನನ್ನ ತಾಯಿಯ ತಂಗಿ ಶಾರದಾ ಅವರನ್ನು ಅಲ್ಲಿಯೇ ಹತ್ತಿರದ ಕೊಳ್ಳಿ ಅನ್ನುವ ಕೇರಿಯಲ್ಲಿ ವಾಸವಾಗಿದ್ದ, ಸಿರಿವಂತರಾಗಿದ್ದ ಕ್ಷೇತ್ರಪಾಲ ಭಂಡಾರಿ ಅನ್ನುವವರಿಗೆ ಮದುವೆ ಮಾಡಿಕೊಟ್ಟಿದ್ದರು. ಅವರಿಗೆ ಮಕ್ಕಳೇ ಆಗಿರಲಿಲ್ಲವಂತೆ. ಹೀಗಾಗಿ, ನಾನು ಹುಟ್ಟಿದ ಹನ್ನೆರಡನೇ ದಿವಸಕ್ಕೆ, ಆ ದಂಪತಿಗಳಿಗೆ ದತ್ತುಪುತ್ರನಾಗಿ ನನ್ನನ್ನು ಕೊಟ್ಟರಂತೆ. ನಾನು ಹನ್ನೆರಡನೇ ವರುಷಗಳವರೆಗೂ ರಾಜವೈಭವದಲ್ಲಿಯೇ ಬೆಳೆದೆ. ಆಗ ನಾನು ಕನ್ನಡ ಮೂರನೆಯ ತರಗತಿಯಲ್ಲಿ ಕಲಿಯುತ್ತಿದ್ದೆ.

ನಮ್ಮೂರಿನಲ್ಲಿ ಒಂದು ವೋಲಂಟರಿ ಶಾಲೆ ಇತ್ತು. ನನ್ನ ಗುರುಗಳಿಗೆ ಇಡಗುಂಜಿ ದೇವಸ್ಥಾನದ ಕೆಲಸವೂ ಇತ್ತು. ದೇವಸ್ಥಾನಕ್ಕೆ ಹೂವು ತರುವುದು, ಬಲಿ ಸೊಪ್ಪು ತರುವುದು ಈ ಕೆಲಸಗಳನ್ನು ನಾವು ಹುಡುಗರು ಪಾಳಿಯ ಮೇಲೆ ಮಾಡಬೇಕಾಗುತ್ತಿತ್ತು. ಮನೆಯಲ್ಲಿ ನನಗೆ, ನನ್ನ ಸಾಕುತಂದೆ ಚೆನ್ನಾಗಿ ಪಾಠ ಹೇಳಿಕೊಡುತ್ತಿದ್ದರು. ಅವರು ಆ ಕಾಲದಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಪಾಸಾದವರೂ, ಜ್ಞಾನವಂತರೂ ಆಗಿದ್ದರು.

ಆದರೆ ಅದೇ ಸಮಯದಲ್ಲಿ ನನ್ನ ಸಾಕು ತಾಯಿಯವರು ಗರ್ಭಪಾತವಾಗಿ ತೀರಿಕೊಂಡರು. ನಂತರ ಆರು ತಿಂಗಳಲ್ಲಿಯೇ ನನ್ನ ಸಾಕುತಂದೆಯವರು ಇನ್ನೊಂದು ಮದುವೆಯಾದರು. ಮದುವೆ ಆಗಿ ಎರಡು ತಿಂಗಳುಗಳಲ್ಲೇ ನಾನು ಶಾಲೆ ಬಿಟ್ಟು, ಮನೆಯ ಕೆಲಸಗಳನ್ನು ನಿರ್ವಹಿಸಬೇಕಾಯಿತು. ಅಡಿಕೆ ತೋಟಕ್ಕೆ ನೀರನ್ನು ಹಾಯಿಸುವುದು, ಕಟ್ಟಿಗೆ, ಸೊಪ್ಪು ತರುವುದು ಇತ್ಯಾದಿ. ಸಾಕುತಂದೆಯವರಿಗೆ ದೊಡ್ಡ ಪ್ರಮಾಣದಲ್ಲಿ ಅಡಿಕೆ ವ್ಯಾಪಾರ ಕೂಡಾ ಇತ್ತು. ಸುಲಿದ ಅಡಿಕೆ ಬಿಸಿಲಲ್ಲಿ ಹಾಕಿ, ಅದನ್ನು ಬುಟ್ಟಿಯಲ್ಲಿ ತುಂಬಿ, ಬರಿಗಾಲಿನಲ್ಲಿ ತುಳಿದು ಅಡಿಕೆಗೆ ಹೊಳಪು ತರುವಾಗ ನನ್ನ ಮೂಗಿನಲ್ಲಿ ರಕ್ತ ಸುರಿಯುತ್ತಿತ್ತು.

ನನ್ನ ಸಾಕುತಂದೆಯವರಿಗೆ ನನ್ನಲ್ಲಿ ತುಂಬಾ ಪ್ರೀತಿ, ಕರುಣೆ ಇತ್ತಾದರೂ ಮನೆಯಲ್ಲಿ ಅವರ ಮಾತು ನಡೆಯುತ್ತಿರಲಿಲ್ಲ. ನಮ್ಮ ತಾಲೂಕಿನಲ್ಲಿಯೇ ಒಳ್ಳೆಯವರೆಂದು ಪ್ರಸಿದ್ಧರಾಗಿದ್ದ ನನ್ನ ಸಾಕುತಂದೆ, ಮನಸ್ಸಿನ ನೆಮ್ಮದಿಗಾಗಿಯೋ ಏನೋ ತುಂಬಾ ಕುಡಿಯಲು ಪ್ರಾರಂಭಿಸಿದರು. ಒಮ್ಮೊಮ್ಮೆ ನನ್ನನ್ನು ಅಪ್ಪಿಕೊಂಡು ಅತ್ತುಬಿಡುತ್ತಿದ್ದರು.

ಸ್ವಾಮಿಯ ವಾದ್ಯ

ಒಂದು ದಿನ ನಾನು ಮನೆಯಿಂದ ಹೊರದೂಡಲ್ಪಟ್ಟು ನನ್ನ ಅಜ್ಜನ ಮನೆಯಲ್ಲಿ ಆಶ್ರಯ ಪಡೆದೆ. ಒಂದು ವರುಷದ ನಂತರ ನನ್ನ ಸಾಕುತಂದೆಗೆ ಏನನಿಸಿತೋ ಏನೋ, ನನ್ನನ್ನು ಮತ್ತೆ ತಮ್ಮ ಮನೆಗೇ ಕರೆಸಿಕೊಂಡರು. ಮಲತಾಯಿಯ ಕಾಟ ಮಾತ್ರ ಎಂದಿನಂತೆ ಸಾಗಿಯೇ ಇತ್ತು.

ನನಗೆ ಹದಿನೆಂಟು ವರುಷ ಪ್ರಾಯವಾದ ಸಮಯದಲ್ಲಿ ನಮ್ಮೂರಿನಲ್ಲಿ ಒಂದು ಬ್ರಾಂಚ್ ಪೋಸ್ಟ್ ಆಫೀಸು ತೆರೆಯಲ್ಪಡುತ್ತದೆಂಬ ಸುದ್ದಿ ಬಂತು. ನಾನು ಪೋಸ್ಟ್‌ಮನ್ ಜಾಗೆಗೆ ಅರ್ಜಿ ಹಾಕಿದೆ. ನಾನು ಕೇವಲ ಮೂರನೇ ತರಗತಿಯವರೆಗೆ ಓದಿದವನಾಗಿದ್ದೆ. ನನಗಿಂತ ಹೆಚ್ಚಿಗೆ ಕಲಿತವರೂ ಅರ್ಜಿ ಹಾಕಿದ್ದರು. ಆದರೆ ಶಾಲೆಯಲ್ಲಿ ಒಂದನೇ ನಂಬರ ಬರುತ್ತಿದ್ದುದನ್ನು ಪರಿಶೀಲಿಸಿದ ಓರ್ವ ಪುಣ್ಯಾತ್ಮ ಮಾಸ್ತರರು, ನನಗೆ ಒಂದು ದೊಡ್ಡ ಉಪಕಾರ ಮಾಡಿದರು. ಅಲ್ಲದೆ ಶಾಲೆಯ ಮಾಸ್ತರರಾಗಿದ್ದ ಶ್ರೀ ಗಣಪತಿ ಸಭಾಹಿತ ಅವರು ನನಗೆ ಇಂಗ್ಲಿಷ್ ವಿಳಾಸ ಓದಲು, ಬರೆಯಲು ಬರುತ್ತದೆಂದು ಒಂದು ಸರ್ಟಿಫಿಕೇಟನ್ನು ಕೊಟ್ಟರು. ಈ ಎಲ್ಲರ ಸಹಕಾರದಿಂದ ನಾನು ಪೋಸ್ಟ್ ಆಫೀಸಿನ ಕೆಲಸಕ್ಕೆ ಅರ್ಜಿ ಹಾಕಿದೆ. ಆ ಕೆಲಸ ಸಿಗುವ ಬಗೆಗೆ ನನಗೆ ಭರವಸೆ ಇರಲಿಲ್ಲ.

ಅದೇ ಸಮಯಕ್ಕೆ ಒಂದು ಮಠದ ಸ್ವಾಮಿಗಳು, ಮಂಗಳೂರು, ಕೇರಳದ ಕಡೆ ಪ್ರವಾಸ ಹೊರಡುತ್ತಾರೆ, ವಾದ್ಯ ಬಾರಿಸಲು (ಪಂಚ ಓಲಗ) ಬರಬೇಕೆಂದು ನನಗೆ ಕರೆ ಬಂತು. ನಾನು ಆರು ತಿಂಗಳ ಕಾಲ ಸ್ವಾಮಿಗಳೊಂದಿಗೆ ಪ್ರವಾಸಕ್ಕೆ ಹೋದೆ.

ಸ್ವಾಮಿಗಳೊಂದಿಗೆ ನಾನಿದ್ದಾಗ ನಡೆದ ಒಂದೆರಡು ಘಟನೆಗಳನ್ನು ತಮ್ಮ ಮುಂದಿಡಲೇಬೇಕು. ನಾನು ಪ್ರವಾಸಕ್ಕೆ ಹೋದ ಮೂರು ತಿಂಗಳಲ್ಲಿ, ನನಗೆ, ನನ್ನ ಸಾಕು ತಂದೆಯವರಿಂದ, 'ನಿನಗೆ ಪೋಸ್ಟಿನ ಕೆಲಸ ಸಿಕ್ಕಿದೆ. ನೀನು ಪ್ರವಾಸ ಮುಗಿಸಿ ಬರುವವರೆಗೆ ಆ ಕೆಲಸವನ್ನು ನಾನು ನಿರ್ವಹಿಸುತ್ತೇನೆ. ನೀನು ಪ್ರವಾಸ ಮುಗಿಸಿಕೊಂಡು ಬಾ' ಎಂದು ಪತ್ರ ಬಂತು.

ನನ್ನ ಸಾಕು ತಂದೆಯವರು, ಆ ಇಳಿವಯಸ್ಸಿನಲ್ಲಿಯೂ, ಮೇಲಿನ ಇಡಗುಂಜಿ, ಕೆಳಗಿನ ಇಡಗುಂಜಿ, ಮೋಳಕೋಡು, ಮಾಳಕೋಡು ಊರುಗಳನ್ನು ನಿತ್ಯವೂ ಸುತ್ತಾಡಿ ಕಾಗದಪತ್ರಗಳನ್ನು ಹಂಚಿ, ನಾನು ಆ ಪ್ರವಾಸವನ್ನು ಮುಗಿಸಿಕೊಂಡು ಬರುವವರೆಗೂ ನನಗಾಗಿ ಕೆಲಸವನ್ನು ಕಾದಿಟ್ಟು, ನನ್ನ ಬಾಳಿಗೊಂದು ದಾರಿ ತೋರಿಸಿದರು. ನನ್ನ ಸಾಕುತಂದೆಯವರ ಋಣ ತುಂಬಾ ದೊಡ್ಡದು ಮತ್ತು ನಾನು ಬಾಳಿನುದ್ದಕ್ಕೂ ಮರೆಯಲಾಗದ್ದು.

ಈ ನಡುವೆ, ನನಗೆ ಕೆಲಸ ಸಿಕ್ಕಿದ ಸುದ್ದಿ ಹೇಗೋ ಸ್ವಾಮಿಗಳಿಗೆ ತಿಳಿಯಿತೆಂದು ಅನಿಸುತ್ತದೆ. ಒಂದು ದಿನ, ಕುಂಬಳೆಯ ಮಿತ್ನಡಕಾ ಮುಕ್ಕಾಮಿನಲ್ಲಿದ್ದಾಗ, ಸಂಜೆ ಏಳು ಘಂಟೆಗೆ, ಸ್ವಾಮಿಗಳು ನನ್ನನ್ನು ಕರೆದು, ''ನೋಡು ವಿಷ್ಣು, ನಮ್ಮ ಸೇವೆ ಮಾಡಿದ್ದರಿಂದ ನಿನಗೆ ಕೆಲಸ ಸಿಕ್ಕಿದೆ. ಮೂರು ತಿಂಗಳ ವೇತನವನ್ನು ನಮಗೆ ಕೊಡಬೇಕು'' ಎಂದು ಹೇಳಿದರು. ಆಗ ಎಲ್ಲರಂತೆ ನನಗೂ ಸ್ವಾಮಿಗಳಲ್ಲಿ ವಿಪರೀತ ಭಯ-ಭಕ್ತಿಗಳಿದ್ದವು. ಹೀಗಾಗಿ ಅವರು ಹೇಳಿದ್ದಕ್ಕೆ ತಲೆಬಾಗಿ ಒಪ್ಪಿಗೆ ಸೂಚಿಸಿದೆ.

ಇಷ್ಟರಲ್ಲಿಯೇ, ಸ್ವಾಮಿಗಳ ಮೇಲೆ ಒಂದು ರೀತಿಯ ತಿರಸ್ಕಾರವನ್ನೂ ಮೂಡಿಸಿದ ಒಂದೆರಡು ಘಟನೆಗಳು ನಡೆದುಹೋಗಿದ್ದವು.

ಸ್ವಾಮಿಗಳಿಗೆ ಒಂದು ಭಿಕ್ಷವಾದರೆ, ನಮಗೆ ವಾದ್ಯ ಬಾರಿಸಿದ ಕೂಲಿಯಾಗಿ ಒಬ್ಬೊಬ್ಬರಿಗೆ ಎರಡು ರೂಪಾಯಿಗಳಂತೆ ಸಲ್ಲಬೇಕಾಗಿತ್ತು. ಒಂದು 'ಪಾದಪೂಜೆ' ಆದರೆ ಒಂದು ರೂಪಾಯಿಯಂತೆ ಸಲ್ಲಬೇಕಾಗಿತ್ತು. ಆದರೆ ಈ ಎಲ್ಲ ಹಣವನ್ನೂ ಸ್ವಾಮಿಗಳೇ ಇಟ್ಟುಕೊಂಡು, 'ನಿಮಗೆ ಊಟ, ಆಸರೆ

ಪುಕ್ಕಟೆಯಾಗಿ ದೊರಕುತ್ತವೆ. ತಿಂಗಳಿಗೆ 20 ರೂಪಾಯಿಗಳನ್ನು ಕೊಡುತ್ತೇವೆ. ಜೊತೆಗೆ ಸೇವೆ ಮಾಡಿದ ಫಲ ನಿಮಗೆ ದೊರಕುತ್ತದೆ' ಎಂದು ಅಪ್ಪಣೆ ಕೊಡಿಸಿದರು. ಆ ಮಾತಿಗೂ ತಲೆಬಾಗಿದೆವು.

ಮುಂದೆ ಊರಿಗೆ ಬಂದು, ತಿಂಗಳಿಗೆ 21 ರೂಪಾಯಿಯ ಪೋಸ್ಟ್ ಕೆಲಸಕ್ಕೆ ಸೇರಿ, ಒಂದು ವರುಷದ ನಂತರ, ಹೊನ್ನಾವರದ ಕಡೆಗೆ ಸ್ವಾಮಿಗಳು ಬಂದಾಗ ನನಗೆ ಕರೆ ಬಂತು. ನಾನು ಹೋಗಲಿಲ್ಲ. ಹಣವನ್ನೂ ಕೊಡಲಿಲ್ಲ. ಆ ಮಾತು ಬೇರೆ.

ಸಾಹಿತ್ಯದ ರುಚಿ

ಮುರ್ಡೇಶ್ವರದ ಶ್ರೀ ಅಚ್ಯುತ ಮಾಸ್ತರ ಅನ್ನುವವರು ಇಡಗುಂಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇದ್ದರು. ಅವರು ತುಂಬಾ ಸಂಗೀತ ಕಲಿತವರಾಗಿದ್ದರು. ನಾವು ಕೆಲವರು ಸೇರಿ ಒಂದು ಆರು ತಿಂಗಳು ಸಂಗೀತ ಕಲಿತೆವು. ನಾನು ಸ್ವಲ್ಪ ಭಜನೆ ಹಾಡುವಷ್ಟರ ಮಟ್ಟಿಗೆ ಸಂಗೀತ ಕಲಿತಿದ್ದೆ. ಕೆಲವರು ನಮ್ಮವರು, ಕುಡಿದ ಹೊರತು 'ವಾಲಗ' (ಪಂಚವಾದ್ಯ) ಬಾರಿಸಲು ಮಜಾ ಬರುವುದಿಲ್ಲ ಎಂದು ಹೇಳುತ್ತಿರುವುದನ್ನು ಕೇಳಿ ನಾನೂ ಆಕರ್ಷಿತನಾಗಿ ಕುಡಿಯಲು ಪ್ರಾರಂಭಿಸಿಬಿಟ್ಟಿದ್ದೆ !

ಆಗಿನ ಪ್ರಸಿದ್ಧ ಯಕ್ಷಗಾನ ಭಾಗವತರಾಗಿದ್ದ ಶ್ರೀ ವೆಂಕಟ್ರಮಣ ಯಾಜಿ ಅವರ ಶ್ರೀಮತಿ ಜಾನಕಮ್ಮನವರಿಗೆ ನನ್ನ ಕುಡಿತದ ವಿಷಯ ತಿಳಿಯಿತು. ನನಗೆ ಹೊತ್ತಿಂದ ಹೊತ್ತಿಗೆ ಕೂಳೂ ಇಲ್ಲದಿರುವುದು ತಿಳಿದಿತ್ತು. ಆಗ ಅವರು, ಕನ್ನಡದ ಅಂಕಲಿಪಿಯನ್ನೂ ಓದಿ ಅರಗಿಸಿಕೊಳ್ಳಲಾಗದ ನನಗೆ, ಅಂದಿನ ಪ್ರಸಿದ್ಧ ಕಾದಂಬರಿಕಾರರುಗಳಾಗಿದ್ದ ತ.ರಾ.ಸು., ಅ.ನ.ಕೃ., ಮೈ.ಸೂ.ಶೆ. ಮುಂತಾದವರ ಕಾದಂಬರಿಗಳನ್ನು ಕೊಟ್ಟು, ನನ್ನಲ್ಲಿ ಓದುವ ಹುಚ್ಚುಹಿಡಿಸಿದರು. ಅವರ ಪ್ರೀತಿಯ ಮಾತಿಗೆ ಬೆಲೆ ಕೊಟ್ಟು ನಾನು, ಕುಡಿಯುವದನ್ನು ಬಿಟ್ಟುಬಿಟ್ಟೆ. ಸಾಹಿತ್ಯದ ಮೋಡಿಗೆ ಒಳಗಾದೆ.

ಅಡಿಕೆ ತೋಪಿನಲ್ಲಿ ಅಪ್ಪಿಕೋ



ಆಗಲೇ ನಾನು 'ಹಳ್ಳಿಯ ಓಲಗದ ಮೇಳ'ವೆಂಬ ಒಂದು ಏಕಾಂಕ ನಾಟಕವನ್ನು ರಚಿಸಿ, ಗೆಳೆಯರೊಂದಿಗೆ ಪ್ರದರ್ಶಿಸಿ, ಯಶಸ್ಸು ಗಳಿಸಿದ್ದೆ. ಮುಂದೆ ಗೆಳೆಯರೊಂದಿಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಸುತ್ತುಮುತ್ತಲಿನಲ್ಲಿ ಜನಪ್ರಿಯನೂ ಆಗಿದ್ದೆ. ಬಹುತೇಕ ಕಥಾನಾಯಕನೇ ನಾನಾಗಿ, ಕೊಳ್ಳಿ ಈಶ್ವರಭಟ್ಟರು ಕಥಾನಾಯಕಿಯಾಗಿ ನಾಟಕ ಪ್ರದರ್ಶಿಸುತ್ತಿದ್ದೆವು. ದುಃಖದ ಸನ್ನಿವೇಶದಲ್ಲಿ ನನ್ನನ್ನು ಮೀರಿಸುವವರೇ ಇಲ್ಲವೆಂಬ ಹೆಸರೂ ಬಂತು. ಒಮ್ಮೆ ಮಾಳಕೋಡದಲ್ಲಿ ರಾಜಾ ಹರಿಶ್ಚಂದ್ರ ನಾಟಕ ಆಗಿತ್ತು. 'ಹರಿಶ್ಚಂದ್ರ'ನಾದ ನನಗೆ ಮತ್ತು ತಾರಾಮತಿಯ ಪಾತ್ರವನ್ನು ಮಾಡಿದ ಈಶ್ವರ ಭಟ್ಟರಿಗೆ ಹತ್ತಾರು ಬಹುಮಾನಗಳೂ ಬಂದಿದ್ದವು. ಅದೇ ಮರುದಿವಸ, ಪತ್ರಗಳನ್ನು ವಿತರಣೆ ಮಾಡಲು

ಅಡಿಕೆ ತೋಟದ ನಡುವೆ ಹೋಗುತ್ತಿದ್ದೆ. ಹೆಸರು ಬೇಡ, ಒಬ್ಬಳು ಹುಡುಗಿ ಬಂದು, ನನ್ನ ಕೈ ಹಿಡಿದು ಅಪ್ಪಿಬಿಟ್ಟಳು. ಆಗ ನಾನು ತುಂಬಾ ಹೆದರಿ ಬೊಬ್ಬೆ ಹಾಕಿಬಿಟ್ಟೆ! ನಂತರ ಅವಳು ಕೈಬಿಟ್ಟು ಓಡಿಹೋದಳು. ಪುಣ್ಯಕ್ಕೆ ಯಾರೂ ಈ ಅಪ್ಪಿಕೋ ಚಳವಳಿಯನ್ನು ಕಂಡಿರಲಿಲ್ಲ; ಬಚಾವಾದೆ. ಆ ಹುಡುಗಿಗೆ ಈಗ ಮದುವೆ ಆಗಿ ಮಕ್ಕಳೂ ಆಗಿವೆ. ನನ್ನನ್ನು ಕಂಡಾಗಲೆಲ್ಲಾ ಈಗಲೂ ಆತ್ಮೀಯವಾಗಿ ಮಾತನಾಡುತ್ತಾಳೆ.

ಇಷ್ಟರಲ್ಲಿಯೇ ನಮ್ಮ ಜಾತಿಯ ಒಬ್ಬಳು ಹುಡುಗಿಯೊಂದಿಗೆ ನನ್ನ ಒಂದು ಪ್ರೇಮಪ್ರಕರಣ ನಡೆದುಹೋಗಿತ್ತು. ಆಗಿನ ಪ್ರೇಮವೆಂದರೆ ನನ್ನನ್ನು ಕಂಡೊಡನೆಯೇ ಅವಳು ತಲೆತಗ್ಗಿಸಿ ಒಳಗೆ ಓಡುವುದು, ಓರಿಗೆಯವರೊಂದಿಗೆ ನಾನು ಅವನನ್ನೇ ಮದುವೆಯಾಗುತ್ತೇನೆಂದು ಹೇಳುವುದು. ಅವರು ನನಗೆ ವಿಷಯ ತಿಳಿಸುವುದು. ನಾನು ಅವರೊಂದಿಗೆ ಹಾಗೆಯೇ ಹೇಳುವುದು. ಇವಿಷ್ಟು ಮಾತ್ರವೇ ಆಗಿತ್ತು. ಮುಖತಃ ಭೇಟಿಯಾಗುತ್ತಿರಲಿಲ್ಲ.

ಆಗ ಬ್ರ್ಯಾಂಚ್ ಪೋಸ್ಟಿನಲ್ಲಿ ಐದು ವರುಷ ಸರ್ವೀಸ್ ಮಾಡಿದವರಿಗೆ ಡಿಪಾರ್ಟಮೆಂಟ್ ಪರೀಕ್ಷೆಗೆ ಕೂಡ್ರಲು ಅವಕಾಶ ಇತ್ತು. ಶ್ರೀ ಜಿ.ಎಸ್. ಭಟ್ಟ ಅನ್ನುವವರು ಪೋಸ್ಟಲ್ ಇನ್‌ಸ್ಪೆಕ್ಟರಾಗಿದ್ದರು. ಅವರು 'ನಿಮ್ಮಂಥವರು ಪೋಸ್ಟಲ್ ಡಿಪಾರ್ಟಮೆಂಟಿಗೆ ಬೇಕೇಬೇಕು. ನೀವು ಪರೀಕ್ಷೆಗೆ ಕುಳಿತುಕೊಂಡು ಪಾಸಾಗಲೇಬೇಕು. ಮುಂದೆ ಗುಮಾಸ್ತರಾಗಿ ಎತ್ತರಕ್ಕೆ ಏರಬೇಕು. ನಿಮಗೆ ಎಲ್ಲಾ ಸಹಾಯಗಳನ್ನೂ ಮಾಡುತ್ತೇನೆ' ಎಂದು ಹೇಳಿ, ನನಗೆ ಎಲ್ಲಾ ಪಾಠಗಳನ್ನು ಹೇಳಿ ಪ್ರೋತ್ಸಾಹಿಸುತ್ತಿದ್ದರು.

ಮುಂದೆ, 1963, ಸಪ್ಟೆಂಬರ ತಿಂಗಳಲ್ಲಿ ಡಿಪಾರ್ಟಮೆಂಟಿನ ನಾಲ್ಕನೇ ಕ್ಲಾಸ್ ನೌಕರರಿಗೆ ಧಾರವಾಡದಲ್ಲಿ ಪರೀಕ್ಷೆ ನಡೆಯಿತು. ಪರೀಕ್ಷೆಯೆಂದರೆ, ಕಠಿಣವಾದ ಪಟ್ಟಣಗಳ ಹೆಸರುಗಳನ್ನು ಬರೆಯುವುದು, ಓದುವುದು, ಬೇರೀಜು, ವಜಾ-ಬಾಕಿ ಲೆಕ್ಕ ಮಾಡುವುದು ಮಾತ್ರವಾಗಿತ್ತು. ಈ ತಯಾರಿಯನ್ನು ನಮ್ಮ ಬ್ರ್ಯಾಂಚ್ ಪೋಸ್ಟ್ ಮಾಸ್ತರರಾಗಿದ್ದ ಶ್ರೀ ಜಿ.ವಿ. ಹೆಗಡೆ ಅವರು ಮತ್ತು ಇನ್‌ಸ್ಪೆಕ್ಟರಾಗಿದ್ದ ಶ್ರೀ ಜಿ.ಎಸ್. ಭಟ್ಟ ಅವರು ಸೇರಿ ನನಗೆ ಕಲಿಸಿಕೊಟ್ಟು, ಉಪಕಾರ ಮಾಡಿದ್ದರಿಂದ ಧಾರವಾಡದಲ್ಲಿ ನಡೆದ ಪರೀಕ್ಷೆಗೆ ಕುಳಿತೆ. 75 ಮಂದಿಯಲ್ಲಿ ಕೇವಲ 17 ಮಂದಿ ಮಾತ್ರ ಪಾಸಾಗಿದ್ದರು. ಅವರಲ್ಲಿ ನಾನು ಮೊದಲಿಗನಾಗಿ ತೇರ್ಗಡೆಯಾದೆ!

'ವಿಡಂಬಾರಿ' ಆದದ್ದು

ಇನ್ನು ನನಗೆ ಚುಟುಕು ಬರೆಯಲು ಪ್ರೇರಣೆ ನೀಡಿದ್ದು, ದಿನಕರ ದೇಸಾಯಿ ಅವರು ಹೊರಡಿಸುತ್ತಿದ್ದ 'ಜನಸೇವಕ'ನೆಂಬ ವಾರಪತ್ರಿಕೆ. ಆ ಪತ್ರಿಕೆಯಲ್ಲಿ ಪ್ರತಿ ವಾರವೂ ದೇಸಾಯಿಯವರ ಎರಡು ಚುಟುಕುಗಳು 'ಭತ್ತದ ತೆನೆ'ಯೆಂಬ ತಲೆಬರಹದಡಿಯಲ್ಲಿ ಪ್ರಕಟವಾಗುತ್ತಿದ್ದವು. ಅವುಗಳನ್ನು ತಪ್ಪದೇ ಓದುತ್ತಿದ್ದ ನನಗೆ, ಆ ಚುಟುಕುಗಳು ಅತ್ಯಂತ ಸರಳವೂ, ಸುಂದರವೂ ಆಗಿ ಕಂಡವು. ನಾನು ಆಫೀಸಿನಲ್ಲಿ ಖಾಲಿ ಕುಳಿತಾಗ ಗೀಚಲು ಪ್ರಾರಂಭಿಸಿದೆ. ಒಂದು ವರುಷದವರೆಗೂ ಗೀಚುವುದು, ಹರಿಯುವುದು ನಡೆದೇ ಇದ್ದವು.

1977ರಲ್ಲಿ ಒಂದು ದೊಡ್ಡ ಪ್ರಮಾಣದಲ್ಲಿ ಅಂಚೆ ನೌಕರರ ಮುಷ್ಕರ ನಡೆಯಿತು. ಆ ಮುಷ್ಕರದಲ್ಲಿ ಭಾಗವಹಿಸಿದವರನ್ನು ಸರಕಾರ, ಮನಬಂದಂತೆ ಶಿಕ್ಷಿಸಿತು. ಮಹಿಳಾ ನೌಕರರನ್ನೂ ಬಿಡದೆ ಲಾಠಿಯಿಂದ ಬಡಿದು, ಆರೇಳು ನೌಕರರು ಸತ್ತರು. ಸಾವಿರಾರು ನೌಕರರುಗಳನ್ನು ಬಂದಿಖಾನೆಯಲ್ಲಿ ಇಡಲಾಯಿತು.

ಆಗ ನನಗೆ, ಸರಕಾರದ ವಿರುದ್ಧ ಬರೆಯಬಾರದೆಂಬ ಕಲ್ಪನೆ ಕೂಡಾ ಇರಲಿಲ್ಲ. ಒಂದು ಚುಟುಕವನ್ನು ಬರೆದು, ವಿ.ಗ. ಭಂಡಾರಿ ಎಂಬ ಹೆಸರಿನಲ್ಲಿ ಅಂದು ಶ್ರೀ ಪಿ.ಎಲ್. ಬಂಕಾಪುರರ ಸಂಪಾದಕತ್ವದಲ್ಲಿ ಹುಬ್ಬಳ್ಳಿಯಿಂದ ಹೊರಡುತ್ತಿದ್ದ 'ವಿಶಾಲ ಕರ್ನಾಟಕ' ದಿನಪತ್ರಿಕೆಗೆ ಕಳಿಸಿದೆ.

'ವಿಡಂಬಾರಿ' ಎಂಬ ಹೆಸರಿನಲ್ಲಿ ಪ್ರಕಟವಾಯಿತು. ನಾನು ನನ್ನ ಅಡ್ರೆಸ್ಸಿನಲ್ಲಿ ಅಂಚೆ ನೌಕರನೆಂದು ಬರೆದಿದ್ದರಿಂದ, ಸಂಪಾದಕರು 'ವಿಡಂಬಾರಿ' ಎಂಬ ಹೆಸರಿನಲ್ಲಿ ಪ್ರಕಟಿಸಿದರೆಂದು ಕೊನೆಗೆ ನನಗೆ ತಿಳಿಯಿತು. ನಾನು ವಿಡಂಬಾರಿಯಾದದ್ದು ಹೀಗೆ! ಚುಟುಕು ಹೀಗಿತ್ತು:



ಮಡದಿಯೊಂದಿಗೆ

ಹೊಟ್ಟೆ ತುಂಬಾ ಅನ್ನ ಮೈ ತುಂಬ ಬಟ್ಟೆ
ಬೇಕೆಂದು ನೌಕರರು ಕೇಳಿದರು ಭತ್ತೆ
ಕೊಟ್ಟಿಹುದು ಸರಕಾರ ಬೆನ್ನುಮುರಿ ಲತ್ತೆ
ಈ ಸರಕಾರವನು ಜನ ನಂಬುವರೆ ಮತ್ತೆ?

ನಂತರ ಸುಮಾರು ಒಂದು ತಿಂಗಳೇ ಕಳೆದಿರಬೇಕು. ಚುಟುಕುಬ್ರಹ್ಮ ದಿನಕರರಿಂದ ನನಗೆ ಕರೆಬಂತು. ದೇಸಾಯಿ ಅವರಲ್ಲಿ ಅತ್ಯಂತ ಗೌರವನ್ನಿಟ್ಟ ನಾನು, ಅವರ ಸ್ವಾಗತವನ್ನು ಕಂಡು ಕುಸಿದುಹೋದೆ. ನನ್ನ ನಾಲಿಗೆ ದ್ರವ ಆರಿ ಥರ ಥರ ನಡುಗಲು ಪ್ರಾರಂಭಿಸಿದೆ. ನನ್ನ ಅವಸ್ಥೆಯನ್ನು ಅರಿತ ದೇಸಾಯಿಯವರು, ಶಾಂತಚಿತ್ತರಾಗಿ ಕೈಹಿಡಿದು ಕೂಡ್ರಿಸಿ, ಚಹ ತರಿಸಿಕೊಟ್ಟು ನನ್ನಿಂದ ಚುಟುಕುಗಳನ್ನು ವಾಚಿಸಿ ಕೇಳಿ, ಬೆನ್ನುತಟ್ಟಿ ಹರಸಿ, 'ನಿಮಗೆ ಬರೆಯುವ ಯೋಗ್ಯತೆ ಇದೆ. ಒಂದೊಂದು ಚುಟುಕವೂ ಒಂದೊಂದು ಛಾಟಿ ಏಟಿನಂತಿರಬೇಕು. ಬರೆದು, ಹತ್ತು ಸಲ ಓದಿ ನೋಡಿ. ಸಮಾಧಾನ ಕಂಡರೆ ಪತ್ರಿಕೆಗೆ ಕಳಿಸಿರಿ' ಎಂದು ಹೇಳಿ ನಿಮಗೆ ಸಮಸ್ಯೆ ಬಂದಾಗಲೆಲ್ಲಾ ಬನ್ನಿರೆಂದು ಹೇಳಿ ಕಳಿಸಿದರು.

'ಕೆರೆಮನೆ' ಸ್ಪರ್ಶ

ದಿವಂಗತ ಕೆರೆಮನೆ ಶಿವರಾಮ ಹೆಗಡೆಯವರು ಕೂಡ ನನ್ನ ಕಂಡಾಗಲೆಲ್ಲಾ, ನನ್ನ ಚುಟುಕು ಬರಹದ ಬಗೆಗೆ ಪ್ರೀತಿಯಿಂದ ಕೇಳಿ ಮಾತನಾಡುತ್ತಿದ್ದರು. ಮೂರು ವರುಷಗಳಷ್ಟು ಹಿಂದೆ, ನನ್ನ ಹೆಂಡತಿಯ ಇನ್ನೊಂದು ಶಸ್ತ್ರಚಿಕಿತ್ಸೆಗಾಗಿ, ನಾನು ಕಾಸರಗೋಡಿನ 'ಸ್ನೇಹಕುಂಜ' ಆಸ್ಪತ್ರೆಯಲ್ಲಿದ್ದಾಗ, ತಮ್ಮ ಮೊಮ್ಮಗನ ಸ್ಕೂಟರಿನಲ್ಲಿ ಬಂದ ಈ ಪ್ರಸಿದ್ಧ ಯಕ್ಷಗಾನ ಕಲಾವಿದ, ನನ್ನನ್ನು ಕಂಡು, 'ವಿಷ್ಣು, ಇಡೀ ಮೈಯಲ್ಲಾ ತುರಿಕೆ ಬರುತ್ತಿದೆ. ಚರ್ಮವೇ ಕಿತ್ತು ಬರುವಷ್ಟು ತುರಸಿಕೊಂಡರೂ ಕಡಿಮೆಯಾಗುವುದಿಲ್ಲ' ಎಂದು ಹೇಳಿದ್ದರು. ಏನು ಕಂಡಿತೋ ಏನೋ, ನನ್ನನ್ನು ಬಿಗಿಯಾಗಿ ಅಪ್ಪಿ ಹಿಡಿದು, ಎರಡು ನಿಮಿಷಗಳವರೆಗೂ ಅತ್ತದ್ದು ಯಾಕೆಂಬುದೇ ಇದುವರೆಗೂ ಅರ್ಥವಾಗಿಲ್ಲ. ನಾನು ಅವರನ್ನು ನೋಡಿದ್ದು ಅದೇ ಕೊನೆಯದಾಗಿಬಿಟ್ಟಿತು. ಯಕ್ಷಲೋಕದ ದೊರೆ ಯಕ್ಷ ಲೋಕಕ್ಕೇ ಶಾಶ್ವತವಾಗಿ ನಡೆದುಬಿಟ್ಟರು.

ನನ್ನ ಚುಟುಕು ಸಂಕಲನದ ಪ್ರಕಟಣೆಗೆ, ಜನತಾ ವಿದ್ಯಾಲಯದ ಎಲ್ಲಾ ಶಿಕ್ಷಕರುಗಳು ನೆರವಾಗಿದ್ದಾರೆ. ಅದರಲ್ಲೂ ಪ್ರಾಚಾರ್ಯರಾದ ಶ್ರೀ ವಿ.ಎಚ್. ಕರ್ಕಿಕರ, ಜಿ.ಕೆ. ಶೇಟ, ರಾಘವೇಂದ್ರ ಪ್ರಕಾಶನದ ವಿಷ್ಣು ನಾಯ್ಕ, ಯಶವಂತ ಚಿತ್ತಾಲ- ಇವರೆಲ್ಲರ ವಿಶೇಷ ಸಹಾಯ, ಮಾನವೀಯ ಅನುಕಂಪ, ಆತ್ಮೀಯ ಪ್ರೀತಿಗೆ ಬೆರಗಾಗಿದ್ದೇನೆ.

ಬಾಲ್ಯದಿಂದಲೂ ಓದುವ ಹುಚ್ಚನ್ನು ಹಿಡಿಸಿಕೊಂಡಿರುವ ನನಗೆ, ಅನೇಕ ಉಪಯುಕ್ತ ಪುಸ್ತಕಗಳನ್ನು ತಂದುಕೊಟ್ಟು, ನಾನು ಶತ ಶತಮಾನಗಳ ಹಿಂದಿನ ಸಮಾಜದ ಒಳಹೊಕ್ಕು ನೋಡುವ ಸದವಕಾಶವನ್ನು ಒದಗಿಸಿಕೊಟ್ಟು ನನ್ನ ಕಣ್ಣನ್ನು ತೆರೆಸಿದವರು, ಆರ್.ವಿ. ಭಂಡಾರಿ ಅವರು.

ಅವರು ಕೊಟ್ಟ ಪುಸ್ತಕಗಳಲ್ಲಿ-ಭಾರತದ ಬೌದ್ಧಿಕ ದಾರಿದ್ರ್ಯ, ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ, ದಲಿತ ಲೋಕದ ಒಳಗೆ, ಸಾಹಿತ್ಯ ಮತ್ತು ವಿಜ್ಞಾನ-ಈ ಪುಸ್ತಕಗಳು ಅತ್ಯಂತ ಮಹತ್ವವಾದವುಗಳಾಗಿವೆ. ಕೇವಲ ಕುಳಿತಲ್ಲಿ ಉಣ್ಣುವುದಕ್ಕಾಗಿ ಕೆಲವರು ಎಷ್ಟೊಂದು ದೇವರುಗಳನ್ನು, ದೈವಗಳನ್ನು ಸೃಷ್ಟಿಸಿದ್ದಾರೆ. ಎಷ್ಟೊಂದು ಮತ, ಪಂಥ, ಧರ್ಮಗಳನ್ನು ಹುಟ್ಟುಹಾಕಿದ್ದಾರೆ; ಮೇಲು ಕೀಳುಗಳನ್ನು, ಅಸಂಬದ್ಧ ಶಾಸನಗಳನ್ನು ಹಾಕಿದ್ದಾರೆ. ದುಡಿಯುವ ಮುಗ್ಧ ಜನಗಳಿಗೆ ಯಾವ ಯಾವ ರೀತಿಯಲ್ಲಿ ಚಿತ್ರಹಿಂಸೆ ಕೊಟ್ಟು, ಅವರು ಎಂದಿಗೂ ಮೇಲೇಳದಂತೆ ಕಟ್ಟಿಹಾಕಿದ್ದಾರೆ ಅನ್ನುವುದನ್ನು ಆಧಾರ ಸಮೇತ ತಿಳಿಸಿಕೊಡುವ ಪುಸ್ತಕಗಳವು.

ಆದರೆ ಇದೆಲ್ಲದರ ಹೊರತಾಗಿಯೂ ಅಜ್ಞಾನ, ಮೌಢ್ಯ, ಜಾತಿ-ಕೋಮು ವೈಷಮ್ಯ ಇಲ್ಲಿ ಉಳಿದೇ ಇವೆ. ತೀರಾ ಇತ್ತೀಚೆಗೆ ನಡೆದ ಅಂತಹದೊಂದು ಘಟನೆ ನೆನಪಿಗೆ ಬರುತ್ತಿದೆ.

ಈಶ್ವರ ಅಲ್ಲಾ

1993ರಲ್ಲಿ ಕೋಮುವಾದಿಗಳಿಂದ ಭಟ್ಕಳ ತಾಲೂಕು ಇಡಿಯಾಗಿ ಹಾಗೂ ಭಾಗಶಃ ಉತ್ತರಕನ್ನಡ ಜಿಲ್ಲೆಯೇ ತತ್ತರಿಸಿ ಹೋದ ವಿಷಯ ಎಲ್ಲರೂ ಬಲ್ಲರು. ನನಗೆ ಸಂಬಂಧಿಸಿದ ಒಂದು ಘಟನೆಯನ್ನು ಇಲ್ಲಿ ಬರೆಯುತ್ತಿದ್ದೇನೆ.

ಮುಸ್ಲಿಂರಲ್ಲಿಯೇ ಒಳ ಪಂಗಡವಾದ 'ಮಾಪಿಳ್ಳೆ' ಪಂಥಕ್ಕೆ ಸೇರಿದ ಮನೆಗಳು ಶಿರಾಲಿಯಲ್ಲಿ ನಾಲ್ಕೈದು ಇವೆ. ಇವರು ಯಾರ ತಂಟೆಗೂ ಹೋಗುವವರಲ್ಲ. ಹಿಂದುಗಳೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡವರು. ಬೆರೆತು ನಡೆಯುತ್ತಿದ್ದವರು. ಪಳ್ಳಿಗೂ ಹೋಗುತ್ತಾರೆ. ಒಮ್ಮೊಮ್ಮೆ ಹಿಂದು ದೇವರಿಗೂ ಹರಕೆ ಸಲ್ಲಿಸುತ್ತಾರೆ. ನಾನು ಹೊಸದಾಗಿ ಶಿರಾಲಿಗೆ ಬಂದಾಗ, ನಾಲ್ಕು ವರುಷಗಳ ಕಾಲ ಇವರಲ್ಲಿಯೇ ಒಂದು ಬಾಡಿಗೆ ಮನೆಯಲ್ಲಿ, ಕೇವಲ 22 ರೂಪಾಯಿಗಳಿಗೆ ಬಾಡಿಗೆಗೆ ಇದ್ದು, ಅವರ ಸ್ನೇಹಮಯ ಬದುಕನ್ನು ಬಲ್ಲೆವ. ಅವರ ಹಬ್ಬದ ದಿನಗಳಲ್ಲಿ ಬೆಲ್ಲ, ಕಾಯಿ, ಅಕ್ಕಿ, ತುಪ್ಪ ಇವುಗಳನ್ನು ಪ್ರೀತಿಯಿಂದ ನಮಗೆ ಕೊಡುತ್ತಿದ್ದರು. ಕೊನೆಗೆ, ನಾನಿದ್ದ ಮನೆಯ ಮಾಲೀಕರ ಮನೆಯಲ್ಲಿ ಪಾಲಾದುದರಿಂದ ಅವರಿಗೆ ಜಾಗೆಯ ಕೊರತೆಯಾಗಿ, ನಾನು ಆ ಮನೆಯನ್ನು ಬಿಡಬೇಕಾಯಿತು. ಮೊದಲಿದ್ದ ಮುಸ್ಲಿಂರ ಮನೆಯ ಪಕ್ಕದಲ್ಲಿಯೇ, ಓರ್ವ ಹಿಂದುಗಳ ಮನೆಗೆ ನನ್ನ ಬಿಡಾರವನ್ನು ವರ್ಗಾಯಿಸಿದೆ.

ಅಲ್ಲಿಗೆ ಬಂದು ಕೇವಲ ಮೂರು ವರುಷಗಳು ದಾಟಿದ್ದವು. ಅಷ್ಟರಲ್ಲಿ ಕೋಮು ಗಲಭೆ ಪ್ರಾರಂಭವಾಯಿತು. ನಾನು ಮೊದಲು ಬಾಡಿಗೆಗಿದ್ದ ಸಾಹೇಬರಿಗೆ ಸಂಬಂಧಪಟ್ಟ ಐದಾರು ಅಂಗಡಿಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಿದರು! ಸೈಕಲ್ಲುಗಳು ಮತ್ತು ಬಿಡಿಭಾಗಗಳು, ವೆಲ್ಡಿಂಗ್ ಮಷಿನ್, ಫೋನ್‌ಗಳು, ಚಪ್ಪಲಿಗಳು, ಗೋಡೆ ಗಡಿಯಾರಗಳು, ವಾಚುಗಳನ್ನು, ತಾಮ್ರ, ಹಿತ್ತಾಳೆ, ಅಲ್ಯುಮಿನಿಯಂ ಅಂಗಡಿಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು. ಮುಸ್ಲಿಂ ಮನೆಗಳಿಗೂ ಬೆಂಕಿ ಹಚ್ಚಲು ಬಂದರು. ಕೊನೆಗೆ ಮುಖಂಡರುಗಳು ಸೇರಿ ಬೆಂಕಿ ಹಚ್ಚುವುದನ್ನು ತಪ್ಪಿಸಿದರು. ಆದರೂ ರಾತ್ರಿ ವೇಳೆಯಲ್ಲಿ ಏನಾಗುತ್ತದೋ ಎಂಬ ಭೀತಿಯಿಂದ ಮನೆಯವರೆಲ್ಲಾ ಊರು ಬಿಟ್ಟು ಹೋಗಲು ತಯಾರಿ ನಡೆಸಿದ್ದರು. 3-4 ಸೂಟ್‌ಕೇಸ್‌ಗಳನ್ನು ನಮ್ಮ ಬಿಡಾರದಲ್ಲಿ ತಂದಿಟ್ಟರು. ಯಾಕೆಂದರೆ ಮರುದಿವಸ ಅವರೆಲ್ಲರು ತಾತ್ಕಾಲಿಕವಾಗಿ ಊರು ಬಿಡುವವರಿದ್ದರು. ಆ ಇಡೀ ದಿವಸ ಯಾರೂ ಊಟ ಮಾಡಿರಲಿಲ್ಲ. ಎಷ್ಟು ಹೊತ್ತಿಗೆ ಏನಾಗುತ್ತದೋ ಎಂಬ ಭಯದಿಂದ ರಾತ್ರಿ ಎಲ್ಲರೂ ಹಿತ್ತಲ ಬಾಗಿಲುಗಳಲ್ಲಿ ಮಲಗಿದರು. 3 ವರುಷಗಳಿಂದ 10 ವಧುಷಗಳೊಳಗಿನ ಮಕ್ಕಳನ್ನು ರಾತ್ರಿ ನಮ್ಮ ಬಿಡಾರಕ್ಕೆ ಕಳಿಸಿದರು.



ಆದರೆ, ಬೆಳಿಗ್ಗೆ ಈ ವಿಷಯ ನನ್ನ ಬಿಡಾರದ ಮಾಲೀಕರಿಗೆ ತಿಳಿದು, ರಾದ್ಧಾಂತ ಪ್ರಾರಂಭ ವಾಯಿತು. ವಿಪರ್ಯಾಸವೆಂದರೆ, ಮುಸ್ಲಿಂರ ಮನೆಯ ಭಾವಿಯ ಪಂಪ್‌ಸೆಟ್ಟಿನಿಂದಲೇ ನನ್ನ ಬಿಡಾರದ ಮಾಲೀಕರ ತೆಂಗಿನ ತೋಟಕ್ಕೆ ನೀರು ಬರುತ್ತಿತ್ತು. ಅಷ್ಟು ಅನ್ಯೋನ್ಯವಾಗಿ ಇದ್ದವರು, ಅಂದೇ ನನಗೆ ಬಿಡಾರ ಬಿಟ್ಟುಹೋಗಲು ಒತ್ತಾಯಿಸಿದರು. ಬಾಗಿಲಿನಲ್ಲಿ ಮುಳ್ಳು ತಂದುಹಾಕಿದರು. ಹೊಡೆಯಲೂ ಬಂದರು. ಅವಾಚ್ಯ ಶಬ್ದಗಳಿಂದ ಬೈದರು.

ಏಳು ಬೀಳಿನ ಬಾಳು

ಬರವಣಿಗೆ ನಿಲ್ಲುವುದಿಲ್ಲ. ಆದರೆ ಬರೆದುವುಗಳನ್ನು ಪ್ರಕಟಿಸುವ ಆರ್ಥಿಕ ಅನುಕೂಲ ನನ್ನಲ್ಲಿ ಇಲ್ಲ.

ಎಲ್ಲಾ ಸ್ತರದ ಜನರು ನನ್ನನ್ನು ಆತ್ಮೀಯ ಪ್ರೀತಿ, ಗೌರವದಿಂದ ಕಾಣುತ್ತಿರುವುದನ್ನು ತಿಳಿದಾಗ, ಒಮ್ಮೊಮ್ಮೆ ನಾನು ಬೀಗಿಬಿಡುತ್ತೇನೆ. ಇನ್ನೊಮ್ಮೊಮ್ಮೆ ತುಂಬಾ ಮುಜುಗರವಾಗಿ, ನನ್ನಲ್ಲಿ ಅಂಥಾದ್ದು ಏನಿದೆಯೆಂದು ಇವರೆಲ್ಲ ಪ್ರೀತಿಯಿಂದ ಕಾಣುತ್ತಿದ್ದಾರೆಂದು ಎಣಿಸಿದರೆ, ನಾನು ಅತ್ಯಂತ ಸಣ್ಣವನಾಗಿಬಿಡುತ್ತೇನೆ.

ಆದರೆ ನನ್ನ ಹೆಂಡತಿಯನ್ನು ಕಾಡುತ್ತಿರುವ ಕಾಯಿಲೆ ಮಾತ್ರ ಇನ್ನೂ ಬಿಡುಗಡೆ ಆಗಲೇ ಇಲ್ಲ. ಬಡತನ, ಉಪವಾಸ ಹೀಗೆ ಎಲ್ಲವನ್ನೂ ಸಹನೆಯಿಂದ ಭರಿಸಿ, ಕುಟುಂಬಕ್ಕೆ ನೆಮ್ಮದಿ ನೀಡಿದ ಪ್ರೇಮಮಯಿಗೆ ಈಗ ಸರಿಯಾಗಿ ಊಟ ಮಾಡಲೂ ಆಗುತ್ತಿಲ್ಲ. ದಿವಸಕ್ಕೆ ಹತ್ತಿಪ್ಪತ್ತು ರೂಪಾಯಿಗಳ ಔಷಧ ಬೇಕೇಬೇಕು. ಮುಂದೇನೋ ಎಂಬ ಚಿಂತೆ ನನ್ನನ್ನು ಕಾಡುತ್ತಿದೆ. ಹಾಗಂತ ನನಗೆ ಯಾವ ಧಾಡಿಯೂ ಆಗಿಲ್ಲ.

ನಿವೃತ್ತಿ ಸಂದರ್ಭದ ನನ್ನನ್ನು ಬೀಳ್ಕೊಡುವ ಸಮಾರಂಭದಲ್ಲಿ ಭಾಷಣ ಮಾಡಿದವರಲ್ಲಿ ಒಂದಿಬ್ಬರು, ನನಗೆ ಎರಡು ಗುಂಟೆ ಜಾಗೆ ಕೊಡುವುದಾಗಿ ಭರವಸೆಕೊಟ್ಟರು. ನನಗೆ ಮನೆ, ನಿವೇಶನ, ಆಸ್ತಿ, ಅಂತಸ್ತು ಯಾವುದೂ ಬೇಕಾಗಿಲ್ಲ. ಕರುಣೆಯೂ ಬೇಡ. ದುಡಿದು ತಿಂದೇನೆಂಬ ಕಸುವು, ಆತ್ಮ ವಿಶ್ವಾಸ ಇನ್ನೂ ನನ್ನಲ್ಲಿದೆ. ಕೊನೆಯುಸಿರಿನತನಕ ನನಗೆ ಕೆಲಸ ಬೇಕು. ನಾನು 'ವಿಡಂಬಾರಿ' ಆಗಿಯೇ ಉಳಿಯಬೇಕು.




□

('ವಿಡಂಬಾರಿ' ಈಗ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ, 'ಚಿಂತನ' ಬಳಗದವರ ಪುಸ್ತಕ ಮಳಿಗೆಯನ್ನು ನೋಡಿಕೊಳ್ಳುತ್ತಿದ್ದಾರೆ. ಊರೂರಿಗೆ ಹೋಗಿ ಜಾತ್ರೆ, ಸಭೆ ಸಮಾರಂಭಗಳಲ್ಲಿ ಪುಸ್ತಕ ಮಾರುತ್ತಾರೆ....)

'ಅಂಚೆಯಣ್ಣನ ಆತ್ಮಕಥನ' ರಾಘವೇಂದ್ರ ಪ್ರಕಾಶನ, (ಅಂಕೋಲ)ದಿಂದ ಪ್ರಕಟವಾಗಿದೆ.

ತೆರೆದ ಅಂಚೆ



ನಮ್ಮ ನಿರೀಕ್ಷೆ ಹುಸಿಯಾಗಲಿಲ್ಲ. ಖಂಡಿತವಾಗಿಯೂ ಒಳ್ಳೆಯ ಮಾಸಿಕವೊಂದು ಕನ್ನಡದ ಜನರಿಗೆ ದೊರಕಿದಂತಾಗಿದೆ. ಅಭಿನಂದನೆಗಳು.

ಶಿರಸಿ **ಕಿರಣಭಟ್**

ನನಗೀಗ ಹೊಸ ಜಾಗ. ಸುತ್ತಲೂ ಅಪರಿಚಿತ ಜನರು. ಆದರೆ ನನ್ನ ನೆಚ್ಚಿನ ಸಂಗಾತಿಯ ಸ್ಥಾನ ಗಳಿಸಿರೋ 'ಭಾವನಾ' ಕೈಲಿರುವುದರಿಂದ ಹೊಸ ಮುಜುಗರಗಳನ್ನು ಮರೆಯಬಲ್ಲೆ.

ಬೆಂಗಳೂರು **ವೆಂಕಟಲಕ್ಷ್ಮಿ ಬಿ.ಎಸ್.**

ಪತ್ರಿಕೋದ್ಯಮದ ಎಲ್ಲ ಕ್ಲೀಷೆಗಳಿಂದ ಮುಕ್ತವಾಗಿದೆ. ಮಧುರವೂ ಮನೋಜ್ಞವೂ ಸಂಗ್ರಾಹ್ಯವೂ ಆಗಿದೆ.

ಸುಳ್ಯ **ಹರೀಶ್ ಕೇರ**

ದೇವನೂರು ನಂಜಮ್ಮನನ್ನು ಮಾತನಾಡಿಸಿದ್ದಕ್ಕೆ ಥ್ಯಾಂಕ್ಸ್! ಕತೆಗಳು ಸಪ್ಪೆ ಎನಿಸಿದವು!

ಸಿಂಧನೂರು **ಹಿರೇಭೇರ್ಗಿ**

ದೇವನೂರು ಮಹಾದೇವರ ಅಮ್ಮ ನಂಜಮ್ಮರ ಬದುಕಿನ ಬಗ್ಗೆ ಲೇಖನ ಖುಷಿಕೊಟ್ಟಿತು.

ಉಪ್ಪಿನಂಗಡಿ **ಲಿಂಗಪ್ಪ ಎಸ್.**

ದೇ.ನಂಜಕ್ಕ ಮಗನ ಕುರಿತು ಆಡಿದ ಮಾತುಗಳು ಕಣ್ಣೀರು ಬರಿಸಿತು.

ಶಿವಮೊಗ್ಗ **ಶಿವರಾಮು ಕಾರಗಡಿ**

ಕಥನ ಕಲೆಯನ್ನು ಬೇರಾಗುಳ್ಳ ದೇವನೂರು ಪ್ರಸಿದ್ಧರಾಗಿದ್ದಕ್ಕೆ ಕಾರಣಗಳೂ ಇಲ್ಲಿ ಹೊಳೆಯುತ್ತವೆ.

ಮೈಸೂರು **ಎ.ಎಸ್.ಲಕ್ಷ್ಮೀನಾರಾಯಣ**

ತೈಲವರ್ಣದ ಮುಖಪುಟ ತುಂಬಾ ಸೊಗಸಾಗಿತ್ತು. ಕಲಾವಿದ ಜಾನ್ ಫರ್ನಾಂಡಿಸರಿಗೆ ಕೃತಜ್ಞತೆಗಳು. ಕತ್ತಲ ಕೋಣೆಯ ಏಕಲವ್ಯ ಕಾಸರವಳ್ಳಿ ರವೀಶ್‌ರ ಕುರಿತ ಬರಹ ಚೆನ್ನಾಗಿತ್ತು.

ಕೊಡಗು **ಅಬ್ದುಲ್‌ರಹೀಂ**

ಹೊಸ ಮುಖಗಳನ್ನು ಪರಿಚಯಿಸಿ, 'ಕ್ಯಾನವಾಸ್'ನಲ್ಲಿ ದಿವಂಗತ ರವೀಶ್‌ರ ಪೇಂಟಿಂಗ್, ಪೆಂಟೋಗ್ರಾಫ್ ಪ್ರಕಟಿಸಿ, ಹೆಮ್ಮೆ-ವಿಶ್ವಾಸಕ್ಕೆ ಪಾತ್ರರಾಗಿದ್ದೀರಿ.

ಮಸಯಿ **ವಿ.ಜಿ. ಬಗ್ಗೋಣ**

ಮುಗ್ಧತೆ, ಅಸಹಾಯಕತೆ, ಪರಿಶುದ್ಧ ಹೃದಯ ಶ್ರೀಮಂತಿಕೆ ಮೈವೆತ್ತಂತಿದ್ದ ಮುಖಪುಟ ಕಂಡಾಗ ನನಗರಿವಿಲ್ಲದೇ ಕಣ್ಣಹನಿಗಳು ಜಾರಿದವು! (ಅತೀವ ಸಂತಸದಲ್ಲಿ).

ಬಿಜಾಪುರ **ಎ.ಎ. ಕೊಟ್ಟಿಗೆ ಉಮೇಶ್**

ಮುಖಪುಟ ತುಂಬಾ ಸೊಗಸಾಗಿತ್ತು.

ಬಿಜಾಪುರ **ಜಂಗೇಶ್ ಪೂಜಾರ**

'ಭಾವನಾ'ದ ಮುಖಚಿತ್ರಗಳೇ ನನ್ನನ್ನು ಭಾವನಾ ಪ್ರಪಂಚಕ್ಕೆ ಕರೆದೊಯ್ಯುತ್ತದೆ.

ಬೆಂಗಳೂರು **ಹಾಲಾಡಿ ಮಾರುತಿರಾವ್**

ಮಾಲತಿ ನಾಡಿಗರ 'ಪಿಂಟೊ ಮತ್ತು ಲೂಸಿ' ಕಥೆಯಲ್ಲಿ ನಲ್ವತ್ತೈದು ವರ್ಷದ ಮುದುಕಿ ಎಂದಿದೆ. ಎಂಥದ್ದು ಮಾರಾಯರೆ? ಇನ್ನೈದು ವರ್ಷಕ್ಕೆ, ನನ್ನ ಮಗಳು, ನನ್ನನ್ನು ಮುದುಕಿ

ಎಂದು ಕರೆದಾಳಲ್ಲ ಎಂಬ ಮಂಡೆ ಬೆಚ್ಚ ನನ್ನದು. ಒಳ್ಳೆ ಕಥೆಯಾಯಿತಲ್ಲ ನಿಮ್ಮದು.

ಮಂಗಳೂರು **ಮೀನಾಕ್ಷಿ**

'ಅಪ್ರತಿಮ ಸೌಂದರ್ಯ'ದ ಬಗ್ಗೆ ಜಿ. ರಾಜಶೇಖರ ಅವರು ವ್ಯಕ್ತಪಡಿಸಿದ ವಿಚಾರ, ನನ್ನಂಥವರ ಪ್ರಾತಿನಿಧಿಕ ಅಭಿಪ್ರಾಯವಾಗಿದೆ.

ಹೊಸಪೇಟೆ **ಅಮರೇಶ್ ನುಗುಡೋಣಿ**

ಆಗಷ್ಟೇ ಒಡೆದ ತೆಂಗಿನಕಾಯಿಯ ಸಿಹಿನೀರಿಗಾಗಿ ಮಕ್ಕಳಿಬ್ಬರು ಕಚ್ಚಾಡುವಂತೆ, ''ಭಾವನಾ'' ಬಂತೆಂದರೆ ಅದನ್ನೋದಲು ನಾವಿಬ್ಬರೂ ಕಚ್ಚಾಡಲು ಪ್ರಾರಂಭಿಸುತ್ತೇವೆ.

ಧಾರವಾಡ **ಪ್ರಕಾಶ ಕಡಮೆ**

'ನಗಲಾರೆಯಾ ನಿರಂತರ', 'ಹೋಗುವುದೆಲ್ಲಿಗೆ', 'ಮರ ಮತ್ತು ಕಾಯಿ', 'ಚೂರಿ', ವಾಸುದೇವ ನಾಡಿಗ್‌ರ ಕಾಗದದ ದೋಣಿ - ನೆನಪುಳಿವ ಬರಹಗಳು.

ಕಬ್ಬಿಗಾರ **ರಶ್ಮಿ ಮ. ಹೆಗಡೆ**

ನೀವು ವಾಸುದೇವ ನಾಡಿಗರ ಕಾಗದ ಪ್ರಕಟಿಸಿದ್ದು ಇಷ್ಟವಾಯಿತು.

ಹುಬ್ಬಳ್ಳಿ **ವಿ.ಎಲ್. ಸಮೀರ**

ಕೆ.ವೆಂಕಟೇಶ್ ಅವರ 'ನಗಲಾರೆಯ ನಿರಂತರ' ಒಂದು ಸುಂದರ ಕತೆ.

ಕುಂದರಗಿ **ಗಣಪತಿ ಬಾಳೆಗದ್ದೆ**

'ನಗಲಾರೆಯ ನಿರಂತರ' ಓದಿ, ಕತೆಗಾರನ ಪರಿಚಯದ ಬಾಕ್ಸ್ ನೋಡಿದಾಗ, ಕತೆಗಾರನಿಗಿಂತ ಆತನ ಕತೆ, ಕತೆಗಿಂತ ನನ್ನ ರೇಖಾಚಿತ್ರ ಸಪ್ಪೆಯೆನಿಸಿತು!

ಬೆಂಗಳೂರು **ಸಂಗು ಹುಂಡೇಕಾರ**

ಭಾಗೀರಥಿ ಹೆಗಡೆಯವರ 'ಮರ ಮತ್ತು ಕಾಯಿ ಮನೋಜ್ಞವಾಗಿತ್ತು.

ಬೆಂಗಳೂರು **ಜಿ.ವಿ. ಪ್ರಭು**

'ಚೂರಿ' ಕಥೆಗೆ ಮೂಲ ಪ್ರೇರಣೆ, ಗೆಳೆಯನೊಬ್ಬ ಹೇಳಿದ ವಾಮನ್ ಚೋರಘಡ ಅವರ ಒಂದು ಮರಾಠಿ ಕಥೆ

ಬೇಡಕೀಹಾಳ **ಚಂದ್ರಕಾಂತ ಪೋಕಳೆ**

ಸಾಹಿತ್ಯದ ಹೆಸರಿನಲ್ಲಿ ಎಲ್ಲರನ್ನು ದಣಿಸುವ, ಕರ್ಕಶ ಬಹಿರಂಗ ಚಟುವಟಿಕೆಗಳು ಕೆಲಕಾಲ ಬರಖಾಸ್ತುಗೊಳ್ಳಬೇಕು ಎಂಬ ಸಂಪಾದಕೀಯದ ದನಿಗೆ ನಾನೂ ಸಹಮತಿಸುವೆ.

ದಾವಣಗೆರೆ **ವಿ. ಹನುಮಂತಪ್ಪ**

'ಕಿಸಾನನ ಅದ್ಭುತ ತ್ಯಾಗ' ಹಾಗೂ ಪ್ರಿಯತಮರು ಬರೆದಂತಹ 'ರೈಲುಗಾಡಿಯಲ್ಲಿ ಬಿಟ್ಟು ಬಂದ ಮುಖ' ಕತೆಗಳು ರಸವತ್ತಾಗಿವೆ.

ಹಾರಕನಾಳು **ಬಿಳಿಚೋಡು ವೀರೇಶ್**

'ಕಥನ ಕುತೂಹಲ' ಅಂಕಣದಲ್ಲಿ ಮೂಡಿಬಂದ ಬೊಮ್ಮಿ, ದೇವಿ, ಬುಡಣಸಾಬ್ ಉತ್ತುಮಿ, ಪಾರೂ, ಗಿರಿಯಣ್ಣ ಎಲ್ಲರೂ ಒಂದೊಂದು ಕಥೆಯ ಹರಹನ್ನು ಬಿಚ್ಚಿಡುವಂತೆ ಭಾಸವಾಯಿತು.

ಅಂಕೋಲಾ **ಫಾಲ್ಗುಣಗೌಡ, ಅಚವೆ**

'ಶಬ್ದತೀರ'ದಲ್ಲಿ ಪ್ರಕಟವಾದ 'ಚಪ್ಪಟೆ ಜೀವಿಗಳು' ಅರ್ಥಪೂರ್ಣ. ಮಾರ್ಮಿಕ ಕಿರುಬರಹ.

ಗಳತಗಾ **ಗಾಯತ್ರೀನಂದನ**

'ವಿಶ್ವಭಾರತಿ'ಯಲ್ಲಿ ಮಿಕ್ಸ್‌ಜಥ್ ಕತೆ (ಹಸಿರು ನೊಣ) ಸಿಹಿ ಇರೋ ಕಡೆ ನೊಣ ಹಾರುವ ರೀತಿಯ ಹೆಣ್ಣಿನ ಚಂಚಲತೆಯನ್ನು ಚೆನ್ನಾಗಿ ಚಿತ್ರಿಸಿದೆ.

ಕೊಟ್ಟೂರು **ನಿಜಲಿಂಗ ಕೆ.**



ಕೋನೇ-ಸಿಪ್

ವಿಧಿ ವಿಳಾಸ

- ಊರುಗಳನ್ನ, ರಸ್ತೆಗಳನ್ನ ಭಾರತೀಕರಿಸುವ ಅವಾಂತರದಲ್ಲಿ ಎಷ್ಟೋ ಹೆಸರುಗಳು ಬದಲಾಗಿವೆ. ಚಾಮರಾಜಪೇಟೆಯ ಆಲ್ಬರ್ಟ್ ವಿಕ್ಟರ್ ರೋಡ್ ಬಹಳ ವರ್ಷಗಳ ಹಿಂದೆಯೇ ಆಲೂರು ವೆಂಕಟರಾವ್ ರಸ್ತೆಯಾದಾಗ ಹೆಚ್ಚಿನ ಅವಾಂತರ ಆಗಲಿಲ್ಲ-ಯಾಕಂದರೆ ಹೆಸರು ಯಾರದ್ದಾದರೇನು, ಅದು ಎ.ವಿ.ರೋಡಾಗೇ ಮುಂದುವರೆಯಿತು. ಆದರೆ ಎಲ್ಲ ರಸ್ತೆಗಳಿಗೂ ಆ ಭಾಗ್ಯವಿಲ್ಲವೇ... ಕ್ಯಾವಲ್ರೀ ರಸ್ತೆ, ಕಾಮರಾಜ ನಾಡಾರ್ ರಸ್ತೆಯಾದಾಗ-ಟಪಾಲಾಫೀಸಿನವರು ಹಳೇ ವಿಳಾಸಕ್ಕೆ ಬಂದ ಪತ್ರವನ್ನು 'ರಸ್ತೆ ನಾಟ್ ಫೌಂಡ್' ಅಂತ ವಾಪಸ್ ಮಾಡಿದರೆ?
- ರೈಲಿನಲ್ಲಿ ಬಂದು ಮುಂಬಯಿಯಲ್ಲಿ ವಿ.ಟಿ.-(ವಿಕ್ಟೋರಿಯಾ ಟರ್ಮಿನಸ್) ಸ್ಟೇಷನ್‌ನಲ್ಲಿ ಇಳಿಯಬೇಕಾದವರು, ಅದರ ಹೊಸ ಹೆಸರು ಸಿ.ಎಸ್.ಟಿ. (ಛತ್ರಪತಿ ಶಿವಾಜಿ ಟರ್ಮಿನಸ್) ನೋಡಿ, ಕಂಗಾಲಾಗಿ, ಇಳಿಯುವುದೇ ಇಲ್ಲವಂತೆ. ವಿ.ಟಿ. ಇಲ್ಲದ ಮೇಲೆ ಅದೆಂಥ ಮುಂಬಯಿ! ವೀರ್‌ಶಿವಾಜಿ ಟರ್ಮಿನಸ್ ಅಂತಾದರೂ ಇಟ್ಟಿದ್ದರೆ- ವಿ.ಟಿ. ಉಳಿಯಬಹುದಾಗಿತ್ತೇನೋ.
- ಹೈದರಾಬಾದಿನ ದೋಮಲಗೂಡ (ಸೊಳ್ಳೆಪಾಳ್ಯ)ದಲ್ಲಿನ ಸೊಳ್ಳೆಗಳನ್ನೆಲ್ಲ ಓಡಿಸಿ, ಅದಕ್ಕೆ ಚೆಂದವಾದ ಹೆಸರನ್ನ ಇಡಬಹುದು ಅಂದದ್ದಕ್ಕೆ ಕೆಲವರು ತೀವ್ರ ಪ್ರತಿರೋಧ ವ್ಯಕ್ತಪಡಿಸಿದ್ದಾರಂತೆ. ನಮ್ಮ ಸಂಸ್ಕೃತಿ, ಭಾಷೆಯನ್ನ ನಾವು ಬಿಟ್ಟುಕೊಡಲಾರೆವು... ಸೊಳ್ಳೆಗಳಿಲ್ಲದಿರುವುದೇ ಹೆಸರು ಬದಲಾಯಿಸಲು ಕಾರಣವಾಗುವುದಾದರೆ, ನಾವು ಸೊಳ್ಳೆಗಳನ್ನ ಸಾಕಲೂ ಸಿದ್ಧ ಅನ್ನುತ್ತಿದ್ದಾರಂತೆ. ಇದಕ್ಕೆ ಬೆಂಗಳೂರಿನ ದೋಮಲೂರಿನ ಜನ ಎಷ್ಟು ಮುದ್ದತ್ತು, ಸ್ಫೂರ್ತಿ ನೀಡಿದ್ದಾರೇಂತ ಹೇಳಲು ಯಾರೂ ಸಿದ್ಧರಿಲ್ಲ!
- ಒಂದು ಕಡೆ ಭೂಗೋಳ ಬದಲಾಗಿ ವಿಳಾಸಗಳು ಏರುಪೇರಾಗುತ್ತಿದ್ದರೆ ಇನ್ನೊಂದು ಕಡೆ, ಇಂಟರ್‌ನೆಟ್ ವಿಳಾಸಗಳು ಸ್ಥಾಯಿಯಾಗಿ ನಿಲ್ಲುತ್ತಿವೆ. ಎಲ್ಲೇ ದೇಶಾಂತರ ಹೋದರೂ ನಿಮ್ಮ ಇಂಟರ್‌ನೆಟ್ ವಿಳಾಸ ಬದಲಾಗುವುದೇ ಇಲ್ಲ! ಜಂಗಮ ಮನುಷ್ಯ, ಸ್ಥಾವರ ವಿಳಾಸ!
- ಜಪಾನಿಗೆ ಹೋದ ಗೆಳೆಯನೊಬ್ಬ ತನ್ನ ಕೆಲಸ ಮುಗಿಸಿ, ಒಂದು ಸಂಜೆ, ಹೋಟೆಲಿಗೆ ಮರಳಿ, ಸ್ನಾನ ಮಾಡಿ, ಸೆಖೆ ಅಂತ ಹಾಗೆ ಬೆತ್ತಲೆ ಅಡ್ಡಾಗಿದ್ದ. ನಿದ್ದೆ ಹತ್ತಿಬಿಟ್ಟಿತು. ನಡುರಾತ್ರಿ ಜೋರಾಗಿ ಗಡಗಡ ಸದ್ದು, ಎದ್ದು ಕೂತರೆ ಕಟ್ಟಡವೇ ಕಂಪಿಸುತ್ತಿದೆ. ಆಗ ಆತ ಮಾಡಿದ್ದೇನು? ಭೂಕಂಪದಲ್ಲಿ ಸಾಯುವುದಂತೂ ತಪ್ಪಿದ್ದಲ್ಲ. ಕನಿಷ್ಠ ತನ್ನ ಮೃತ ದೇಹವಾದರೂ ನಗ್ನಾವಸ್ಥೆಯಲ್ಲಿ ಸಿಗದಿರಲಿ - ಎಂದು, ಎದ್ದು, ಒಪ್ಪವಾಗಿ ಬಟ್ಟೆ ತೊಟ್ಟು, ಮತ್ತೆ ಮಲಗಿಬಿಟ್ಟನಂತೆ! ದೇಶದ ಮಾನ ಕಾಪಾಡುವುದು ಅಂದರೆ ಇದಪ್ಪ!
- **ಕಚಗುಳಿ:** ಇಂಗ್ಲೀಷಿನಲ್ಲಿ ಸಲಿಂಗಕಾಮಿಗಳಿಗೆ 'ಗೇ' (Gay) ಅನ್ನುತ್ತಾರೆ. ಕನ್ನಡದ ಸಾಹಿತಿಯೊಬ್ಬರಿಗೆ ಈ ರೀತಿಯ ಖಯಾಲಿಗಳಿದ್ದವು ಅಂತ ಪಿಸುನುಡಿಗಳನ್ನ ಕೇಳಿದ್ದೇವೆ. ಹೀಗಾಗಿ, ವಿಮರ್ಶಕರು, ''ಈ ಕವಿಯ ಕಾವ್ಯದಲ್ಲಿ 'ಗೇ'ಯತೆ ಯಾಕಿಲ್ಲ?'' ಎಂದು ಕೇಳ[illegible] ಯಾಕೋ ಹಿಂಜರಿಯುತ್ತಾರಂತೆ.

Printed, published and owned by **Vijay Sankeshwar**, Published at 1st Floor, "Giriraj Annexe", P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-25363[illegible]
Printed at Anand Printers & Publishers, 6/127, 5th Cross, KPN Extn., Bangalore - 560 022
Editor-in-Chief: **Santoshkumar Gulvady** Editor: **Jayant Kaikini**

BHAVANA - Monthly August 2000 AFD. C

